ಭಾನುವಾರ, ಜುಲೈ 6, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 186 | ಪುಟ 18
● www.prajavani.net prajavani.net prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಅಪರೂಪದ ಪಕ್ಷಿ ಪ್ರಭೇದ
21 ಪ್ರಭೇದದ ಪಕ್ಷಿಗಳು ಮೊದಲ ಬಾರಿಗೆ ದೆಹಲಿಯಲ್ಲಿ ಕಾಣಿಸಿಕೊಂಡಿವೆ ಎಂದು ಅಲ್ಲಿನ ಪಕ್ಷಿ ಸಮೀಕ್ಷೆಯ ವರದಿ ತಿಳಿಸಿದೆ



ಶತಕ ವೈಭವ
ಭಾರತದ ಪೋರ ವೈಭವ್ ಸೂರ್ಯವಂಶಿ ಅವರು 19 ವರ್ಷದೊಳಗಿನವರ ಏಕದಿನ ಕ್ರಿಕೆಟ್ ಸರಣಿಯಲ್ಲಿ ಇಂಗ್ಲೆಂಡ್ ವಿರುದ್ಧ ಶತಕ ದಾಖಲಿಸಿದರು.

143	78	13	10
ರನ್	ಎಸೆತ	ಬೌಂಡರಿ	ಸಿಕ್ಸರ್

ಅಲೆಮಾರಿಗಳಿಗೆ ಪ್ರತ್ಯೇಕ ಮೀಸಲಾತಿ ಅಗತ್ಯ 5
'ಬರಹ ಜೀವಪರ, ಜನಪರ ಆಗಿರಲಿ..' 6

'ಸಾವಿಗೆ ಲಸಿಕೆಯೇ ಕಾರಣವಲ್ಲ'

ಹೃದಯಾಘಾತ: ತಜ್ಞ ವೈದ್ಯರ ಸಮಿತಿಯ ಅಧ್ಯಯನ ವರದಿಯಲ್ಲಿ ಉಲ್ಲೇಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಠಾತ್ ಹೃದಯಾಘಾತ, ಹೃದಯಸ್ತಂಭನದಿಂದ ಸಾವು ಸಂಭವಿಸುವುದಕ್ಕೆ ಕೋವಿಡ್ ಮತ್ತು ಕೋವಿಡ್ ಲಸಿಕೆಗಳು ಕಾರಣ ಎಂಬುದಕ್ಕೆ ಪುರಾವೆಗಳಿಲ್ಲ. ಮಧುಮೇಹ, ಅಧಿಕ ರಕ್ತದೊತ್ತಡದಂತಹ ಸಮಸ್ಯೆಗಳಿಂದ ಹೃದಯಾಘಾತದ ಅಪಾಯ ಹೆಚ್ಚಾಗಿದೆ' ಎಂದು ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಕೆ.ಎಸ್. ರವೀಂದ್ರನಾಥ್ ಅಧ್ಯಕ್ಷತೆಯ ತಜ್ಞರ ಸಮಿತಿ ಹೇಳಿದೆ.

ಸಂಭಾವ್ಯ ಕಾರಣಗಳು


- ಹಠಾತ್ ಹೃದಯಾಘಾತದ ಸಾವುಗಳಿಗೆ ಹಲವು ಅಂಶಗಳು ಕಾರಣವಾಗಿರಬಹುದು. ಜೀವನಕ್ರಮ, ಆನುವಂಶೀಯ ಕಾಯಿಲೆಗಳು, ಆರೋಗ್ಯದ ಇತರ ಸಮಸ್ಯೆಗಳು ಇಂತಹ ಸಾವಿಗೆ ಕಾರಣವಾಗಿರಬಹುದು
- ಅತೀವ ಬೊಜ್ಜು, ಮಧುಮೇಹ, ಅಧಿಕ ರಕ್ತದೊತ್ತಡ, ರಕ್ತದಲ್ಲಿ ಅಧಿಕ ಕೊಬ್ಬಿನಾಂಶದಂತಹ ಆರೋಗ್ಯದ ಸಮಸ್ಯೆಗಳು ಇಂತಹ ಹೃದಯಾಘಾತಕ್ಕೆ ಕಾರಣವಾಗಿರಬಹುದು
- ಅತಿಯಾದ ಧೂಮಪಾನ, ಅಸಮತೋಲಿತ ಜೀವನಕ್ರಮವೂ ಕಾರಣ
- ಕೆಲವು ಪ್ರಕರಣಗಳಲ್ಲಿ, ಹಠಾತ್ ಹೃದಯಾಘಾತ ಸಂಭವಿಸಿದ ಅವಧಿಯ ಹಿಂದಿನ 48 ಗಂಟೆಗಳಲ್ಲಿ ರೋಗಿಗಳು ವಿಪರೀತ ಎನಿಸುವಷ್ಟು ದೈಹಿಕ ಶ್ರಮ ಹಾಕಿರುವುದೂ ಕಾರಣ

ಇನ್ನಷ್ಟು ಸುದ್ದಿ 6

ಕೋವಿಡ್‌ನಿಂದ ಅಪಾಯ ಹೆಚ್ಚಳ

ಹಠಾತ್ ಹೃದಯಾಘಾತದ ಸಾವುಗಳಿಗೆ ಕೋವಿಡ್ ಕಾರಣವೇ ಎಂಬುದನ್ನು ಪತ್ತೆ ಮಾಡಲು ಸಮಿತಿಯು ಕೂಲಂಕಷವಾಗಿ ಅಧ್ಯಯನ ನಡೆಸಿದೆ. ಜಯದೇವ ಹೃದ್ರೋಗ ವಿಜ್ಞಾನ ಸಂಸ್ಥೆಗಳಲ್ಲಿ 2019ಕ್ಕೂ ಮೊದಲು ದಾಖಲಾಗಿದ್ದ 40 ವರ್ಷದೊಳಗಿನ ರೋಗಿಗಳ ದತ್ತಾಂಶವನ್ನು ಕಲೆ ಹಾಕಲಾಗಿದೆ. 2025ರ ಏಪ್ರಿಲ್ 1ರಿಂದ ಮೇ 1ರವರೆಗೆ ದಾಖಲಾದ ರೋಗಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ವಿವಿಧ ಆರೋಗ್ಯ ಸಮಸ್ಯೆ ಹೊಂದಿದ್ದವರಲ್ಲಿ ಕೋವಿಡ್ ಸೃಷ್ಟಿಸಿದ ಪರಿಣಾಮಗಳಿಂದ ಹೃದಯಾಘಾತದ ಸಾಧ್ಯತೆ ಹೆಚ್ಚಾಗಿದೆ ಎಂಬುದು ಎರಡೂ ದತ್ತಾಂಶ ಪರಸ್ಪರ ಹೋಲಿಕೆಯಲ್ಲಿ ಪತ್ತೆಯಾಗಿದೆ

ಮಧುಮೇಹ, ಅಧಿಕ ರಕ್ತದೊತ್ತಡ ಇದ್ದವರಲ್ಲಿ ಹೃದಯಾಘಾತದ ಸಾಧ್ಯತೆ ಹೆಚ್ಚಳ



'ಶಾಲೆಗಳಲ್ಲಿ ತಪಾಸಣೆ ನಡೆಸಿ'

ಚಿಕ್ಕ ವಯಸ್ಸಿನವರಲ್ಲಿ ಹೃದಯಾಘಾತ ಪ್ರಕರಣಗಳು ವರದಿಯಾಗುತ್ತಿರುವ ಕಾರಣ ಶಾಲಾ ಹಂತದಲ್ಲಿಯೇ ಹೃದಯ ತಪಾಸಣೆ ನಡೆಸಿ, ರೋಗ ಪತ್ತೆಗೆ ಆದ್ಯತೆ ನೀಡಬೇಕು ಎಂದು ತಜ್ಞರು ಶಿಫಾರಸು ಮಾಡಿದ್ದಾರೆ. ಸರ್ಕಾರದ ಮಟ್ಟದಲ್ಲಿ ಕೈಗೊಳ್ಳಬಹುದಾದ ಮತ್ತು ಜನರೇ ಅನುಸರಿಸಬಹುದಾದ ಕ್ರಮಗಳನ್ನು ಸಮಿತಿ ಶಿಫಾರಸು ಮಾಡಿದೆ.

ಸೋಮವಾರ ಸಲ್ಲಿಕೆ: ಯುವಜನರು ಹೃದಯಾಘಾತದಿಂದ ಮೃತಪಡುತ್ತಿರುವ ಪ್ರಕರಣಗಳಿಗೆ ಕೋವಿಡ್ ಹಾಗೂ ಲಸಿಕೆಯ ಅಡ್ಡ ಪರಿಣಾಮಗಳು ಕಾರಣವೇ ಎಂಬುದನ್ನು ಪತ್ತೆ ಮಾಡಲು ರಚಿಸಿದ್ದ ಈ ಸಮಿತಿಯ ಅಧ್ಯಯನ ವರದಿ ಸಿದ್ಧವಾಗಿದೆ. ವರದಿಯನ್ನು ಸೋಮವಾರ ಸರ್ಕಾರಕ್ಕೆ ಸಲ್ಲಿಸಲಾಗುತ್ತಿದೆ.



ಅಥ್ಲೀಟ್(ದೇಶ)	ದೂರ (ಮೀಟರ್ಸ್)	ಪದಕ
ನೀರಜ್ ಚೋಪ್ರಾ (ಭಾರತ)	86.18	ಚಿನ್ನ
ಜೂಲಿಯಸ್ ಯೆಗೊ(ಕೆನ್ಯಾ)	84.51	ಬೆಳ್ಳಿ
ರುಮೇಶ್ ಪತಿರಾಗೆ(ಶ್ರೀಲಂಕಾ)	84.34	ಕಂಚು

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಎನ್‌ಸಿ ಕ್ಲಾಸಿಕ್– 2025 ಜಾವೆಲಿನ್ ಥ್ರೋ ಕೂಟದಲ್ಲಿ ಚಿನ್ನ ಗೆದ್ದ ಭಾರತದ ನೀರಜ್ ಚೋಪ್ರಾ ಅವರ ಸಂಭ್ರಮ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.

ಚೋಪ್ರಾ 'ಕ್ಲಾಸಿಕ್ ಚಾಂಪಿಯನ್'

● ಗಿರೀಶ ದೊಡ್ಡಮನಿ

ಬೆಂಗಳೂರು: ಹನ್ನೊಂದು ಜನ ಅಂತರರಾಷ್ಟ್ರೀಯ ಅಥ್ಲೀಟ್‌ಗಳು ಒಡ್ಡಿದ ಪೈಪೋಟಿಯಲ್ಲಿ ನೀರಜ್ ಪುಟಕಿಟ್ಟ ಚಿನ್ನವಾಗಿ ಹೊರಹೊಮ್ಮುವ ಮೂಲಕ ಕ್ರೀಡಾಪ್ರೇಮಿಗಳ ಕಣ್ಮಣಿಯಾಗಿ ಹೊಳೆದರು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ರಭಸವಾಗಿ ಬೀಸುತ್ತಿದ್ದ ಗಾಳಿಯ ಸವಾಲಿನಲ್ಲಿಯೇ 86.18 ಮೀಟರ್ ದೂರ ಜಾವೆಲಿನ್ ಎಸೆದ ಒಲಿಂಪಿಯನ್ ನೀರಜ್ ಪ್ರಥಮ ಸ್ಥಾನಕ್ಕೆ ಲಗ್ಗೆ ಇಟ್ಟರು.

ವಿಶ್ವ ಅಥ್ಲೆಟಿಕ್ಸ್‌ನಿಂದ (ಡಬ್ಲ್ಯು.ಎ) ಗೋಲ್ಡ್ ಲೆವೆಲ್ ಮಾನ್ಯತೆ ಪಡೆದ ಈ ಕೂಟದಲ್ಲಿ ನೀರಜ್ ಚಿನ್ನದ ಹುಡುಗನಾದರು. ಅವರಿಗೆ ನಿಕಟ ಪೈಪೋಟಿಯೊಡ್ಡಿದ ಕೆನ್ಯಾದ ಜೂಲಿಯಸ್ ಯೆಗೊ ಮತ್ತು ಶ್ರೀಲಂಕಾದ ರುಮೇಶ್ ಪತಿರಾಗೆ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

14 ಸಾವಿರಕ್ಕೂ ಹೆಚ್ಚು ಕ್ರೀಡಾ ಪ್ರೇಮಿಗಳು ಸೇರಿದ್ದ ಕ್ರೀಡಾಂಗಣದಲ್ಲಿ, 27 ವರ್ಷ ವಯಸ್ಸಿನ ನೀರಜ್ ಮೊದಲ ಥ್ರೋನಲ್ಲಿ ಫೌಲ್ ಮಾಡಿದರು. ಎರಡನೇ ಸುತ್ತಿನ ಥ್ರೋಗಳಲ್ಲಿ ಶ್ರೀಲಂಕಾದ ರುಮೇಶ್ ಅವರು 81.90 ಮೀ. ಎಸೆದರು. ಈ ಕೂಟದಲ್ಲಿ 80 ಮೀ ದಾಟಿದ ಮೊದಲ ಅಥ್ಲೀಟ್ ಆದರು. ಆದರೆ ಅದೇ ಸುತ್ತಿನಲ್ಲಿ ನೀರಜ್ ಭರ್ಚಿಯನ್ನು 82.99 ಮೀ ಎಸೆದರು. ಈ ಪೈಪೋಟಿ ಮೂರನೇ ಸುತ್ತಿಗೂ ವಿಸ್ತರಿಸಿತು. ಆದರೆ ಅದು ನೀರಜ್ ಪಾಲಿಗೆ ನಿರ್ಣಾಯಕವೂ ಆಗಿತ್ತು!

ಮೂರನೇ ಥ್ರೋನಲ್ಲಿ ರುಮೇಶ್ 84.34 ಮೀಟರ್ಸ್ ದೂರ ಎಸೆದು ನೀರಜ್ ಅವರಿಗೆ ಸವಾಲೆಸೆದರು. ಆದರೆ ಎರಡು ಒಲಿಂಪಿಕ್ಸ್ ಪದಕ ವಿಜೇತ ನೀರಜ್ ಎದೆಗುಂದಲಿಲ್ಲ. 86.18 ಮೀ. ದೂರ ಭರ್ಚಿಯನ್ನು ಎಸೆದು ತಾವೇ 'ಕ್ಲಾಸಿಕ್' ಎಂದು ತೋರಿಸಿಕೊಟ್ಟರು. ತಾವು ಎಸೆದ ಭರ್ಚಿಯು ಗಾಳಿಯನ್ನು ಸೀಳುತ್ತಾ ಹೋಗಿ ನೆಲಸ್ಪರ್ಶ ಮಾಡುವ ಮುನ್ನವೇ ನೀರಜ್ ತಮ್ಮ ಎಂದಿನ ವಿಜಯಶೈಲಿ ಪ್ರದರ್ಶಿಸಿದರು. ಜನಸ್ತೋಮದ ಸಂಭ್ರಮ ಮುಗಿಲುಮುಟ್ಟಿತು. 12 ಅಥ್ಲೀಟ್‌ಗಳಿಗೆ ತಲಾ ಮೂರು ಥ್ರೋಗಳು ಆದ ನಂತರ ಅಗ್ರ ಎಂಟು ಮಂದಿಯನ್ನು ಎರಡನೇ ಸುತ್ತಿಗೆ ಆಯ್ಕೆ ಮಾಡಲಾಯಿತು. ಸ್ಪರ್ಧೆಗೂ ಮುನ್ನ ನೀರಜ್ ಅವರಿಗೆ ನಿಕಟ ಪೈಪೋಟಿಯೊಡ್ಡುವ ಸ್ಪರ್ಧಿ ಎಂದೇ ಬಿಂಬಿತವಾಗಿದ್ದ ಜರ್ಮನಿಯ ಥಾಮಸ್ ರೋಲೆ ಅವರು ಟಾಪ್ 8 ಹಂತಕ್ಕೆ ಅರ್ಹತೆ ಪಡೆಯಲಿಲ್ಲ. ಈ ಹಂತದಲ್ಲಿ ನೀರಜ್ ಅವರನ್ನು ಯಾರೂ ಹಿಂದಿಕ್ಕಲಿಲ್ಲ.


ಚಿನಕುರುಳಿ ಪ್ರಕಾಶ್ ಶೆಟ್ಟಿ



ಅಪಾರ್ಟ್‌ಮೆಂಟ್, ವಿಲ್ಲಾ, ವಾಣಿಜ್ಯ ಸಂಕೀರ್ಣ, ಮಾಲ್‌ಗಳಿಗೆ ಅನ್ವಯ

ಗ್ರಾ.ಪಂ: ವಾಣಿಜ್ಯ ಆಸ್ತಿ ತೆರಿಗೆ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಅಪಾರ್ಟ್‌ಮೆಂಟ್, ವಿಲ್ಲಾ, ವಾಣಿಜ್ಯ ಸಂಕೀರ್ಣ, ಮಾಲ್, ವಸತಿಯೇತರ ಕಟ್ಟಡ ಮತ್ತು ಬಹು-ಮಾಲೀಕತ್ವದ ಕಟ್ಟಡಗಳ ಆಸ್ತಿ ತೆರಿಗೆ ಏರಿಕೆಯಾಗಲಿದೆ.

ಈ ಉದ್ದೇಶದಿಂದ ರಾಜ್ಯ ಸರ್ಕಾರವು, 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ, ಫೀಜುಗಳ) ನಿಯಮಗಳು-2025' ಕರಡು ಅಧಿಸೂಚನೆಯನ್ನು ಹೊರಡಿಸಿದೆ. ಆಕ್ಷೇಪ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿದೆ. ನೂತನ ನಿಯಮ ಜಾರಿಯಾದರೆ, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇಂತಹ ಕಟ್ಟಡಗಳನ್ನು ಹೊಂದಿರುವವರು ಆಸ್ತಿ ತೆರಿಗೆಗೆ ಹೆಚ್ಚು ವೆಚ್ಚ ಮಾಡಬೇಕಾಗುತ್ತದೆ.

ಈಗ ಕಟ್ಟಡಗಳ ಸ್ಥಿರಾಸ್ತಿ ಮಾರ್ಗಸೂಚಿ ದರದ ಆಧಾರದಲ್ಲಿ ವರ್ಗೀಕರಣ ಮಾಡಿ, ಆಸ್ತಿ ತೆರಿಗೆ ವಿಧಿಸಲಾಗುತ್ತದೆ. ಕರಡು ನಿಯಮಗಳಲ್ಲಿ, ಈ ವರ್ಗೀಕರಣದ ಮಾನದಂಡಗಳಿಗೆ ಗಣನೀಯ ಬದಲಾವಣೆ ತರಲಾಗಿದೆ.

7

ಏನೆಲ್ಲಾ ಬದಲಾವಣೆ...

- ತೆರಿಗೆ ವ್ಯಾಪ್ತಿ ವರ್ಗೀಕರಣದಲ್ಲಿ ವ್ಯಾಪಕ ಬದಲಾವಣೆ
- ಪ್ರತಿ ಚದರ ಮೀಟರ್‌ಗೆ ₹50,000ಕ್ಕಿಂತ ಹೆಚ್ಚು ಸ್ಥಿರಾಸ್ತಿ ಮಾರ್ಗಸೂಚಿ ದರ ಹೊಂದಿರುವ ಎಲ್ಲ ಕಟ್ಟಡಗಳ ತೆರಿಗೆ ಏರಿಕೆ
- ಪ್ರತಿ ಚದರ ಮೀಟರ್‌ಗೆ ₹40,000ಕ್ಕಿಂತ ಹೆಚ್ಚು ಸ್ಥಿರಾಸ್ತಿ ಮಾರ್ಗಸೂಚಿ ದರ ಹೊಂದಿರುವ ವಸತಿ ಕಟ್ಟಡಗಳ ತೆರಿಗೆ ತುಸು ಇಳಿಕೆ
- ಪ್ರತಿ ಚದರ ಮೀಟರ್‌ಗೆ ₹40,000ಕ್ಕಿಂತ ಹೆಚ್ಚು ಸ್ಥಿರಾಸ್ತಿ ಮಾರ್ಗಸೂಚಿ ದರ ಹೊಂದಿರುವ ವಸತಿಯೇತರ ಮತ್ತು ವಾಣಿಜ್ಯ ಕಟ್ಟಡಗಳ ತೆರಿಗೆ ಏರಿಕೆ

ದ್ವಿಭಾಷಾ ಸೂತ್ರ ಜಾರಿಗೆ ಯತ್ನ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯಕ್ಕೆ ದ್ವಿಭಾಷಾ ಸೂತ್ರ ಇರಬೇಕು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಇದನ್ನೇ ಸರ್ಕಾರದ ಅಭಿಪ್ರಾಯವನ್ನಾಗಿ ಮಾಡಲು ಪ್ರಯತ್ನಿಸುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಜನ ಪ್ರಕಾಶನ ಆಯೋಜಿಸಿದ್ದ ಬರಗೂರು ರಾಮಚಂದ್ರಪ್ಪ ಸಂಪಾದಕತ್ವದ 'ಕುವೆಂಪು ವಿಚಾರ ಕ್ರಾಂತಿ' ಕೃತಿ ಜನಾರ್ಪಣೆ, 'ಜನರ ಕಡೆಗೆ ವೈಚಾರಿಕ ನಡಿಗೆ' ಮೂಲಕ ಕುವೆಂಪು ವಿಚಾರಾಂದೋಲನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಾಹಿತಿ ಹಂ.ಪ. ನಾಗರಾಜಯ್ಯ ಅವರು ಆರಂಭದಲ್ಲಿ ಮಾತನಾಡಿ, 'ಕುವೆಂಪು ಅವರು ದ್ವಿಭಾಷಾ ಸೂತ್ರ ರಾಜ್ಯದಲ್ಲಿ ಇರಬೇಕು ಎಂದು ಪ್ರತಿಪಾದಿಸಿದ್ದರು. ಅದು ಸರಿಯಾದುದು' ಎಂದು ಹೇಳಿದ್ದರು.

ಇದೇ ವಿಚಾರವನ್ನು ಸಿದ್ದರಾಮಯ್ಯ ಪ್ರಸ್ತಾಪಿಸಿ, 'ಸಚಿವ ಸಂಪುಟವನ್ನು ಒಪ್ಪಿಸಿ ದ್ವಿಭಾಷಾ ಸೂತ್ರ ತರಲು ಪ್ರಯತ್ನಿಸಲಾಗುವುದು' ಎಂದು ಹೇಳಿದರು.

'ನಂಬಿಕೆಗಳ ಜತೆಗೂ ನಡೆಯಬೇಕು'

'ರಾಜಕಾರಣಿಯಾಗಿ ನನಗೆ ಕೆಲವು ಮಿತಿಗಳು ಇರುತ್ತವೆ. ಸಮಾಜದ ನಂಬಿಕೆಗಳ ಜೊತೆಗೂ ನಾವು ಕೆಲವೊಮ್ಮೆ ನಡೆಯಬೇಕಾಗುತ್ತದೆ' ಎಂದು ಸಿದ್ದರಾಮಯ್ಯ ತಿಳಿಸಿದರು.

'ನಾನು ದೇವಸ್ಥಾನಕ್ಕೆ ಹೋದಾಗ ಕುಂಕುಮ ಇಡುತ್ತಾರೆ. ಕುಂಕುಮ ಇಟ್ಟಿದ್ದಕ್ಕೂ ಕಥೆ ಕಟ್ಟುತ್ತಾರೆ. ಗ್ರಾಮೀಣ ಭಾಗಕ್ಕೆ ಹೋದಾಗ ದೇವಸ್ಥಾನಗಳಿಗೆ ಹೋಗದಿದ್ದರೆ ನಮ್ಮ ಬಗ್ಗೆ ಬೇರೆಯದೇ ರೀತಿಯ ಕಥೆ ಕಟ್ಟುತ್ತಾರೆ. ಅದನ್ನು ಜನರೂ ನಂಬುವುದರಿಂದ ಇವನಿಗೆ ಎಷ್ಟು ಅಹಂಕಾರ. ವೋಟು ಹಾಕುವುದು ಬೇಡ ಎಂದು ನಿರ್ಧರಿಸುತ್ತಾರೆ' ಎಂದು ತಾವು ಎದುರಿಸುತ್ತಿರುವ ಸಂದಿಗ್ಧ ಸ್ಥಿತಿ ಕುರಿತು ಹೇಳಿದರು.

ರಾಜ್ಯಪಾಲರ ಕುರಿತ ಪಠ್ಯಕ್ಕೆ ಕೇರಳ ಒಪ್ಪಿಗೆ

ತಿರುವನಂತಪುರ (ಪಿಟಿಐ): ರಾಜ್ಯಪಾಲರ ಸಾಂವಿಧಾನಿಕ ಅಧಿಕಾರ ಮತ್ತು ಅವರ ಕರ್ತವ್ಯಗಳನ್ನು ವಿವರಿಸುವ ಪಾಠವನ್ನು 10ನೇ ತರಗತಿ ಪಠ್ಯಕ್ರಮದಲ್ಲಿ ಅಳವಡಿಸಲು ಕೇರಳದ ಶಿಕ್ಷಣ ಸಚಿವ ವಿ.ಶಿವಕುಟ್ಟಿ ನೇತೃತ್ವದ ಪಠ್ಯಕ್ರಮ ಸಮಿತಿಯು ಒಪ್ಪಿಗೆ ನೀಡಿದೆ.

10ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದ ಎರಡನೇ ಆವೃತ್ತಿಯಲ್ಲಿ 'ಪ್ರಜಾಪ್ರಭುತ್ವ: ಭಾರತದ ಅನುಭವ' (ಡೆಮಾಕ್ರಸಿ: ಆ್ಯನ್ ಇಂಡಿಯನ್ ಎಕ್ಸ್‌ಪೀರಿಯನ್ಸ್) ಹೆಸರಿನ ಪಾಠವನ್ನು ಅಳವಡಿಸಲು ನಿರ್ಧರಿಸಲಾಗಿದೆ. ಈ ಬಗ್ಗೆ ಶಿಕ್ಷಣ ಇಲಾಖೆಯು ಶುಕ್ರವಾರ ಹೇಳಿಕೆ ಬಿಡುಗಡೆ ಮಾಡಿದೆ. 'ಭಾರತದ ಪ್ರಜಾಪ್ರಭುತ್ವ, ಚುನಾವಣಾ ಬಾಂಡ್ ರದ್ದು ಮಾಡಿದ ಸುಪ್ರೀಂ ಕೋರ್ಟ್‌ನ ತೀರ್ಪು, ಶಾಸಕರನ್ನು ಖರೀದಿ ಮಾಡಿ ರೆಸಾರ್ಟ್ ಗಳಲ್ಲಿ ಇರಿಸಿಕೊಳ್ಳುವ ರೆಸಾರ್ಟ್ ರಾಜಕಾರಣದ ಕುರಿತೂ ಇದೇ ಪಠ್ಯದಲ್ಲಿ ವಿವರಿಸಲಾಗಿದೆ. ಓಣಂ ಹಬ್ಬಕ್ಕೂ ಮೊದಲೇ ಈ ಪಠ್ಯಪುಸ್ತಕವು ವಿದ್ಯಾರ್ಥಿಗಳ ಕೈಸೇರಲಿದೆ' ಎಂದು ಹೇಳಿದೆ.

ಗಾಳಿಯಲ್ಲಿ ಗುಂಡು ಹಾರಿಸಿದ ರಮೇಶ ಜಾರಕಿಹೊಳಿ ಪುತ್ರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಶಾಸಕ ರಮೇಶ ಜಾರಕಿಹೊಳಿ ಅವರ ಪುತ್ರ ಸಂತೋಷ ಅವರು ಜಿಲ್ಲೆಯ ಗೋಕಾಕದ ಮಹಾಲಕ್ಷ್ಮಿ ದೇವಿ ಜಾತ್ರೆಯಲ್ಲಿ ಶನಿವಾರ ಜನಸಂದಣಿಯಲ್ಲೇ ಗಾಳಿಯಲ್ಲಿ ಬಂದೂಕಿನಿಂದ ಒಂದು ಸುತ್ತು ಗುಂಡು ಹಾರಿಸಿದ್ದಾರೆ.

ದಶಕದ ಬಳಿಕ ಗೋಕಾಕದಲ್ಲಿ ನಡೆದಿರುವ ಅದ್ದೂರಿ ಜಾತ್ರೆಗೆ ಜಾರಕಿಹೊಳಿ ಕುಟುಂಬದವರ ನೇತೃತ್ವವಿದೆ. ಸಂತೋಷ ಜಾರಕಿಹೊಳಿ ಉತ್ಸವದ ಆರನೇ ದಿನವಾದ ಶನಿವಾರ ಭಂಡಾರದ ಓಕುಳಿಯಲ್ಲಿ ಪಾಲ್ಗೊಂಡರು. ಆಗ ಬಂದೂಕು ಹಿಡಿದು, ಗಾಳಿಯಲ್ಲಿ ಗುಂಡು ಹಾರಿಸಿದರು. ಅಲ್ಲಿ ಸುತ್ತಲೂ ಸೇರಿದ್ದ ಅವರ ಬೆಂಬಲಿಗರು ಮಹಾಲಕ್ಷ್ಮಿ ದೇವಿಗೆ ಜೈಕಾರ ಹಾಕಿದರು.

ಇದರ ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ.



ರಮೇಶ ಜಾರಕಿಹೊಳಿ ಅವರ ಪುತ್ರ ಸಂತೋಷ ಅವರು ಬಂದೂಕಿನಿಂದ ಗಾಳಿಯಲ್ಲಿ ಗುಂಡು ಹಾರಿಸಿದರು

'ಸಾರ್ವಜನಿಕ ಸ್ಥಳದಲ್ಲಿ ಶಸ್ತ್ರಾಸ್ತ್ರ ಪ್ರದರ್ಶನ ಹಾಗೂ ಗಾಳಿಯಲ್ಲಿ ಗುಂಡು ಹಾರಿಸಿದ ಆರೋಪದ ಮೇಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ 'ಪ್ರಜಾವಾಣಿ'ಗೆ ತಿಳಿಸಿದರು.

1.41 ಲಕ್ಷ ಎಂಜಿನಿಯರಿಂಗ್ ಸೀಟು ಸಿಇಟಿ ಮೂಲಕ ಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಇಟಿಯಲ್ಲಿ ಅರ್ಹತೆ ಪಡೆದು ಎಂಜಿನಿಯರಿಂಗ್ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ 2025–26ನೇ ಸಾಲಿನಲ್ಲಿ 1.41 ಲಕ್ಷ ಸೀಟುಗಳು ಲಭ್ಯವಿವೆ.

ವಿವಿಧ ಕಾಲೇಜುಗಳಲ್ಲಿ ಲಭ್ಯವಿರುವ ಸರ್ಕಾರಿ ಕೋಟಾದ ಸೀಟುಗಳೂ ಸೇರಿ 1,41,009 ಸೀಟುಗಳ ಅಂತಿಮ ಪಟ್ಟಿಯನ್ನು (ಸೀಟ್ ಮ್ಯಾಟ್ರಿಕ್ಸ್) ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಶನಿವಾರ ಬಿಡುಗಡೆ ಮಾಡಿದೆ.

2024–25ನೇ ಸಾಲಿನಲ್ಲೂ ಎಂಜಿನಿಯರಿಂಗ್ ಸೀಟುಗಳ ಸಂಖ್ಯೆ 1.41 ಲಕ್ಷ ಇತ್ತು. ಈ ವರ್ಷವೂ ಅಷ್ಟೇ ಸಂಖ್ಯೆಯ ಸೀಟುಗಳು ಲಭ್ಯವಾಗಿವೆ. ಕಂಪ್ಯೂಟರ್ ಸೈನ್ಸ್ 30,573, ಕೃತಕ ಬುದ್ಧಿಮತ್ತೆ 7,209, ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್ 19,407, ಮಾಹಿತಿ ವಿಜ್ಞಾನ 10,473, ಮೆಕ್ಯಾನಿಕಲ್ 8,930, ಸಿವಿಲ್ 8,280 ಸೀಟುಗಳು ಲಭ್ಯವಿವೆ.

ಎಂಜಿನಿಯರಿಂಗ್ ಸೀಟ್ ಬ್ಲಾಕಿಂಗ್ ಪ್ರಕರಣದಲ್ಲಿ ಹೆಸರಿರುವ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ನ್ಯೂ ಹೊರೈಜನ್ ಎಂಜಿನಿಯರಿಂಗ್ ಕಾಲೇಜುಗಳ ಹೆಚ್ಚುವರಿ ಸೀಟುಗಳನ್ನು ಹೊರತುಪಡಿಸಿ ಉಳಿದ ಎಲ್ಲ ಕಾಲೇಜುಗಳಲ್ಲಿ ಲಭ್ಯವಿರುವ ಸೀಟುಗಳನ್ನೂ ಹಂಚಿಕೆಯ ಪಟ್ಟಿಗೆ ಪರಿಗಣಿಸಲಾಗಿದ್ದು, ಅಣಕು ಸೀಟು ಹಂಚಿಕೆ ಪ್ರಕ್ರಿಯೆ ಆರಂಭಿಸಲು ಪ್ರಾಧಿಕಾರ ಸಿದ್ಧತೆ ನಡೆಸಿದೆ.

ನೀಟ್ ಅಂಕಗಳ ಆಧಾರದಲ್ಲಿ ರಾಜ್ಯದಲ್ಲಿ ಲಭ್ಯವಿರುವ ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ ಸೀಟು ಹಂಚಿಕೆಯ ಮೊದಲ ಸುತ್ತು ಮುಗಿಯುತ್ತಿದ್ದಂತೆ ಎಂಜಿನಿಯರಿಂಗ್ ಸೇರಿದಂತೆ ಇತರೆ ವೃತ್ತಿ ಶಿಕ್ಷಣ ಕೋರ್ಸ್‌ಗಳ ಸೀಟು ಹಂಚಿಕೆ ನಡೆಯಲಿದೆ. ದಿನಾಂಕ ಶೀಘ್ರ ಪ್ರಕಟಿಸಲಾಗುವುದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

2025–26ನೇ ಸಾಲಿನಲ್ಲಿ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶ ಬಯಸಿ 3.11 ಲಕ್ಷ ವಿದ್ಯಾರ್ಥಿಗಳು ಸಿಇಟಿ ಬರೆದಿದ್ದರು. ಮೇ 24ರಂದು ಫಲಿತಾಂಶ ಪ್ರಕಟಿಸಿತ್ತು.





ಸೂರ್ಯೋದಯ: 5:58 ಸೂರ್ಯಾಸ್ತ : 6:50 | ಚಂದ್ರೋದಯ: ಮ. 2:15 ಚಂದ್ರಾಸ್ತ: ರಾ. 1:18 | ಶನಿವಾರದ ಉಷ್ಣಾಂಶ : ಗರಿಷ್ಠ 27° ಕನಿಷ್ಠ 20°

ಭಾನುವಾರದ ಉಷ್ಣಾಂಶ 28° ಗರಿಷ್ಠ 20° ಕನಿಷ್ಠ | ಸೋಮವಾರ 28° - 20° | ಮಂಗಳವಾರ 29° - 20° | ಬುಧವಾರ 29° - 20°

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗಲಿದೆ.



ಕಳಪೆ ಹೆಲ್ಮೆಟ್ ಮಾರಾಟ: ದಾಳಿ

ವಿವಿಧೆಡೆ ಜಂಟಿ ಕಾರ್ಯಾಚರಣೆ: ಅರ್ಧ ಹೆಲ್ಮೆಟ್ ಜಪ್ತಿ, ಮಾರಾಟಗಾರರಿಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಲ್ಮೆಟ್ ಮಾರಾಟ ಮಳಿಗೆಗಳ ಮೇಲೆ ಪಶ್ಚಿಮ ವಿಭಾಗದ ಸಂಚಾರ ಪೊಲೀಸರು, ಆರ್‌ಟಿಒ ಅಧಿಕಾರಿಗಳು ಹಾಗೂ ಕಾನೂನು ಮಾಪನ ಇಲಾಖೆಯ ಅಧಿಕಾರಿಗಳು ಜಂಟಿ ದಾಳಿ ನಡೆಸಿ ಕಳಪೆ ಗುಣಮಟ್ಟ ಹಾಗೂ ಅರ್ಧ ಹೆಲ್ಮೆಟ್‌ಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ.

ಕಳಪೆ ಗುಣಮಟ್ಟದ ಹೆಲ್ಮೆಟ್‌ಗಳನ್ನು ಮಾರಾಟ ಮಾಡುತ್ತಿದ್ದ ಆರು ಮಳಿಗೆಗಳ ಮಾಲೀಕರಿಗೆ ತಲಾ ₹50 ಸಾವಿರ ದಂಡ ವಿಧಿಸಿದ್ದಾರೆ.

ಕಳಪೆ ಗುಣಮಟ್ಟ ಮತ್ತು ಅರ್ಧ ಹೆಲ್ಮೆಟ್ ಧರಿಸಿ ಸಾಗುವಾಗ ರಸ್ತೆ ಅಪಘಾತಗಳು ಸಂಭವಿಸಿದರೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಣ ಹಾನಿಯಾಗುತ್ತಿತ್ತು. ನಿಷೇಧವಿದ್ದರೂ ಕಳಪೆ ಗುಣಮಟ್ಟ ಹಾಗೂ ಅರ್ಧ ಹೆಲ್ಮೆಟ್ ಮಾರಾಟ ಮಾಡಲಾಗುತ್ತಿದೆ ಎಂಬ ಮಾಹಿತಿಯೂ ಕಾರ್ಯಾಚರಣೆ ತಂಡಕ್ಕೆ ಸಿಕ್ಕಿತ್ತು. ಅದನ್ನು ಆಧರಿಸಿ ಪಶ್ಚಿಮ ಸಂಚಾರ ವಿಭಾಗದ ಡಿಸಿಪಿ ಅನಿತಾ ಬಿ. ಹದ್ದಣ್ಣವರ್ ಅವರ ನೇತೃತ್ವದಲ್ಲಿ ಜಂಟಿ ದಾಳಿ ನಡೆಸಲಾಯಿತು ಎಂದು ಮೂಲಗಳು ತಿಳಿಸಿವೆ.

ಸಿದ್ದಯ್ಯ ರಸ್ತೆ, ಕಲಾಸಿಪಾಳ್ಯ ರಸ್ತೆ, ಲಾಲ್‌ಬಾಗ್ ರಸ್ತೆ, ಮಾಗಡಿ ರಸ್ತೆ, ಸುಮನಹಳ್ಳಿ, ವಿಜಯನಗರ, ಅಗ್ರಹಾರ ದಾಸರಹಳ್ಳಿ, ನಾಗರಭಾವಿ, ಹೊರ ವರ್ತುಲ ರಸ್ತೆ ಸೇರಿದಂತೆ ಒಟ್ಟು 19 ಸ್ಥಳಗಳಲ್ಲಿ ಅಧಿಕಾರಿಗಳು ದಾಳಿ ನಡೆಸಿ ಪರಿಶೀಲನೆ ನಡೆಸಿದರು.

ಮಾಪನ ಇಲಾಖೆಯು ಆರು ಅಂಗಡಿಗಳಿಗೆ ತಲಾ ₹50 ಸಾವಿರ ದಂಡ ವಿಧಿಸಿದೆ. ಜೊತೆಗೆ, ದಿ ಲೀಗಲ್ ಮೆಟ್ರಾಲಜಿ ಕಾಯ್ದೆ 2009 ಕಲಂ 15ರ ಅಡಿ (ಮಾಪನಶಾಸ್ತ್ರ ಕಾಯ್ದೆ) ಅಡಿ ನೋಟಿಸ್ ಜಾರಿ ಮಾಡಲಾಗಿದೆ. 13 ಅಂಗಡಿ ಮಾಲೀಕರಿಗೆ ಕೋರ್ಟ್‌ನಲ್ಲಿ ದಂಡ ಪಾವತಿಸುವಂತೆ ಸೂಚನೆ ನೀಡಲಾಗಿದೆ. ಇದೇ ವೇಳೆ ಕಳಪೆ ಹಾಗೂ ಅರ್ಧ ಹೆಲ್ಮೆಟ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬೈಕ್ ಸವಾರರಿಗೂ ದಂಡ: ಕಳಪೆ ಹೆಲ್ಮೆಟ್ ಧರಿಸಿ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ 38 ಸವಾರರಿಗೆ ದಂಡ ವಿಧಿಸಿ, ಚಾಲನಾ ಪರವಾನಗಿ ಅಮಾನತು ಮಾಡುವುದಾಗಿ ಸಾರಿಗೆ ಇಲಾಖೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಮೋಟಾರು ವಾಹನ ಕಾಯ್ದೆಯ ಅನ್ವಯ ದ್ವಿಚಕ್ರ ವಾಹನ ಸವಾರರು ಮತ್ತು ಹಿಂಬದಿ ಸವಾರರು ಹೆಲ್ಮೆಟ್ ಧರಿಸುವುದು ಕಡ್ಡಾಯ. ಐಎಸ್‌ಐ ಮಾರ್ಕ್‌ನ ಹೆಲ್ಮೆಟ್ ಅನ್ನು ಧರಿಸಬೇಕು. ವಾಹನ ಸವಾರರು ಮತ್ತು ಹಿಂಬದಿ ಸವಾರರು ಪೂರ್ಣ ಹೆಲ್ಮೆಟ್ ಧರಿಸುವುದೂ ಕಡ್ಡಾಯ. ಈ ನಿಯಮ ಉಲ್ಲಂಘಿಸಿದ ಸವಾರರನ್ನು ಪತ್ತೆಹಚ್ಚಿ ಎಚ್ಚರಿಕೆ ನೀಡಿ ಕಳುಹಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

ಮುಖ್ಯಾಂಶಗಳು

- ಕಳಪೆ ಗುಣಮಟ್ಟ ಹಾಗೂ ಅರ್ಧ ಹೆಲ್ಮಟ್‌ಗಳ ಜಪ್ತಿ
- ಕೋರ್ಟ್‌ನಲ್ಲಿ ದಂಡ ಪಾವತಿ: 13 ಅಂಗಡಿಗಳಿಗೆ ಸೂಚನೆ
- ಕಳಪೆ ಹೆಲ್ಮೆಟ್: ಮಳಿಗೆಗಳಿಗೆ ₹ 50 ಸಾವಿರ ದಂಡ



ಜಪ್ತಿ ಮಾಡಿಕೊಂಡ ಅರ್ಧ ಹೆಲ್ಮೆಟ್‌ಗಳನ್ನು ಸಂಚಾರ ಪೊಲೀಸರು ಪರಿಶೀಲಿಸಿದರು

ಎಲ್ಲೆಲ್ಲಿ ದಾಳಿ?

ಸಿದ್ದಯ್ಯ ರಸ್ತೆಯ ಹೆಲ್ಮೆಟ್ ಪ್ಯಾರಡೈಸ್ ಹಾಗೂ ಎಚ್‌ಯುಎಫ್ ಎಂಟರ್ ಪ್ರೈಸಸ್, ಕಲಾಸಿಪಾಳ್ಯದ ಎಂಎಸ್ ಆಟೋನಿಟಿ, ಲಾಲ್‌ಬಾಗ್ ಮುಖ್ಯರಸ್ತೆಯ ಎಂ.ಎಸ್. ರೈಡಿಂಗ್ ಹಾಗೂ ಗೋಯಲ್ ಎಂಟರ್ ಪ್ರೈಸಸ್, ಪವರ್ ಸ್ಪೋರ್ಟ್ಸ್ ಇಂಟರ್ ನ್ಯಾಷನಲ್, ಬಾಲಾಜಿ ಹೆಲ್ಮೆಟ್ ಪ್ಯಾಲೇಸ್, ಎನ್.ಆಟೊ ಮೊಬೈಲ್ಸ್, ರೈನ್ ಬೊ ಹೆಲ್ಮೆಟ್, ವೇಗಾ ಜಾರ್ ಹೆಲ್ಮೆಟ್, ಪವರ್ ಸ್ಪೋರ್ಟ್ಸ್ ಹೆಲ್ಮೆಟ್, ಆಟೊ ಬೋಟ್ಸ್ ಹೆಲ್ಮೆಟ್ ಸ್ಟೋರ್ಸ್, ಎಸ್.ವಿ.ಹೆಲ್ಮೆಟ್, ಎಸ್‌ಜೆ ರೈಡರ್ಸ್ ಮಳಿಗೆಗಳ ಮೇಲೆ ದಾಳಿ ನಡೆಸಿ ಕಳಪೆ ಗುಣಮಟ್ಟ ಹಾಗೂ ಅರ್ಧ ಹೆಲ್ಮೆಟ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಯಿತು ಎಂದು ಸಂಚಾರ ಪೊಲೀಸರು ಹೇಳಿದರು.

ನೈಋತ್ಯ ರೈಲ್ವೆ

ಬೆಂಗಳೂರು ವಿಭಾಗದಿಂದ ಪಾರ್ಸೆಲ್ ಸ್ಥಳ, ಪಾರ್ಕಿಂಗ್ ಮತ್ತು ಜಾಹೀರಾತು ಹಾಗೂ ಇತರ ಗುತ್ತಿಗೆಗಳಿಗಾಗಿ ಇ-ಹರಾಜು

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ದಿನಾಂಕಗಳಲ್ಲಿ ನಡೆಯುವ ಇ-ಹರಾಜುಗಳಿಗೆ ಬಿಡ್ಡುದಾರರನ್ನು ಆಹ್ವಾನಿಸಿದ್ದಾರೆ.

1. ಊಟೋಪಹಾರ ಮತ್ತು ಎಂಪಿಎಸ್ ಮಳಿಗೆಗಳು : 07-07-2025, 08-07-2025, 15-07-2025, 16-07-2025, 17-07-2025, 18-07-2025, 21-07-2025, 25-07-2025, 29-07-2025
2. ಪಾರ್ಕಿಂಗ್ & ಪಾವತಿಸಿ ಮತ್ತು ಬಳಸಿ : 10-07-2025, 30-07-2025
3. ಪಾರ್ಸೆಲ್ : 07-07-2025, 08-07-2025, 09-07-2025, 15-07-2025, 29-07-2025
4. ಜಾಹೀರಾತು ಎಟಿಎಂ ಮತ್ತು ಇತರೆ : 07-07-2025, 08-07-2025, 16-07-2025, 17-07-2025, 18-07-2025, 22-07-2025
5. ಪಿಎಂಬಿಜೆಕೆ : 07-07-2025

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಬೆಂಗಳೂರು

ಪಿಯುಬಿ/266/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025-26

South Western Railway-SWR SWRRLY @SWRAILWAYHQ @sw_railways

ಸಿಬ್ಬಂದಿ ಅಮಾನತು

ಬೆಂಗಳೂರು: ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ ಮಾಡಿ ಸ್ಟಿಕರ್ ಅಂಟಿಸುವ ಕರ್ತವ್ಯದಲ್ಲಿ ಲೋಪ ಎಸಗಿದ ಆರೋಪದಡಿ ಪಶ್ಚಿಮ ವಲಯದ ಗೋವಿಂದರಾಜನಗರ ಉಪ ವಿಭಾಗದ ಕಂದಾಯ ಮೌಲ್ಯಮಾಪಕ ಹನುಮಂತರಾಜು ಅವರನ್ನು ಅಮಾನತು ಮಾಡಲಾಗಿದೆ.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಎಸ್‌ಡಬ್ಲ್ಯುಆರ್_ಸಿಓ_09_ಸ್ಟೇಷನ್ಸ್_ಎಸ್‌ಬಿಸಿ ದಿನಾಂಕ : 28-06-2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದ ಕುಪ್ಪಂ, ಬೈಯಪ್ಪನಹಳ್ಳಿ, ವೈಟ್‌ಫೀಲ್ಡ್, ಚನ್ನಪಟ್ಟಣ, ಹಿಂದೂಪುರ, ಕೃಷ್ಣರಾಜಪುರಂ, ಕೋಲಾರ, ತುಮಕೂರು ಮತ್ತು ಧರ್ಮಪುರಿ ನಿಲ್ದಾಣಗಳಲ್ಲಿ ರೈಲುಗಳ ಆಗಮನ / ನಿರ್ಗಮನ ಸಮಯಗಳನ್ನು ಸ್ವಯಂಚಾಲಿತ ಫೀಡಿಂಗ್‌ಗಾಗಿ ಸಿಓ ಒದಗಿಸುವುದು ಮತ್ತು ಅದನ್ನು ಡಾಟಾಲಾಗರ್‌ನೊಂದಿಗೆ ಸಂಯೋಜಿತಗೊಳಿಸುವುದು.	ರೂ. 49,58,419.06

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 21-07-2025 ರಂದು 12:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಇಂಜಿನಿಯರ್ / ಬೆಂಗಳೂರು

ಪಿಯುಬಿ/255/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025-26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway-SWR SWRRLY @SWRAILWAYHQ @sw_railways

ನೈಋತ್ಯ ರೈಲ್ವೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಪ್ರಕಟಣೆ ಸಂ. 35ಸಿಎಂಸಿಫೈರ್‌ಎಕ್ಸ್‌ಟಿಂಗ್ವಿಷರ್ಸ್ ದಿನಾಂಕ : 25-06-2025

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗದ ಸಿ&ಡಬ್ಲ್ಯು ಡಿಪೋಗಳು, ಹುಬ್ಬಳ್ಳಿ, ಹೊಸಪೇಟೆ, ವಿಜಯಪುರದ ಪ್ರಾಥಮಿಕ ನಿರ್ವಹಿತ ರೈಲುಗಳಲ್ಲಿ ಅಗ್ನಿಶಾಮಕಗಳಿಗೆ ಎರಡು ವರ್ಷಗಳ ಅವಧಿಗೆ ವಾರ್ಷಿಕ ಸಮಗ್ರ ನಿರ್ವಹಣಾ ಗುತ್ತಿಗೆ.	ರೂ. 48,45,805.70

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16-07-2025 ರಂದು 11:00 ಗಂಟೆಯವರೆಗೆ

ಟೆಂಡರ್ ಪ್ರಕಟಣೆ ಸಂ. 36ಸಿಎಂಸಿಫೈರ್‌ಎಕ್ಸ್‌ಟಿಂಗ್ವಿಷರ್ಸ್ ದಿನಾಂಕ : 25-06-2025

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗದ ಸಿ&ಡಬ್ಲ್ಯು ಡಿಪೋಗಳು, ನವಲೂರು, ಬೆಳಗಾವಿ, ಕ್ಯಾಸೆಲ್ ರಾಕ್ ಮತ್ತು ವಾಸ್ಕೋ-ಡ-ಗಾಮಾದ ಪ್ರಾಥಮಿಕ ನಿರ್ವಹಿತ ರೈಲುಗಳಲ್ಲಿ ಅಗ್ನಿಶಾಮಕಗಳಿಗೆ ಎರಡು ವರ್ಷಗಳ ಅವಧಿಗೆ ವಾರ್ಷಿಕ ಸಮಗ್ರ ನಿರ್ವಹಣಾ ಗುತ್ತಿಗೆ.	ರೂ. 28,08,113.26

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16-07-2025 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಮೆಕ್ಯಾನಿಕಲ್ ಇಂಜಿನಿಯರ್ / ಸಮನ್ವಯ / ಹುಬ್ಬಳ್ಳಿ

ಪಿಯುಬಿ/256/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025-26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway-SWR SWRRLY @SWRAILWAYHQ @sw_railways



ಕಾರ್ಯಕ್ರಮದಲ್ಲಿ ಮಾಧವಿ ಪಾರೆಖ್ ಅವರಿಗೆ 'ಪ್ರೊ.ಎಂ.ಎಸ್. ನಂಜುಂಡರಾವ್ ರಾಷ್ಟ್ರೀಯ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಬಿ.ಎಲ್. ಶಂಕರ್, ಪ.ಸ. ಕುಮಾರ್ ಮತ್ತು ಎಂ.ಬಿ.ಪಾಟೀಲ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಮಾಧವಿ ಪಾರೆಖ್‌ಗೆ 'ನಂಜುಂಡ ರಾವ್ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕಲಾವಿದೆ ಮಾಧವಿ ಪಾರೆಖ್ ಅವರಿಗೆ 'ಪ್ರೊ.ಎಂ.ಎಸ್. ನಂಜುಂಡ ರಾವ್ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಈ ಪ್ರಶಸ್ತಿ ಪ್ರದಾನ ಮಾಡಿದ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ, 'ಚಿತ್ರಕಲಾ ಪರಿಷತ್ತು ದೇಶ-ವಿದೇಶದಲ್ಲಿ ತನ್ನದೆಯಾದ ಛಾಪು ಹೊಂದಿದೆ. ಇಂತಹ ಸಂಸ್ಥೆ ಕಟ್ಟಲು ಶ್ರಮಿಸಿದವರಲ್ಲಿ ಎಂ.ಎಸ್. ನಂಜುಂಡರಾವ್ ಪ್ರಮುಖರು. ಅವರ ಜನ್ಮದಿನದ ಪ್ರಯುಕ್ತ ಪ್ರತಿ ವರ್ಷ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ಒಳ್ಳೆಯ ಪರಿಪಾಟ' ಎಂದು ಶ್ಲಾಘಿಸಿದರು.

ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, 'ಡಿಜಿಟಲ್ ತಂತ್ರಜ್ಞಾನದ ಯುಗದಲ್ಲಿ ಸಾಂಪ್ರದಾಯಿಕ ಕಲೆ ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿದೆ. ಸಾಂಪ್ರದಾಯಿಕ ಕಲಾ ಶಿಕ್ಷಣ ಉಳಿಸಿ, ಬೆಳೆಸಲು ಪರಿಷತ್ತು ಶ್ರಮಿಸುತ್ತಿದೆ' ಎಂದು ಹೇಳಿದರು.

ಈ ಪ್ರಶಸ್ತಿಯು ₹1 ಲಕ್ಷ ನಗದು, ಫಲಕ, ಪ್ರಶಸ್ತಿ ಪತ್ರ ಒಳಗೊಂಡಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್, ಕಲಾವಿದ ಮನು ಪಾರೆಖ್, ಶಶಿಧರ್ ಇದ್ದರು.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.

ಸಂ: ಬಿಐಎಎಪಿಎ/ಟಿಪಿ/ಭೂಉಬ/46/2025-26/1019 ದಿನಾಂಕ: 02.07.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ** ಭೂಉಪಯೋಗ ವಲಯದಿಂದ **ವಸತಿ** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಎಂ.ನಾರಾಯಣಪ್ಪ	ದೇವನಹಳ್ಳಿ	ಚನ್ನರಾಯ ಪಟ್ಟಣ	ಕೊಂಡೇನಹಳ್ಳಿ	24 ರ ಪೈಕಿ	0-3.08	ವ್ಯವಸಾಯ	ವಸತಿ
2.	ಶ್ರೀ ಪಿ. ದಿನೇಶ್ ಬಿನ್ ಪೂಜಪ್ಪ	ದೇವನಹಳ್ಳಿ	ಚನ್ನರಾಯ ಪಟ್ಟಣ	ಕೊಟ್ಟತೆವರು	29/1	1-17	ವ್ಯವಸಾಯ	ವಸತಿ
3.	ಶ್ರೀ ಆರ್ ಪ್ರದೀಪ್ ಬಿನ್ ಲೇ॥ ರಾಜಣ್ಣ	ದೇವನಹಳ್ಳಿ	ಚನ್ನರಾಯ ಪಟ್ಟಣ	ಕೊಟ್ಟತೆವರು	50/4	1-08	ವ್ಯವಸಾಯ	ವಸತಿ
4.	ಶ್ರೀ ನಾರಾಯಣಸ್ವಾಮಿ, ಶ್ರೀ ಹೆಚ್ ಎನ್ ಮನೋಹರ್ ಬಿನ್ ನಾರಾಯಣಸ್ವಾಮಿ & ಶ್ರೀ ವಿನೋದ ಬಿನ್ ನಾರಾಯಣಸ್ವಾಮಿ	ದೇವನಹಳ್ಳಿ	ಚನ್ನರಾಯ ಪಟ್ಟಣ	ಕೊಟ್ಟತೆವರು	50/6	0-10	ವ್ಯವಸಾಯ	ವಸತಿ

ಷರಾ :- ಪ್ರಸ್ತಾವನೆಯಲ್ಲಿನ ಅರ್ಜಿದಾರರುಗಳು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ದ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ಭೂಉಪಯೋಗ ವಲಯ' ದಿಂದ 'ವಸತಿ ವಲಯ' ಕ್ಕೆ** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ವಾಸಾಸಂಇ/ವಾಪ್ರ/ಜಿಎ/1653/2025-26

PUBLIC NOTICE

Public are hereby informed that my client has agreed to purchase property, which is more fully described in item No.1, 2 & 3 of schedule herein below from **Sri. Abdul Gani Kazi** , S/o late Mohammed Kazi Hasan & Smt.Zakeera Banu W/o Sri.Abdul Gani Kazi, Smt.Mahezabin Jamil Ahmed D/o Sri.Abdul Gani Kazi, Sri.Iftiquar Kazi S/o Sri.Abdul Gani Kazi, Sri.Irshad Kazi S/o Sri.Abdul Gani Kazi & Sri.Irfan Kazi S/o Sri.Abdul Gani kazi, all are residing at No.144, Binnamangala Village, Nelamangala Taluk, Bangalore Rural-562123. Any person or authority having any right/claim of any nature over the schedule property or any portion thereof in any manner may lodge his/her/their claim/objection in writing to the undersigned **within 15 days** hereof along with copies of all the documents being relied upon, as otherwise my client will proceed to purchase the schedule property as if there are no claims/ objections from any person/s.

SCHEDULE PROPERTY

ITEM No.1: All that piece and parcel of industrially converted land measuring 1 acre 30 guntas in Sy.No.272 of T.Begur Village, Kasaba Hobli, Nelamangala Taluk, Bangalore Rural District (Converted for Industrial use by the Deputy Commissioner, Bangalore Rural District, vide Application No.20855 dated 01/06/2024 in respect of 1 acre 15 guntas and Application No.264733 dated 12-10-2021 in respect of 15 guntas) and bounded on the: **East by**: Land in Re-Sy.No.273 (Block No.1), **West by:** Land in Sy.No.271 (Dr.Ramana Rao), **North by:** Land in Sy.No.247 (Block No.1), **South by:** Land in Re-Sy.No.246.

ITEM No.2: All that piece and parcel of industrially converted land measuring 1 acre 38 guntas together with 2 guntas of kharab in Sy.No.273 of T.Begur Village, Kasaba Hobli, Nelamangala Taluk, Bangalore Rural District, (Converted for Industrial use by the Deputy Commissioner, Bangalore Rural District, vide Application No.264736 dated 12-10-2021 in respect of 1 acre 12 guntas and Application No.20854 dated 01-06-2024 in respect of 26 guntas) and bounded on the: **East by:** Private Property, **West by:** Land in Re-Sy.No.272, **North by:** Land in Sy.No.283, **South by** : Private Property.

ITEM No.3: All that piece and parcel of industrially converted land measuring 10 guntas in Sy.No.280 of T.Begur Village, Kasaba Hobli, Nelamangala Taluk, Bangalore Rural District (Converted for Industrial use by the Deputy Commissioner, Bangalore Rural District, vide Application No.264723 dated 12/10/2021) and bounded on the: **East by:** Land in Sy.No.283, **West by:** Land in Sy.No.279, **North by:** Land in Sy.No.281 & 283, **South by:** Land in Sy.No.272.

K. SOMASEKHAR REDDY, Advocate
No.1, 1st Floor, M.C.Plaza, 1st Main Road, 1st Cross, Ganganagar, Bangalore-560 032.
Mob: 9448381245. Date: 05-07-2025

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ

ಇಂದಿರಾ ಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರ,
ಡಾ. ಬಾಬು ಜಗಜೀವನ್ ರಾಮ್ ಸಂಶೋಧನಾ ಕೇಂದ್ರ,
ಹೊರ ವರ್ತುಲ ರಸ್ತೆ, ಮಾಗಡಿ ಮುಖ್ಯ ರಸ್ತೆ, ಸುಮ್ಮನಹಳ್ಳಿ ಸರ್ಕಲ್,
ಬೆಂಗಳೂರು-560091 ದೂರವಾಣಿ ಸಂಖ್ಯೆ: 080-25578422

ಸಂಖ್ಯೆ: ಸಕಇ/ಇಗಾವೃಅಕೇ/ಎಸ್-02/ಸಿಆರ್-25/UPSC Mains /2025-26 ದಿನಾಂಕ: 05.07.2025

ಪ್ರಕಟಣೆ

ಇಂದಿರಾ ಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರದ ಮೂಲಕ, 2025-26ನೇ ಸಾಲಿನಲ್ಲಿ ಕೇಂದ್ರ ಲೋಕ ಸೇವಾ ಆಯೋಗದಿಂದ ನಡೆಸಿದ (UPSC) ನಾಗರೀಕ ಸೇವೆಯ ಪೂರ್ವಭಾವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ (cleared Preliminary examination) ಮುಖ್ಯ ಪರೀಕ್ಷೆಗೆ ಅರ್ಹರಾಗಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳನ್ನು UPSC ಮುಖ್ಯ ಪರೀಕ್ಷೆಗೆ (mains exam) ನುರಿತ ತರಬೇತಿ ಸಂಸ್ಥೆಗಳ ಮೂಲಕ ಪರೀಕ್ಷಾ ಪೂರ್ವ ತರಬೇತಿ ನೀಡಲು online ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕೇಂದ್ರ ಲೋಕ ಸೇವಾ ಆಯೋಗದಿಂದ ನಡೆಸಿದ ನಾಗರೀಕ ಸೇವೆಯ ಪೂರ್ವಭಾವಿ ಪರೀಕ್ಷೆಯಲ್ಲಿ (ತೇರ್ಗಡೆಯಾದ) ನೋಂದಣಿ ಸಂಖ್ಯೆಯನ್ನು ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

ಅರ್ಜಿಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 13.07.2025,** ಹೆಚ್ಚಿನ ವಿವರಗಳಿಗೆ ವೆಬ್ ಸೈಟ್ **https://igccd.karnataka.gov.in/** ನ್ನು ಸಂಪರ್ಕಿಸಿ.

ಸಹಿ/-
ನಿರ್ದೇಶಕರು
ಇಂದಿರಾ ಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/1659/ಎಸ್‌ಎಸ್‌ಸಿ/2025-26

ಮಾಲೂರು ನಗರ ಯೋಜನಾ ಪ್ರಾಧಿಕಾರ, ಮಾಲೂರು

ಮಾರುತಿ ಬಡಾವಣೆ 2ನೇ ಹಂತ, ಮಾಡ್ರನ್ ಶಾಲೆ ಹತ್ತಿರ, ತಿರುಮಲ ಕಲ್ಯಾಣ ಮಂಟಪ ರಸ್ತೆ, ಮಾಲೂರು-563 130, ಕೋಲಾರ ಜಿಲ್ಲೆ, ಕಛೇರಿ ದೂರವಾಣಿ ಸಂಖ್ಯೆ: 08151-299920,
Web Site:www.malur.tpa.gov.in, Email:ms.malur.planning.authority@gmail.com

ಸಂಖ್ಯೆ: ಮಾಯೋಪ್ರಾ/ಭೂ.ಬ/2024-25/463 ದಿನಾಂಕ: 05.07.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ ಎ/ಗು	ಅನುಮೋದಿತ ಮಹಾ ಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪ ಯೋಗ	ಷರಾ
1.	ಸಂವರ್ಧನಾ ಪ್ರಾಪರ್ಟಿಸ್ ಪರವಾಗಿ ಪಿ.ಮೋಹನ್‌ರೆಡ್ಡಿ, ಶಿವರಾಜು.ವಿ, ನಾರಾಯಣಸ್ವಾಮಿರೆಡ್ಡಿ, ರಾಘವೇಂದ್ರ	ಮಾಲೂರು	ಕಸಬಾ	ವೀರಾಪುರ	21/4	1ಎ-36ಗು	ಕೃಷಿ	ವಸತಿ	–
2.		ಮಾಲೂರು	ಕಸಬಾ	ವೀರಾಪುರ	16/2	5ಎ-29ಗು	ಕೃಷಿ	ವಸತಿ	–
3.		ಮಾಲೂರು	ಕಸಬಾ	ವೀರಾಪುರ	16/1	0-20ಗು	ಕೃಷಿ	ವಸತಿ	–
4.		ಮಾಲೂರು	ಕಸಬಾ	ವೀರಾಪುರ	17/3	1ಎ-02ಗು	ಕೃಷಿ	ವಸತಿ	–
5.		ಮಾಲೂರು	ಕಸಬಾ	ವೀರಾಪುರ	19/10	0-30.08ಗು	ಕೃಷಿ	ವಸತಿ	–
6.		ಮಾಲೂರು	ಕಸಬಾ	ವೀರಾಪುರ	21/1	0-08ಗು	ಕೃಷಿ	ವಸತಿ	–
7.		ಮಾಲೂರು	ಕಸಬಾ	ವೀರಾಪುರ	18/3	1ಎ-06ಗು	ಕೃಷಿ	ವಸತಿ	–

ಷರಾ: ಈ ಜಮೀನುಗಳಲ್ಲಿ ವಿನ್ಯಾಸದ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ, ಸದರಿ ಪ್ರದೇಶವನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/- ಸದಸ್ಯ ಕಾರ್ಯದರ್ಶಿ, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:172/ಕೆಎಸ್‌ಎಂಸಿಎ/2025-26

ಕೃಷಿ ಇಲಾಖೆ

ಜಂಟಿ ಕೃಷಿ ನಿರ್ದೇಶಕರ ಕಚೇರಿ, ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ

ಸಂ.: ಜಕೃನಿ/ರಾನ/ಆತ್ಮ/ಗು.ಆ.ಸಿ.ನೇ/2025-26 ದಿನಾಂಕ: 04.07.2025

ಕೃಷಿ ಇಲಾಖೆಯಲ್ಲಿ ಆತ್ಮ ಯೋಜನಯಡಿ ಕೆಲಸ ನಿರ್ವಹಿಸಲು ನೇರ ಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ನೇಮಕಾತಿ ಪ್ರಕಟಣೆ

ಆತ್ಮ ಯೋಜನೆಯಡಿ ಸಹಾಯಕ ತಾಂತ್ರಿಕ ವ್ಯವಸ್ಥಾಪಕ ಹುದ್ದೆಗೆ ಸಿಮೀತ ಅವಧಿಗೆ ನೇರ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಷರತ್ತಿಗೆ ಒಳಪಟ್ಟು ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿಗಳನ್ನು ನಿಗಧಿತ ನಮೂನೆಯಲ್ಲಿ ಹಾಗೂ ಸಂಬಂಧಿಸಿದ ದೃಢೀಕೃತ ದಾಖಲಾತಿಗಳೊಂದಿಗೆ ಜಂಟಿ ಕೃಷಿ ನಿರ್ದೇಶಕರ ಕಚೇರಿ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ಇವರಿಗೆ **ದಿನಾಂಕ: 15.07.2025ರೊಳಗಾಗಿ** ಸೀಲು ಮಾಡಿದ ಲಕೋಟೆಯಲ್ಲಿ ಮುದ್ದಾಂ/ನೋಂದಾಯಿತ ಅಂಚೆ ಮೂಲಕ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸುವುದು ಹಾಗೂ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಯಲ್ಲಿ ಮಾನದಂಡಗಳನ್ನು ಆಧರಿಸಿ ಆಯ್ಕೆಯನ್ನು ಅಂತಿಮಗೊಳಿಸಲಾಗುವುದು.

ಕ್ರ. ಸಂ.	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ಯೋಜನೆಯ ಹೆಸರು	ವಿದ್ಯಾರ್ಹತೆ	ಅನುಭವ
1	ಸಹಾಯಕ ತಾಂತ್ರಿಕ ವ್ಯವಸ್ಥಾಪಕರು	01	ಆತ್ಮ ಯೋಜನೆ	ಐ.ಸಿ.ಎ.ಆರ್.ಕೃಷಿ ವಿಶ್ವ ವಿದ್ಯಾನಿಲಯ ಅಡಿಯಲ್ಲಿ ಬಿ.ಎಸ್ಸಿ. (ಕೃಷಿ) ಅಥವಾ ಕೃಷಿ ಸಂಬಂಧಿತ ವಿಷಯಗಳಲ್ಲಿ ಪದವಿ	1 ವರ್ಷದ ಕೃಷಿ ಕ್ಷೇತ್ರದಲ್ಲಿ ಅನುಭವ ಹೊಂದಿರುವವರಿಗೆ ಆದ್ಯತೆ

ಅರ್ಜಿ ಪಡೆಯಬೇಕಾದ ಮತ್ತು ಸಲ್ಲಿಸಬೇಕಾದ ವಿಳಾಸ: #302, ಜಂಟಿ ಕೃಷಿ ನಿರ್ದೇಶಕರ ಕಚೇರಿ, ಕೃಷಿ ಇಲಾಖೆ, 3ನೇ ಮಹಡಿ, ಜಿಲ್ಲಾ ಪಂಚಾಯತ್ ಭವನ, ಬಿ.ಎಂ.ರಸ್ತೆ, ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ – 562159

ಸಹಿ/-
ಜಂಟಿ ಕೃಷಿ ನಿರ್ದೇಶಕರು
ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ

DIPR/BSD/220/SA/2025-26

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ವಿಭಾಗ, ಚಿಕ್ಕಬಳ್ಳಾಪುರ.

ಸಂಖ್ಯೆ:04/2025-26 ದಿನಾಂಕ: 23.06.2025

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐ.ಎಫ್.ಟಿ)

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರಸ್ತೆ/ಕಟ್ಟಡ-ನಿರ್ಮಾಣ ಕಾಮಗಾರಿಗಳಿಗೆ ಕೆ.ಡಬ್ಲ್ಯೂ-1,3&4 ರಂತೆ ಕಾರ್ಯಪಾಲಕ ಇಂಜಿನಿಯರ್, ಲೋ.ಇ ರವರು ರಾಜ್ಯಪಾಲರ ಪರವಾಗಿ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು **https://kppp.karnataka.gov.in** ದಿನಾಂಕ: 23.06.2025 ರಿಂದ 30.06.2025 ಮತ್ತು 23.06.2025 ರಿಂದ 08.07.2025 ರವರೆಗೆ ಪಡೆದು ಸಂಜೆ 4:00 ಗಂಟೆಗಳ ಒಳಗಾಗಿ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ.

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:113/ಕೆಎಸ್‌ಎಂಸಿಎ/2025-26

ಭಾನುವಾರ, ಜುಲೈ 6, 2025 | ₹ 7.00
www.prajavani.net prajavani.net prajavani

ಪ್ರಜಾ ವಾಣಿ


ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕಾಮಗಾರಿ ಪ್ರಗತಿ



ಮಹಾರಾಷ್ಟ್ರದ ಠಾಣೆಯಲ್ಲಿ ಬುಲೆಟ್ ರೈಲು ಯೋಜನೆಯ 21 ಕಿ.ಮೀ ಉದ್ದದ ಭೂ ಮತ್ತು ಜಲ ಸುರಂಗ ಮಾರ್ಗದ ನಿರ್ಮಾಣ ಕಾಮಗಾರಿ ಶೇ 80ರಷ್ಟು ಪೂರ್ಣಗೊಂಡಿದೆ

ಅರಿನಾ ಮುನ್ನಡೆ



ವಿಶ್ವದ ಅಗ್ರಮಾನ್ಯ ಆಟಗಾರ್ತಿ, ಬೆಲರೂಸ್‌ನ ಅರಿನಾ ಸಬಲೆಂಕಾ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಪ್ರಿ ಕ್ವಾರ್ಟರ್ ಫೈನಲ್ ತಲುಪಿದರು

‘ಜನರಲ್ಲಿ ವೈಚಾರಿಕ ಪ್ರಜ್ಞೆ ಅಗತ್ಯ’ 3

ಸಾಲ ತೀರಿಸಲು ಸ್ನೇಹಿತನ ಸುಲಿಗೆ 3B

ಮೆಟ್ರೊ ವಿಳಂಬ: ‘ಕೈ’, ಕಮಲ ಪ್ರತಿಭಟನೆ

ಆಗಸ್ಟ್ 15ರೊಳಗೆ ಹಳದಿ ಮಾರ್ಗದಲ್ಲಿ ಸಂಚಾರ: ಮಹೇಶ್ವರರಾವ್
ಸಾರ್ವಜನಿಕ ಚರ್ಚೆಗೆ ಗ್ರಾಸವಾದ ರಾಜಕೀಯ ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಸಂಚಾರ ಇನ್ನೂ ಆರಂಭವಾಗದೇ ಇರುವುದನ್ನು ವಿರೋಧಿಸಿ ಬಿಜೆಪಿ ಸಂಸದರು, ಶಾಸಕರು ಪ್ರತಿಭಟನೆ ಹಮ್ಮಿಕೊಂಡರೆ, ವಿಳಂಬಕ್ಕೆ ಕೇಂದ್ರ ಸರ್ಕಾರವೇ ಕಾರಣ ಎಂದು ಆರೋಪಿಸಿ ಕಾಂಗ್ರೆಸ್ ಮುಖಂಡರು ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿದರು.

ಕೆಲವು ವರ್ಷಗಳಿಂದ ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿದ್ದರೂ ಎರಡೂ ಪಕ್ಷಗಳು ಮೌನವಾಗಿದ್ದು, ಇನ್ನು ಒಂದೆರಡು ತಿಂಗಳಲ್ಲಿ ಹಳದಿ ಮಾರ್ಗದಲ್ಲಿ ಸಂಚಾರ ಆರಂಭಗೊಳ್ಳುವ ಮುನ್ಸೂಚನೆ ದೊರೆತ ಕೂಡಲೇ ಪ್ರತಿಭಟನೆಗೆ ಇಳಿದಿರುವುದು ಸಾರ್ವಜನಿಕವಾಗಿ ಚರ್ಚೆಗೆ ಗ್ರಾಸವಾಗಿದೆ.

ಬಿಜೆಪಿ ಪ್ರತಿಭಟನೆ: ‘ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಆಗಸ್ಟ್‌ನಲ್ಲಿ ರೈಲು ಸಂಚರಿಸಲಿದೆ’ ಎಂದು ಬಿಎಂಆರ್‌ಸಿಎಲ್ ನಿಗದಿಪಡಿಸಿಕೊಂಡಿರುವ ಹೊಸ ಗಡುವನ್ನು ಮೀರಿದರೆ ಹೋರಾಟ ತೀವ್ರಗೊಳಿಸಲಾಗುವುದು. ಮೆಟ್ರೊ ನಿಲ್ದಾಣಗಳಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಸಂಸದ ತೇಜಸ್ವಿ ಸೂರ್ಯ ಎಚ್ಚರಿಸಿದರು.



ನಮ್ಮ ಮೆಟ್ರೊ ಹಳದಿ ಮಾರ್ಗ ಪ್ರಾರಂಭಕ್ಕೆ ಆಗ್ರಹಿಸಿ ಬೆಂಗಳೂರಿನ ಲಾಲ್‌ಬಾಗ್ ಮುಖ್ಯ ದ್ವಾರದಿಂದ ಶಾಂತಿನಗರದ ಬಿಎಂಆರ್‌ಸಿಎಲ್ ಕಚೇರಿವರೆಗಿನ ನಡಿಗೆಯಲ್ಲಿ ಶಾಸಕರಾದ ರವಿ ಸುಬ್ರಮಣ್ಯ, ಉದಯ್ ಗರುಡಾಚಾರ್, ಸಿ.ಕೆ.ರಾಮಮೂರ್ತಿ, ಸಂಸದ ತೇಜಸ್ವಿ ಸೂರ್ಯ ಹಾಗೂ ಬಿಜೆಪಿ ಕಾರ್ಯಕರ್ತರು ಘೋಷಣೆ ಕೂಗಿದರು ಪ್ರಜಾವಾಣಿ ಚಿತ್ರ

‘ರಸ್ತೆಯಲ್ಲಿ ಖಾಸಗಿ ವಾಹನಗಳು ಕಡಿಮೆಯಾದರೆ ಮತ್ತು ಸಾರ್ವಜನಿಕ ಸಾರಿಗೆಯಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಾದರೆ ಮಾತ್ರ ಬೆಂಗಳೂರಿನ ಸಂಚಾರ ಬಿಕ್ಕಟ್ಟನ್ನು ಪರಿಹರಿಸಬಹುದು’ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

‘ಬಿಎಂಆರ್‌ಸಿಎಲ್ ದರ ನಿಗದಿ ಸಮಿತಿಯ ವರದಿಯನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರೂ ಇಲ್ಲಿವರೆಗೆ ಬಿಡುಗಡೆ ಮಾಡಿಲ್ಲ. ಬೆಂಗಳೂರು ಮೆಟ್ರೊ ಪ್ರಯಾಣದರವು ದೇಶದಲ್ಲಿಯೇ ದುಬಾರಿಯಾಗಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

3A

‘ಭ್ರಷ್ಟಾಚಾರ, ಅಕ್ರಮ ಕಾರಣ’

ಹಳದಿ ಮಾರ್ಗ ಮಾತ್ರವಲ್ಲ, ನಮ್ಮ ಮೆಟ್ರೊದ ಎಲ್ಲ ಯೋಜನೆಗಳು ಕುಂಟುತ್ತಾ ಸಾಗುತ್ತಿವೆ. ಸರ್ಕಾರ ಮತ್ತು ಬಿಎಂಆರ್‌ಸಿಎಲ್ ಇಲ್ಲಿವರೆಗೆ ನೀಡಿದ ಗಡುವಿನೊಳಗೆ ಯಾವುದೇ ಮೆಟ್ರೊ ಸಂಚಾರವನ್ನು ಆರಂಭಿಸಿದ ಉದಾಹರಣೆಯೇ ಇಲ್ಲ. ಇದಕ್ಕೆ ಭ್ರಷ್ಟಾಚಾರ ಮತ್ತು ಅಕ್ರಮವೇ ಕಾರಣ ಎಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷ ಆರೋಪಿಸಿದೆ.

ಕಾಂಗ್ರೆಸ್ ಮತ್ತು ಬಿಜೆಪಿ ಕೆಸರೆರಚಾಟದಲ್ಲಿ ಮುಳುಗಿವೆ. ಮೆಟ್ರೊ ಕಾಮಗಾರಿಗಳಲ್ಲಿನ ವ್ಯಾಪಕ ಭ್ರಷ್ಟಾಚಾರ ಇದೇ ರೀತಿ ಮುಂದುವರಿದರೆ, ಪ್ರಸ್ತುತ ಯೋಜಿಸಿರುವ ಮತ್ತು ಕಾಮಗಾರಿ ಚಾಲ್ತಿಯಲ್ಲಿರುವ 5 ಮಾರ್ಗಗಳಲ್ಲಿ ಕಾಮಗಾರಿ ಮುಗಿಸಲು ಎರಡು ದಶಕ ಸಾಲದು. ಈ ಬಗ್ಗೆ ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಕೆಆರ್‌ಎಸ್ ರಾಜ್ಯ ಕಾರ್ಯದರ್ಶಿ ಜೀವನ್ ಎಲ್. ದೂರಿದ್ದಾರೆ.

ಕೇಂದ್ರ ಸರ್ಕಾರದ ವಿಳಂಬ ನೀತಿಗೆ ಖಂಡನೆ

ಜಯನಗರದ ರಾಷ್ಟ್ರೀಯ ವಿದ್ಯಾಲಯದಿಂದ ಬೊಮ್ಮನಹಳ್ಳಿಗೆ ಸಂಪರ್ಕಿಸುವ ಹಳದಿ ಮಾರ್ಗ ಮತ್ತು ಕಾಳೇನ ಅಗ್ರಹಾರದಿಂದ ನಾಗವಾರ ಸಂಪರ್ಕಿಸುವ ಗುಲಾಬಿ ಮಾರ್ಗ ಆಮೆಗತಿಯಲ್ಲಿ ಸಾಗಲು ಕೇಂದ್ರ ಸರ್ಕಾರದ ವಿಳಂಬ ನೀತಿಯೇ ಕಾರಣ ಎಂದು ಆರೋಪಿಸಿ ಶಾಂತಿನಗರದ ಬಿಎಂಆರ್‌ಸಿಎಲ್ ಕಚೇರಿ ಮುಂದೆ ಕಾಂಗ್ರೆಸ್ ಪ್ರತಿಭಟನೆ ನಡೆಸಿತು.

ಮೆಟ್ರೊ ರೈಲು ಯೋಜನೆಗಳು ನಗರದ ಸಾರಿಗೆ ಮೂಲಸೌಕರ್ಯ ಅಭಿವೃದ್ಧಿಗೆ ಅಗತ್ಯವಾಗಿವೆ. ಕೇಂದ್ರ ಸರ್ಕಾರದ ವಿಳಂಬ ನೀತಿಯಿಂದಾಗಿ ಮತ್ತು ತಂತ್ರಜ್ಞಾನದ ಸಮಸ್ಯೆಯಿಂದಾಗಿ ಕಾಮಗಾರಿಗಳು ದಶಕ ಕಳೆದರೂ ಪೂರ್ಣಗೊಂಡಿಲ್ಲ. ಸಂಚಾರ ಆರಂಭವಾಗಿಲ್ಲ ಎಂದು ಪ್ರತಿಭಟನಕಾರರು ಆರೋಪಿಸಿದರು.



ನಮ್ಮ ಮೆಟ್ರೊ ಹಳದಿ ಮತ್ತು ಗುಲಾಬಿ ಮಾರ್ಗದಲ್ಲಿ ಶೀಘ್ರವೇ ಸಂಚಾರ ಆರಂಭಿಸುವಂತೆ ಆಗ್ರಹಿಸಿ ಕಾಂಗ್ರೆಸ್ ಮುಖಂಡರು ಪ್ರತಿಭಟನೆ ನಡೆಸಿದರು

ಮೆಟ್ರೊ ರೈಲುಗಳಲ್ಲಿ ಬಳಕೆಯಾಗುವ ಸಿಗ್ನಲ್ ವ್ಯವಸ್ಥೆಯಲ್ಲಿ ತಾಂತ್ರಿಕ ದೋಷಗಳು ಕಂಡುಬಂದಿವೆ. ಕೇಂದ್ರ ಸರ್ಕಾರದ ಅನುಮತಿ ತಡವಾಗಿದ್ದರಿಂದ ರೈಲು ಕೋಚ್‌ಗಳ ತಯಾರಿ ಮತ್ತು ಸರಬರಾಜು ತಡವಾಗಿದೆ. ಯೋಜನೆ, ಟೆಂಡರ್ ಹಾಗೂ ಇತರೇ ಸಮಸ್ಯೆಗಳೂ ಎದುರಾಗಿವೆ. ಯೋಜನೆಯ ದುರ್ಬಲ ನಿರ್ವಹಣೆ ಮತ್ತು ಕೇಂದ್ರ ಸರ್ಕಾರದ ನಿರ್ಲಕ್ಷ್ಯದಿಂದಾಗಿ ಸಾರ್ವಜನಿಕರಿಗೆ ನಿರಾಸೆ ಉಂಟಾಗಿದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರವು ಬಾಕಿ ಇರುವ ಎಲ್ಲ ತಾಂತ್ರಿಕ, ಆಡಳಿತಾತ್ಮಕ ಅನುಮತಿಗಳನ್ನು ಶೀಘ್ರದಲ್ಲಿ ನೀಡಬೇಕು. ಮೆಟ್ರೊ ಕೋಚ್ ಪೂರೈಸಲು ಕ್ರಮ ಕೈಗೊಳ್ಳಬೇಕು. ಯೋಜನೆಗೆ ಅಗತ್ಯವಿರುವ ಅನುದಾನ ಕೂಡಲೇ ಬಿಡುಗಡೆ ಮಾಡಬೇಕು ಎಂದು ಜಯನಗರ ವಿಧಾನಸಭಾ ಕ್ಷೇತ್ರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎನ್. ನಾಗರಾಜು, ಮಾಜಿ ಮೇಯರ್ ಮಂಜುನಾಥ ರೆಡ್ಡಿ, ಜಿಲ್ಲಾ ಅಧ್ಯಕ್ಷರಾದ ಮಂಜುನಾಥ್ , ಕೆ.ವಿ. ಗೌತಮ್, ಪಾಲಿಕೆ ಮಾಜಿ ಸದಸ್ಯ ಸುದ್ದಗುಂಟೆ ಮಂಜುನಾಥ್ ಆಗ್ರಹಿಸಿದರು.

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್ ಮನವಿ ಸ್ವೀಕರಿಸಿದರು.

ನೀಟ್: ಕ್ರಮಸಂಖ್ಯೆ ದಾಖಲಿಸಲು ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಇಟಿಗೆ ಅರ್ಜಿ ಸಲ್ಲಿಸಿರುವ ಹಾಗೂ ನೀಟ್‌ನಲ್ಲಿ ಅರ್ಹತೆ ಪಡೆದಿರುವ ಅಭ್ಯರ್ಥಿಗಳು ತಮ್ಮ ನೀಟ್ ಕ್ರಮ ಸಂಖ್ಯೆಯನ್ನು (ರೋಲ್ ನಂಬರ್) ದಾಖಲಿಸಲು ಜುಲೈ 8ರ ಬೆಳಿಗ್ಗೆ 11ರವರೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅವಕಾಶ ನೀಡಿದೆ.

ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಆಯುಷ್ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ಅಭ್ಯರ್ಥಿಗಳು ಕಡ್ಡಾಯವಾಗಿ ತಮ್ಮ ನೀಟ್ ಕ್ರಮಸಂಖ್ಯೆ ದಾಖಲಿಸಬೇಕು. ಅಭ್ಯರ್ಥಿಗಳು ದಾಖಲಿಸುವ ನಂಬರ್‌ಗಳನ್ನು ಎನ್‌ಟಿಎ ದತ್ತಾಂಶದ ಜತೆ ತಾಳೆ ಮಾಡಿ, ನೀಟ್ ಅರ್ಹತೆ ಪಡೆದವರಿಗೆ ಅರ್ಜಿ ನಮೂನೆ ಪ್ರತಿ ತೆಗೆದುಕೊಳ್ಳಲು ಅವಕಾಶ ನೀಡಲಾಗುತ್ತದೆ. ನಂತರ ‘ವೆರಿಫಿಕೇಷನ್ ಸ್ಲಿಪ್’ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ನೀಟ್‌ನಲ್ಲಿ ಅರ್ಹತೆ ಪಡೆದರೂ, ಕೆಇಎಗೆ ಅರ್ಜಿ ಸಲ್ಲಿಸದೇ ಇರುವವರು ಜುಲೈ 7ರಿಂದ 10ರವರೆಗೆ ನೋಂದಣಿ ಮಾಡಿಕೊಂಡು ಅರ್ಜಿ ಸಲ್ಲಿಸಲು ಮತ್ತೊಂದು ಅವಕಾಶ ನೀಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ದೇವನಹಳ್ಳಿ: ‘ಭೂಸ್ವಾಧೀನ ವಿರೋಧಿ ಗ್ರಾಮ’ ಆಂದೋಲನ ಇಂದಿನಿಂದ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ತಾಲ್ಲೂಕಿನ ಚನ್ನರಾಯಪಟ್ಟಣ ಭೂಸ್ವಾಧೀನ ವಿರೋಧಿಸಿ ಭಾನುವಾರದಿಂದ ಪ್ರತಿ ಹಳ್ಳಿಯಲ್ಲಿಯೂ ಜನಾಂದೋಲನ ಯಾತ್ರೆ ಪ್ರಾರಂಭಿಸುವುದಾಗಿ ಹೋರಾಟ ನಿರತ ರೈತರು ತಿಳಿಸಿದ್ದಾರೆ.

ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳಲ್ಲಿ ಜನ ಜಾಗೃತಿ ಮೂಡಿಸಲಾಗುವುದು. ಕೃಷಿ ಭೂಮಿಯನ್ನು ಕಾಪಾಡಿಕೊಳ್ಳಲು ಅನುಸರಿಸಬೇಕಾದ ಕ್ರಮಗಳ ಕುರಿತು ರೈತರಲ್ಲಿ ಅರಿವು ಮೂಡಿಸಲು ರೈತ ಮುಖಂಡರು ಈ ನಿರ್ಧಾರ ಕೈಗೊಂಡಿದ್ದಾರೆ.

ಈ ಕುರಿತು ಶನಿವಾರ ಸಂಯುಕ್ತ ಹೋರಾಟ ಕರ್ನಾಟಕ, ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ ಮತ್ತು ಸಮಾನ ಮನಸ್ಕ ಸಂಘಟನೆಗಳ ಮುಖಂಡರು ಸಭೆ ನಡೆಸಿ, ಜನಾಂದೋಲನದ ರೂಪುರೇಷೆ ಕುರಿತು ಚರ್ಚೆ ನಡೆಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜುಲೈ 15ರಂದು ಸಭೆ ನಡೆಸುವವರೆಗೂ ಇಲ್ಲಿನ ರೈತರು ಭೂಸ್ವಾಧೀನ ವಿರೋಧಿ ಗ್ರಾಮ ಜನಾಂದೋಲನ ಯಾತ್ರೆ ಹಮ್ಮಿಕೊಂಡಿದ್ದಾರೆ.

ಸಭೆಯಲ್ಲಿ ಬಡಗಲಪುರ ನಾಗೇಂದ್ರ, ಯು.ಬಸವರಾಜು, ನೂರ್ ಶ್ರೀಧರ್, ಯಶವಂತ್, ಪೂಜಾರ್ ಸೇರಿದಂತೆ ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿಯ ಸದಸ್ಯರು ಇದ್ದರು.

ನೈಸ್ ರಸ್ತೆ: 300 ಎಕರೆಗೂ ಹೆಚ್ಚು ಭೂ ಸ್ವಾಧೀನ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು-ಮೈಸೂರು ನಡುವಿನ 111 ಕಿ.ಮೀ ಉದ್ದದಲ್ಲಿ ನಂದಿ ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್ (ನೈಸ್) ವತಿಯಿಂದ ನಿರ್ಮಿಸಲಾಗಿರುವ ಹೆದ್ದಾರಿ ಮೆಗಾ ಯೋಜನೆಗೆ ಕೆಐಎಡಿಬಿ ವಶಪಡಿಸಿಕೊಂಡಿದ್ದ 300 ಎಕರೆಗೂ ಹೆಚ್ಚು ಜಮೀನಿನ ಭೂ ಸ್ವಾಧೀನ ಪ್ರಕ್ರಿಯೆಯನ್ನು ಹೈಕೋರ್ಟ್ ರದ್ದುಪಡಿಸಿದೆ.

ಅಧಿಸೂಚನೆ ಪ್ರಶ್ನಿಸಿ ಪಿ.ಶ್ರೀಧರಮೂರ್ತಿ ಸೇರಿದಂತೆ 50ಕ್ಕೂ ಹೆಚ್ಚು ಜನರು ಸಲ್ಲಿಸಿದ್ದ ಪ್ರತ್ಯೇಕ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.



‘ಜಮೀನು ವಶಪಡಿಸಿಕೊಂಡು 23 ವರ್ಷಗಳಿಗೂ ಹೆಚ್ಚು ಕಾಲವಾಗಿದ್ದರೂ ಅರ್ಜಿದಾರರಿಗೆ ಪರಿಹಾರ ವಿತರಣೆ ಮಾಡಿಲ್ಲ’ ಎಂಬ ಆಕ್ಷೇಪವನ್ನು ಪರಿಗಣಿಸಿದ ನ್ಯಾಯಪೀಠ ಈ ಆದೇಶ ಹೊರಡಿಸಿದೆ.

‘ಕೆಐಎಡಿಬಿ ವಶಪಡಿಸಿಕೊಂಡಿರುವ ಅರ್ಜಿದಾರ ಭೂ ಮಾಲೀಕರ ಜಮೀನುಗಳು ಉದ್ದೇಶಿತ ಬಳಕೆಗೆ ಒಳಪಟ್ಟಿಲ್ಲ. ರೈತರು ತಮ್ಮ ಜೀವನೋಪಾಯಕ್ಕೆ ಅವಲಂಬಿಸಿರುವ ಕೃಷಿ ಭೂಮಿ ಕಳೆದುಕೊಂಡರೆ ಮತ್ತು ಇದರ ಉಪಯೋಗದಿಂದ ವಂಚಿತರಾದರೆ ಸಂಕಷ್ಟಕ್ಕೆ ಗುರಿಯಾಗುವುದನ್ನು ನಿರ್ಲಕ್ಷಿಸಲು ಆಗದು’ ಎಂದು ನ್ಯಾಯಪೀಠ ಹೇಳಿದೆ.

ಈ ಹಿನ್ನೆಲೆಯಲ್ಲಿ ಇದೇ ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠ ಮತ್ತು ಸುಪ್ರೀಂ ಕೋರ್ಟ್ ಪೂರ್ವ ನಿದರ್ಶನ ತೀರ್ಪುಗಳ ಆಧಾರದಲ್ಲಿ ಭೂ ಸ್ವಾಧೀನ ಪ್ರಕ್ರಿಯೆ ರದ್ದುಪಡಿಸಿರುವುದಾಗಿ ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಬೆಂಗಳೂರು-ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರಾಜೆಕ್ಟ್ (ಬಿಎಂಐಸಿಪಿ), ಎಕ್ಸ್‌ಪ್ರೆಸ್ ವೇ, ಟೋಲ್ ಪ್ಲಾಜಾ ಅಥವಾ ಪೆರಿಫೆರಲ್ ರಸ್ತೆ ಬಳಕೆಯ ಉದ್ದೇಶದಿಂದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ (ಕೆಐಎಡಿಬಿ) ವಿಶೇಷ ಭೂ ಸ್ವಾಧೀನ ಅಧಿಕಾರಿ 1998ರಿಂದ 2009ರ ನಡುವೆ ಅರ್ಜಿದಾರ ಭೂ ಮಾಲೀಕರಿಂದ 300 ಎಕರೆಗೂ ಹೆಚ್ಚು ಜಮೀನು ವಶಪಡಿಸಿಕೊಳ್ಳಲು ವಿವಿಧ ದಿನಾಂಕಗಳಲ್ಲಿ ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆ ಹೊರಡಿಸಿದ್ದರು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಚ್.ಎನ್.ಶಶಿಧರ ಅವರ ನೇತೃತ್ವದಲ್ಲಿ ವಕೀಲರ ತಂಡ ವಾದ ಮಂಡಿಸಿತ್ತು. ಹೈಕೋರ್ಟ್ ವಕೀಲ ಎಚ್.ಎಸ್.ಸುಹಾಸ್ ಮತ್ತು ಇತರರು ವಕಾಲತ್ತು ವಹಿಸಿದ್ದರು.



``ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ

@SWDGok

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

KARNATAKA REDDYJANA SANGHA® (Estd -1925)
KRJS GROUP OF INSTITUTIONS
#1, Mahayogi Vemana Road, 3rd Block, Koramangala, Bengaluru - 560034

VEMANA INSTITUTE OF TECHNOLOGY
Approved by AICTE-New Delhi, Affiliated to VTU-Belagavi, Recognised by Govt. of Karnataka
#1, Mahayogi Vemana Road, 3rd Block, Koramangala, Bengaluru - 560 034. | Off : 080-25529874/75
Website : www.vemanait.edu.in

CET CODE E092
COMED-K CODE E145



U.G. PROGRAMMES
- Computer Science & Engineering • Information Science & Engineering
- Electronics & Communication Engineering • Mechanical Engineering
- Civil Engineering • Computer Science & Engineering (Data Science)
- Artificial Intelligence & Machine Learning • Computer Science & Engineering (Cyber Security)



"Fostering innovation and skill-building!"
Esteemed Governing Council members visit the Toyota Skill Development Centre.

KEY FEATURES: Highly Motivated & Experienced Faculty | Consistent Academic Excellence | State-of-the-Art Laboratories | Centers of Excellence in Emerging Technologies | Indigenously Designed and Developed Projects | MSME - Business Incubation Centre | Drone Development Lab | IPR Cell - Fueling Innovation and Entrepreneur Development | Sports & Cultural Eco System | Student Welfare Scholarships | Well stocked library with Digital facilities | Vemana ReddyCubSat

Vemana Institute of Technology Major Recruiters

For Admissions Contact:
95354 44571 / 63617 50682 / 683 / 686
Email: admissions@vemanait.edu.in

RJS INSTITUTE OF MANAGEMENT STUDIES, Koramangala
Affiliated to Bengaluru City University, Recognized by Govt. of Karnataka, Approved by AICTE, New Delhi.

COURSES OFFERED
- **BBA** (General)
- **B.Com** (Logistics & Supply Chain Management)
- **MBA** (General)

- NAAC accreditation
- Value-added certificates: Advanced Excel and Power BI, Digital Marketing, Soft Skill Training
- Transportation and hostel facilities
- Fees concession for merit students

Mrs. AMBIKA G (U18JP21M0006) 3rd Rank 94.63% (BBA)

BEST PRACTICES
- 50% Academics
- 50% Innovative Activities
- 100% Placement Assistance

For Admission Contact:
080- 25539648 | 63617 50675 | 90352 44615
Email: rjsimsbschool@gmail.com | principalrjsims@gmail.com
Website: www.rjsims.edu.in

VEMANA INSTITUTE OF PHYSIOTHERAPY, Koramangala
Affiliated to Rajiv Gandhi University of Health Sciences and Recognized by Govt. of Karnataka

Bachelor of Physiotherapy (BPT)
Eligibility: Passed 10+2 with not less than 45% in Physics, Chemistry and Biology (Course Duration: 4.5 Years)
Master of Physiotherapy (MPT)

For Admission Contact: 74830 00727 | 90351 53162
Email: principal@vipt.edu.in | principalvipt@gmail.com
Website: www.vipt.edu.in

RJS FIRST GRADE COLLEGE, Koramangala
Permanently Affiliated to BCU,Approved by AICTE, Re-Accredited by NAAC with B++, 2(f) & 12(B) Recognised by UGC

NISARGA K (U18FR21S0027) 9th Rank 96.12% (B.SC)

PROGRAMMES OFFERED:
- **B.Com** (General)
- **B.Com** (Business Data Analytics)
- **B.Com** (Integrated CA)
- **BCA** (Bachelor of Computer Applications)
- **B.Sc** (Physics, Mathematics, Computer Science)
- **B.Sc** (Biochemistry, Genetics, Biotechnology)
- **MCA** (Master of Computer Applications)
- **M.Com** (Master of Commerce)

HIGHLIGHTS OF FACILITIES
- Scholarship Opportunities
- Add on Courses
- 100% Placements
- Transport Facility
- Hostel Facility etc.

For Admission Contact:
080 2552 5534 | 94814 51695
Email: rjsfgc@yahoo.com
Website: www.rjsfgc.edu.in

Transport and Hostel Facilities | For Admissions : 6361 750 682 / 683 / 686 | www.rjsschools.edu.in

REAL ESTATE SELLING

Sites

Anjanapura

"ANJANAPURA 8TH_BLOCK 30x40_South Rs.1.25_Crore Genuine_Buyers Call. "Sri.Ganesh Estate" 9845286505"

BDA, RESIDENTIAL & Commercial Anjanapura, BDA Layout, Narayananagara, BCMC Layout, Judicial Layout, Vakil Garden, Kanakapura Road 30x40, 40x60, 50x80. 9916592400

Banashankari

BDA RESIDENTIAL Plot for Sale in BSK 2nd_Stage, west_facing 36x85 ft- 3060sqft, Price 7.6Cr. Verna Developers MG_Road 9353128035/ 9916310226 (Brokers Excuse)

"BANASHANKARI 1ST_STAGE 40x60, 2nd Stage 30x50,_40x60, 3rd_Stage 40x50,_40x60. Genuine Buyers Call: 9845286505"

BDA, RESIDENTIAL, Commercial, Banashankari 2nd, 3rd, 5th & 6th stage Uttrahalli, Rajarajeshwarinagara Katriguppe, Girinagara, 30x40, 40x60, 50x80. 9916592400

"AVAILABLE WANTED BDA_Sites Banashankari 6TH Stg,Anjanapura Vishweshwaraiah Lyt_50x80 40x60_30x40 20x30,Value Properties Call Raju:9901315949, 9731814437

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

BSK 6TH Stage,3rd Block 3780Sft,N/W,Corner13500/- Kanakapura Rd Vajarahalli Metro Station_1500sft 3Floors Brand_New Home_4.60cr 9845704509

BTM Layout

DOLLERS COLONY BTM Layout, Near Register Office 50x80, Semi- commercial Sale Price 27000/-Sqft Contact :8884501767

BTM LAYOUT 4th Stage 2nd Block S/F 30x50 Suitable Residential Semi Commercial USR 7019770736/ 8951614989

Basaweshwaranagar

SALE SITE 1600 SQFT A KHATHA WITH EASTHI READY FOR REGISTRATION CLEAR TITLES 1 CRORE 90 LAKHS ONLY 9035883017

Hebbal

HEBBAL 30X35 House Sale Ground 1 BHK Two Carparking 1st 2 BHK, 2nd 2 BHK: 9845623970/ 9739400838

Kanakapura Road

30X40 N/E_CORNER SITE SALE Kendriya Nagara Opposite Shobha Forest Edge, 1.5Km Talaghattapura Metro. 9945724472.

Kempegowda Layout

KEMPEGOWDA LAYOUT, Commercial/ Residential BDA Site for Sale. 20x30, 30x40, 40x60, 50x80. Contact Kumar 9945119449

Mysore Road

NADAPRABHU KEMPEGOWDA Layout, Residential 30x40 Commercial 40x60, 50x80, 80Feet Road, 100Feet Road, 300Feet Road, Ready For Registration & Construction. 9916592400

Nagarabhavi

"**50X80 SITE** for Sale in NGEF Layout, Mallathahalli Good location, Genuine`Buyers Contact: 7760388034/ 9242135834"

DH Classifieds More value, more impact — ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com BOOK NOW
Book your ad with us now! For more details contact:
+91 9845114560 | +91 9886213331 | 080-45557163/164
*Conditions apply

Out-Station

SALE KHB CHICKMANDYA Site 30X50 West on 40 ft Road. Mob: 9035010595/ 9035055919

Rajarajeshwari Nagar

RAJARAJESHWARINAGAR IDEAL Homes 73*97 Corner BEML 30*40, 40*60, 50*80, Banashankari VI Stage, Vishweshwaraiah Layout, 30*40, 40*60, 50*80 and Houses. 9448483699.

41X40 W/S Corner Site Sale University Layout, Rajarajeshwarinagar. Beautiful Location, 19000/- Sqft. Direct Owner. 9591013777

Vijayanagar

BDA SITE 1500 Sft East Facing, RPC layout Vijayanagar, Price 18,500/- Sft, Ph: 8296101765, 7259103521.

Vishweshwariah Layout

"40X60 WEST_FACEING Residential Site`for`sale Vishveshwaraiah Layout 1st_Block 40`feet wide Road near 100`Feet Road, 15`Minutes drive`to`Metro. 9880031654"

"VISVESHWARAIAH LAYOUT 100_feet_Road near Siddaganga School Compound Backside 40x60 South 40`feet_Road. 9448432633"

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

"50X80 EAST FACING 60 FEET ROAD, NEAR_PROPOSED BDA_COMPLEX 6TH_BLOCK VISHVESHWARAIH LAYOUT- 9845143579"

COMMERCIAL BDA SITE SALE 40x60 N/F Vishveswaraiah Layout 1st Block, 100ft Road,Contact: 9742681666 ,9886634578

Srirampura

SALE 30X100, 1st cross, North facing, Site, Single owner, 2 mins from metro, 17000/sqft PH:9739732433

Mahalakshmi Layout

MAHALAXMI LAYOUT Srikantewara Nagar 30X42 South G+2 Old Building E Katha Rs: 15000/- 8884255563

Padmanabha Nagar

PROPERTY FOR Sale In Padmanabhanagar 1500 Sqft East Facing Good Location Contact: 8147734144

House

Banashankari

BANASHANKARI 6TH-BLOCK, 3rd-Stage, 3rd Phase 40x60 South-facing Old House 25000/-per.Ssft negotiable. ABHILASHA CONSULTANT. 9480565758

Jayanagar

JAYANAGAR 3RD Block East, 40x60 East_facing old house, E-khatha 30,000/- Sft. Suraj Realtors: 9845232711

SALE 30X40 With old House West Facing, Jayanagar 9th Block Residential Excellent Location Contact: 9066399102

J P Nagar

J.P.NAGAR 40X80, 60x45 North, 50x80 East, 60x90 South 30x55 Houses Commercial Sites, Sale Contact: 9845069739

Flat

Chandra Layout

PENTHOUSE FLAT for Sale, 3 Bedroom, 1600sft Super built- up, 50Mtr from Attiguppe Metro Station, Chandra layout, Vijaynagar. 1.5Cr Negotiable- 9844060483

Uttarahalli

4BHK NEW Flats Sale, Ready_to_move, Cauvery, Carparking, Lift, Vaasthu, Maruthi Layout. Rs.1.10.Cr. Call: 6360501159, 9945224058.

Commercial Building

Airport Road

FOR SALE Fully Furnished Office Old Airport Road VDB TOUCHDOWN Next to HAL Museum 7447 Sqft 96 Work Stations 5 Cabins 3 Meeting Room 1 Board 1MD Cabin 6 Carparks. No PHONE CALLS WHATS APP MESSAGE ONLY TO: 9845031550

PROPERTY CORNER ಕ್ಲಾಸಿಫೈಡ್ಸ್

Best Commercial
PROPERTY
Invest Smart, Grow Strong with Prime Commercial Plots
60x40, 80x50 Commercial Plot for Sale
KHB Surya City
Near Bannerghatta Road & Jigani
80 ft and 100 ft Roads
MARKET PRICE ₹6000/- PER SQFT
OFFER PRICE ₹4000/- PER SQFT



Ready for Registration
Loans Approved by SBI Bank
Call: 63669 41644

ಫಾರ್ಮ್ ಲ್ಯಾಂಡ್ ಮಾರಾಟಕ್ಕಿದೆ
ನೆಲಮಂಗಲ
ಬೈಲಾಂಜನೇಯ ದೇವಸ್ಥಾನದ ಹತ್ತಿರ
ತುಮಕೂರು ಹೈವೇ ಇಂದ ಕೇವಲ 5 ನಿಮಿಷ



ರೂ. 850/- ಪ್ರತಿ ಅಡಿಗೆ
ಸಂಪೂರ್ಣವಾಗಿ ರೆಡಿಯಾಗಿದೆ, ಗೇಟೆಡ್ ಕಮ್ಯೂನಿಟಿ, ಪ್ರವೇಶ ದ್ವಾರದಲ್ಲಿ ಆರ್ಚ್, 24 /7 ಸೆಕ್ಯೂರಿಟಿ. 20+ ಹಣ್ಣಿನ ಮರಗಳಿವೆ. 20+ ಸೌಲಭ್ಯಗಳು
2 ವರ್ಷ ಉಚಿತವಾಗಿ ನಿರ್ವಹಿಸುತ್ತೇವೆ. ಪ್ರತಿ ವರ್ಷ ಆದಾಯ ಹಿಂಪಡೆಯಿರಿ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
8880660099



SALE UTTARAHALLI CIRCLE
FULLY FURNISHED FLATS
OC, CC & RERA Approved
2 BHK 70 Lacs & 3 BHK 95 Lacs
Call: 96069-47557 / 96322-37557

30x40 SITE FOR SALE
Scan for Location
South Facing, CLEAR TITLE, Prime Location
@ VIJAYANAGAR
2nd Stage, Bangalore 40
Call: 9606939053

Koramangala

KORAMANGALA 50X80 COMMERCIAL SITE 80 FEET MAIN ROAD MULTIPLE PURPOSE HOTEL/ COMMERCIAL COMPLEX eventure 9113040843

Yelahanka

APPROXIMATELY 30000 Sft of commercial site with newly built 6000 sft small building on Bagalur main road near Chagalatti for sale contact 9449827314

Industrial & Factory

Mysore Road

INDUSTRIAL CONVERTED LAND AVILABLE FOR SALE AREA 10000SQFT TO 20000 SQFT TO 1ACRE AT KUMBALGODU INDAREA MYSORE ROAD MOB:6366378787.

Peenya

SALE/ RENT, Peenya 55000 Sqft_Land 55000 Sqft Building, 350 KVA, North facing, 60' road. SADANANDA: 9035767333

MORE Classifieds Ads on Subsequent Pages

Commercial Land

Out-Station

SALEM UDAYAPATY byepass opposite to udayapaty EB power station 14000.sq.feet Corner Commercial Land`with a 110 feet Frontage for`sale, suitable`to construct Hotels,Marriage Halls petrol`bunk Apartments, Hospitals. Cell:9943168099

‘ಜನರಲ್ಲಿ ವೈಚಾರಿಕ ಪ್ರಜ್ಞೆ ಅಗತ್ಯ’

‘ಜನರ ಕಡೆಗೆ ವೈಚಾರಿಕ ನಡಿಗೆ’ ಮೂಲಕ ಕುವೆಂಪು ವಿಚಾರಾಂದೋಲನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜನರಲ್ಲಿ ವೈಚಾರಿಕ, ವೈಜ್ಞಾನಿಕ ಪ್ರಜ್ಞೆ ಅಗತ್ಯ. ಅದು ಬೆಳೆಯದೇ ಹೋದರೆ ಕಾನೂನಿನಿಂದಲೇ ನಿರೀಕ್ಷಿತ ಬದಲಾವಣೆ ತರಲು ಸಾಧ್ಯವಿಲ್ಲ. ಈ ಕಾರಣಕ್ಕೇ ಮೌಢ್ಯ ನಿಷೇಧ ಕಾಯ್ದೆ ಪರಿಣಾಮಕಾರಿ ಆಗಲಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಜನ ಪ್ರಕಾಶನ ಆಯೋಜಿಸಿದ್ದ ಬರಗೂರು ರಾಮಚಂದ್ರಪ್ಪ ಸಂಪಾದಕತ್ವದ ‘ಕುವೆಂಪು ವಿಚಾರ ಕ್ರಾಂತಿ’ ಕೃತಿ ಜನಾರ್ಪಣೆ, ‘ಜನರ ಕಡೆಗೆ ವೈಚಾರಿಕ ನಡಿಗೆ’ ಮೂಲಕ ಕುವೆಂಪು ವಿಚಾರಾಂದೋಲನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ವೈಚಾರಿಕತೆ, ವೈಜ್ಞಾನಿಕತೆಯ ಬಗ್ಗೆ ಕುವೆಂಪು ಅವರಿಗೆ ಸ್ಪಷ್ಟ ದೃಷ್ಟಿಕೋನ ಇತ್ತು. ಜಾತಿ ತಾರತಮ್ಯ ಇಲ್ಲದ ಸಮಾಜ ಕುವೆಂಪು ಅವರ ಆಶಯವಾಗಿತ್ತು. ಆದರೆ, ಇಂದು ಶಿಕ್ಷಣ ಹೆಚ್ಚಿದಂತೆ ಮೌಢ್ಯ, ಕಂದಾಚಾರವೂ ಹೆಚ್ಚಾಗುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

> **ಜನರಿಗೆ ಸಂವಿಧಾನದ ಸಾಕ್ಷರತೆ ಇಲ್ಲ. ಸರ್ಕಾರಿ ನೌಕರರಿಗೂ, ವಿದ್ಯಾವಂತರಿಗೂ ಈ ಬಗ್ಗೆ ಅರಿವಿಲ್ಲ. ಸಂವಿಧಾನದ ಸಾಕ್ಷರತೆಗಾಗಿ ಒಂದು ಸಂಸ್ಥೆಯನ್ನು ಸರ್ಕಾರ ಹುಟ್ಟುಹಾಕಬೇಕು**
>
> **ಎಚ್‌.ಎನ್‌. ನಾಗಮೋಹನದಾಸ್**
> ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನದಾಸ್ ಮಾತನಾಡಿ, ‘42ನೇ ತಿದ್ದುಪಡಿ ಮೂಲಕ ಸಮಾಜವಾದ, ಜಾತ್ಯತೀತ ಪದಗಳನ್ನು ಸಂವಿಧಾನದ ಪ್ರಸ್ತಾವನೆಗೆ ಸೇರಿಸಲಾಗಿತ್ತು. ಇದರ ವಿರುದ್ಧ 1975 ಮತ್ತು 2024ರಲ್ಲಿ ಕೆಲವರು ಸುಪ್ರೀಂಕೋರ್ಟ್‌ಗೆ ಹೋಗಿದ್ದರು. ಸಂವಿಧಾನದ ಆಶಯವೇ ಸಮಾಜವಾದ, ಜಾತ್ಯತೀತ ಆಗಿದೆ ಎಂದು ಎರಡು ಬಾರಿ ಅರ್ಜಿಗಳು ತಿರಸ್ಕೃತವಾಗಿದ್ದವು. ಈಗ ಮತ್ತೆ ಅದೇ ಕೂಗು ಎದ್ದಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಸಾಹಿತಿ ಹಂ.ಪ.ನಾಗರಾಜಯ್ಯ, ವಿಶ್ರಾಂತ ಕುಲಪತಿ ಡಾ.ಚಿದಾನಂದ ಗೌಡ, ಕೃತಿಯ ಸಂಪಾದಕರಾದ ಬರಗೂರು ರಾಮಚಂದ್ರಪ್ಪ, ಜನ ಪ್ರಕಾಶನದ ಬಿ. ರಾಜಶೇಖರಮೂರ್ತಿ, ಎಚ್‌.ಎನ್‌. ಹರಿ, ಎ.ವಿ. ಶ್ರೀಹರಿ ಉಪಸ್ಥಿತರಿದ್ದರು.



‘ಕುವೆಂಪು ವಿಚಾರ ಕ್ರಾಂತಿ’ ಪುಸ್ತಕ ಜನಾರ್ಪಣೆ ಕಾರ್ಯಕ್ರಮದಲ್ಲಿ ಬರಗೂರು ರಾಮಚಂದ್ರಪ್ಪ, ಮತ್ತು ಹಂ.ಪ. ನಾಗರಾಜಯ್ಯ ಹಸ್ತಲಾಘವ ಮಾಡಿಕೊಂಡು ಕುಶಲೋಪರಿ ನಡೆಸಿದರು. ಚಿದಾನಂದಗೌಡ, ನ್ಯಾ. ಎಚ್‌.ಎನ್‌. ನಾಗಮೋಹನದಾಸ್, ಸಿದ್ದರಾಮಯ್ಯ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ರವಿಕುಮಾರ್ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಬಗ್ಗೆ ಅವಹೇಳನಕಾರಿ ಮಾತುಗಳನ್ನಾಡಿದ ಆರೋಪಕ್ಕೆ ಸಂಬಂಧಿಸಿದಂತೆ, ವಿಧಾನಪರಿಷತ್ ಸದಸ್ಯ ಎನ್. ರವಿಕುಮಾರ್ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘವು ವಿಧಾನಸಭೆ ಅಧ್ಯಕ್ಷ ಹಾಗೂ ವಿಧಾನಪರಿಷತ್ ಸಭಾಪತಿಯನ್ನು ಆಗ್ರಹಿಸಿದೆ. ‘ಎಲ್ಲ ಜನಪ್ರತಿನಿಧಿಗಳು ರಾಜ್ಯದ ಸರ್ಕಾರಿ ಅಧಿಕಾರಿಗಳಿಗೆ ಗೌರವ ನೀಡಬೇಕು. ಅಧಿಕಾರಿಗಳು ತಪ್ಪು ಮಾಡಿದಲ್ಲಿ ಕಾನೂನಿನ ಅಡಿ ಕ್ರಮ ಜರುಗಿಸಬೇಕು. ಅವರನ್ನು ಸಾರ್ವಜನಿಕವಾಗಿ ಅವಹೇಳನ ಮಾಡುವುದನ್ನು ಮುಂದುವರಿಸಿದರೆ, ಎಲ್ಲ ತಾಲ್ಲೂಕು ಮತ್ತು ಜಿಲ್ಲಾ ಕಚೇರಿಗಳ ಎದುರು ಧರಣಿ ನಡೆಸಲಾಗುವುದು’ ಎಂದು ಸಂಘದ ಅಧ್ಯಕ್ಷ ಎಲ್ ಭೈರಪ್ಪ ಎಚ್ಚರಿಸಿದ್ದಾರೆ.

ಬಿಡಿಎ ಸದಸ್ಯರಾಗಿ ನಾಲ್ವರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಮಹಿಳಾ ಕಾಂಗ್ರೆಸ್ ಮಾಜಿ ಅಧ್ಯಕ್ಷೆ ಮಂಜುಳಾ ನಾಯ್ಡು ಸೇರಿ ನಾಲ್ವರನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

ಕನಕಪುರ ತಾಲ್ಲೂಕಿನ ವೆಂಕಟ-ರಾಯನದೊಡ್ಡಿ ವಿ.ಆರ್.ಸುಜಯ್, ಬೆಂಗಳೂರಿನ ಮಾರುತಿ ಸೇವಾನಗರದ ಬಿ.ಎನ್.ಅಮರನಾಥ್, ಕೆಂಗೇರಿ ಉಪನಗರದ ಪಿ.ಗಾಂಧಿ ಅವರನ್ನು ಸದಸ್ಯರಾಗಿ ನೇಮಕ ಮಾಡಲಾಗಿದೆ.

ಜೈವಿಕ ಇಂಧನ: ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಈ.ಸುಧೀಂದ್ರ ಅವರು, ಜೈವಿಕ ಇಂಧನ ಕಾರ್ಯಯೋಜನೆ ಮತ್ತು ಮಂಡಳಿ ಅಧ್ಯಕ್ಷರಾಗಿ ತಮ್ಮ ಒಂದು ವರ್ಷದ ಕಾರ್ಯಗಳ ವರದಿಯನ್ನು ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಸಲ್ಲಿಸಿದರು. ‘ರಾಜ್ಯದಲ್ಲಿ ಜೈವಿಕ ಇಂಧನ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿದ್ದು, ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಲು ಹೊಸ ಜೈವಿಕ ಇಂಧನ ನೀತಿಯ ಅಗತ್ಯವಿದೆ.’ ಎಂದು ಉಪಮುಖ್ಯಮಂತ್ರಿಗೆ ವಿವರಿಸಿದರು.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಡಿಸಿಎಂ ‘ಜೈವಿಕ ಇಂಧನ ಕ್ಷೇತ್ರದ ಬೆಳವಣಿಗೆಗೆ ಸರ್ಕಾರ ಎಲ್ಲಾ ಹಂತದಲ್ಲೂ ಸಹಕಾರ ನೀಡಲಿದೆ. ನೂತನ ಜೈವಿಕ ಇಂಧನ ನೀತಿ ಅನುಮೋದನೆಗೆ ಕ್ರಮ ಕೈಗೊಳ್ಳಲಿದ್ದೇವೆ’ ಎಂದು ಹೇಳಿದರು.



ಅಮೆರಿಕದ ಸ್ಯಾನ್‌ಹೋಸೆ ನಗರದಲ್ಲಿ ನಡೆಯುತ್ತಿರುವ ವಿಶ್ವ ಒಕ್ಕಲಿಗರ ಸಮ್ಮೇಳನದಲ್ಲಿ ನಿರ್ಮಲಾನಂದನಾಥ ಸ್ವಾಮೀಜಿ, ಸಿ.ಎನ್‌. ಅಶ್ವತ್ಥನಾರಾಯಣ ಮತ್ತಿತರರು ಪಾಲ್ಗೊಂಡಿದ್ದರು



ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಶನಿವಾರ ಇನ್‌ಸ್ಟಿಟ್ಯೂಟ್ ಆಫ್ ಮೀಡಿಯಾ ಸ್ಟಡೀಸ್ ಆ್ಯಂಡ್ ರಿಸರ್ಚ್(ಐಎಂಎಸ್‌ಆರ್) ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ‘ಬಿ.ಆರ್‌.ರೋಹಿತ್ ಪತ್ರಿಕೋದ್ಯಮ ಪ್ರಶಸ್ತಿ’ಯನ್ನು ಉದಯವಾಣಿ ಪತ್ರಿಕೆಯ ವಿಶೇಷ ವರದಿಗಾರ ವಿಜಯಕುಮಾರ್ ಚಂದರಗಿ ಅವರು ಪತ್ನಿ ಪೂಜಾ ಅವರೊಂದಿಗೆ ಸ್ವೀಕರಿಸಿದರು. ಪ್ರಶಸ್ತಿಯ ದತ್ತಿ ದಾನಿ ಕೆ.ವಿ.ಲಲಿತಾ ಮತ್ತು ಸಿ.ರಾಜಣ್ಣ ದಂಪತಿ, ಕರ್ನಾಟಕ ಗಾಂಧಿ ಸ್ಮಾರಕ ಸಂಸ್ಥೆ ಅಧ್ಯಕ್ಷ ವೂಡೇ ಪಿ. ಕೃಷ್ಣ, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಪತ್ರಕರ್ತ ಬಿ.ಎಸ್‌. ಸತೀಶ್‌ಕುಮಾರ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಅಮೆರಿಕ: ವಿಶ್ವ ಒಕ್ಕಲಿಗರ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದ ಸ್ಯಾನ್‌ಹೋಸೆ ನಗರದ ಮೆಕನರಿ ಕನ್ವೆನ್ಷನ್ ಸೆಂಟರ್‌ನಲ್ಲಿ ಆರಂಭವಾದ ಮೂರು ದಿನಗಳ 18ನೇ ವಿಶ್ವ ಒಕ್ಕಲಿಗ ಮಹಾಸಮ್ಮೇಳನಕ್ಕೆ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅವರು ಶನಿವಾರ ಚಾಲನೆ ನೀಡಿದರು.

ವಿಶ್ವದ ವಿವಿಧ ಭಾಗಗಳಿಂದ ಆಗಮಿಸಿದ್ದ ಸಮುದಾಯದ ಸದಸ್ಯರು, ವೈವಿಧ್ಯಮಯ ಸಂಸ್ಕೃತಿ, ಪರಂಪರೆ, ಉತ್ಸವವನ್ನು ಈ ಸಮ್ಮೇಳನದ ಮೂಲಕ ಜಗತ್ತಿಗೇ ತೆರೆದಿಟ್ಟರು. ಒಕ್ಕಲಿಗರ ಸಂಸ್ಕೃತಿಯ ಬಣ್ಣನೆ, ಭಕ್ತಿಯ ಮೆರವಣಿಗೆ, ಸುಗ್ಗಿ ಕುಣಿತ, ದೇವರ ಉತ್ಸವ, ಕೋಲಾಟ, ವೇಷ ಭೂಷಣಗಳ ಪ್ರದರ್ಶನವು ಜಾತ್ರಾ ಮಹೋತ್ಸವದ ಅನುಭವ ನೀಡಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ನಿರ್ಮಲಾನಂದನಾಥ ಸ್ವಾಮೀಜಿ, ‘ಒಕ್ಕಲಿಗರು ಜ್ಞಾನ, ಸ್ವಸಾ-ಮರ್ಥ್ಯದಿಂದ ಸಮಾಜದಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಿದ್ದಾರೆ. ತಮ್ಮ ಜ್ಞಾನ ಭಂಡಾರದಿಂದಲೇ ಅಮೆರಿಕ, ಯುರೋಪ್ ಸೇರಿದಂತೆ ಹಲವು ದೇಶಗಳಲ್ಲಿ ನೆಲಸಿದ್ದಾರೆ’ ಎಂದರು.

ಶಾಸಕ ಸಿ.ಎನ್.ಅಶ್ವತ್ಥನಾರಾಯಣ ಮಾತನಾಡಿ, ‘ಅಮೆರಿಕದಲ್ಲಿರುವ ಹೊಸ ಅವಕಾಶಗಳನ್ನು ಬಳಸಿಕೊಂಡು ಅಭಿವೃದ್ಧಿ ಕಾಣಲು ಈ ಸಮ್ಮೇಳನ ಮಹತ್ವದ ಪಾತ್ರ ವಹಿಸುತ್ತದೆ’ ಎಂದರು.

ವಿಶ್ವ ಒಕ್ಕಲಿಗರ ಪರಿಷತ್ ಆಫ್ ಅಮೆರಿಕದ ಅಧ್ಯಕ್ಷ ಧನಂಜಯ್ ಮಾತನಾಡಿ, ‘ಮುಂದಿನ ದಿನಗಳಲ್ಲಿ ಈ ಸಮ್ಮೇಳನವನ್ನು ಮತ್ತಷ್ಟು ವಿಸ್ತಾರಗೊಳಿಸುವ ಯೋಚನೆ ಇದೆ’ ಎಂದರು.

ವಿಶಿಷ್ಟ ಭೋಜನ ವ್ಯವಸ್ಥೆ, ಸಮುದಾಯ ವಧು-ವರರ ಪರಿಚಯ ವೇದಿಕೆ, ಉದ್ಯಮಿಗಳಿಗೆ ‘ಬಿಸಿನೆಸ್ ಫೋರಂ’ಸೇರಿ ಹಲವು ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸಂಸದ ಡಾ.ಕೆ.ಸುಧಾಕರ, ಶಾಸಕರಾದ ಎಸ್‌.ಟಿ.ಸೋಮಶೇಖರ್, ಸತೀಶ್‌ರೆಡ್ಡಿ, ಗುಬ್ಬಿಯ ಶ್ರೀನಿವಾಸ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಒಕ್ಕಲಿಗ ಸಮುದಾಯದ ಮುಖಂಡರಾದ ಸಿ.ಎಸ್.ಪುಟ್ಟರಾಜು, ಸಚ್ಚಿದಾನಂದ ಸೇರಿದಂತೆ ಹಲವು ಗಣ್ಯರು ಪಾಲ್ಗೊಂಡಿದ್ದರು ಎಂದು ಸಂಘಟಕರು ತಿಳಿಸಿದರು.







ಚಿಟಿಕೆ ಸುದ್ದಿ

ಸಂಸ್ಕೃತಶ್ರೀಃ ಪ್ರಶಸ್ತಿ ಪ್ರದಾನ 10ರಂದು

ಬೆಂಗಳೂರು: ಸಮ್ಯಕ್ ಪ್ರತಿಷ್ಠಾನಮ್‌ನಿಂದ ಜುಲೈ 10ರಂದು ಜಯನಗರದ ಶ್ರೀ ಜಯರಾಮ ಸೇವಾ ಮಂಡಳಿಯಲ್ಲಿ 'ಸಂಸ್ಕೃತಶ್ರೀಃ' ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಸಂಸ್ಕೃತ ಭಾಷೆಯ ಪ್ರಚಾರ ಪ್ರಸಾರದಲ್ಲಿ ತೊಡಗಿರುವ ಮಹಾವಿದ್ಯಾಲಯ, ಪ್ರೌಢಶಾಲೆ ಹಾಗೂ ಮಠ ಮಂದಿರಗಳಲ್ಲಿ ಸಂಸ್ಕೃತವನ್ನು ಹೇಳಿಕೊಡುವ 21ಕ್ಕೂ ಹೆಚ್ಚು ಶಿಕ್ಷಕರಿಗೆ 'ಸಂಸ್ಕೃತಶ್ರೀಃ' ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಗುವುದು ಎಂದು ಪ್ರತಿಷ್ಠಾನದ ಕಾರ್ಯದರ್ಶಿ ವೀರಭದ್ರ ತಿಳಿಸಿದ್ದಾರೆ.

ಬೇಲಿಮಠ ಶಿವಾನುಭವ ಚರಮೂರ್ತಿ ಶಿವರುದ್ರಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯವಹಿಸಲಿದ್ದು, ಕ್ಯಾನ್ಸರ್ ತಜ್ಞೆ ಡಾ. ವಿಜಯಲಕ್ಷ್ಮೀ ದೇಶಮಾನೆ ಮತ್ತು ಜಯರಾಮ ಸೇವಾ ಮಂಡಳಿ ಅಧ್ಯಕ್ಷ ಎಸ್.ಕೆ. ಗೋಪಾಲಕೃಷ್ಣ ಭಾಗವಹಿಸುತ್ತಾರೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ನೈತಿಕ ಮೌಲ್ಯ ಮೈಗೂಡಿಸಿಕೊಳ್ಳಿ'

ಸರ್ಕಾರಿ ನೌಕರರ ಮಕ್ಕಳ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಶಾಸಕ ಪ್ರದೀಪ್ ಈಶ್ವರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳು ಗುಣಮಟ್ಟದ ಶಿಕ್ಷಣ ಪಡೆಯುವ ಜತೆಗೆ, ಸಮಾಜದ ನೈತಿಕ ಮೌಲ್ಯಗಳನ್ನೂ ಮೈಗೂಡಿಸಿಕೊಳ್ಳಬೇಕು ಎಂದು ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಹೇಳಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಬೆಂಗಳೂರು ನಗರ, ಗ್ರಾಮಾಂತರ, ದಕ್ಷಿಣ ಜಿಲ್ಲೆ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಯ ಸರ್ಕಾರಿ ನೌಕರರ ಮಕ್ಕಳಿಗೆ ಶನಿವಾರ ಹಮ್ಮಿಕೊಂಡಿದ್ದ 'ಪ್ರತಿಭಾ ಪುರಸ್ಕಾರ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಉತ್ತಮ ಶಿಕ್ಷಣ ಪಡೆದು ಸುಶಿಕ್ಷಿತರಾದರೆ ಸಾಲದು, ಉತ್ತಮ ಸಮಾಜ ನಿರ್ಮಾಣದತ್ತಲೂ ಚಿತ್ತ ಹರಿಸಬೇಕು. ವಿದ್ಯಾರ್ಥಿಗಳ ಆಸಕ್ತಿಗೆ ಅನುಗುಣವಾಗಿ ಕಲಿಕೆಯ ಕ್ಷೇತ್ರಗಳನ್ನು ಆಯ್ದುಕೊಳ್ಳಲು ಪೋಷಕರು ಅವಕಾಶ ಮಾಡಿಕೊಡಬೇಕು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಆಸಕ್ತಿ ತೋರುವ ಮಕ್ಕಳಿಗೆ ಪೂರಕ ವಾತಾವರಣ ಕಲ್ಪಿಸಬೇಕು. ಸಮಯ ವ್ಯರ್ಥ ಮಾಡದೇ ನಿರಂತರ ಅಧ್ಯಯನ ಮಾಡಿದರೆ ಜೀವನದಲ್ಲಿ ಯಶಸ್ಸು ದೊರೆಯುತ್ತದೆ ಎಂದರು.

> ಸರ್ಕಾರಿ ನೌಕರರ ಮಕ್ಕಳು ಭವಿಷ್ಯದಲ್ಲಿ ಉತ್ತಮ ನಾಗರಿಕರಾಗಿ ಸಮಾಜ ಕಟ್ಟುವ ಕೆಲಸ ಮಾಡಬೇಕು ಎನ್ನುವ ಆಶಯ ಇಟ್ಟುಕೊಂಡು ಸಂಘ ಪ್ರೋತ್ಸಾಹ ನೀಡುತ್ತಿದೆ
> **ಸಿ.ಎಸ್. ಷಡಾಕ್ಷರಿ,** ಅಧ್ಯಕ್ಷ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ



ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಪ್ರತಿಭಾವಂತ ಮಕ್ಕಳನ್ನು ಪುರಸ್ಕರಿಸಿದರು

ಪ್ರಾಸ್ತಾವಿಕ ಮಾತನಾಡಿದ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ, ಸರ್ಕಾರಿ ನೌಕರರ ಸಂಘ ಪ್ರತಿ ವರ್ಷವೂ ನೌಕರರ ಪ್ರತಿಭಾವಂತ ಮಕ್ಕಳನ್ನು ಸನ್ಮಾನಿಸಿ, ಪ್ರೋತ್ಸಾಹ ನೀಡುತ್ತದೆ. ಇದುವರೆಗೂ 50 ಸಾವಿರ ಮಕ್ಕಳು ಸಂಘ ನೀಡುವ ನಗದು ಬಹುಮಾನ ಪಡೆದಿದ್ದಾರೆ ಎಂದರು.

1,040 ಮಕ್ಕಳನ್ನು ಸನ್ಮಾನಿಸಲಾಯಿತು. 'ಪ್ರಜಾವಾಣಿ' ಪ್ರಕಾಶನ ಹೊರತಂದ ಕೊಪ್ಪಳದ ಗವಿಸಿದ್ದೇಶ್ವರ ಸ್ವಾಮೀಜಿ ಅವರ 'ನುಡಿ ಬೆಳಗು' ಕೃತಿಯನ್ನು ಎಲ್ಲರಿಗೂ ನೀಡಲಾಯಿತು.

ಸಂಘದ ಪದಾಧಿಕಾರಿಗಳಾದ ಎಚ್. ಗಿರಿಗೌಡ, ಎಸ್. ಬಸವರಾಜು, ಮಲ್ಲಿಕಾರ್ಜುನ ಬಿ. ಬಳ್ಳಾರಿ, ವಿ.ವಿ. ಶಿವರುದ್ರಯ್ಯ, ಸುರೇಶ್ ಎಸ್. ಶೆಡಶ್ಯಾಳ, ಆರ್. ಮೋಹನ್‌ಕುಮಾರ್, ಕೆ. ಸತೀಶ್, ಹನುಮಂತರಾಯಪ್ಪ, ನಾರಾಯಣಸ್ವಾಮಿ ಉಪಸ್ಥಿತರಿದ್ದರು.

ಮೈಸೂರು ಜಯದೇವಗೆ ತಜ್ಞರ ನಿಯೋಜನೆ: ಮುಖ್ಯಮಂತ್ರಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರಿನ ಜಯದೇವ ಹೃದ್ರೋಗ ವಿಜ್ಞಾನಗಳ ಸಂಸ್ಥೆಗೆ ತಜ್ಞ ವೈದ್ಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜನೆ ಮಾಡುವ ಸಂಬಂಧ ಕ್ರಮ ತೆಗೆದುಕೊಳ್ಳಿ ಎಂದು ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

ವಿಧಾನ ಪರಿಷತ್ತಿನ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿಗೆ ಪತ್ರ ಬರೆದು, ಮೈಸೂರಿನ ಜಯದೇವ ಆಸ್ಪತ್ರೆಗೆ ಹೆಚ್ಚಿನ ತಜ್ಞ ವೈದ್ಯರನ್ನು ನಿಯೋಜನೆ ಮಾಡುವಂತೆ ಕೋರಿದ್ದರು.

'ಹಾಸನ, ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿ ಇತ್ತೀಚೆಗೆ ಹೃದಯಾಘಾತದ ಪ್ರಕರಣಗಳು ಹೆಚ್ಚುತ್ತಿವೆ. ಇದರಿಂದ ಆತಂಕಗೊಂಡ ಜನರು ಮೈಸೂರಿನ ಜಯದೇವ ಹೃದ್ರೋಗ ಸಂಸ್ಥೆಗೆ ಚಿಕಿತ್ಸೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಈ ಹಿಂದೆ ಪ್ರತಿದಿನ ಸರಾಸರಿ 700 ಜನರು ತಪಾಸಣೆಗೆ ಬರುತ್ತಿದ್ದರು. ಈಗ ಈ ಸಂಖ್ಯೆ 1,500 ದಾಟಿದೆ' ಎಂದು ಅವರು ಪತ್ರದಲ್ಲಿ ವಿವರಿಸಿದ್ದಾರೆ.

'ಆಸ್ಪತ್ರೆಗೆ ಬರುತ್ತಿರುವ ಜನರ ಸಂಖ್ಯೆ ದುಪ್ಪಟ್ಟಾದ ಕಾರಣ, ಈಗ ಇರುವ ಸಿಬ್ಬಂದಿಯಿಂದ ನಿರ್ವಹಣೆ ಕಷ್ಟವಾಗುತ್ತಿದೆ. ಹೀಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ತಜ್ಞ ವೈದ್ಯರನ್ನು ನಿಯೋಜನೆ ಮಾಡಬೇಕು. ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲೂ ಹೃದ್ರೋಗ ಸಂಬಂಧಿ ತುರ್ತು ಚಿಕಿತ್ಸೆಗೆ ಸೌಕರ್ಯ ಒದಗಿಸಬೇಕು' ಎಂದು ಕೋರಿದ್ದರು.

ಮುಖ್ಯಮಂತ್ರಿಯ ಕಚೇರಿಯು, ಈ ಮನವಿ ಪತ್ರವನ್ನು ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ರವಾನಿಸಿದೆ. ಜತೆಗೆ ಸಿ.ಎಂ ಸಿದ್ದರಾಮಯ್ಯ, 'ಇದನ್ನು ಕೂಲಂಕಷವಾಗಿ ಪರಿಶೀಲಿಸಿ. ಕೂಡಲೇ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಿ' ಎಂದು ಸೂಚಿಸಿದ್ದಾರೆ.

ಮೆಟ್ರೊ ವಿಳಂಬ 'ಕೈ', ಕಮಲ ಪ್ರತಿಭಟನೆ

ಎರಡನೇ ಮುಖಪುಟದಿಂದ...

ಸ್ಥಳಕ್ಕೆ ಭೇಟಿ ನೀಡಿದ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್ವರ ರಾವ್ ಮಾತನಾಡಿ, 'ಆಗಸ್ಟ್ 15ರ ಒಳಗೆ ಹಳದಿ ಮಾರ್ಗದಲ್ಲಿ ಸಂಚಾರ ಆರಂಭಗೊಳ್ಳಲಿದೆ. ಆರಂಭದಲ್ಲಿ ಮೂರು ರೈಲುಗಳು ಸಂಚರಿಸಲಿವೆ. ರೈಲುಗಳ ಪೂರೈಕೆಯಾದಾಗ ಸಂಚರಿಸುವ ರೈಲುಗಳ ಸಂಖ್ಯೆ ಹೆಚ್ಚಿಸಲಾಗುವುದು' ಎಂದು ಭರವಸೆ ನೀಡಿದರು.

ಸಂಸದ ಪಿ.ಸಿ. ಮೋಹನ್, ಶಾಸಕರಾದ ಎಂ. ಕೃಷ್ಣಪ್ಪ, ಎಲ್.ಎ. ರವಿ ಸುಬ್ರಹ್ಮಣ್ಯ, ಉದಯ್ ಗರುಡಾಚಾರ್, ಸಿ.ಕೆ. ರಾಮಮೂರ್ತಿ, ವಿಧಾನ ಪರಿಷತ್ ಸದಸ್ಯ ಗೋಪಿನಾಥ್ ರೆಡ್ಡಿ ಮತ್ತು ಬಿಜೆಪಿ ಸದಸ್ಯರು ಭಾಗವಹಿಸಿದ್ದರು.

'ನಮ್ಮ ಮೆಟ್ರೊ ಇತರ ಮಾರ್ಗಗಳ ಕಾರ್ಯಾಚರಣೆ ಮತ್ತು ನಿರ್ಮಾಣದಲ್ಲಿ ಕಾರ್ಯವೂ ವಿಳಂಬವಾಗಿದೆ' ಎಂದು ವ್ಯವಸ್ಥಾಪಕ ನಿರ್ದೇಶಕರಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ ತಿಳಿಸಲಾಯಿತು.



'ದಿ ನ್ಯೂ ವರ್ಲ್ಡ್' ಪುಸ್ತಕ ಬಿಡುಗಡೆ ಮತ್ತು ಸಂವಾದ ಕಾರ್ಯಕ್ರಮದಲ್ಲಿ ರಾಮ್ ಮಾಧವ್ ಹಾಗೂ ಡಾ.ಎಂ.ಕೆ ರಮೇಶ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

'ಭಾರತದಲ್ಲಿ ಸಂಶೋಧನೆಗಳಾಗುತ್ತಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿ ಭಾರತವು ಬೇರೆ ದೇಶಗಳನ್ನು ಅವಲಂಬಿಸಿದೆ. ಇಲ್ಲಿ ಮೂಲ ಸಂಶೋಧನೆಗಳು ನಡೆಯುತ್ತಿಲ್ಲ. ಬದಲಿಗೆ ನಕಲು ಮಾಡುತ್ತಿದ್ದೇವೆ' ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕಾರಿಣಿ ಸದಸ್ಯ ಹಾಗೂ ಲೇಖಕ ರಾಮ್ ಮಾಧವ್ ಹೇಳಿದರು.

ಥಿಂಕರ್ಸ್ ಫೋರಂ ನಗರದಲ್ಲಿ ಶನಿವಾರ ರಾಮ್ ಮಾಧವ್ ಅವರ 'ದಿ ನ್ಯೂ ವರ್ಲ್ಡ್' ಪುಸ್ತಕ ಬಿಡುಗಡೆ ಕಾರ್ಯಕ್ರಮ ಆಯೋಜಿಸಿತ್ತು. ಪುಸ್ತಕ ಬಿಡುಗಡೆಯ ನಂತರ ಮಾತನಾಡಿದ ರಾಮ್ ಮಾಧವ್, 'ಸೆಮಿಕಂಡಕ್ಟರ್ ಸಂಶೋಧನೆ, ತಯಾರಿಕೆಯಲ್ಲಿ ಒಟ್ಟು 8 ಹಂತಗಳಿವೆ. ನಾವು ಅದರಲ್ಲಿ ಮೊದಲ ಹಂತವನ್ನೂ ತಲುಪಿಲ್ಲ' ಎಂದರು.

'ಸೆಮಿಕಂಡಕ್ಟರ್‌ನ ನ್ಯಾನೊ ಚಿಪ್‌ಗಳನ್ನು ಭಾರತದಲ್ಲಿ ತಯಾರಿಸಲಾಗುತ್ತಿದೆ. ಆದರೆ ಅವುಗಳ ವಿನ್ಯಾಸ ಬೇರೆ ದೇಶಗಳದ್ದು. 'ಆರ್ ಅಂಡ್ ಡಿ'ಗೆ ನಾವು ಮಾಡುತ್ತಿರುವ ವೆಚ್ಚಕ್ಕಿಂತ, ಚೀನಾವು 25 ಪಟ್ಟು ಹೆಚ್ಚು ಮಾಡುತ್ತಿದೆ. ನಾವು ಬೇರೆಯವರನ್ನು ನಕಲು ಮಾಡುವ ಬದಲು, ಮೂಲ ಸಂಶೋಧನೆ ನಡೆಸಬೇಕು. ಜಗತ್ತು ಬಹಳ ವೇಗವಾಗಿ ಮುನ್ನಡೆಯುತ್ತಿದೆ. ಅದು ಯಾವ ಕಡೆ ಹೋಗುತ್ತದೆ ಎಂಬುದನ್ನು ಅರ್ಥೈಸಿಕೊಂಡು ನಾವು ಕಾರ್ಯನಿರ್ವಹಿಸಬೇಕಾದ ಆವಶ್ಯಕತೆಯಿದೆ' ಎಂದರು.

ನಗರದಲ್ಲಿ ಇಂದು

ವಿಶ್ವವಲ್ಲಭತೀರ್ಥ ಸ್ವಾಮೀಜಿ ಅವರಿಂದ ತಪ್ತಮುದ್ರಾಧಾರಣೆ: ಆಯೋಜನೆ ಹಾಗೂ ಸ್ಥಳ: ಕೃಷ್ಣ ವಾದಿರಾಜ ಮಂದಿರ, ರಾಯರಾಯ ಕಲ್ಯಾಣ ಮಂಟಪದ ಆವರಣ, ಪಂಪ ಮಹಾಕವಿ ರಸ್ತೆ, ಶಂಕರಪುರ, ಬೆಳಿಗ್ಗೆ 7ರಿಂದ

ಸುಬುಧೇಂದ್ರತೀರ್ಥ ಸ್ವಾಮೀಜಿ ಅವರಿಂದ ತಪ್ತಮುದ್ರಾಧಾರಣೆ: ವಿದ್ವಾಂಸರಿಂದ 'ಅಖಂಡ ಭಾಗವತ' ಪ್ರವಚನ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಬೆಳಿಗ್ಗೆ 7.30ರಿಂದ


ಸುಬುಧೇಂದ್ರ ತೀರ್ಥ

'ಆರ್ಗ್ಯಾನಿಕ್ ಸಂತೆ': ಅತಿಥಿ: ರಾಜು ಎನ್., ನೃತ್ಯ ಪ್ರದರ್ಶನ: ಸ್ಮಿತಾ, ಆಯೋಜನೆ ಹಾಗೂ ಸ್ಥಳ: ದಿ ಗ್ರೀನ್ ಪಾಥ್, ಮಲ್ಲೇಶ್ವರ, ಬೆಳಿಗ್ಗೆ 9

ಭರತನಾಟ್ಯ ರಂಗಪ್ರವೇಶ: ಅಸ್ಮಿತಾ ರಾಜ್‌ಕುಮಾರ್, ಶೃತಿ ರಾಜ್‌ಕುಮಾರ್, ಅತಿಥಿಗಳು: ಇಂದು ಬಿ.ಎಸ್, ಪದ್ಮಾಕ್ಷಿ ಲೋಕೇಶ್, ವೈ.ಕೆ. ಸಂಧ್ಯಾ ಶರ್ಮಾ, ಆಯೋಜನೆ: ಶಿವಾಲಯ ನೃತ್ಯ ಮಂದಿರ, ಸ್ಥಳ: ಎ.ಡಿ.ಎ. ರಂಗಮಂದಿರ, ಜೆ.ಸಿ. ರಸ್ತೆ, ಬೆಳಿಗ್ಗೆ 9.30

ಮಕ್ಕಳ ಲೋಕಕ್ಕೆ 14 ಪುಸ್ತಕಗಳ ಅರ್ಪಣೆ: ಅತಿಥಿಗಳು: ಪ್ರಕಾಶ್ ರಾಜ್, ತೇಜಸ್ವಿ ಶಿವಾನಂದ್, ಅಬ್ದುಲ್ ರೆಹಮಾನ್ ಪಾಷಾ, ನೆಲ್ಲುಕುಂಟೆ ವೆಂಕಟೇಶ್, ಲಕ್ಷ್ಮಿ ಕರುಣಾಕರನ್, ವಿವೇಕ್ ಬಿ.ಜಿ., ಜಿ.ಎನ್. ಮೋಹನ್, ಅಭಿನಂದಿತರು: ಸುಧಾಕರ ದರ್ಬೆ, ಸಾಗರ್ ಎಂ.ಎಸ್., ರೀಗಲ್ ವೆಂಕಟೇಶ್, ಜಿ. ಅರುಣ್ ಕುಮಾರ್, ಕಿರಣ್ ಮಾಡಾಳು, ಬಿಳಿಗೆರೆ ಕೃಷ್ಣಮೂರ್ತಿ, ಆಯೋಜನೆ: ಬಹುರೂಪಿ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪ ರಸ್ತೆ, ಬೆಳಿಗ್ಗೆ 10


ಪ್ರಕಾಶ್ ರಾಜ್

'ಚಿತ್ತಾರ' ಚಿತ್ರಕಲೆ ಮತ್ತು ಆಶು ಭಾಷಣ ಸ್ಪರ್ಧೆ ಕಾರ್ಯಕ್ರಮ: ಆಯೋಜನೆ: ಆಚಾರ್ಯ ಬೆಂಗಳೂರು ಬಿ ಸ್ಕೂಲ್, ಸ್ಥಳ: ಬಾಲ ಭವನ, ಕಬ್ಬನ್ ಪಾರ್ಕ್, ಬೆಳಿಗ್ಗೆ 10

ದತ್ತಿ ಪ್ರಶಸ್ತಿ ಪ್ರದಾನ ಹಾಗೂ ಪುಸ್ತಕಗಳ ಬಿಡುಗಡೆ: ಚಿನ್ನು ಪ್ರಕಾಶ್ ಶ್ರೀರಾಮನಹಳ್ಳಿ ಅವರ 'ದಿ ಕಂಪ್ಯಾರಿಟಿವ್ ಸ್ಟಡಿ ಆಫ್ ಡ್ರಮಾಟಿಕ್ ಥಿಯರೀಸ್ ಇನ್ ಟಿ.ಎಸ್. ಎಲಿಯಟ್ಸ್ ಪ್ಲೇಸ್' ಪುಸ್ತಕ ಬಿಡುಗಡೆ: ಬಂಜಗೆರೆ ಜಯಪ್ರಕಾಶ್, 'ರಾಂ.ಕೆ. ಹನುಮಂತಯ್ಯ ಪುಸ್ತಕ ದತ್ತಿ ಪ್ರಶಸ್ತಿ' ಪ್ರದಾನ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ರಾಂ. ಕೆ. ಹನುಮಂತಯ್ಯ, ಪುಸ್ತಕದ ಬಗ್ಗೆ ಮಾತು: ಭಾಗ್ಯಲಕ್ಷ್ಮಿ, ಉಪಸ್ಥಿತಿ: ಚಿನ್ನು ಪ್ರಕಾಶ್ ಶ್ರೀರಾಮನಹಳ್ಳಿ, ಎಸ್. ರಾಮಲಿಂಗೇಶ್ವರ (ಸಿಸಿರಾ), ಆಯೋಜನೆ: ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಜೇನುಗೂಡು ಕಲಾ ಬಳಗ, ಸ್ಥಳ: ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 10.30

ಎಚ್.ಎಸ್.ವಿ. ಸ್ಮರಣಾರ್ಥ 'ರಂಗ ನಮನ': ವಿನ್ಯಾಸ ಮತ್ತು ಪ್ರಸ್ತುತಿ: ಬಿ. ಜಯಶ್ರೀ, ಅತಿಥಿಗಳು: ಸರ್ದಾರ್, ಚಿರಂಜೀವಿ, ಎಚ್.ಎಲ್. ಪುಷ್ಪ, ಬಿ. ಸುರೇಶ, ಉಪಸ್ಥಿತಿ: ಶ್ರೀನಿವಾಸ ಜಿ. ಕಪ್ಪಣ್ಣ, ಆಯೋಜನೆ: ಕಪ್ಪಣ್ಣ ಅಂಗಳ, ಜಿ.ವಿ. ಮಾಲತಮ್ಮ ಟ್ರಸ್ಟ್, ಸ್ಥಳ: ಡಾ.ಸಿ. ಅಶ್ವತ್ಥ್ ಕಲಾ ಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

'ಕಂಬತ್ತಳ್ಳಿ ಜೀವಣ್ಣ ಪದ್ಮಾವತಮ್ಮ ದತ್ತಿ ಪ್ರಶಸ್ತಿ' ಪ್ರದಾನ: ಪದ್ಮರಾಜ ಎನ್. ದೇಸಾಯಿ, ಪ್ರಶಸ್ತಿ ಪುರಸ್ಕೃತರು: ಎಸ್. ಜಿತೇಂದ್ರ ಕುಮಾರ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಅತಿಥಿ: ಹಂಪ ನಾಗರಾಜಯ್ಯ, ಅಭಿನಂದನಾ ನುಡಿ: ಪದ್ಮಿನಿ ನಾಗರಾಜು, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ. ಕಲಾಭವನ, ಬಿ.ಎಂ.ಶ್ರೀ. ಪ್ರತಿಷ್ಠಾನ, 3ನೇ ಮುಖ್ಯರಸ್ತೆ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30


ಜಿತೇಂದ್ರ ಕುಮಾರ್

ಬೀರೇಂದ್ರ ಕೇಶವ ತಾರಕಾನಂದಪುರಿ ಸ್ವಾಮೀಜಿ 19ನೇ ಪುಣ್ಯಸ್ಮರಣೆ ಪ್ರಯುಕ್ತ ಭಕ್ತರ ಭಂಡಾರದ ಕುಟೀರ ಉದ್ಘಾಟನೆ: ಸಾನ್ನಿಧ್ಯ: ನಿರಂಜನಾನಂದಪುರಿ ಸ್ವಾಮೀಜಿ, ಶಾಖಾ ಮಠ ಉದ್ಘಾಟನೆ: ಸಿದ್ದರಾಮಯ್ಯ, ಜ್ಯೋತಿ ಬೆಳಗಿಸುವವರು: ಸಿ.ಎಚ್. ವಿಜಯಶಂಕರ್, ಅಧ್ಯಕ್ಷತೆ: ಎಚ್.ಎಂ. ರೇವಣ್ಣ, ನಾಮಫಲಕ ಅನಾವರಣ: ಬಸವರಾಜ ಬೊಮ್ಮಾಯಿ, ಕಿರುಹೊತ್ತಿಗೆ ಬಿಡುಗಡೆ: ಕೆ.ಎಸ್. ಈಶ್ವರಪ್ಪ, ಪುಷ್ಪ ನಮನ: ಎಚ್. ವಿಶ್ವನಾಥ್, ಧ್ಯಾನ ಮಂದಿರ ಉದ್ಘಾಟನೆ: ಬೈರತಿ ಸುರೇಶ್, ಪ್ರಸಾದ ನಿಲಯ ಉದ್ಘಾಟನೆ: ಸತೀಶ್ ಜಾರಕಿಹೊಳಿ, ಅತಿಥಿ ಕೊಠಡಿ ಉದ್ಘಾಟನೆ: ಸಂತೋಷ್ ಲಾಡ್, ಗುರುಸದನ ಉದ್ಘಾಟನೆ: ಎಸ್.ಎಸ್. ಮಲ್ಲಿಕಾರ್ಜುನ್, ನಾಮಫಲಕ ಅನಾವರಣ: ಪ್ರಿಯಕೃಷ್ಣ, ಕಾರ್ಯಕ್ರಮ ಉದ್ಘಾಟನೆ: ಬೈರತಿ ಬಸವರಾಜ ಆಯೋಜನೆ ಹಾಗೂ ಸ್ಥಳ: ಕಾಗಿನೆಲೆ ಸಂಸ್ಥಾನ ಕನಕ ಗುರು ಪೀಠ, ಕೇತೋಹಳ್ಳಿ, ಸಂಜೆ 6

ಗುರುಪೂರ್ಣಿಮೆ ಪ್ರಯುಕ್ತ ಇಷ್ಟಲಿಂಗ ಮಹಾಪೂಜೆ ಹಾಗೂ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಆಶೀರ್ವಚನ ಸಮಾರಂಭ ಉದ್ಘಾಟನೆ: ಸಾನ್ನಿಧ್ಯ: ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ರೇಣುಕ ಶಿವಾಚಾರ್ಯ ಸ್ವಾಮೀಜಿ, ಶ್ರೀಕಂಠ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಪ್ರಿಯಕೃಷ್ಣ, ಅಧ್ಯಕ್ಷತೆ: ಬಿ.ಎಸ್. ಪರಮಶಿವಯ್ಯ, ಆಯೋಜನೆ: ಶ್ರೀಶೈಲ ಮಲ್ಲಿಕಾರ್ಜುನ ಸಮಾಜೋತ್ಥಾನ ಫೌಂಡೇಷನ್, ಸ್ಥಳ: ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಸಂಜೆ 6

ಮಾಸದ ಮಂಥನ 76ನೇ ಸಂಭ್ರಮ, 'ಆತ್ಮ ಶಕ್ತಿ ಎಂಬ ಕಲ್ಪವೃಕ್ಷ' ವಿಚಾರ ಸಂಕಿರಣ: ಅತಿಥಿ: ಕೆ.ವೈ. ವೆಂಕಟೇಶ್, ಸ್ಥಳ: ನಂ.17, ಸಾನಿಧ್ಯ, 1ನೇ ಅಡ್ಡರಸ್ತೆ, ದೊಡ್ಡಕನ್ನೆಲ್ಲಿ, ಬೆಳಿಗ್ಗೆ 11

ಗಿರೀಶ್ ಪರಂಗೋಡು ಸ್ಮರಣೆ. 'ಗಿರಿಯೆತ್ತರ' ಪುಸ್ತಕ ಬಿಡುಗಡೆ: ಅಧ್ಯಕ್ಷತೆ: ಎ.ಎಸ್. ಕೆ.ವಾಸಿಷ್ಠ, ಅತಿಥಿ: ಕೆ.ಎಸ್.ಸಮೀರ್ ಸಿಂಹ, ಯಕ್ಷಗಾನ: ಕರ್ಣ ಭೇದನ, ಆಯೋಜನೆ: ಶ್ರೀರಾಮ ಕಲಾ ಸಂಘ, ಸ್ಥಳ: ಶ್ರೀನಿಧಿ ಶ್ರೀನಿವಾಸ ದೇವಸ್ಥಾನ, ಚುಂಚಘಟ್ಟ. ಸಂಜೆ 4.30

ಹಿಂದೂಸ್ತಾನಿ ಶಾಸ್ತ್ರೀಯ-ದಾಸವಾಣಿ ಕಾರ್ಯಕ್ರಮ: ಸಮೀರ್ ಕುಲಕರ್ಣಿ, ಹಾರ್ಮೋನಿಯಂ: ತೇಜಸ್ ಕಾಟೋಟಿ, ತಬಲಾ: ಪ್ರಹ್ಲಾದ್ ದೇಶಪಾಂಡೆ, ಆಯೋಜನೆ: ವೆಂಕಟೇಶ ಸಂಗೀತ ಸಭಾ ಟ್ರಸ್ಟ್, ಸ್ಥಳ: ಸುಮಧ್ವಧಾಮ, 6ನೇ ಮುಖ್ಯರಸ್ತೆ, ಕೆ.ಎಸ್.ಆರ್.ಟಿ.ಸಿ. ಲೇಔಟ್, ಚಿಕ್ಕಲ್ಲಸಂದ್ರ, ಸಂಜೆ 5.30

ತತ್ತ್ವಧಾರಾ ಪ್ರವಚನಮಾಲಿಕೆ: 'ಗಂಗಾಷ್ಟಕ' ವಿಷಯದ ಬಗ್ಗೆ ಪ್ರವಚನ: ಕೆ.ಎಸ್. ಕಣ್ಣನ್, ಗಾಯನ: ಎಚ್.ಆರ್. ಮೀರಾ, ಪ್ರವಚನಕಾರರು: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಆಯೋಜನೆ: ವಿಷ್ಣುಗುಪ್ತ ವಿಶ್ವವಿದ್ಯಾಪೀಠಮ್, ಸ್ಥಳ: ಶ್ರೀರಾಮಾಶ್ರಮ, ಗಿರಿನಗರ, ಸಂಜೆ 5.30

'ತಂತ್ರೀ-ಮೈತ್ರಿ' ಜುಗಲ್‌ಬಂದಿ ಸಂಗೀತ ಕಛೇರಿ: ಅತಿಥಿ: ಎಂ.ಆರ್.ವಿ ಪ್ರಸಾದ್, ವೀಣೆ: ಡಿ. ಬಾಲಕೃಷ್ಣ, ಗಿಟಾರ್: ಪ್ರಕಾಶ್ ಸೊಂಟಕ್ಕೆ, ಮೃದಂಗ: ಅನಿರುದ್ಧ ಎಸ್. ಭಟ್, ತಬಲಾ: ಆದರ್ಶ ಶೆನಾಯ್, ಆಯೋಜನೆ: ಕಲಾ ಪ್ರೇಮಿ ಫೌಂಡೇಷನ್, ಸ್ಥಳ: ಸೇವಾ ಸದನ ಸಭಾಂಗಣ, ಎಂ.ಎಲ್.ಎ ಕಾಲೇಜು ಎದುರು, 14ನೇ ಕ್ರಾಸ್, ಮಲ್ಲೇಶ್ವರ, ಸಂಜೆ 6.30

'ಅನುಗ್ರಹ' ಪೌರಾಣಿಕ ನಾಟಕ ಪ್ರದರ್ಶನ: ರಚನೆ: ಎಚ್.ಎನ್. ರಾಮಕೃಷ್ಣಪ್ಪ, ನಿರ್ದೇಶನ: ಬಾಷ್ ರಾಘವೇಂದ್ರ, ಆಯೋಜನೆ: ಅಂತರಂಗ ಬಹಿರಂಗ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 7

'ಹರಿವಂಶ' ಧಾರ್ಮಿಕ ಪ್ರವಚನ: ರಾಮವಿಠಲಾಚಾರ್ಯ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Commerical

Vishweshwariah Layout

BDA COMMERCIAL 40X60 Sale KLE Law College Circle South SMV 5th-Block 80ft Road: 9945694783/ 9980433004

Yelahanka

RESIDENTIAL BUILDING with, Commercial Space FOR SALE (Ground & First Floor+ Shop) Sale Price:3.6 Crores, Premium Residential Building FOR SALE (G+4 and Terrace Area.) Sale Price: 14Crores, Other Residential and Commercial Sites Available in Judicial Layout, Call: 9448447360

RENTAL PROPERTIES

Accommodation Available

Commercial

RUNNING XEROX Centre For Rent/ Lease at West of Chord Road. Contact: 9663192081

Flats

J.P.NAGAR 5TH_PHASE, 4_BHK_Flat for RENT, Semi_Furnished, Carparking, Gated_Community. 9078624570, 9902107406.

MALLESWARAM 3BHK Flat.Ground Flor, East Facing. Carparking. Old Flat. Rent 33000/-PM. Call: 9845243757

Industrial And Factory

COLD STORAGE facility for Rent KIADB Dabaspete industrial Area Bangalore, uttarahalli 6.5 acres sale 9845720810.

General

MALUR 3+2 Acres Land for Rent, Suitable for farming, warehouse, bricks factory PH: 9481801053

Accommodation Wanted

Commercial

WANTED FOR RENT 1 BHK, Jayanagar, Shanthinagar, For office, Victory Properties. 7411692219/ 8618576685

House

WANTED FOR RENT 4 BHK, Independent House as per Vaastu, BTM, Jayanagar, JP.Nagar, Dollars Colony. Victory Properties: 7411692219/ 8618576685

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Banashankari

WANTED BDA SITES ANY MEASUREMENT Banashankari 6th Stage Any Block Anjanapura/ JP-Nagar 8th /9th Phase Narayana Nagar/ BCC BCMC Layout Vishveshwaraiah Layout: 9845298419

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

Agricultural Land Converted

Devanahalli

REQUIRED/WANTED AGRICULTURE green zone or converted 4 to 50 acres outright purchase and joint venture for MNC Company and NRI investors in and around Doddaballapura Devanahalli Chikkaballpur Sarjapura Road Hoskote- Chintamani-Malur surroundings, minimum road width 40 feet plus. Payment flexible. Elite Group 9916592400/ 9986682400elitegroupsrealtors@gmail.com

MORE Classifieds Ads on Subsequent Pages

General

General

FOR ANYTHING and Everything in Real Estate, a Leading 35 years Experienced Real estate Company, Invest on Properties and Earn Good Returns. Victory Properties: 7411692219/ 8618576685. info@victoryproperties.in, www.victory properties.in

Industrial & Factory

Mysore Road

WANTED 10000 TO 15000 sqft Land in KUMBULGOUD/ MYSORE Road KIADB/ BDA approved contact 9844128209

Villas/Bunglows

Jayanagar

BUY / Sale / Rent- Prestige Falcon City, Total Environment Mantri Serenity Sobha Indraprastha Purvankara Prestige West Woods Brigade Tata Promont Embassy and many more and several protects Plotted, Apartment and Villa projects in Koramangala, Jayanagar, Basavangudi, RMV Layout, Vijayanagar, Rajajinagar. 9591932400.

PUBLIC NOTICE

UVCE GRADUATES ASSOCIATION
NOTICE IS HEREBY GIVEN THAT the 5th General Meeting (AGM) of the Association is scheduled to be held on Sunday, 27th July, 2025 at 11 AM in the BHive Premium, Church Street, Ashok Nagar, Bengaluru along with SGM. Agenda and the other information can be viewed in the website : www.uvcega.org
Sd/- Secretary
Date: 30-06-2025 Place: Bengaluru

JOB OPPORTUNITIES

Accounts & Finance

LEADING TIMBER Industry Kumbalgodu Near Mysore Road; Requires: Lady Accountant, Sales Man, above 5 years experience, Minimum Degree; Mob: 9886465289

Multiple Vacancy

MULTIPLE JOBS
Business Development Manager/Sales Executive for
1) Small Finance Bank
2) Ed Tech Firm/ Training Academy
3) Ceramics Showroom
4) Advertising Company
5) Employee Transport/ Cab service firm.
Accountant for sales & service firm
1) HSR Location
2) BTM Location
Graphic Designer - Freelancer
Min 1 Yr exp.
Send CV to parabolahr@gmail.com only whatsapp 9019043325

General

V&V GROUP, Bannergatta Road, Wanted MANAGERS, LADY RECEPTIONIST, TELECALLERS, MARKETING EXECUTIVES. Good Salary. Call 99000-54462

HRD & Admin

FEMALE HRD cum Account executive is required for a reputed company located at Rajajinagar with minimum 3-5 years experience in HRD/ Accounts field. Salary based upon experience and calibre. Please apply to sinewave@sinewavegenerators.com Or contact: 9845026794

Marketing & Sales

FEMALE MARKETING executive required for a reputed company located at Rajajinagar with marketing background and good computer knowledge in preparing quotations, good knowledge of English/ Hindi/ Kannada/ Tamil/ Telugu will be an added advantage. Attractive remuneration with sales incentive will be offered. Please apply to sinewave@sinewavegenerators.com Or Contact: 9845026794

IMMEDIATE HIRINGMarketing ExecutiveFor Leading FMCG Company18000 Gross Salary Upto 10000 Incentive + PF + ESIC + Other benefits Location – Bengaluru Contact: 8655684332/8655684328

Teachers/ Professors

REQUIRED HIGHSCHOOL Science and Mathematics Teachers, Academic Co-Ordinator for Vallabha International School, Somanahalli, Kanakapura Road, Bangalore-82 9880439138/ 9591865641

POORNAPRAJNA EDUCATION CENTRE, INDIRANAGAR
(Promoted & Managed by Udupi Shree Adamaru Matha Education Council)
C.A Site No. 48, New Thippasandra, HAL 3rd Stage, Bangalore -75.
English Medium School to be affiliated to CBSE invites application for the following post:
SCHOOL COUNSELLOR
M.Sc/ M A Psychology + 1 yr experience
SPECIAL EDUCATOR
Diploma in special education by rehabilitation council of India/ B Ed in Special Education (RCI number is must)
ADMIN. ASSISTANT
B.Com with Tally ERP 9 + 1 yr experience
Apply immediately to Hon. Secretary. Email: contact.indiranagar@ppec.edu.in

India Literacy Project (ILP)
We're Hiring Teachers
Educational Qualifications:
B.Sc/M.Sc + B.Ed
Job Locations: Bangalore, Bangalore Rural, Ramanagara, Mandya, Mysuru, Kodagu, Shivamogga, Chamarajanagara, Chikkaballapura, Mangaluru, Haveri, Bagalkot, Yadgir and Hassan
Apply Now: Send your resume to:
jobs@ilpnet.org
Whatsapp: 63610 09258

WANTED SCIENCE and Maths (High School), Primary (Maths) Craft, Physical Education, Kindergarten Teachers. Interview on 7/07/25 at 11am. MOTHER'S TOUCH SCHOOL. 9/2,1st main,LIC colony,3rd Block,Jayanagar, Bangalore-11. Contact-8217270243

ALL SUBJECT LADY TEACHERS for primary middle Bhoruka English School 11th Mile Madanayakanahalli Tumkur Road Bengaluru. 9342816044

BUSINESS

Business to Business

Business

V.P. INVESTMENTS:- Free stock market training! Visit us @ 61st cross, Bhashyam circle, Rajajinagar, Bengaluru-10. Take first step towards financial success! Contact: 9743322555, 9071611458

Finance

LOANS AVAILABLE @5% YEARLY INTEREST BUSINESS PROJECT TAKEOVER PERSONAL MORTGAGE BUILDERS HOMELOAN 8787091647 AGENTS WELCOME

WE DO Mortgage, House Purchase, Site Purchase, Construction, Takeover of Loans from all Banks. Contact: 9353705002.

URGENT LOAN AVAIL @ 3.5% PER ANNUM PERSONAL BUSINESS HOUSING TAKE OVER ALL TYPES LOAN SHIVGANGA FINANCE. PHONE: 8826494700.

Business Offers

Business For Sale

SALE 40 years old English medium school in Hennur road. Site 7500sft with 20000sft building .700 students. State syllabus. Rs.18 CR. Arun 9845077299.

EDUCATIONAL

Correspondence Courses

STUDY AT HOME SSLC DIRECT 2nd PUC BA, B.Com, BBA/B.Sc, BCA, BSW, B.LISc, B.Ed/M.Ed, M.LISc, MA/M.Com/M.Sc MBA, MSW/MCA, PG-Diploma Courses. Contact: Manasa Correspondence College. Malleshwaram Circle Bangalore 9880498484/ 9738761169/ 9663555154.

MATRIMONIAL

Grooms Wanted

Hindu

WANTED BRIDEGROOM
Caste No Bar for a Hindhu, Kannada, Highly qualified, Beautiful Good looking girl, preferred NRI, Girl settled in UAE,
Contact No.
87221 23445
95381 23445

Matrimonial Bureaus

ASHIRWAD MATRIMONIAL SERVICE
For all religion seeks alliance for a divorcee girl no issue 40 yrs fair height 5.3 BE working, caste SC AK, caste no bar (required any caste only from Hindu)
Contact:
9632163953
8197824451

PERSONAL

Change of Name

CHANGE OF NAME
I, Pushpalatha Annadurai W/o Annadurai, residing at #1/578, 12th Cross, A Narayanapura, Kamalamma Layout, Dooravaninagar, Bengaluru North, Bengaluru-560016. have changed my name to PUSHPARANI vide affidavit dated 26.06.2025 before notary Puttaramaiah, Bengaluru. Henceforth I shall be called PUSHPARANI only.

CHANGE OF NAME
I, VIJEESH T Residing at No.003, M.S. Paradise, 9th Cross, Kodihalli, Bengaluru-560008 have changed my name to VIJEESH THENINGALEDATHIL vide affidavit dated 21.06.2025 before notary A.R. Muneer Ahmed, Bengaluru. Henceforth I shall be known as VIJEESH THENINGALEDATHIL only.

ADMISSION CORNER

SRI KRISHNA RUKMINI SCHOOL OF LAW
Anandnagar, Bangalore-560024
Admissions are open for Academic Year 2025-2026
Courses: 3 Years of LLB; 5 Years of BA,LLB
For more details
E-mail: director@srsect.edu.in
Contact: 99728 56004

ಹೆಸರು ಬದಲಾವಣೆ
ನಾನು, ಶಿವಕುಮಾರ ಭಟ್, ಎ ವೆಂಕಟ್ರಮಣ ಭಟ್ ಅವರ ಮಗ, ಪ್ರಸ್ತುತ 5–65 ಬಳಂತಿಮುಗೇರು, ಪುಣಚ, ಬಂಟ್ವಾಳ ತಾಲ್ಲೂಕ, ದಕ್ಷಿಣ ಕನ್ನಡ, ಕರ್ನಾಟಕ ದಲ್ಲಿ ವಾಸಿಸುತ್ತಿದ್ದೇನೆ. ನಾನು ನನ್ನ ಹೆಸರನ್ನು ಬಳಂತಿಮೊಗ್ರು ಶಿವಕುಮಾರ್ ಎಂದು ಬದಲಾಯಿಸಿಕೊಳ್ಳುತ್ತಿದ್ದೇನೆ. ಈ ಬಗ್ಗೆ ನಾನು ದಿನಾಂಕ 04/07/2025 ರಂದು ನೋಟರಿ ಎಲ್. ಬಿ. ಅನಸೂಯಮ್ಮ, ಬೆಂಗಳೂರು. ಅವರ ಮುಂದೆ ಅಫಿಡವಿಟ್ ಸಲ್ಲಿಸಿದ್ದೇನೆ.

I, NIRANJAN_BABU S/o. Sathyanarayana Shetty M.A. R/o.#3/2 4th Cross,Nethaji Road,Nagasandra Bangalore`South Tyagarajanagar, Bangalore 560028 have`changed my`Name to NIRANJAN_BABU_M.S. Vide`affidavit dated:4.7.2025 before`Notary S.N.Madhu, Bangalore.

I, SANJANA Kadaba Jayasimha d/o Kadaba Sampath Jayasimha (K.S.Jayasimha), R/at No. 286, 'Champakadhama Manjesha', Road-8, Golden Jubilee Enclave, Defence Colony, Vidyaranyapura, Bangalore -560097 do hereby solemnly state, as per my Aadhar Card my correct name is SANJANA KADABA JAYASIMHA. But in all my educational marks cards my name is inadvertently entered as SANJANA KADABA JAISIMHA. I further state that both these names belongs and refers to one person ie., me only. I further state that I will continue as SANJANA KADABA JAYASIMHA for all future purpose vide affidavit dated 01.07.2025 sworn to Notary.

I, NARAYANASWAMY Markandeya S/o Narayanaswamy Venkateshappa, Aged about 42 Years resident of Mavahalli Village & Post, Kasaba Hobli, Bangarpet Taluk. Kolar District. Have changed my name to Markandeya Narayanaswamy and my father name from Narayanaswamy Muniswamappa to Narayanaswamy Venkateshappa vide affidavit dated 17.06.2025 before Notary M Krishne Gowda Kolar.

DH Classifieds More value, more impact — ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9845114560 | +91 9886213331 | +91 9731810277

ಸಾಲ ತೀರಿಸಲು ಸ್ನೇಹಿತನ ಸುಲಿಗೆ

ಚಿಕ್ಕಜಾಲ ಠಾಣೆ ಪೊಲೀಸರ ಕಾರ್ಯಾಚರಣೆ, ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನೇಹಿತನನ್ನು ಊಟಕ್ಕೆ ಕರೆದೊಯ್ದು ಸುಲಿಗೆ ಮಾಡಿದ್ದ ನಾಲ್ವರು ಆರೋಪಿಗಳನ್ನು ಚಿಕ್ಕಜಾಲ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಜಾಲದ ಅಚಲ್ ನಾನಾ (21), ಪವನ್ ಭಾಸ್ಕರ್ (21), ಆತನ ಸ್ನೇಹಿತರಾದ ಪ್ರೇಮ್ (21), ತರುಣ್ (19) ಬಂಧಿತರು.

ಅಪರಾಧ ಸುದ್ದಿ

ಆರೋಪಿಗಳಿಂದ 93 ಗ್ರಾಂ ಚಿನ್ನಾಭರಣ ಹಾಗೂ ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನ, ಕಾರು, ಚಾಕು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದರು.

ದಾರಿ ಮಧ್ಯೆ ಚಂದನ್ ಮೇಲೆ ಹಲ್ಲೆ ನಡೆಸಿದ್ದ ಆರೋಪಿಗಳು 40 ಗ್ರಾಂ ಉಂಗುರ, ಕೈಯಲ್ಲಿದ್ದ 20 ಗ್ರಾಂ ಚಿನ್ನದ ಕಡಗ ಮತ್ತು 9 ಗ್ರಾಂ ತೂಕದ ಚಿನ್ನದ ಸರ ಕಸಿದುಕೊಂಡು ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

ಆರೋಪಿಗಳ ಪೈಕಿ ಅಚಲ್ ನಾನಾ ಚಿಕ್ಕಜಾಲದಲ್ಲಿ ಕಾಫಿ ಕೆಫೆ ಇಟ್ಟುಕೊಂಡಿದ್ದಾನೆ. ಆತನ ಸ್ನೇಹಿತರಾದ ಪ್ರೇಮ್, ತರುಣ್, ಪವನ್ ಬೇರೆ ಸ್ಥಳಗಳಲ್ಲಿ ಕೆಲಸ ಮಾಡಿಕೊಂಡಿದ್ದರು. ದೂರುದಾರ ಚಂದನ್ ಉದ್ಯಮ ನಡೆಸುತ್ತಿದ್ದಾರೆ.

ಮೇ 7ರಂದು ಅಚಲ್ ನಾನಾ ಎಂಬಾತ ಚಂದನ್‌ಗೆ ಕರೆ ಮಾಡಿ, ಪಾರ್ಟಿಗೆ ಹೋಗೋಣ ಎಂದು ಕರೆದಿದ್ದ. ಅದಕ್ಕೆ ಒಪ್ಪಿದ್ದ ಚಂದನ್, ಆರೋಪಿಗಳು ಹೇಳಿದ್ದ ಸ್ಥಳಕ್ಕೆ ಹೋಗಿದ್ದರು. ಅಲ್ಲಿಂದ ವಿಮಾನ ನಿಲ್ದಾಣ ಸಮೀಪದ ಹೋಟೆಲ್‌ವೊಂದಕ್ಕೆ ಕರೆದೊಯ್ದು ತಡರಾತ್ರಿವರೆಗೂ ಪಾರ್ಟಿ ಮಾಡಿದ್ದರು. ನಂತರ, ವಾಪಸ್ ಬರುವಾಗ ಕಾರಿಗೆ ಯಾರೊ ಹಿಂದಿನಿಂದ ಡಿಕ್ಕಿ ಹೊಡೆದಿದ್ದಾರೆ ಎಂದು ಕಾರು ನಿಲುಗಡೆ ಮಾಡಿದ್ದರು. ಆ ಬಳಿಕ ಬೈಕ್‌ನಲ್ಲಿ ಬಂದು ಇಬ್ಬರು ಆರೋಪಿಗಳು ಚಂದನ್ ಮೇಲೆ ಹಲ್ಲೆ ನಡೆಸಿ, ಸುಲಿಗೆ ಮಾಡಿದ್ದರು. ಸುಲಿಗೆಕೋರರನ್ನು ಕಾರಿನಲ್ಲಿದ್ದ ಇಬ್ಬರು ಹಿಡಿಯುವ ಪ್ರಯತ್ನ ಮಾಡಿರಲಿಲ್ಲ. ಘಟನೆ ಕುರಿತು ಪೊಲೀಸರಿಗೆ ಮಾಹಿತಿ ನೀಡದಂತೆ ಆರೋಪಿಗಳು ಸೂಚಿಸಿದ್ದರು.

ಮನೆಯವರ ಸಲಹೆ ಮೇರೆಗೆ ಚಂದನ್ ದೂರು ನೀಡಿದ್ದರು. ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಇಬ್ಬರು ನಕಲಿ ಜಾಮೀನುದಾರರ ಬಂಧನ

ಬೆಂಗಳೂರು: ನ್ಯಾಯಾಲಯಕ್ಕೆ ಹಾಜರಾಗಿ ಆರೋಪಿಗಳ ಪರ ನಕಲಿ ದಾಖಲೆ ಸಲ್ಲಿಸುತ್ತಿದ್ದ ಇಬ್ಬರನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಿಟಿಎಂ ಲೇಔಟ್‌ನ ಗುರುಪ್ಪನಪಾಳ್ಯದ ಎಂಟನೇ ಹಂತದ ನಿವಾಸಿ ಅಬೀದ್ ವಾಸೀಂ ಹಾಗೂ ಯಶವಂತಪುರ ಪೈಪ್‌ಲೈನ್ ರಸ್ತೆ ಡಿ ಕ್ರಾಸ್ ನಿವಾಸಿ ಆಹ್ಮದ್ ಜುಬೇರ್ ಬಂಧಿತರು. ಆರೋಪಿಗಳಿಂದ ನಕಲಿ ಆಧಾರ್ ಕಾರ್ಡ್, ಆರ್‌ಟಿಸಿ, ಮ್ಯುಟೇಷನ್ ಹಾಗೂ ವಿವಿಧ ಸರ್ಕಾರಿ ಇಲಾಖೆಗಳ ನಕಲಿ ವೇತನ ಚೀಟಿಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

‘ಇಬ್ಬರನ್ನು ಬಂಧಿಸಿ ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಸ್ ಡಿಕ್ಕಿ: ಡೆಲಿವರಿ ಬಾಯ್ ಸಾವು

ಬೆಂಗಳೂರು: ಕೆ.ಜಿ. ರಸ್ತೆಯ ಮೈಸೂರು ಬ್ಯಾಂಕ್ ವೃತ್ತದಲ್ಲಿ ಶನಿವಾರ ಮುಂಜಾನೆ ಕೆಎಸ್‌ಆರ್‌ಟಿಸಿ ಬಸ್ ಹಾಗೂ ದ್ವಿಚಕ್ರ ವಾಹನದ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ದ್ವಿಚಕ್ರ ವಾಹನ ಸವಾರ ಮೃತಪಟ್ಟಿದ್ದಾರೆ.

ನಗರದ ನೀಲಸಂದ್ರದ ನಿವಾಸಿ ಮೊಹಮ್ಮದ್ ಅಫ್ರೋಜ್ (25) ಅವರು ಮೃತಪಟ್ಟವರು.

‘ಫ್ಲಿಪ್‌ಕಾರ್ಟ್ ಸಂಸ್ಥೆಯಲ್ಲಿ ಡೆಲಿವರಿ ಬಾಯ್ ಆಗಿ ಮೊಹಮ್ಮದ್ ಅಫ್ರೋಜ್ ಅವರು ಕೆಲಸ ಮಾಡುತ್ತಿದ್ದರು. ಶನಿವಾರ ಮುಂಜಾನೆ 4.30ರ ಸುಮಾರಿಗೆ ಮೈಸೂರು ಜಂಕ್ಷನ್ ಮೂಲಕ ತಮ್ಮ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು. ಆಗ ವೇಗವಾಗಿ ಬಂದ ದೊಡ್ಡಬಳ್ಳಾಪುರ ಘಟಕಕ್ಕೆ ಸೇರಿದ ಬಸ್, ದ್ವಿಚಕ್ರ ವಾಹನಕ್ಕೆ ಡಿಕ್ಕಿಯಾಗಿದೆ. ಗಂಭೀರವಾಗಿ ಗಾಯಗೊಂಡ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬಸ್ ಚಾಲಕ ಮಂಜುನಾಥ್ ಅವರನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ’ ಎಂದು ಸಂಚಾರ ಪೊಲೀಸರು ಹೇಳಿದರು.

ರೂಪದರ್ಶಿ ಮೇಲೆ ಹಲ್ಲೆ: ದೂರು ದಾಖಲು

ಬೆಂಗಳೂರು: ನಗರದ ಆನಂದರಾವ್ ವೃತ್ತದಲ್ಲಿ ರೂಪದರ್ಶಿಯೊಬ್ಬರ ಮೇಲೆ ಬಸ್ ಸಿಬ್ಬಂದಿ ಹಲ್ಲೆ ನಡೆಸಿದ್ದು, ಈ ಸಂಬಂಧ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಧಾರವಾಡದ ಧ್ರುವ ಅವರು ನೀಡಿದ ದೂರಿನ ಮೇರೆಗೆ ಖಾಸಗಿ ಬಸ್ ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ರೂಪದರ್ಶಿ ಧ್ರುವ ಅವರು ಜುಲೈ 1ರಂದು ಥಾಯ್ಲೆಂಡ್‌ನಿಂದ ನಗರಕ್ಕೆ ಬಂದು ಹೋಟೆಲ್‌ವೊಂದರಲ್ಲಿ ವಾಸ್ತವ್ಯ ಮಾಡಿದ್ದರು. ಅಂದೇ ರಾತ್ರಿ ಹುಬ್ಬಳ್ಳಿಗೆ ಹೋಗಲು ಬಸ್ ಬುಕ್ ಮಾಡಿದ್ದರು. ರಾತ್ರಿ 11.30ರ ಸುಮಾರಿಗೆ ನಿಲ್ದಾಣಕ್ಕೆ ಹೋಗಿ ಬಸ್ ಪಕ್ಕದಲ್ಲೇ ಸಿಗರೇಟ್ ಸೇದುತ್ತಾ ಸ್ನೇಹಿತರ ಜತೆಗೆ ಮಾತನಾಡುತ್ತಾ ನಿಂತಿದ್ದರು. ಆಗ ಸಿಬ್ಬಂದಿಯೊಬ್ಬ ಬಂದು ಬಸ್ ಹೊರಡುವ ಸಮಯವಾಗಿದೆ ಎಂದು ಹೇಳಿ ಧ್ರುವ ಅವರ ಕೈಗೆ ಹೊಡೆದಿದ್ದಾನೆ. ಬಳಿಕ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದೆ. ಅದು ವಿಕೋಪಕ್ಕೆ ಹೋಗಿ ಬಸ್‌ನ ಸಿಬ್ಬಂದಿ ಮರದ ಕಟ್ಟಿಗೆಯಿಂದ ಧ್ರುವ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ದೂರು ನೀಡಲಾಗಿದೆ.

ಹಲ್ಲೆಯಿಂದ ಎದೆ, ಮುಖ, ತಲೆಗೆ ಗಾಯವಾಗಿದೆ. ಪಾಸ್‌ಪೋರ್ಟ್, ನಗದು, ದುಬಾರಿ ಮೌಲ್ಯದ ವಾಚ್ ಇದ್ದ ಬ್ಯಾಗ್ ಕಸಿದುಕೊಳ್ಳಲಾಗಿದೆ ಎಂದು ಹಲ್ಲೆಗೆ ಒಳಗಾದ ಧ್ರುವ ಅವರು ದೂರು ನೀಡಿದ್ದಾರೆ.

ರಸ್ತೆಯ ಮೇಲೆ ಚರಂಡಿ ನೀರು: ನಿತ್ಯ ಕಿರಿಕಿರಿ

ಪ್ರಜಾವಾಣಿ ವಾರ್ತೆ



ಬಳಗೆರೆಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಮೇಲೆ ಚರಂಡಿ ನೀರು ಹರಿಯುತ್ತಿದೆ

ಕೆ.ಆರ್.ಪುರ: ಗುಂಜೂರಿನಿಂದ ಬಳಗೆರೆಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಲ್ಲಿ ಚರಂಡಿಯ ಕೊಳಚೆ ನೀರು ಹರಿಯುತ್ತಿದ್ದು, ಜನರಿಗೆ ತೊಂದರೆ ಆಗಿದೆ.

ರಸ್ತೆಯ ಎರಡು ಬದಿಗಳಲ್ಲಿನ ಚರಂಡಿ ತುಂಬಿ ಹರಿಯುತ್ತದೆ. ಇದು ಶ್ರೀಸೋಮನಾಥ ದೇವಸ್ಥಾನ, ಮೈತ್ರಿ ಅಪಾರ್ಟ್‌ಮೆಂಟ್ ಬಳಿ ರಸ್ತೆಯುದ್ದಕ್ಕೂ ಹರಿಯುತ್ತಿದೆ. ಮುಖ್ಯರಸ್ತೆ ಹೊಂದಿಕೊಂಡಂತೆ ಹತ್ತಕ್ಕೂ ಹೆಚ್ಚು ಅಪಾರ್ಟ್‌ಮೆಂಟ್‌ಗಳಿವೆ. ಚರಂಡಿ ನೀರಿನಿಂದ ರೋಗ ಹರಡುವ ಭೀತಿ ಎದುರಾಗಿದೆ. ‘ಈ ಚರಂಡಿಗೆ ಬಳಗೆರೆ ಸುತ್ತಲಿನ ರಾಜಕಾಲುವೆ, ವಸತಿ ಪ್ರದೇಶಗಳಿಂದ ಕೊಳಚೆ ನೀರು ಹರಿಯುತ್ತದೆ’ ಎಂದು ಸ್ಥಳೀಯರು ದೂರಿದರು.

ಕೆಲ ಭೂಮಾಲೀಕರು ರಸ್ತೆ ಅಕ್ಕ ಪಕ್ಕದಲ್ಲಿ ಬಡಾವಣೆಗಳನ್ನು ನಿರ್ಮಾಣ ಮಾಡಿಕೊಂಡು ರಸ್ತೆ ಮತ್ತು ಚರಂಡಿ ಜಾಗವನ್ನು ಅತಿಕ್ರಮಿಸಿಕೊಂಡಿದ್ದಾರೆ. ನೀರು ಮುಂದಕ್ಕೆ ಹೋಗದಂತೆ ಚರಂಡಿಯನ್ನೇ ಮುಚ್ಚಿದ್ದಾರೆ. ಅಧಿಕಾರಿಗಳು ಭೂಮಾಲೀಕರೊಂದಿಗೆ ಶಾಮೀಲಾಗಿ ಚರಂಡಿ ನಿರ್ಮಿಸದಂತೆ ತಡೆಯುತ್ತಿದ್ದಾರೆ ಎಂದು ಅಪಾರ್ಟ್‌ಮೆಂಟ್‌ವೊಂದರ ನಿವಾಸಿಗಳು ದೂರಿದರು.

ಈ ಬಗ್ಗೆ ಬಿಬಿಎಂಪಿಯ ಇಇ ರಾಘವೇಂದ್ರ, ಎಇ ಬಸವರಾಜ, ರವಿಕುಮಾರ್, ಗುರುರಾಜ್ ಅವರಿಗೆ ಹಲವಾರು ಬಾರಿ ಮನವಿ ಮಾಡಿದರೂ ನಿರ್ಲಕ್ಷ್ಯ ತೋರಿದ್ದಾರೆ.

ಶಾಸಕಿ ಮಂಜುಳಾ ಲಿಂಬಾವಳಿ ಅವರೂ ರಸ್ತೆ ಪರಿಶೀಲನೆ ನಡೆಸಿ ಸಮಸ್ಯೆ ಪರಿಹರಿಸುವಂತೆ ಸಂಬಂಧಿಸಿದವರಿಗೆ ತಿಳಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಇದೇ ರೀತಿ ಮುಂದುವರಿದರೆ ಪ್ರತಿಭಟನೆ ನಡೆಸಲಾಗುವುದು ಎಂದು ಸ್ಥಳೀಯ ಮುಖಂಡ ಮನೋಹರ್ ರೆಡ್ಡಿ ಆಕ್ರೋಶ ವ್ಯಕ್ತಪಡಿಸಿದರು.





ಬೇಸಾಯ ಯುವಜನ ಬೇಕಾಗಿದ್ದಾರೆ!

ಕೃಷಿಯಿಂದ ದೂರವಾಗುತ್ತಿರುವ ಯುವ ಜನತೆ; ರೈತನ ಸರಾಸರಿ ವಯಸ್ಸು 51 ವರ್ಷ



ಕಲಬುರಗಿಯ ರಾಜಾಪುರ ಬಳಿ ಶನಿವಾರ ಕೃಷಿ ಚಟುವಟಿಕೆಯಲ್ಲಿ ತೊಡಗಿರುವ ರೈತರು. ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

• ಬಿ.ವಿ. ಶ್ರೀನಾಥ್

ಬೆಂಗಳೂರು: ಚಿಕ್ಕಬಳ್ಳಾಪುರ ಜಿಲ್ಲೆ ವೀರಮ್ಮನಹಳ್ಳಿಯ ರೈತ ತಿಮ್ಮಯ್ಯನಿಗೆ ಏನು ಮಾಡಬೇಕು ಎಂದೇ ತೋಚುತ್ತಿಲ್ಲ. ಮಳೆ ಬಿದ್ದಿದೆ. ಉಳಲು ಎತ್ತಿಲ್ಲ. ಟ್ರ್ಯಾಕ್ಟರ್ ಕರೆಸಿ ಹೊಲ ಉಳುಮೆ ಮಾಡಿಸಬೇಕು. ಬದು ಹಸನು ಮಾಡಬೇಕು, ಗೊಬ್ಬರ ಅಣಿ ಮಾಡಬೇಕು, ಬಿತ್ತನೆ ಬೀಜ ತರಬೇಕು. ಅವಕ್ಕೆಲ್ಲ ಹಣ ಹೊಂದಿಸಬೇಕು. ರಾಶಿ ರಾಶಿ ಕೆಲಸ. ವರ್ಷದ ಪ್ರತಿ ಋತುವಿನಲ್ಲೂ ಉಳುಮೆಗೆ ಸಂಬಂಧಿಸಿದ ಕೆಲಸಗಳು ಹೀಗೇ ಇರುತ್ತವೆ. ಆದರೆ, 60 ವರ್ಷ ಸಮೀಪಿಸುತ್ತಿರುವ ತಿಮ್ಮಯ್ಯನಿಗಾಗಲಿ, ಅವರ ಪತ್ನಿಗಾಗಲಿ, ಮೊದಲಿನಂತೆ ಕೆಲಸ ಮಾಡಲು ಆಗುತ್ತಿಲ್ಲ.

ದಂಪತಿಗೆ ಒಬ್ಬ ಮಗನಿದ್ದಾನೆ. ಡಿಗ್ರಿ ಪೂರೈಸಿ ಉದ್ಯೋಗದ ಹುಡುಕಾಟದಲ್ಲಿದ್ದಾನೆ. ವ್ಯವಸಾಯ ತನ್ನಿಂದಾಗದ, ತನಗೆ ಇಷ್ಟವಿಲ್ಲದ ಕೆಲಸ ಎಂದು ತೀರ್ಮಾನಿಸಿ, ಮನೆಯಲ್ಲಿ ಅದನ್ನು ಹೇಳಿಯೂ ಬಿಟ್ಟಿರುವ ಆತ, ಬೇಸಾಯದ ಚಟುವಟಿಕೆಗಳಿಂದ ದೂರವೇ ಇರುತ್ತಾನೆ. ಆದಕ್ಕೆ ಅನಿವಾರ್ಯವಾಗಿ, ತಿಮ್ಮಯ್ಯ ಮತ್ತು ಪತ್ನಿ ಸೇರಿ ತಮ್ಮಿಂದಾದಷ್ಟು ಮಟ್ಟಿಗೆ ಬೇಸಾಯದ ಬಂಡಿಯನ್ನು ಎಳೆಯುತ್ತಿದ್ದಾರೆ.

ಇದು ಒಬ್ಬ ರೈತನ, ಒಂದು ಊರಿನ ಕಥೆಯಷ್ಟೇ ಅಲ್ಲ; ಮಳೆಯಾಶ್ರಿತ ಬೇಸಾಯ ಆಗಿರಲಿ, ನೀರಾವರಿ ಆಗಲಿ, ಹೊಲ, ಗದ್ದೆ, ತೋಟಗಳಲ್ಲಿ ದುಡಿಯುವ ದೇಶದ ಬಹುತೇಕರು ಮಧ್ಯವಯಸ್ಕರು ಇಲ್ಲವೇ ಕೂದಲು ಹಣ್ಣಾದ ವೃದ್ಧರಾಗಿದ್ದಾರೆ. ಬೇಸಾಯದಲ್ಲಿ ಯುವಜನರನ್ನು ಕಾಣುವುದೇ ಅಪರೂಪ ಎನ್ನುವಂತಾಗಿದೆ.

ಜಗತ್ತಿನಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶ ಭಾರತ. ದೇಶದ 146 ಕೋಟಿ ಮಂದಿಗೆ ಅಗತ್ಯವಾದ ಬೃಹತ್ ಪ್ರಮಾಣದ ಆಹಾರ ಧಾನ್ಯಗಳನ್ನು ಬೆಳೆಯುವುದು ಸುಲಭದ ಕಾರ್ಯ ಅಲ್ಲ. ಜತೆಗೆ, ಬೇಸಾಯ ಅತಿ ಹೆಚ್ಚು ದೈಹಿಕ ಶ್ರಮವನ್ನು ಬೇಡುವ ಕೆಲಸ. ಈ ದೃಷ್ಟಿಯಿಂದ ಕೃಷಿಗೆ ಯುವಜನರ ಅಗತ್ಯವಿದೆ. ಆದರೆ, ಸರ್ಕಾರದ ಅಂಕಿಅಂಶಗಳು, ವಿವಿಧ ಸಮೀಕ್ಷೆಗಳು ವ್ಯತಿರಿಕ್ತವಾದ ಕತೆಯನ್ನು ಹೇಳುತ್ತಿವೆ.

2003ರ ರಾಷ್ಟ್ರೀಯ ಯುವನೀತಿಯ ಪ್ರಕಾರ, ಯುವಜನತೆ ಎಂದರೆ, 13–35ರ ನಡುವಿನ ವಯಸ್ಸಿನವರು. 2014ರಲ್ಲಿ ಅದನ್ನು ಬದಲಾಯಿಸಿ, 15–29ರ ನಡುವಿನ ವಯಸ್ಸಿನವರನ್ನು ಯುವಜನ ಎನ್ನಲಾಯಿತು. ಭಾರತದ ಜನಸಂಖ್ಯೆಯಲ್ಲಿ ಸದ್ಯ ಶೇ 27.2ರಷ್ಟು (2021) ಮಂದಿ ಯುವಜನರಿದ್ದಾರೆ.

ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಇನ್‌ಪುಟ್ ಸರ್ವೆಯ ಭಾಗವಾಗಿ ರೈತರ ವಯಸ್ಸನ್ನು ಸಂಗ್ರಹಿಸಲಾಗಿತ್ತು. ದೇಶದ ರೈತರ ಪೈಕಿ 41–50ರ ವಯಸ್ಸಿನ ನಡುವೆ ಇರುವವರು ಶೇ 32.1ರಷ್ಟಿದ್ದರೆ, 50–60 ವರ್ಷ ವಯಸ್ಸಿನ ನಡುವೆ ಇರುವವರು ಶೇ 34.4ರಷ್ಟಿದ್ದಾರೆ. ಭಾರತದ ರೈತನ ಸರಾಸರಿ ವಯಸ್ಸು 51 ವರ್ಷ. ಇದು ದೇಶದ ಆಹಾರ ಭದ್ರತೆ ಮತ್ತು ಕೃಷಿಯ ಭವಿಷ್ಯದ ದೃಷ್ಟಿಯಿಂದ ಆತಂಕದ ವಿಚಾರವಾಗಿದೆ. ಭಾರತವಷ್ಟೇ ಅಲ್ಲ, ಅನೇಕ ದೇಶಗಳಲ್ಲಿ ಇದೇ ಸ್ಥಿತಿ ಇದೆ. ಜಪಾನ್‌ನಲ್ಲಿ ರೈತನ ಸರಾಸರಿ ವಯಸ್ಸು 68.7 ಆಗಿದ್ದರೆ, ಅಮೆರಿಕದಲ್ಲಿ 58.1 ವರ್ಷ ಆಗಿದೆ; ಯುರೋಪ್‌ನ ಪ್ರತಿ ಮೂವರು ರೈತರಲ್ಲಿ ಒಬ್ಬರ ವಯಸ್ಸು 65 ಆಗಿರುತ್ತದೆ.

ಕೃಷಿ ಒಲ್ಲೆ ಎನ್ನುತ್ತಿರುವವರ ಸಂಖ್ಯೆ ಹೆಚ್ಚಳ: 12ನೇ ಶಿಕ್ಷಣ ಸ್ಥಿತಿಗತಿ ವಾರ್ಷಿಕ ವರದಿಗಾಗಿ ಸಮೀಕ್ಷೆ ಮಾಡುವಾಗ, ದೇಶದ ಯುವಜನರ ಭವಿಷ್ಯದ ಆಶಯಗಳ ಬಗ್ಗೆಯೂ ಪ್ರಶ್ನೆಗಳನ್ನು ಕೇಳಲಾಗಿತ್ತು. ಯುವಜನರ ಪೈಕಿ ಶೇ 42ರಷ್ಟು ಮಂದಿ ವಿವಿಧ ಉದ್ಯೋಗಗಳಲ್ಲಿ ತೊಡಗಿದ್ದು, ಅವರಲ್ಲಿ ಶೇ 79ರಷ್ಟು ಮಂದಿ ಕೃಷಿಯಲ್ಲಿ ತೊಡಗಿದ್ದಾರೆ. ಆದರೆ, ಅವರ ಪೈಕಿ ರೈತರಾಗಿ ಮುಂದುವರಿಯುವ ಬಯಕೆ ವ್ಯಕ್ತಪಡಿಸಿದ್ದವರು ಶೇ 1.2ಷ್ಟು ಮಂದಿ ಮಾತ್ರ. ಕೃಷಿಕರ ಪೈಕಿ ಬಹುತೇಕರು ಬೇರೆ ಕ್ಷೇತ್ರಗಳಿಗೆ ವಲಸೆ ಹೋಗುವ ಇರಾದೆ ಹೊಂದಿದ್ದರೆ, ಉಳಿದವರ ಪೈಕಿ ಕೆಲವರು ತಮ್ಮ ಪೂರ್ವಿಕರ ವೃತ್ತಿ ಎಂತಲೂ, ಕೆಲವರು ಜಮೀನು ಇದೆ ಎನ್ನುವ ಅನಿವಾರ್ಯದಿಂದಲೂ ಕಸುಬು ಮುಂದುವರಿಸುತ್ತಿದ್ದಾರೆ.

‘ಕೃಷಿ ಉತ್ಪನ್ನಗಳಿಗೆ ಸರಿಯಾದ ಧಾರಣೆ ಸಿಗದಿರುವುದು, ಕೃಷಿಯಿಂದ ಆದಾಯ ಇಲ್ಲದಿರುವುದೇ ಯುವಜನರು ಸಾಗುವಳಿಯಿಂದ ವಿಮುಖವಾಗಲು ಪ್ರಮುಖ ಕಾರಣ’ ಎನ್ನುತ್ತಾರೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಕಿಲ್ಲೂರು ಗ್ರಾಮದ ಬಂಗಾಡಿಯ ಭತ್ತದ ತಳಿ ಸಂರಕ್ಷಕ ಹಾಗೂ ಬೇಸಾಯ ತಜ್ಞ ಬಿ.ಕೆ. ದೇವರಾವ್.

ವರ್ಷದಿಂದ ವರ್ಷಕ್ಕೆ ಗ್ರಾಮೀಣ ಭಾಗದ ಯುವಜನರು ಹಳ್ಳಿಗಳನ್ನು ತೊರೆದು ಬದುಕು ಅರಸಿ ನಗರಗಳಿಗೆ ವಲಸೆ ಹೋಗುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಜಗತ್ತಿನ ಅನೇಕ ದೇಶಗಳಲ್ಲಿ ಇದೇ ಪರಿಸ್ಥಿತಿ ಇದೆ. ಆಫ್ರಿಕಾ, ಏಷ್ಯಾದ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ, ಕಡಿಮೆ ಮತ್ತು ಮಧ್ಯಮ ಆದಾಯದ ರಾಷ್ಟ್ರಗಳಲ್ಲಿ ಕೃಷಿ ತೊರೆಯುವವರ ಸಂಖ್ಯೆ ಹೆಚ್ಚಾಗಿದೆ. ಯುವಜನರು ಕೃಷಿಯ ಬಗ್ಗೆ ಆಸಕ್ತಿ ವಹಿಸದೇ ಹಿರಿಯರು, ವಯಸ್ಸಾದವರು ಮಾತ್ರ ಅನಿವಾರ್ಯವಾಗಿ ಕೃಷಿಗೆ ಅಂಟಿಕೊಂಡಿದ್ದಾರೆ. ಹೀಗಾಗಿ ಜಾಗತಿಕ ಮಟ್ಟದಲ್ಲಿ ರೈತರ ಸರಾಸರಿ ವಯಸ್ಸು ಹೆಚ್ಚಾಗುತ್ತಿದೆ.

‘ಕೃಷಿ ಬದುಕು ಅನಿಶ್ಚಿತ. ರೈತರಿಗೆ ಕನ್ಯೆ ಸಿಗುವುದೂ ಕಷ್ಟ ಎಂದು ಯುವಕರು ಕೃಷಿಯಲ್ಲಿ ತೊಡಗಿಕೊಳ್ಳಲು ಹಿಂದೇಟು ಹಾಕುತ್ತಾರೆ. ಕಸುಬು ಲಾಭದಾಯಕವಾದಾಗ ಮಾತ್ರ ಯುವಜನರು ಆಕರ್ಷಿತರಾಗುತ್ತಾರೆ’ ಎನ್ನುತ್ತಾರೆ ಧಾರವಾಡದ ‘ನೆಲ–ಜಲ ನಿರ್ವಹಣಾ ಸಂಸ್ಥೆ’ಯ ಸಮಾಲೋಚಕ ಸುರೇಶ ಕುಲಕರ್ಣಿ.

1970ರಲ್ಲಿ ಗ್ರಾಮೀಣ ಭಾಗದ ಕುಟುಂಬಗಳ ಒಟ್ಟು ಆದಾಯದಲ್ಲಿ ನಾಲ್ಕರಲ್ಲಿ ಮೂರನೇ ಭಾಗದಷ್ಟು ಕೃಷಿಯಿಂದ ಬರುತ್ತಿತ್ತು. 45 ವರ್ಷಗಳ ನಂತರ, 2015ರ ಹೊತ್ತಿಗೆ ಈ ಪ್ರಮಾಣವು ಮೂರನೇ ಒಂದಕ್ಕಿಂತಲೂ ಕಡಿಮೆ ಆಗಿತ್ತು. ಮತ್ತೊಂದು ಪ್ರಮುಖ ವಿಚಾರವೆಂದರೆ, ಕೃಷಿ ಆದಾಯದಲ್ಲಿಯೂ ಅತಿ ಸಣ್ಣ ಹಿಡುವಳಿದಾರರು, ಸಣ್ಣ ಹಿಡುವಳಿದಾರರು ಮತ್ತು ದೊಡ್ಡ ಹಿಡುವಳಿದಾರರ ನಡುವೆ ಭಾರಿ ಅಂತರ ಇದೆ ಎಂದು ಸಮೀಕ್ಷೆಯೊಂದು ಹೇಳಿದೆ.

ದೇಶದ ರೈತರಲ್ಲಿ ಶೇ 86ರಷ್ಟು ಮಂದಿ ಸಣ್ಣ ರೈತರಾಗಿರುವುದರಿಂದ (ಒಂದು ಹೆಕ್ಟೇರ್‌ಗಿಂತ ಕಡಿಮೆ ಇರುವವರು) ಕೃಷಿ ಅವಲಂಬಿತರ ಪೈಕಿ ಹೆಚ್ಚು ಮಂದಿ ಕಡಿಮೆ ಆದಾಯದಲ್ಲಿಯೇ ಬದುಕುತ್ತಿದ್ದಾರೆ. ಇಂಥ ಸಂದರ್ಭಗಳಲ್ಲಿ ಕುಟುಂಬದ ವೆಚ್ಚಗಳನ್ನು ನಿಭಾಯಿಸಲು ರೈತ ಕುಟುಂಬಗಳು ಅನಿವಾರ್ಯವಾಗಿ ಸಾಲದ ಮೊರೆ ಹೋಗುತ್ತಿವೆ. ಸಮೀಕ್ಷೆಯ ಪ್ರಕಾರ, ಕೃಷಿ ಕುಟುಂಬಗಳ ಸಾಲದ ಪ್ರಮಾಣವು ಅವರ ತಿಂಗಳ ಆದಾಯಕ್ಕಿಂತ ಸುಮಾರು ಏಳು ಪಟ್ಟು ಹೆಚ್ಚಿದೆ. ಕೃಷಿ ಅಂದರೆ ಪ್ರತಿಫಲ ಇಲ್ಲದ ದುಡಿಮೆ ಮತ್ತು ಅದು ಗೌರವಯುತವಾದ ಕೆಲಸ ಅಲ್ಲ ಎನ್ನುವ ಭಾವನೆಯೂ ಅನೇಕ ಯುವಕರಲ್ಲಿದೆ.

‘ನಗರದಲ್ಲಿ ದುಡಿಯುವ ಯುವಕರಿಗೆ ಸಿಗುವ ಸಾಮಾಜಿಕ ಸ್ಥಾನಮಾನ ಹಳ್ಳಿಯಲ್ಲಿ ಕೆಲಸ ಮಾಡುವ ಯುವಕರಿಗೆ ಇಲ್ಲ. ಇದೇ ಕಾರಣಕ್ಕೆ ಯುವ ಪೀಳಿಗೆ ಕಡಿಮೆ ಸಂಬಳ ದೊರೆತರೂ, ನಗರಗಳತ್ತ ಮುಖ ಮಾಡುತ್ತಿದೆ. ಕೃಷಿ ಕೂಲಿ ಕಾರ್ಮಿಕರು ಕೃಷಿ ಕೆಲಸ ಬಿಟ್ಟು ನಗರಗಳಲ್ಲಿನ ಸಣ್ಣಪುಟ್ಟ ಕೆಲಸಗಳಿಗೆ ತೆರಳುತ್ತಿದ್ದಾರೆ’ ಎಂದು ಚನ್ನಗಿರಿಯ ರೈತ ಮುಖಂಡ ತೇಜಸ್ವಿ ಪಟೇಲ್ ವಿಶ್ಲೇಷಿಸುತ್ತಾರೆ.

ಭಾರತವು ಹೊಸ ಆರ್ಥಿಕ ನೀತಿಗಳನ್ನು ಅಳವಡಿಸಿಕೊಂಡ ನಂತರದ ಮೊದಲ ಎರಡು ದಶಕಗಳಲ್ಲಿ 1.5 ಕೋಟಿ ರೈತರು ಕೃಷಿಯಿಂದ ದೂರ ಸರಿದಿದ್ದಾರೆ. ದಿನಕ್ಕೆ 2,000 ರೈತರು ಬೇಸಾಯದಿಂದ ವಿಮುಖರಾಗುತ್ತಿದ್ದಾರೆ.

ಯುವಜನರ ಸಂಖ್ಯೆ ಇಳಿಮುಖ: ಗ್ರಾಮೀಣ ಭಾಗದ ಶೇ 60ರಷ್ಟು ಮಂದಿ ವ್ಯವಸಾಯದಿಂದಲೇ ಬದುಕುತ್ತಿದ್ದರೂ, ಶೇ 5ರಷ್ಟು ಗ್ರಾಮೀಣ ಯುವಕರು ಮಾತ್ರ ವ್ಯವಸಾಯದಲ್ಲಿ ತೊಡಗಿದ್ದಾರೆ. ದೇಶದಲ್ಲಿ ಯುವಜನರ ಸಂಖ್ಯೆ ಕುಸಿಯುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಯುವ ಕೃಷಿಕರ ಸಂಖ್ಯೆ ಮತ್ತಷ್ಟು ಕುಸಿಯುವ ಸಾಧ್ಯತೆ ಇದೆ. ಗ್ರಾಮೀಣ ಪ್ರದೇಶದ ಯುವಜನರು ಕೃಷಿಯಲ್ಲೂ ತೊಡಗುತ್ತಿಲ್ಲ. ಇನ್ನೊಂದೆಡೆ, ಅವರಿಗೆ ತಾವಿರುವ ಪ್ರದೇಶಗಳಲ್ಲಿ ಜೀವನೋಪಾಯದ ಆಯ್ಕೆಗಳು ಹೆಚ್ಚಾಗಿಲ್ಲ. ಇದು ಗ್ರಾಮೀಣ ಯುವಜನರ ನಿರುದ್ಯೋಗಕ್ಕೆ ಕಾರಣವಾಗುತ್ತಿದೆ.

ದೇಶದಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯಗಳಾದ ಉತ್ತರ ಪ್ರದೇಶ ಮತ್ತು ಬಿಹಾರದಂಥ ರಾಜ್ಯಗಳ ಯುವಕರು ದೇಶದ ಬೇರೆ ಬೇರೆ ರಾಜ್ಯಗಳಿಗೆ ತೆರಳಿ ಕೂಲಿ ಕಾರ್ಮಿಕರಾಗಿ ಬದುಕುತ್ತಿರುವುದು ಇಂಥದ್ದೇ ಬೆಳವಣಿಗೆಯ ಫಲ. ಇದೇ ಕಾರಣಕ್ಕೆ 2030ರ ಹೊತ್ತಿಗೆ ಕೃಷಿಯೇತರ ವಲಯಗಳಲ್ಲಿ ವಾರ್ಷಿಕವಾಗಿ 78.5 ಲಕ್ಷ ಉದ್ಯೋಗ ಸೃಷ್ಟಿ ಮಾಡಬೇಕು ಎಂದು 2023–24ರ ಕೇಂದ್ರ ಸರ್ಕಾರದ ಆರ್ಥಿಕ ಸಮೀಕ್ಷೆಯೇ ಹೇಳಿದೆ. ಅವರನ್ನು ಯಾವ ವಲಯದಲ್ಲಿ ತೊಡಗಿಸಬೇಕು ಎನ್ನುವುದು ಸರ್ಕಾರದ ಮುಂದಿನ ದೊಡ್ಡ ಸವಾಲಾಗಿದೆ.

ಯುವಕರನ್ನು ಸೆಳೆಯುವುದು ಹೇಗೆ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಕೃಷಿ ಕ್ಷೇತ್ರವನ್ನು ಅಭಿವೃದ್ಧಿಯ ಎಂಜಿನ್ ಎಂದು 2025–26ರ ಬಜೆಟ್‌ನಲ್ಲಿ ಬಣ್ಣಿಸಿದ್ದರು. ಭಾರತವನ್ನು ವಿಶ್ವದ ಆಹಾರದ ಬುಟ್ಟಿಯನ್ನಾಗಿ (ಫುಡ್ ಬ್ಯಾಸ್ಕೆಟ್) ಮಾಡಬೇಕು ಎನ್ನುವ ಆಶಯವನ್ನೂ ವ್ಯಕ್ತಪಡಿಸಿದ್ದರು. ಆದರೆ, ಕೇಂದ್ರ ಸರ್ಕಾರದಿಂದಾಗಲಿ, ರಾಜ್ಯ ಸರ್ಕಾರದಿಂದಾಗಲಿ ನಿರ್ಣಾಯಕವಾದ ಕ್ರಮಗಳು ಆಗಿಲ್ಲ ಎಂದು ಪ್ರಗತಿಪರ ಕೃಷಿಕರು ಆರೋಪಿಸುತ್ತಿದ್ದಾರೆ.

‘ಕೃಷಿಯಿಂದ ಯುವಜನರು ದೂರವಾಗುವುದಕ್ಕೆ ಸರ್ಕಾರದ ನೀತಿ ಕಾರಣ. ಕೈಗಾರಿಕೆಗಳಿಗೆ ಪ್ರಾಧಾನ್ಯ ನೀಡುವ ಸರ್ಕಾರ ಕೃಷಿಯನ್ನು ಕಡೆಗಣಿಸಿದೆ. ಈ ಧೋರಣೆ ಮೊದಲು ಬದಲಾಗಬೇಕು. ವಿದ್ಯೆ ಕಲಿತವರೂ ಕೃಷಿಯತ್ತ ಆಕರ್ಷಿತರಾಗುವಂತೆ ನೀತಿ ರೂಪಿಸಬೇಕು’ ಎನ್ನುವುದು ಕೃಷಿ ತಜ್ಞ ಬಿ.ಕೆ. ದೇವರಾವ್ ಅವರ ಒತ್ತಾಯ.

ಒಂದು ಕಾಲಕ್ಕೆ ಪ್ರಕೃತಿಗೆ ಹತ್ತಿರವಾದ ಬದುಕಿನ ಶೈಲಿಯನ್ನೊಳಗೊಂಡಿದ್ದ ಕೃಷಿಯು ಇಂದು ಅತ್ಯಂತ ಸಂಕೀರ್ಣವಾದ ವೃತ್ತಿಯಾಗಿದೆ. ವ್ಯವಸಾಯ ಕ್ಷೇತ್ರ ಈ ಬಿಕ್ಕಟ್ಟಿನಿಂದ ಹೊರಬರಬೇಕಾದರೆ, ಸರ್ಕಾರದ ನೆರವು ಬೇಕು. ಮುಖ್ಯವಾಗಿ, ವ್ಯವಸಾಯ ಕ್ಷೇತಕ್ಕೆ ಹೆಚ್ಚು ಮಂದಿ ಯುವ, ಕೌಶಲಯುಕ್ತ ರೈತರ ಅಗತ್ಯವಿದೆ. ಯುವಜನರು ಕೃಷಿಯನ್ನು ನಂಬಿ ಘನತೆಯಿಂದ ಬದುಕಲು ಸಾಧ್ಯವಾಗುವಂಥ ವಾತಾವರಣ ನಿರ್ಮಿಸುವುದು ಮುಖ್ಯವಾಗಿದೆ.

‘ಸರ್ಕಾರಗಳು ಕೃಷಿಗೆ ಹೆಚ್ಚು ಒತ್ತು ಕೊಟ್ಟಿಲ್ಲ. ಅದಕ್ಕಾಗಿ ಯುವಕರು ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಬೇಸಾಯಕ್ಕೆ ಉತ್ತೇಜನ ಸಿಗಬೇಕು, ಅದರ ವಿವಿಧ ಆಯಾಮಗಳ ಬಗ್ಗೆ ಯುವಕರಿಗೆ ಪ್ರಾಯೋಗಿಕ ತರಬೇತಿ ನೀಡಬೇಕು’ ಎಂದು ಎಂ.ಎಸ್ಸಿ, ಎಂ.ಇಡಿ ಪದವೀಧರರಾಗಿರುವ ರಾಯಚೂರಿನ ಯುವ ರೈತ ಹರ್ಷಾ ಪೂರ್ತಿಪಲಿ ಹೇಳುತ್ತಾರೆ.

ಇಂದು ಜನರ ಜೀವನ ಶೈಲಿಯಲ್ಲಿ ಅಗಾಧವಾದ ಬದಲಾವಣೆಗಳಾಗಿವೆ. ಕುಟುಂಬಗಳ ವೆಚ್ಚದ ಪ್ರಮಾಣದಲ್ಲಿ ಆಹಾರದ ವೆಚ್ಚಕ್ಕಿಂತಲೂ ಇತರೆ ವೆಚ್ಚಗಳ ಪಾಲು ಹೆಚ್ಚಾಗುತ್ತಿದೆ. ತಾಂತ್ರಿಕತೆ ಮತ್ತು ತಾಂತ್ರಿಕ ಸಾಧನಗಳು ಜೀವನದ ಅವಿಭಾಜ್ಯ ಅಂಗವಾಗಿವೆ. ಮೊಬೈಲ್, ಟಿವಿ, ಫ್ರಿಜ್, ಬೈಕ್, ಕಾರು ಕೂಡ ಕುಟುಂಬದ ಅಗತ್ಯಗಳ ಸಾಲಿನಲ್ಲಿ ಸ್ಥಾನ ಪಡೆದಿವೆ. ಕೃಷಿಯಿಂದಲೂ ತಾವು ಬಯಸಿದ ಉತ್ತಮ ಜೀವನ ಸಾಧ್ಯ ಎಂದು ಭರವಸೆ ಮೂಡಿದರೆ ಯುವಕ ಯುವತಿಯರು ಕೃಷಿಯನ್ನು ಜೀವನ ಮಾರ್ಗವನ್ನಾಗಿ ಒಪ್ಪಿ, ಅಪ್ಪಿಕೊಂಡಾರು.

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ

ಪೂರಕ ಮಾಹಿತಿ: ರಾಯಚೂರಿನಿಂದ ಚಂದ್ರಕಾಂತ ಮಸಾನಿ, ಮಂಗಳೂರಿನಿಂದ ಉದಯ.ಯು, ಉಡುಪಿಯಿಂದ ನವೀನ್‌ಕುಮಾರ್, ಧಾರವಾಡದಿಂದ ಧನ್ಯಪ್ರಸಾದ್, ಕೋಲಾರದಿಂದ ಕೆ.ಓಂಕಾರ ಮೂರ್ತಿ, ದಾವಣಗೆರೆಯಿಂದ ಯೋಗೇಶ್ ಎಂ.ಎನ್.

ಯುವಜನರನ್ನು ಕೃಷಿಯತ್ತ ಸೆಳೆಯಲು ಮಾಡಬೇಕಿರುವುದೇನು?

- ಕೃಷಿಯನ್ನು ಲಾಭದಾಯಕ ವೃತ್ತಿಯನ್ನಾಗಿ ಮಾರ್ಪಡಿಸುವುದು
- ಸರ್ಕಾರದಿಂದ ಕೃಷಿ ಮತ್ತು ಕೃಷಿಕರಿಗೆ ಹೆಚ್ಚು ಉತ್ತೇಜನ
- ಯುವಕೇಂದ್ರಿತ ಯೋಜನೆಗಳ ಮೂಲಕ ಕೃಷಿಕರನ್ನು ಕೃಷಿ ಉದ್ಯಮಿಗಳನ್ನಾಗಿ ಮಾಡುವುದು
- ಮೌಲ್ಯವರ್ಧನೆಯ ಮೂಲಕ ಕೃಷಿ ಉತ್ಪನ್ನಗಳ ಬೆಲೆ, ಮಾರುಕಟ್ಟೆ ಹೆಚ್ಚಿಸುವುದು
- ಯುವಜನರ ಅಗತ್ಯ, ಆಸೆ, ಆಶಯಗಳಿಗೆ ತಕ್ಕಂತೆ ಕೃಷಿ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ನೀತಿ ನಿಯಮ ರೂಪಿಸುವುದು

ಯುವಜನರು ಕೃಷಿ ತೊರೆಯಲು ಕಾರಣಗಳು

- ಅತಿವೃಷ್ಟಿ, ಅನಾವೃಷ್ಟಿ, ರೋಗಬಾಧೆ ಮತ್ತಿತರ ಕಾರಣಗಳಿಂದ ಬೆಳೆ ಕೈಗೆ ಹತ್ತದಿರುವುದು
- ಕಷ್ಟಪಟ್ಟು ಬೆಳೆದ ಬೆಳೆಗೆ ಮಾರುಕಟ್ಟೆ ವ್ಯವಸ್ಥೆ ಇಲ್ಲದೇ, ಸೂಕ್ತ ಬೆಲೆ ಸಿಗದಿರುವುದು
- ಇತರೆ ಉದ್ಯೋಗಗಳಿಗೆ ಹೋಲಿಸಿದರೆ, ಕೃಷಿ ಆಕರ್ಷಕ ಆಯ್ಕೆಯಾಗಿ ಉಳಿಯದೇ ಇರುವುದು
- ಸಾಮಾಜಿಕವಾಗಿ ಕೃಷಿಕರ ಸ್ಥಾನಮಾನ ಕುಸಿದಿರುವುದು
- ಅತಿ ಹೆಚ್ಚು ದೈಹಿಕ ದುಡಿಮೆ, ಅತಿ ಹೆಚ್ಚು ಅನಿಶ್ಚಿತತೆ ಇರುವುದು

‘ಯಶೋಗಾಥೆ ಪರಿಚಯಿಸಿ’



ಕೃಷಿಯಲ್ಲಿ ತೊಡಗಿಕೊಂಡು ವರ್ಷಪೂರ್ತಿ ಆದಾಯ ಗಳಿಸುತ್ತಿರುವವರ ಯಶೋಗಾಥೆಗಳನ್ನು ಯುವಜನರಿಗೆ ಪರಿಚಯಿಸಬೇಕು. ಕೃಷಿಯಲ್ಲಿ ಲಾಭ ಗಳಿಸುವ ಕುರಿತು ಯುವಜನರಿಗೆ ತರಬೇತಿ ನೀಡಬೇಕು. ಅಲ್ಲದೇ ಉತ್ಪನ್ನಗಳ ಮೌಲ್ಯವರ್ಧನೆ ವಿಧಾನಗಳನ್ನು ತಿಳಿಸಬೇಕು; ಕೃಷಿ ಇಲಾಖೆ, ಸಂಸ್ಥೆಗಳು ಮಾದರಿಗಳ ಮೂಲಕ ತಿಳಿಸಬೇಕು. ಜೇನು, ಕುರಿ–ಕೋಳಿ ಸಾಕಣೆ, ಹೈನುಗಾರಿಕೆ ಇತ್ಯಾದಿ ಉಪಕಸಬುಗಳನ್ನು ನಿರ್ವಹಿಸುವುದರಿಂದ ಬೇಸಾಯವನ್ನು ಹೇಗೆ ಲಾಭದಾಯಕವನ್ನಾಗಿ ಮಾಡಿಕೊಳ್ಳಬಹುದು ಎನ್ನುವುದನ್ನು ತೋರಿಸಿಕೊಡಬೇಕು.

ಸುರೇಶ ಕುಲಕರ್ಣಿ, ಸಮಾಲೋಚಕ, ನೆಲ–ಜಲ ನಿರ್ವಹಣೆ ಸಂಸ್ಥೆ, ಧಾರವಾಡ

‘ಕೃಷಿಯಲ್ಲಿ ಯಾವುದೂ ಗ್ಯಾರಂಟಿ ಇಲ್ಲ’




ಯುವಕರು ವ್ಯವಸಾಯದಿಂದ ದೂರ ಉಳಿಯಲು ಪ್ರಮುಖ ಕಾರಣ ಬೆಳೆದ ಬೆಳೆಗೆ ಸರಿಯಾಗಿ ಬೆಲೆ ಸಿಗದಿರುವುದು. ನಾನು ನಾಲ್ಕು ಎಕರೆಯಲ್ಲಿ ಹಸಿ ಮೆಣಸಿನಕಾಯಿ ಬೆಳೆದಿದ್ದೇನೆ. ಈಗ ಧಾರಣೆ ಬಿದ್ದು ಹೋಗಿದೆ. ಹಾಕಿದ ಬಂಡವಾಳವೂ ವಾಪಸ್ ಬರುತ್ತಿಲ್ಲ. ದುಡ್ಡು ಕೊಟ್ಟರೂ ಕೂಲಿ ಕಾರ್ಮಿಕರು ಸಿಗಲ್ಲ. ಸಿಕ್ಕರೂ ಹೆಚ್ಚು ಹಣ ಕೇಳುತ್ತಾರೆ. ಔಷಧಿ, ಗೊಬ್ಬರ ದರ, ಟ್ರ್ಯಾಕ್ಟರ್ ಬಾಡಿಗೆ ಹೆಚ್ಚಾಗಿದೆ. ಹೀಗಾಗಿ, ಯುವಕರು, ರೈತ ಕುಟುಂಬದವರು ಜಮೀನು ಪಾಳು ಬಿಟ್ಟು ಬೆಂಗಳೂರು, ನರಸಾಪುರ ಕೈಗಾರಿಕಾ ಪ್ರದೇಶಕ್ಕೆ ಹೋಗಿ ಕಾರ್ಖಾನೆಗಳಲ್ಲಿ ಸಣ್ಣಪುಟ್ಟ ಕೆಲಸ ಮಾಡುತ್ತಿದ್ದಾರೆ.

ಉದ್ಯೋಗದಲ್ಲಿ ತಿಂಗಳ ಅಂತ್ಯದಲ್ಲಿ ವೇತನ ಗ್ಯಾರಂಟಿ ಇರುತ್ತದೆ. ಆದರೆ, ವ್ಯವಸಾಯದಲ್ಲಿ ಯಾವುದೂ ಗ್ಯಾರಂಟಿ ಇಲ್ಲ. ಬದಲಾಗಿ ನಷ್ಟ ಮಾಡಿಕೊಂಡು ಸಾಲದ ಸುಳಿಯಲ್ಲಿ ಸಿಲುಕಿ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂದಿದೆ. ಮಳೆ ಬಂದರೂ ಕಷ್ಟ, ಬಿಸಿಲು ಇದ್ದರೂ ಕಷ್ಟ. ಸರ್ಕಾರವಾಗಲಿ, ಸಂಘ ಸಂಸ್ಥೆಗಳಾಗಲಿ ನಮ್ಮ ನೆರವಿಗೆ ಯಾರೊಬ್ಬರೂ ಬರುತ್ತಿಲ್ಲ.

ಸತೀಶ್, ರೈತ, ಹುತ್ತೂರು, ಕೋಲಾರ ಜಿಲ್ಲೆ

ಯಾವ ವಯಸ್ಸಿನ ರೈತರು ಎಷ್ಟು?



‘ಸಮಗ್ರ ಕೃಷಿಗೆ ಯುವಕರನ್ನು ಸಜ್ಜುಗೊಳಿಸಬೇಕಿದೆ’



ಕೃಷಿ ಆಧಾರಿತ ಕೌಶಲ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಯುವಕರಿಗೆ ಹೆಚ್ಚು ಆಸಕ್ತಿ ಮೂಡಿಸಬೇಕು. ಸಮಗ್ರ ಕೃಷಿ ಪದ್ಧತಿಯತ್ತ ಯುವಕರನ್ನು ಸೆಳೆಯಲು ತರಬೇತಿ ಮೂಲಕ ಪ್ರೇರೇಪಿಸಬೇಕು. ಕೃಷಿ ಆಧಾರಿತ ಆಹಾರ ಸಂಸ್ಕರಣೆ ಘಟಕ ಆರಂಭಿಸಲು ಉತ್ತೇಜನ ನೀಡಬೇಕು.

ಕೃಷಿ ಯಂತ್ರೋಪಕರಣ ಖರೀದಿಸಲು ಸರ್ಕಾರ ಯುವಕರಿಗೆ ಸಾಲ ಸೌಲಭ್ಯ ಒದಗಿಸಬೇಕು. ಕೃತಕ ಬುದ್ಧಿಮತ್ತೆಗೆ ಆದ್ಯತೆ ಕೊಡಬೇಕು. ಡ್ರೋನ್ ತರಬೇತಿ, ತೋಟಗಾರಿಕೆ ಸಂರಕ್ಷಿತ ಕೃಷಿ ತರಬೇತಿ ಕೊಡಬೇಕು. ತಾಲ್ಲೂಕು ಮಟ್ಟದಲ್ಲಿ ಸಿರಿಧಾನ್ಯಗಳ ಸಂಸ್ಕರಣ ಘಟಕಗಳ ಸ್ಥಾಪನೆ ಮಾಡಬೇಕು.

ಬಸವಣ್ಣೆಪ್ಪ ಎಂ.ಎ., ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಸಾವಯವ ಕೃಷಿ ಸಂಶೋಧನಾ ಸಂಸ್ಥೆಯ ಮುಖ್ಯಸ್ಥ



ಕೃಷಿಯು ಲಾಭದಾಯಕ ಎಂದು ಯುವ ಸಮುದಾಯಕ್ಕೆ ಮನವರಿಕೆಯಾದರೆ ಅವರು ಈ ಕ್ಷೇತ್ರಕ್ಕೆ ಬರಬಹುದು.


ರವೀಂದ್ರ ಗುಜ್ಜರಬೆಟ್ಟು, ಉಡುಪಿ ಜಿಲ್ಲಾ ಕೃಷಿಕ ಸಂಘದ ಕಾರ್ಯದರ್ಶಿ



ಆರ್ಥಿಕವಾಗಿ ಸದೃಢರಾಗಿಸಬಲ್ಲ ಕೃಷಿ ಸಂಬಂಧಿತ ಕೈಗಾರಿಕೆಗಳು ಸ್ಥಾಪನೆಯಾದರೆ ರೈತರ ಮಕ್ಕಳು ಗುಳೇ ಹೋಗುವುದನ್ನು ತಡೆಯಬಹುದು.

ಕೆ.ಪಿ.ಭೂತಯ್ಯ, ರೈತ ಮುಖಂಡ, ದಾವಣಗೆರೆ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 6-7-2000

• ಹೈಕೋರ್ಟ್ ಪೀಠ: ಸರ್ಕಾರದ ವಿರುದ್ಧ ಪ್ರಚಾರ– ಮುಖ್ಯಮಂತ್ರಿ ತರಾಟೆ

ಬೆಂಗಳೂರು, ಜುಲೈ 5– ಉತ್ತರ ಕರ್ನಾಟಕದಲ್ಲಿ ಕೆಲವು ಶಕ್ತಿಗಳು ಹೊಸ ಸಮಸ್ಯೆಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತಿವೆ ಎಂದು ಮುಖ್ಯಮಂತ್ರಿ ಎಸ್.ಎಂ ಕೃಷ್ಣ ಅವರು ಇಂದು ಆರೋಪಿಸಿದರು.

ಹೈಕೋರ್ಟ್ ಪೀಠ ಸ್ಥಾಪನೆಯಾಗದಿರುವುದಕ್ಕೆ ಹಾಗೂ ಆ ಪ್ರದೇಶದ ಅಭಿವೃದ್ಧಿಯಲ್ಲಿ ಅಸಮತೋಲನ ಉಂಟಾಗಿರುವುದಕ್ಕೆ 8 ತಿಂಗಳ ಹಿಂದೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರವೇ ಕಾರಣ ಎಂಬ ರೀತಿಯಲ್ಲಿ ಅಪಪ್ರಚಾರ ಮಾಡುತ್ತಿರುವ ಶಕ್ತಿಗಳನ್ನು ಹಾಗೂ ಗುಂಪುಗಳನ್ನು ಅವರು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

75 ವರ್ಷಗಳ ಹಿಂದೆ

ಗುರುವಾರ, 6-7-1950

• ಕೊರಿಯಾ ಯುದ್ಧದಲ್ಲಿ ಭಾರತದ ಮಧ್ಯಸ್ಥಿಕೆ ಬರಿ ಊಹಾಪೋಹ

ನ್ಯೂಯಾರ್ಕ್, ಜುಲೈ 5– ಭಾರತವು ಕೊರಿಯಾ ಯುದ್ಧದ ಬಗ್ಗೆ ಮಧ್ಯಸ್ಥಿಕೆ ವಹಿಸಲಿದೆ ಇಲ್ಲವೇ ಮಧ್ಯಸ್ಥಿಕೆ ವಹಿಸಲು ಮುಂದೆ ಬಂದಿದೆ ಎಂಬ ವರದಿಯ ಬಗ್ಗೆ ವಿಶ್ವಸಂಸ್ಥೆಯ ಭಾರತ ನಿಯೋಗ ಕಳೆದ ಎರಡು ದಿನಗಳಿಂದ ಉತ್ತರ ಕೊಡುತ್ತಿದೆ ಎಂದು ಪಿಟಿಐನ ವಿಶೇಷ ಪ್ರತಿನಿಧಿ ಶ್ರೀ ಡಿ.ಪಿ ವಾಗಳೆ ತಿಳಿಸಿದ್ದಾರೆ.

ಭದ್ರತಾ ಸಮಿತಿ ನಿರ್ಣಯಕ್ಕೆ ತಮ್ಮ ಸಂಪೂರ್ಣ ಒಪ್ಪಿಗೆ ಕೊಡುತ್ತಾ, ಭಾರತ ಈ ಪರಿಸ್ಥಿತಿಯಲ್ಲಿ ಕೂಡ ಮಧ್ಯಸ್ಥಿಕೆಯ ಮೂಲಕ ಒಪ್ಪಂದವಾಗುವ ಆಸೆಯನ್ನು ತೊಡೆದು ಹಾಕಬೇಕಾಗಿಲ್ಲ ಎಂಬ ಆಶಾಭಾವ ತೋರಿಸಿದುದೇ ಈ ಊಹೆಗೆ ಕಾರಣವಿದ್ದ ಹಾಗೆ ತೋರುತ್ತಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು **ತಿಥಿ:** ಆಷಾಢ ಶುಕ್ಲ ಏಕಾದಶಿ ಗಂ. 21-16 **ನಕ್ಷತ್ರ:** ವಿಶಾಖ ಗಂ. 22-42 **ಯೋಗ:** ಸಾಧ್ಯ ಗಂ. 21-27 **ಕರಣ:** ವಣಿಜ ಗಂ. 8-10, ಮಿಥುನ ಮಾಸದ 22 ನೇ ದಿನ. **ಮಳೆ ನಕ್ಷತ್ರ:** ಪುನರ್ವಸು 1 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 – 06-00 **ಸೂರ್ಯೋದಯ:** 06-13 **ಸೂರ್ಯಾಸ್ತ:** 06-58
ಮುಸ್ಲಿಂ ದಿನಾಂಕ: 10 ಮೊಹರಮ್ **ದಿನ ವಿಶೇಷ:** ಪ್ರಥಮ ಏಕಾದಶಿ, ಮೊಹರಮ್ (ಮುಸ್ಲಿಂ) **ಅದೃಷ್ಟ ಸಂಖ್ಯೆ:** 2, 5

ಮೇಷ: ಮಕ್ಕಳಿಗೆ ಜೀವನದ ಪಾಠ ಹೇಳುವಿರಿ. ಜೀವನೋಪಾಯಕ್ಕೆ ಹಲವಾರು ಅವಕಾಶಗಳು ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ. ಆಂಜನೇಯನ ಸೇವೆ ಮಾಡುವುದರಿಂದ ಗೊಂದಲ ನಿವಾರಣೆಯಾಗುತ್ತದೆ.

ವೃಷಭ: ಎಲ್ಲವನ್ನು ಮಾಡಬಲ್ಲೆನೆಂಬ ಹುಮ್ಮಸ್ಸು ನಿಮ್ಮಲ್ಲಿದೆ. ಇದರಿಂದ ಸುಲಭವಾಗಿ ಕೆಲಸ ಪೂರೈಸುವಿರಿ. ತಂದೆಯ ಅಭಿಪ್ರಾಯಗಳಿಗೆ ಬೆಲೆ ಕೊಡಿ. ಏಜೆನ್ಸಿಯಂತಹ ಉದ್ಯೋಗ ತೆರೆಯಲು ಸ್ಥಳ ಹುಡುಕಾಟ ಆರಂಭಿಸುವಿರಿ.

ಮಿಥುನ: ಮನೆಯ ಕಟ್ಟಡದ ದುರಸ್ತಿ ಕಾರ್ಯಗಳು ಅನಿವಾರ್ಯವಾಗುತ್ತದೆ. ತಂಗಿಗಾಗಿ ಖರ್ಚು ಮಾಡಬೇಕಾದ ಸಂದರ್ಭ ಬರುವುದು. ಧರ್ಮ-ಕರ್ಮಗಳಲ್ಲಿ ಆಸಕ್ತಿ ಹೆಚ್ಚಲಿದೆ. ಕಬ್ಬಿಣ ಸಿಮೆಂಟ್ ವ್ಯಾಪಾರಿಗಳಿಗೆ ಸಾಧಾರಣ ಲಾಭ.

ಕರ್ಕಾಟಕ: ವೃತ್ತಿ ಜೀವನವನ್ನು ಗಂಭೀರವಾಗಿ ಪರಿಗಣಿಸುವಿರಿ. ಮಕ್ಕಳ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗುವುದು. ನಿಮಗೆ ಹೂಡಿಕೆಯಿಂದ ಅಧಿಕ ಲಾಭವು ಬಂದಿರುವ ಸುದ್ದಿಯನ್ನು ತಿಳಿದು ಅತೀವ ಸಂತೋಷಗೊಳ್ಳುವಿರಿ.

ಸಿಂಹ: ಮಗನ ಅಭಿವೃದ್ಧಿ ನೋಡಿ ಸಂತೋಷವಾಗುತ್ತದೆ. ಹಣದ ಅಡಚಣೆ ಇರುವುದಿಲ್ಲ. ಒಂಟಿತನ ಹೋಗಲಾಡಿಸಿಕೊಳ್ಳಲು ಕೆಲಸಗಳತ್ತ ಮನಸ್ಸು ಹರಿಸುವಿರಿ. ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಲು ಅಧ್ಯಯನ ಅಗತ್ಯ.

ಕನ್ಯಾ: ಸ್ನೇಹಿತರ ಸಂಪರ್ಕದಿಂದ ಜೀವನ ನಡೆಸಲು ಬೇಕಾದ ಉಪಾಯ ಹೊಂದುವಿರಿ. ಸಂಸ್ಥೆಯೊಂದರಲ್ಲಿ ಕೆಲಸ ಕೊಡಿಸಿಕೊಡಲು ಅಣ್ಣನ ಸಹಾಯ ಕೇಳಿದರೆ ಶುಭವಾಗುತ್ತದೆ. ಮನೆ ದೇವರಿಗೆ ಹರಕೆ ಸಲ್ಲಿಸುವ ಬಗ್ಗೆ ಯೋಚಿಸಿ.

ತುಲಾ: ಮಗಳಿಂದ ಶುಭ ಸುದ್ದಿಯೊಂದನ್ನು ತಿಳಿಯುವಿರಿ. ನಿಮ್ಮ ಆಲಸ್ಯತನ ನಿಮ್ಮ ಕುಟುಂಬದ ಅಭಿವೃದ್ಧಿಯನ್ನು ಹಾಳು ಮಾಡುತ್ತದೆ. ಆದ್ದರಿಂದ ಉತ್ಸಾಹಭರಿತರಾಗಿರಿ. ನಿಮ್ಮ ರಾಜಕೀಯ ಭವಿಷ್ಯಕ್ಕೆ ಮೋಡಕವಿದಂತೆ ಆಗುತ್ತದೆ.

ವೃಶ್ಚಿಕ: ಅಕ್ಕ-ಪಕ್ಕದವರನ್ನು ತಾತ್ಸಾರವಾಗಿ ಭಾವಿಸಬೇಡಿ. ಅವರೊಂದಿಗಿನ ಸಮಸ್ಯೆಗಳನ್ನು ಸಂಧಾನದಿಂದ ಬಗೆಹರಿಸಿಕೊಳ್ಳಿ. ಜಮೀನು ಮತ್ತು ಅದರ ಕೆಲಸಗಳನ್ನು ನೋಡಿಕೊಳ್ಳಲು ಆಳನ್ನು ಗೊತ್ತು ಮಾಡುವಿರಿ.

ಧನು: ಮಹಿಳೆಯರಿಗೆ ಋಣಾತ್ಮಕ ಚಿಂತನೆಯು ಆರೋಗ್ಯವನ್ನು ಹಾಳು ಮಾಡುತ್ತದೆ. ಮನೆಯಲ್ಲಿ ಶಾಂತಿ ಹೋಮ ನಡೆಸುವ ಕುರಿತು ಚರ್ಚೆ ನಡೆಯುತ್ತದೆ. ವೃತ್ತಿಯಲ್ಲಿ ಅನುಭವ ಹೊಂದಿದವರಿಂದ ಬೈಗುಳ ಕೇಳ ಬೇಕಾಗುವುದು.

ಮಕರ: ಸದಾ ತಾಳ್ಮೆಯಿಂದ ವ್ಯವಹರಿಸಿ. ವಿವಾದಗಳಿಂದ ದೂರ ಉಳಿಯಿರಿ. ವೈದ್ಯರು ನೀಡಿದ ಸಲಹೆಯನ್ನು ಚಾಚೂ ತಪ್ಪದೆ ಆಚರಿಸಿ. ಮೋಸ ಹೋಗುವ ಸಾಧ್ಯತೆಯಿದೆ ಜಾಗ್ರತೆವಹಿಸಿ. ಪಾಲಕರಾಗುವ ಸುದ್ದಿ ತಿಳಿದು ಅತೀವ ಸಂತಸ.

ಕುಂಭ: ಪರಿಶ್ರಮಕ್ಕೆ ತಕ್ಕ ಆದಾಯವಿಲ್ಲದೆ ಸೊರಗಿರುವ ನಿಮಗೆ, ನಿಮ್ಮ ಹಲವಾರು ಕನಸುಗಳು ಈಡೇರುವ ಅವಕಾಶ ಅಪರಿಚಿತ ವ್ಯಕ್ತಿ ತೋರುವರು. ತೈಲ ಲೇಪನ ಮಾಡುವುದರಿಂದ ಕಾಲು ನೋವು ನಿವಾರಣೆಯಾಗುವುದು.

ಮೀನ: ವಿವಾಹದ ವಿಚಾರದಲ್ಲಿ ಅಂತಿಮವಾಗಿ ತೀರ್ಮಾನಕ್ಕೆ ಬರುವುದು ಉತ್ತಮವೆಂದು ಕಾಣುತ್ತದೆ. ರಸಗೊಬ್ಬರ, ಕೀಟ ನಾಶಕಗಳನ್ನು ವ್ಯಾಪಾರಿಗಳಿಗೆ ಲಾಭದ ಜೊತೆ ಆಯಾಸವೂ ಕಾಡಲಿದೆ. ಆರೋಗ್ಯದಲ್ಲಿ ಗಮನವಿರಲಿ.

ಪದಬಂಧ 6095

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಆನೆಗೂ ಆಡಿಗೂ ಇರುವಂಥಹ ವ್ಯತ್ಯಾಸ (6)
4. ವಿಷಯ ಹೇಳಿ ನಗಿಸುವ ಹಾಸ್ಯಗಾರ (4)
5. ಗಮನವಿಟ್ಟು ನೋಡುತ್ತಿರುವ ಆಕಾಶ (3)
8. ಪಂಡಿತ ಇಲ್ಲಿದ್ದಾನೆ (3)
9. ಸಾಯುವ ಸಮಯವಿದು (5)
10. ರತಿ ಪತಿಯಿಂದ ಮೂಡಿದ ಆಸೆ (3)
12. ಸುಕುಮಾರತೆಯನ್ನು ಹೀಗೆನ್ನಿ (3)
13. ಈತ ಚಾಡಿಯನ್ನು ಹೇಳುವವನು (4)
15. ಮಣೆಯಲ್ಲಿ ಮನಸ್ಸನ್ನು ವಿಭಜಿಸಿ ನೋಡುವುದು! (6)

ಮೇಲಿಂದ ಕೆಳಕ್ಕೆ

1. ಜಗಲಿಯ ಹತ್ತಿರ ಕಾಣಿಸಿದ ಹೆಬ್ಬಾವು (4)
2. ವಿರಮಿಸುತ್ತಿರುವಾಗ ಉದಯಿಸಿದ ಸೂರ್ಯ (2)
3. ಪುಷ್ಪದಲ್ಲಿನ ಸಿಹಿರಸ (4)
6. ಹಜಾರವನ್ನು ಹೀಗೂ ಹೇಳುವರು (4)
7. ಇಣಕುತ್ತಿರುವ ಅಳಿಲು (3)
8. ಈತ ಶಕ್ತಿಯೇ ಇಲ್ಲದವನು (4)
10. ಶ್ರದ್ಧೆಯಿಲ್ಲದೆ ಮಾಡುವುದು (4)
11. ಮದುವೆಯಲ್ಲಿ ವಧೂವರರು ಆಡುವ ಹೂವಿನಚಂಡಾಟ (4)
14. ವೃಕ್ಷವಿಲ್ಲಿ ತಲೆಕೆಳಗಾಗಿದೆ (2)

1					2	■	■	3
	■	■	■	■	4			
5		6	■	■	■	■	■	
	■		■	7	■	8		
■	■	9					■	■
10			■		■		■	11
	■	■	■	■	■	12		
13			14	■	■	■	■	
	■	■	15					

ಎಡದಿಂದ ಬಲಕ್ಕೆ:
1.ಪ್ರತ್ಯುಪಕಾರ 4.ರಗಡು 5.ಸರಕು 6.ವಪನ 7.ತಕಲಿ 9.ಸ್ನಾನ 10.ಸೂಟಿ 12.ಅಸುರ 14.ಉನ್ಮಾದ 15.ವಿನೋದ 16.ಬೆರಕೆ 17.ರಸಕವಳ

ಮೇಲಿಂದ ಕೆಳಕ್ಕೆ:
1.ಪ್ರತಿಬಿಂಬ 2.ಪರ್ಯವಸಾನ 3.ರಸನ 4.ರಕುತ 8.ಕಪಟಿ 9.ಸ್ಥಾಪಿಸು 10.ಸೂಕ್ಷ್ಮದರ್ಶನ 11.ಅಂತರಾಳ 13.ರವಿಕೆ 14.ಉದರ

ಸುಡೊಕು 6479

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	5		7		2		8	
						3		4
	7	8	3		9		1	
1							2	3
	2							
8		7			1		5	9
2		3	9		6	5		8
	4	6		8			9	7
	8		5		4		3	2

6478 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

‘ಅಲೆಮಾರಿ: ಪ್ರತ್ಯೇಕ ಮೀಸಲಾತಿ ಅಗತ್ಯ’

ಮುಖಂಡರ ಸಭೆಯಲ್ಲಿ ಎಚ್. ಆಂಜನೇಯ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿರುವ ಪ್ರಬಲ ಸಮುದಾಯಗಳು ಸೌಲಭ್ಯ ಪಡೆಯಲು ಬಡಿದಾಡಬೇಕಿದೆ. ಇನ್ನು ಅಲೆಮಾರಿಗಳು ಸೌಲಭ್ಯ ಪಡೆಯುವುದಾದರೂ ಹೇಗೆ? ಹಾಗಾಗಿ ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕ ಮೀಸಲಾತಿ ಅಗತ್ಯ ಎಂದು ಮಾಜಿ ಸಚಿವ ಎಚ್.ಆಂಜನೇಯ ಪ್ರತಿಪಾದಿಸಿದರು.

ಕರ್ನಾಟಕ ಪರಿಶಿಷ್ಟ ಜಾತಿ (ಎಸ್‌ಸಿ) ಅಲೆಮಾರಿ ಅಭಿವೃದ್ಧಿ ವೇದಿಕೆ ಶನಿವಾರ ಹಮ್ಮಿಕೊಂಡಿದ್ದ ಅಲೆಮಾರಿ ಮುಖಂಡರ ಸಭೆಯಲ್ಲಿ ಅವರು ಮಾತನಾಡಿದರು.

ಪರಿಶಿಷ್ಟ ಜಾತಿಯಲ್ಲಿ ಮಾದಿಗ, ಹೊಲೆಯ, ಭೋವಿ, ಲಂಬಾಣಿ ಸೇರಿದಂತೆ ಕೆಲವು ಸಮುದಾಯಗಳು ಪ್ರಬಲವಾಗಿವೆ. ಈ ಸಮುದಾಯಗಳಿಗೆ ಒಂದಷ್ಟು ವಿದ್ಯಾಭ್ಯಾಸ, ಅರಿವು ಬಂದಿದೆ. ಆದರೆ, ಅಲೆಮಾರಿ ಸಮುದಾಯಗಳ ಅಭಿವೃದ್ಧಿಯೇ ಆಗಿಲ್ಲ. ಇಂದಿಗೂ ಪ್ರಾಣಿಗಳೂ ವಾಸಿಸಲು ಸಾಧ್ಯವಿಲ್ಲದ ಜಾಗಗಳಲ್ಲಿ, ಫ್ಲೈಓವರ್‌ಗಳಲ್ಲಿ, ಬಸ್ ನಿಲ್ದಾಣಗಳಲ್ಲಿ ವಾಸ ಮಾಡುತ್ತಿದ್ದಾರೆ. ಅಲೆಮಾರಿಗಳನ್ನು ಪ್ರತ್ಯೇಕ ಗುಂಪು ಮಾಡಿ ಮೀಸಲಾತಿ ಕಲ್ಪಿಸದೇ ಇದ್ದರೆ ಅವರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಪರಿಶಿಷ್ಟ ಜಾತಿಯಲ್ಲಿ ಬೇಡ ಜಂಗಮ, ಬುಡ್ಗ ಜಂಗಮ ಮುಂತಾದ ಹೆಸರುಗಳಿವೆ. ಜಂಗಮ ಎನ್ನುವ ಪದವನ್ನೇ ಬಳಸಿಕೊಂಡು ಬೇಡ ಜಂಗಮ, ಬೇಡುವ ಜಂಗಮ ಹೆಸರಲ್ಲಿ ವೀರಶೈವ ಲಿಂಗಾಯತ ಜಂಗಮರು ಎಸ್‌ಸಿ ಪ್ರಮಾಣಪತ್ರ ಪಡೆದು ಉದ್ಯೋಗ ಗಳಿಸಿದ್ದಾರೆ. ಈಗ ಒಳಮೀಸಲಾತಿ ಪಡೆಯಲು ಮುಂದಾಗಿದ್ದಾರೆ. ಇದು ಲಿಂಗಾಯತರ ಮನೆಯಲ್ಲಿ ಮಾತ್ರ ಬೇಡುವ, ಪುರೋಹಿತರಾಗಿರುವ, ಮಠಾಧೀಶರಾಗಿರುವ ಸಮುದಾಯ. ಇಂಥವರು ಹೇಗೆ ಎಸ್‌ಸಿ ಆಗುತ್ತಾರೆ? ಅಲ್ಲದೇ ಕರ್ನಾಟಕದಲ್ಲಿ ಬೇಡ ಜಂಗಮರು ಇಲ್ಲ. ಬುಡ್ಗ ಜಂಗಮರಷ್ಟೇ ಇರುವುದು. ಇದರ ವಿರುದ್ಧ ಎಲ್ಲರೂ ಎಚ್ಚೆತ್ತುಕೊಂಡು ಹೋರಾಟ ಮಾಡಬೇಕು' ಎಂದರು.

'ಅಲೆಮಾರಿ ಸಮುದಾಯಗಳಿಗೆ ನಿವೇಶನ, ಮನೆಯನ್ನು ಸರ್ಕಾರ ಕಲ್ಪಿಸಬೇಕು. ಈ ಬೇಡಿಕೆಯೂ ಸೇರಿದಂತೆ ನಿಮ್ಮ ಸಮಸ್ಯೆ ಪಟ್ಟಿ ಮಾಡಿ ನನಗೆ ಕೊಡಿ. ಈ ತಿಂಗಳಲ್ಲೇ ಜಾಗೃತ ಸಮಾವೇಶ ಮಾಡಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಎಚ್.ಸಿ. ಮಹದೇವಪ್ಪ, ಸತೀಶ ಜಾರಕಿಹೊಳಿ ಅವರನ್ನು ಕರೆಸಿ ಮನವಿ ಸಲ್ಲಿಸೋಣ' ಎಂದು ಹೇಳಿದರು.

ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಸಾಮಾಜಿಕ ಹೋರಾಟಗಾರ ವಡ್ಡಗೆರೆ ನಾಗರಾಜಯ್ಯ, ಅಲೆಮಾರಿ ಸಮುದಾಯದ ಮುಖಂಡ ಬಾಲಗುರುಮೂರ್ತಿ, ಅಲೆಮಾರಿ ಅಭಿವೃದ್ಧಿ ವೇದಿಕೆಯ ಶಾಂತಕುಮಾರ್, ಸಣ್ಣಮಾರಪ್ಪ, ವಿವಿಧ ಅಲೆಮಾರಿ ಸಮುದಾಯಗಳ ಮುಖಂಡರು ಉಪಸ್ಥಿತರಿದ್ದರು.



ಅಲೆಮಾರಿ ಮುಖಂಡರ ಸಭೆಯಲ್ಲಿ ವಾಗ್ವಾದ ನಡೆಯಿತು — ಪ್ರಜಾವಾಣಿ ಚಿತ್ರ

ಗೊಂದಲದ ಗೂಡಾದ ಸಭೆ

ಪರಿಶಿಷ್ಟ ಜಾತಿಯಲ್ಲಿ 51 ಅಲೆಮಾರಿ ಸಮುದಾಯಗಳಿವೆ. ಅದರಲ್ಲಿ ಕೊರಚ ಮತ್ತು ಕೊರಮ ಸಮುದಾಯಗಳನ್ನು ಈ ಸಭೆಗೆ ಕರೆದಿಲ್ಲ ಎಂಬ ವಿಚಾರ ಸಭೆಯಲ್ಲಿ ಗೊಂದಲವನ್ನು ಉಂಟು ಮಾಡಿತು.

ಸಭೆಯ ಆರಂಭದಲ್ಲಿ ಸಮುದಾಯಗಳ ಮುಖಂಡರನ್ನು ವೇದಿಕೆಗೆ ಕರೆಯುತ್ತಿರುವಾಗ ಕೊರಚ ಮತ್ತು ಕೊರಮ ಸಮುದಾಯದ ಮುಖಂಡರನ್ನು ಕರೆಯಿರಿ ಎಂದು ಈ ಎರಡು ಸಮುದಾಯದವರು ಪಟ್ಟು ಹಿಡಿದರು. ಆದರೆ, ಉಳಿದ 49 ಸಮುದಾಯದ ಮುಖಂಡರು ಆಕ್ಷೇಪಿಸಿದರು. ಆಗ ಮಾತಿನ ಚಕಮಕಿ ನಡೆಯಿತು. ಕೊನೆಗೆ ಎರಡು ಸಮುದಾಯದವರನ್ನೂ ವೇದಿಕೆಗೆ ಕರೆಯಲಾಯಿತು.

ಎಚ್. ಆಂಜನೇಯ ಮಾತನಾಡಿದ ಬಳಿಕ ಸಮುದಾಯಗಳ ಮುಖಂಡರು ಮಾತನಾಡಲು ಅವಕಾಶ ನೀಡಲಾಯಿತು. ಈ ಸಮಯದಲ್ಲಿ ಮತ್ತೆ ಗೊಂದಲ, ಚಕಮಕಿಗಳು ನಡೆದವು.

'ಕೊರಚ-ಕೊರಮ ಜಾತಿಗಳು ಸೂಕ್ಷ್ಮ ಸಮುದಾಯಗಳು, ಅಲೆಮಾರಿಗಳು. ಅವರನ್ನು ಹೊರಗಿಡುವುದು ಸರಿಯಲ್ಲ' ಎಂದು ಈ ಸಮುದಾಯದ ಮುಖಂಡರು ವಾದಿಸಿದರೆ, 'ನೀವು 6 ವರ್ಷದ ಹಿಂದಿನವರೆಗೆ ಅಲೆಮಾರಿಗಳಾಗಿರಲಿಲ್ಲ. ಆನಂತರ ಅಲೆಮಾರಿ ಕೋಶದ ಪಟ್ಟಿಯಲ್ಲಿ ಸೇರಿದವರು. ಅಲ್ಲದೇ ಒಳ ಮೀಸಲಾತಿ ಪರವಾಗಿ ನಮ್ಮೊಂದಿಗೆ ಬಂದೂ ಇರಲಿಲ್ಲ' ಎಂದು ಉಳಿದ ಸಮುದಾಯದವರು ವಿರೋಧಿಸಿದರು.

ಆನಂತರ ಯಾರು ಏನು ಮಾತನಾಡುತ್ತಾರೆ ಎಂಬುದು ಗೊತ್ತಾಗದಷ್ಟು ಮಾತಿನ ವಿನಿಮಯಗಳಾದವು.

ಗಣಿ ಅಕ್ರಮ: ಉಪ ಸಮಿತಿ ರಚನೆ

ಬೆಂಗಳೂರು: ಗಣಿಗಾರಿಕೆಯಲ್ಲಿ ನಡೆದ ಅಕ್ರಮಗಳ ಕುರಿತು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಶಿಫಾರಸುಗಳನ್ನು ಮಾಡಲು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ನೇತೃತ್ವದಲ್ಲಿ ಸಚಿವ ಸಂಪುಟ ಉಪಸಮಿತಿ ರಚಿಸಲಾಗಿದೆ.

ಜಿ.ಪರಮೇಶ್ವರ, ಕೆ.ಎಚ್.ಮುನಿಯಪ್ಪ, ಎಚ್.ಸಿ.ಮಹದೇವಪ್ಪ, ಈಶ್ವರ ಖಂಡ್ರೆ, ಎಸ್.ಎಸ್. ಮಲ್ಲಿಕಾರ್ಜುನ ಸಮಿತಿಯ ಸದಸ್ಯರಾಗಿದ್ದಾರೆ.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಈ ಉಪ ಸಮಿತಿಗೆ ಅಗತ್ಯ ನೆರವು ನೀಡಬೇಕು. ಸಮಿತಿಯು ಒಂದು ತಿಂಗಳ ಒಳಗೆ ಸರ್ಕಾರಕ್ಕೆ ವರದಿ ಸಲ್ಲಿಸಬೇಕು ಎಂದೂ ಆದೇಶದಲ್ಲಿ ವಿವರಿಸಲಾಗಿದೆ.

ಅಕ್ರಮ ಗಣಿಗಾರಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ಉಂಟಾಗಿರುವ ನಷ್ಟವನ್ನು ವಸೂಲಿ ಮಾಡಲು ವಸೂಲಾತಿ ಆಯುಕ್ತರ ನೇಮಕ ಮತ್ತು ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ತ್ವರಿತ ನ್ಯಾಯಾಲಯ ಸ್ಥಾಪಿಸುವ ಬಗ್ಗೆ ಚರ್ಚಿಸಿ, ಸಮಿತಿ ಶಿಫಾರಸುಗಳನ್ನು ಮಾಡಲಿದೆ.

ವಸೂಲಾತಿ ಆಯುಕ್ತರ ನೇಮಕ ಮತ್ತು ತ್ವರಿತ ನ್ಯಾಯಾಲಯ ಸ್ಥಾಪನೆಯ ಅಗತ್ಯದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಎಚ್.ಕೆ. ಪಾಟೀಲ ಅವರು ಇತ್ತೀಚೆಗೆ ಪತ್ರ ಬರೆದಿದ್ದರು.

ಜುಲೈ 2ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಸಂಪುಟ ಉಪ ಸಮಿತಿ ರಚಿಸಲು ನಿರ್ಣಯ ಕೈಗೊಳ್ಳಲಾಗಿತ್ತು.

ಪೊಲೀಸರಿಗೆ ಮೂರು ಪಾಳಿ ಕೆಲಸ ವರದಿ ಕೇಳಿದ ಗೃಹ ಇಲಾಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಿಬ್ಬಂದಿಗೆ ಮೂರು ಪಾಳಿಯಲ್ಲಿ ಕೆಲಸದ ಸಮಯ ನಿಗದಿ ಪಡಿಸುವ ಕುರಿತು ವರದಿ ಸಲ್ಲಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಗೃಹ ಇಲಾಖೆ ನಿರ್ದೇಶಿಸಿದೆ.

ರಾಷ್ಟ್ರೀಯ ಸಾಮಾಜಿಕ ನ್ಯಾಯ ದಳದ ರಾಷ್ಟ್ರೀಯ ಅಧ್ಯಕ್ಷ ಆರ್.ಸ್ವರ ಶರತ್ ಅವರು ಕಳೆದ ಡಿ.13ರಂದು ಸಲ್ಲಿಸಿದ ಮನವಿ ಆಧರಿಸಿ, ಗೃಹ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಜಿ.ಶ್ಯಾಮ ಹೊಳ್ಳ ಅವರು ಡಿಜಿ-ಐಜಿಪಿಗೆ ಜುಲೈ 3ರಂದು ಬರೆದ ಪತ್ರದಲ್ಲಿ ನಿರ್ದೇಶಿಸಿದ್ದಾರೆ.

ಪೊಲೀಸ್ ಸಿಬ್ಬಂದಿ ಸದ್ಯ ಎರಡು ಪಾಳಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಸಾರ್ವಜನಿಕ ವಲಯದಲ್ಲಿ ಪೊಲೀಸ್ ಸಿಬ್ಬಂದಿ ಪಾತ್ರ ಮುಖ್ಯವಾಗಿರುವ ಕಾರಣ ಅವರ ಕಾರ್ಯವೈಖರಿ, ದಕ್ಷತೆ, ಜನಸ್ನೇಹಿ ಆಗಿರಲೆಂದು ಬಾಡಿವೋರ್ನ್ ಕ್ಯಾಮೆರಾ, ವಾಕಿಟಾಕಿ, ಜಿಪಿಎಸ್ ನೀಡಿ ಯುಕ್ತ ಮಾನವರಾಗಿ ಮಾಡಲಾಗಿದೆ. ಆದರೆ, ಪೊಲೀಸರಿಗೆ ಕುಟುಂಬ, ಮನೆ, ಮಕ್ಕಳು, ತಂದೆ-ತಾಯಿ ಇರುವುದನ್ನು ಮರೆತು ಬೆಳಗ್ಗಿನಿಂದ ರಾತ್ರಿವರೆಗೂ ಕೆಲಸ ಮಾಡುತ್ತಿದ್ದಾರೆ. ಹಬ್ಬದ ದಿನಗಳನ್ನು ಮರೆತು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪೊಲೀಸ್ ಸಿಬ್ಬಂದಿಗೆ ಆರು ತಿಂಗಳಿಗೊಮ್ಮೆ ಹಾಗೂ ಅವರ ಅವಲಂಬಿತರಿಗೆ ವರ್ಷಕ್ಕೊಮ್ಮೆ ಆರೋಗ್ಯ ತಪಾಸಣೆ ಕಡ್ಡಾಯಗೊಳಿಸುವಂತೆ ಹಾಗೂ ಮೂರು ಪಾಳಿಯಲ್ಲಿ ಸಿಬ್ಬಂದಿಗೆ ಕೆಲಸದ ಸಮಯ ನಿಗದಿ ಪಡಿಸುವಂತೆ ಆರ್.ಸ್ವರ ಶರತ್ ಅವರು ಪತ್ರದಲ್ಲಿ ಕೋರಿದ್ದಾರೆ.

ಈ ಮನವಿಗೆ ಸಂಬಂಧಿಸಿದಂತೆ ನಿಯಮಾನುಸಾರ ಪರಿಶೀಲಿಸಿ ಮೂರು ಪಾಳಿಯಲ್ಲಿ ಪೊಲೀಸ್ ಸಿಬ್ಬಂದಿಗೆ ಸಮಯ ನಿಗದಿ ಪಡಿಸುವ ಕುರಿತು ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸುವಂತೆ ಜಿ.ಶ್ಯಾಮ ಹೊಳ್ಳ ನಿರ್ದೇಶಿಸಿದ್ದಾರೆ.

ಚಾಕುವಿನಿಂದ ಇರಿದು, ಆಸ್ಪತ್ರೆಗೆ ಸೇರಿಸಿ ತಾಳಿ ಕಟ್ಟಿದ!

ಪ್ರಜಾವಾಣಿ ವಾರ್ತೆ

ಮೈಸೂರು: ಪ್ರೀತಿಸಲು ನಿರಾಕರಿಸಿದ ಸ್ನೇಹಿತೆಗೆ ಚಾಕುವಿನಿಂದ ಇರಿದ ಯುವಕ ನಂತರ ಆಕೆಗೆ ತಾಳಿ ಕಟ್ಟಿದ್ದಾನೆ. ತೀವ್ರವಾಗಿ ಗಾಯಗೊಂಡಿದ್ದ ಯುವತಿ ಶನಿವಾರ ಮೃತಪಟ್ಟಿದ್ದಾರೆ.

ಮಂಡ್ಯ ಜಿಲ್ಲೆಯ ಪಾಂಡವಪುರ ನಿವಾಸಿ ಪೂರ್ಣಿಮಾ (36) ಮೃತರು. ‘ಅದೇ ಗ್ರಾಮದ ಅಭಿಷೇಕ್ ಮತ್ತು ಆಕೆ ಬಾಲ್ಯ ಸ್ನೇಹಿತರಾಗಿದ್ದರು. ಪೂರ್ಣಿಮಾ ಮೈಸೂರಿನಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು. ತನ್ನನ್ನು ಪ್ರೀತಿಸುವಂತೆ ಯುವಕ ಒತ್ತಾಯಿಸುತ್ತಿದ್ದ. ಮನೆಯವರ ಒಪ್ಪಿಗೆ ಇಲ್ಲದ ಕಾರಣ ಆಕೆ ಪ್ರೀತಿ ನಿರಾಕರಿಸುತ್ತಿದ್ದಳು. ಶುಕ್ರವಾರ ಮಧ್ಯಾಹ್ನ ಇಬ್ಬರೂ ಕೃಷ್ಣಮೂರ್ತಿಪುರಂನಲ್ಲಿರುವ ಉದ್ಯಾನಕ್ಕೆ ತೆರಳಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಈ ವೇಳೆ ಇಬ್ಬರ ನಡುವೆ ಮಾತಿನ ಚಕಮಕಿಯಾಗಿದ್ದು, ಇರಿದಿದ್ದಾನೆ. ಬಳಿಕ ಆತನೇ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಅಲ್ಲಿ ಆಕೆ ಅರೆಪ್ರಜ್ಞಾವಸ್ಥೆಯಲ್ಲಿದ್ದಾಗ ತಾಳಿ ಕಟ್ಟಿ ಮೊಬೈಲ್ ಫೋನ್‌ನಲ್ಲಿ ಸೆಲ್ಫಿ ಫೋಟೊ ಕ್ಲಿಕ್ಕಿಸಿಕೊಂಡಿದ್ದಾನೆ. ಪರಾರಿಯಾಗಿದ್ದ ಅಭಿಷೇಕ್‌ನನ್ನು ಪೊಲೀಸರು ಶುಕ್ರವಾರ ರಾತ್ರಿ ಬಂಧಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

‘ಠಾಣೆಗೆ ಸಲ್ಲಿಕೆಯಾಗಿದ್ದು ಕಲರ್ ಫೋಟೊ’

ಮಂಗಳೂರು: ‘ಧರ್ಮಸ್ಥಳ ಗ್ರಾಮದಲ್ಲಿ ಹಲವಾರು ಅಪರಾಧ ಕೃತ್ಯಗಳು ನಡೆದಿರುವುದಾಗಿ ಹೇಳಿರುವ ವ್ಯಕ್ತಿಯು ವಕೀಲರ ಮೂಲಕ ತಲೆಬುರುಡೆ ಮತ್ತು ಅವಶೇಷದ ಕೆಲಭಾಗಗಳು ಇರುವ ಎರಡು ಕಲರ್ ಫೋಟೊಗಳ ಝೆರಾಕ್ಸ್ ಪ್ರತಿಯನ್ನು ಮಾತ್ರ ಸಲ್ಲಿಸಿದ್ದಾರೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

‘ದೂರುದಾರ ವ್ಯಕ್ತಿಯು ವಕೀಲರ ಮೂಲಕ ಬಿಡುಗಡೆ ಮಾಡಿರುವ ಪ್ರಕಟಣೆಯನ್ನು ನೋಡಿ ಹಲವರು ಕಳೇಬರದ ಕುರಿತು ವಿಚಾರಿಸಿದ್ದಾರೆ. ಆದರೆ, ದೂರಿಗೆ ಸಂಬಂಧಿಸಿ ಯಾವುದೇ ಕಳೇಬರ ಠಾಣೆಗೆ ಸಲ್ಲಿಕೆಯಾಗಿಲ್ಲ. ದೂರುದಾರರ ಪರವಾಗಿ ವಕೀಲರು ದೂರು ಸಲ್ಲಿಸುವ ವೇಳೆ ಕಳೇಬರವನ್ನು ಮುಂದಿನ ಹಂತದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸುವುದಾಗಿ ಲಿಖಿತವಾಗಿ ತಿಳಿಸಿದ್ದಾರೆ’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಮುಖ್ಯಮಂತ್ರಿ ವಿರುದ್ಧ ಕ್ರಮಕ್ಕೆ ಒತ್ತಾಯ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಅಧಿಕಾರಿಗಳ ವಿರುದ್ಧ ಹಲವು ಬಾರಿ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಅವರ ವಿರುದ್ಧ ಏಕೆ ಕ್ರಮ ಕೈಗೊಂಡಿಲ್ಲ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯಸಚೇತಕ ಎನ್. ರವಿಕುಮಾರ್ ಅವರು ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಕಾಂಗ್ರೆಸ್ ನಾಯಕರು ಆರೋಪಿಸಿದ್ದಾರೆ. ಜಿಲ್ಲಾಧಿಕಾರಿ, ಪೊಲೀಸ್ ಅಧಿಕಾರಿಗಳ ವಿರುದ್ಧ ಸಿದ್ದರಾಮಯ್ಯ ಅವಹೇಳನಕಾರಿಯಾಗಿ ಮಾತನಾಡಿದ್ದರು. ರಾಷ್ಟ್ರಪತಿಗೆ ಗೌರವ ಕೊಡದೆ, ಏಕವಚನದಲ್ಲೇ ಮಾತಾಡಿದ್ದರು. ಅವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

ಬಿಜೆಪಿ ನಾಯಕರ ವಿರುದ್ಧ ಎಫ್‌ಐಆರ್ ದಾಖಲಿಸುವ ಪೊಲೀಸರು, ಅದೇ ಕೆಲಸ ಕಾಂಗ್ರೆಸ್ ನಾಯಕರು ಮಾಡಿದರೆ ಕ್ರಮ ಕೈಗೊಳ್ಳುವುದಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್‌ಗೆ ಬೇರೆ ಕಾನೂನು ಇದೆಯೇ? ರವಿಕುಮಾರ್ ಯಾವ ರೀತಿಯ ಅಶ್ಲೀಲ ಹೇಳಿಕೆ ನೀಡಿದ್ದಾರೆ ಎಂಬುದನ್ನು ಕಾಂಗ್ರೆಸ್ ಸ್ಪಷ್ಟಪಡಿಸಲಿ ಎಂದರು.

ರಾಜ್ಯದಲ್ಲಿ ಎಲ್ಲೂ ಅಭಿವೃದ್ಧಿ ಕಾರ್ಯ ನಡೆಯದೆ, ಶಾಸಕರು ದಂಗೆ ಏಳುತ್ತಿದ್ದಾರೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣವನ್ನು ಸಿಬಿಐ ತನಿಖೆಗೆ ಒಪ್ಪಿಸಲು ಹೈಕೋರ್ಟ್ ಸೂಚಿಸಿದೆ. ಈ ಸಮಸ್ಯೆಗಳನ್ನು ಮರೆಮಾಚಲು ರವಿಕುಮಾರ್ ಹೇಳಿಕೆಯನ್ನು ವಿವಾದ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಕರ್ನಾಟಕ ಸರ್ಕಾರ
ಸಾರ್ವಜನಿಕ ಆಸ್ಪತ್ರೆ, ಜಯನಗರ,
ವೈದ್ಯಕೀಯ ಅಧೀಕ್ಷರ ಕಚೇರಿ, ಬೆಂಗಳೂರು-560041
ಸಂಖ್ಯೆ:ಸಾಆಜ/ವಾನಿ/ಇ-ಟೆಂಡರ್/05/2025-26 ದಿನಾಂಕ: 05.07.2025
ಇ-ಟೆಂಡರ್ ಪ್ರಕಟಣೆ
ಸಾರ್ವಜನಿಕ ಆಸ್ಪತ್ರೆ ಜಯನಗರ ಬೆಂಗಳೂರು, ಈ ಆಸ್ಪತ್ರೆಯ 2025-26ನೇ ಸಾಲಿಗೆ ವಾಹನ ನಿಲ್ದಾಣ ಗುತ್ತಿಗೆ ಕೆಲಸ ನಿರ್ವಹಣೆಗಾಗಿ, ಮಾನವ ಸಂಪನ್ಮೂಲಗಳ ನೋಂದಾಯಿತ ಸಂಸ್ಥೆಗಳಿಂದ ಸೇವೆ ಪಡೆಯಲು ಇ-ಟೆಂಡರ್ ಪ್ರಕಟಣೆ.
-:ಟೆಂಡರ್ ಅನುಸೂಚಿಗಳು:-

ಟೆಂಡರ್ ವಿವರ	ದಿನಾಂಕ
ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭದ ದಿನಾಂಕ	09.07.205 ರಿಂದ
ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ	23.07.2025 ಸಂಜೆ 4.00 ಗಂಟೆಗೆ
ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ	25.07.2025 ಸಂಜೆ 5.00 ಗಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	27.07.2025 ಸಂಜೆ 4.00 ಗಂಟೆಗೆ

ಇ-ಟೆಂಡರುಗಳ ನಿಯಮ ಮತ್ತು ನಿಬಂಧನೆಗಳನ್ನು ಟೆಂಡರ್ ನಮೂನೆಯಲ್ಲಿ ಲಗತ್ತಿಸಲಾಗಿರುತ್ತದೆ. E-Tender upload through this website: https://kppp.karnataka.gov.in
ಸಹಿ/- ವೈದ್ಯಕೀಯ ಅಧೀಕ್ಷಕರು, ಸಾರ್ವಜನಿಕ ಆಸ್ಪತ್ರೆ, ಜಯನಗರ, ಬೆಂಗಳೂರು.
ವಾಸಸಂಇ/ಸಿಪಿ/ಎಎಎ/1654/2025-26

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಸಂಪೂರ್ಣವಾಗಿ ಕರ್ನಾಟಕ ರಾಜ್ಯ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)
ಟೆಂಡರ್ ಆಹ್ವಾನ ಪ್ರಕಟಣೆ (ಕೆಪಿಪಿಪಿ ಮೂಲಕ ಮಾತ್ರ)
ಬೆಸ್ಕಾಂ ವಿಚಾರಣೆಯ ಸಂಖ್ಯೆ: BESCOM/GM(DAS,SG&TIC)/AMC/LRC-LBS/2025-26/01/Dated: 03/07/2025 ಅನುಸಾರ **ಬೆವಿಕಂನ ಡಾಸ್ ಯೋಜನೆಯಡಿಯಲ್ಲಿ ಅಳವಡಿಸಿರುವ LRC & LBS ಸ್ಕಾಡಾ ಉಪಕರಣಗಳ ವಾರ್ಷಿಕ ಪಾಲನಾ ಗುತ್ತಿಗೆಗಾಗಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.**
ಬಿಡ್ ದಾಖಲೆಗಳನ್ನು **ದಿನಾಂಕ: 09.07.2025, ಮಧ್ಯಾಹ್ನ 16:00 ಗಂಟೆಯ** ನಂತರ **https://kppp.karnataka.gov.in** ವೆಬ್‌ಸೈಟ್ ಮೂಲಕ ಪಡೆಯಬಹುದು.
ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: **+91 80 46010000, +91 80-68948777** ಅಥವಾ ಇ-ಮೇಲ್: **support@eprochelpdesk.com**
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ.
ಸಹಿ/- ಪ್ರಧಾನ ವ್ಯವಸ್ಥಾಪಕರು ಡಾಸ್, ಟಿಐಸಿ & ಎಸ್.ಜಿ, ಬೆವಿಕಂ

ನಗರಸಭಾ ಕಾರ್ಯಾಲಯ, ಮಂಡ್ಯ-571401
ದೂ.ಸಂ:- 08232-226749 ಫ್ಯಾಕ್ಸ್:-08232-221617
ಟಾಲ್ ಫ್ರೀ ನಂ:-1800-4253795
Website: www.mandyacity.mrc.gov.in
Email: itstaff_ulb_mandya@yahoo.co.in
No:CMC/HS/AEE(EE/CR-02/2025-26
ದಿನಾಂಕ:05-07-2025
ಮರು ಟೆಂಡರ್ ಪ್ರಕಟಣೆ - (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಮಂಡ್ಯ ನಗರಸಭೆಯಲ್ಲಿರುವ ವಿವಿಧ ವಾಹನಗಳಿಗೆ ಅವಶ್ಯಕವಾಗಿ ಬೇಕಾಗುವಂತಹ 50 ಜನ ಕ್ಲೀನರ್‌ಗಳನ್ನು ಹೊರಗುತ್ತಿಗೆಆಧಾರದ ಮೇಲೆ ಪೂರೈಸುವ ಟೆಂಡರ್‌ನ್ನು ಅಂದಾಜು ಮೊತ್ತ 139.62 ಲಕ್ಷಗಳು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರಇಂಡೆಂಟ್ ನಂಬರ್ DMA/2025-26/SE5608 ರೀತ್ಯಾ ಆಹ್ವಾನಿಸಲಾಗಿದ್ದು, ನೊಂದಾಯಿತಅರ್ಹಗುತ್ತಿಗೆದಾರರು/ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್‌ನಲ್ಲಿ ಭಾಗವಹಿಸ ಬಹುದಾಗಿದೆ. ಹೆಚ್ಚಿನ ವಿವರಗಳು/ಷರತ್ತುಗಳಿಗಾಗಿ ಕಛೇರಿಯ ವೆಬ್‌ಸೈಟ್ (www.mandyacity.mrc.gov.in) ವಿಳಾಸದಲ್ಲಿ ಹಾಗೂ ಕಛೇರಿಯ ದೂರವಾಣಿ ಸಂಖ್ಯೆ: 08232-226749ಗೆ ಕರೆಮಾಡಿ ಅಥವಾ ಕಛೇರಿಯ ಆರೋಗ್ಯ ಶಾಖೆಯಿಂದ ಮಾಹಿತಿಯನ್ನು ಪಡೆಯಬಹುದಾಗಿದೆ. ಟೆಂಡರ್ ಬಗ್ಗೆ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.inನೋಡಿ ದಿನಾಂಕ:21.06.2025 ಸಂಜೆ 5:00 ಗಂಟೆಯೊಳಗಾಗಿ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತಆಪ್‌ಲೋಡ್ ಮಾಡಬಹುದಾಗಿರುತ್ತದೆ. ತಾಂತ್ರಿಕ ಬಿಡ್‌ನ್ನು ದಿನಾಂಕ: 19.07.2025 ಸಂಜೆ 5:00 ಗಂಟೆಗೆ ತೆರೆಯಲಾಗುವುದು.ಆರ್ಥಿಕ ಬಿಡ್‌ನ್ನು ದಿನಾಂಕ:21.07.2025 ರಂದು ಬೆಳಿಗ್ಗೆ 11:00 ಗಂಟೆಗೆ ತೆರೆಯಲಾಗುವುದು.
ಸಹಿ/-ಅಧ್ಯಕ್ಷರು, ನಗರಸಭೆ, ಮಂಡ್ಯ — ಸಹಿ/-ಪೌರಾಯುಕ್ತರು, ನಗರಸಭೆ, ಮಂಡ್ಯ
ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/270/2025-26

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ,
ಕರ್ನಾಟಕ ಸರ್ಕಾರ / ಕರ್ನಾಟಕ ಅರಣ್ಯ ಇಲಾಖೆ
ಹಳಿಯಾಳ ವಿಭಾಗ, ಹಳಿಯಾಳ-581329
ದೂರವಾಣಿ: 08284-220128 ಇ-ಮೇಲ್: dcfhaliyal@gmail.com
ಕ್ರ. ಸಂ. ಎ2/ಟೆಂಡರ್/ಸಿಆರ್-71/2025-26 ದಿನಾಂಕ: 03-07-2025
ಇ-ಟೆಂಡರ್ ಪ್ರಕಟಣೆ
ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2025-26 ನೇ ಸಾಲಿಗೆ ಹಳಿಯಾಳ ಅರಣ್ಯ ವಿಭಾಗ ವ್ಯಾಪ್ತಿಯ ಹಳಿಯಾಳ ವಲಯದಲ್ಲಿ Construction of Residencial Building ಕಾಮಗಾರಿಗಳನ್ನು ಕೈಗೊಳ್ಳಲು ಪಾರದರ್ಶಕ ನಿಯಮಗಳನುಸಾರ ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ (http://kppp.karnataka.gov.in) ಇ-ಟೆಂಡರ ಕರೆಯಲಾಗಿದ್ದು, ಟೆಂಡರನ್ನು ಇ-ಪೋರ್ಟಲ್ ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್ಡಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02-08-2025 ಅಪರಾಹ್ನ 4.00 ಗಂಟೆ ಆಗಿದ್ದು, ಹೆಚ್ಚಿನ ಮಾಹಿತಿಗಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಹಳಿಯಾಳ ವಿಭಾಗ, ಹಳಿಯಾಳ, ರವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ-08284-220128).
ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ಹಳಿಯಾಳ ವಿಭಾಗ, ಹಳಿಯಾಳ.
DIPR/ADK/KSMCA/358/25-26 Dt. 05.07.2025

ನಗರಸಭಾ ಕಾರ್ಯಾಲಯ, ಹೆಬ್ಬಗೋಡಿ
ಅಂಬೇಡ್ಕರ್ ರಸ್ತೆ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ. ದೂ: 080-27833730
E-Mail: itstaff_ulb_hebbagodi@yahoo.com | Website: www.hebbagodicity.mrc.gov.in
ಸಂ:ಹೆ.ನ.ಸ/ತಾಂ.ಶಾ/ಟೆ.ನೋ/ಸಿ.ಆರ್/11/2025-26 ದಿನಾಂಕ: 05.07.2025
ಅಲ್ಪಾವಧಿ/ಪೂರ್ಣಾವಧಿ ಮರು ಟೆಂಡರ್ ಪ್ರಕಟಣೆ
ಹೆಬ್ಬಗೋಡಿ ನಗರಸಭೆ ವ್ಯಾಪ್ತಿಯಲ್ಲಿ 2025-26ನೇ ಸಾಲಿನ ಎಸ್ ಎಫ್ ಸಿ ಮುಕ್ತನಿಧಿ ಮತ್ತು 2025-26ನೇ ಸಾಲಿನ 15ನೇ ಹಣಕಾಸು ಅನುದಾನ ಹಾಗೂ 2020-21, 2022-23, 2023-24, 2024-25ನೇ ಸಾಲಿನ 15ನೇ ಹಣಕಾಸಿನ ಉಳಿಕೆ ಅನುದಾನ, 2016-17 ಮತ್ತು 2018-19 ಎಸ್ ಎಫ್ ಸಿ 5% ಅನುದಾನ ಹಾಗೂ 2021-22ನೇ ಸಾಲಿನ ನಗರಸಭಾ ನಿಧಿಯ 5% ಮತ್ತು 2025-26ನೇ ಸಾಲಿನ ನಗರಸಭೆ ಅಡಿಯಲ್ಲಿ **ಒಟ್ಟು 18 ಕಾಮಗಾರಿಗಳ ಕನಿಷ್ಠ ಮೊತ್ತ ರೂ. 2.00 ಗರಿಷ್ಠ ಮೊತ್ತ ರೂ. 49.00 ಲಕ್ಷಗಳನ್ನು** ನಿರ್ವಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ 2000 ಹಾಗೂ ಆರ್ಥಿಕ ಇಲಾಖೆಯ ಕೆ.ಜಿ-1 ದಸ್ತಾವೇಜಿನಂತೆ ಅರ್ಹ ಗುತ್ತಿಗೆದಾರರಿಂದ/ಸಂಸ್ಥೆಗಳಿಂದ/ಸೇವಾದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಹಾಗೂ ಕೆ.ಡಬ್ಲ್ಯೂ-1 ಮತ್ತು ಕೆ.ಡಬ್ಲ್ಯೂ-2 ಗುತ್ತಿಗೆದಾರರಿಂದ ಅಲ್ಪಾವಧಿ ಮರುಟೆಂಡರನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ನಿಯಮಾನುಸಾರ ಆಹ್ವಾನಿಸಲಾಗಿದೆ. ಅಲ್ಪಾವಧಿ ಮರುಟೆಂಡರನ್ನು **ದಿನಾಂಕ:14.07.2025 ಸಂಜೆ 5.00 ಗಂಟೆಯವರೆಗೆ** ಕೆ.ಪಿ.ಪಿ ಪೋರ್ಟಲ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ. ಮರುಟೆಂಡರ್ ತೆರೆಯುವ **ದಿನಾಂಕ: 15.07.2025ರಂದು ಸಂಜೆ 5.30 ಗಂಟೆಗೆ ತೆರೆಯಲಾಗುವುದು** ಹಾಗೂ ಪೂರ್ಣಾವಧಿ ಮರುಟೆಂಡರನ್ನು **ದಿನಾಂಕ:21.07.2025 ಸಂಜೆ 5.00 ಗಂಟೆಯವರೆಗೆ** ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ. ಮರುಟೆಂಡರ್ ತೆರೆಯುವ **ದಿನಾಂಕ:22.07.2025ರಂದು ಸಂಜೆ 5.30 ಗಂಟೆಗೆ ತೆರೆಯಲಾಗುವುದು** ಹೆಚ್ಚಿನ ಮಾಹಿತಿಗಾಗಿ **https://kppp.karnataka.gov.in** ನಲ್ಲಿ ವೀಕ್ಷಿಸಬಹುದು ಹಾಗೂ ಯಾವುದೇ ರೀತಿ ಬದಲಾವಣೆಯಿದ್ದಲ್ಲಿ ಅಥವಾ ತಿದ್ದುಪಡಿಯಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/- ಶ್ರೀಮತಿ ಪ್ರಮೀಳ ಪಿ.ರಾಮಚಂದ್ರ, ಅಧ್ಯಕ್ಷರು, ನಗರಸಭೆ, ಹೆಬ್ಬಗೋಡಿ. — ವಾಸಾಸಂಇ/ವಾಪ್ರ/ಜಿಎ/1652/2025-26 — ಸಹಿ/- ಶ್ರೀ ಮಂಜುನಾಥ್ ಆರ್, ಪ್ರಭಾರ ಪೌರಾಯುಕ್ತರು, ನಗರಸಭೆ, ಹೆಬ್ಬಗೋಡಿ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಯೋಜನಾ ವಿಭಾಗ, ಚಾವಿಸನಿನಿ, ಮೈಸೂರು-570017, ದೂರವಾಣಿ ಸಂಖ್ಯೆ: 0821-2544963
ಇ-ಮೇಲ್ ಐಡಿ: gmproj1@cescmysore.org, ವೆಬ್‌ಸೈಟ್: www.cescmysore.org
ಸಂಖ್ಯೆ: ಚಾವಿಸನಿನಿ/ಪ್ರವ್ಯ(ಯೋ)/ಉಪ್ರವ್ಯ-3/ಸಪ್ರವ್ಯ-1/2025-26/9923 ದಿನಾಂಕ: 05.07.2025
ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮೂಲಕ) Call-2
ಚಾ.ವಿ.ಸ.ನಿ.ನಿ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

Works details	Enquiry No.
ಚಾವಿಸನಿನಿ ವ್ಯಾಪ್ತಿಯ ಮೈಸೂರು ಜಿಲ್ಲೆಯಲ್ಲಿ ಸ್ಪರ್ಧಾತ್ಮಕ ದರ ಆಧಾರಿತ ಬಿಡ್ಡಿಂಗ್‌ನಲ್ಲಿ ರೆಸ್ಕೊ ಮಾದರಿಯಲ್ಲಿ ಆಯ್ದ ಸರ್ಕಾರಿ ಕಟ್ಟಡಗಳ ಮೇಲೆ ಬ್ಯಾಟರಿ ಬ್ಯಾಕಪ್‌ನೊಂದಿಗೆ 50 ಕಿ.ವ್ಯಾಟ್ ನಿಂದ 200 ಕಿ.ವ್ಯಾಟ್ ವರೆಗೆ ಒಟ್ಟು 1 ಮೆ.ವ್ಯಾ ಸಾಮರ್ಥ್ಯದ ಆನ್-ಗ್ರಿಡ್ ಸೌರ ಮೇಲ್ಛಾವಣಿ ವಿದ್ಯುತ್ ಸ್ಥಾವರಗಳನ್ನು ಅಳವಡಿಸುವುದು, ಸಮಗ್ರ ನಿರ್ವಹಣೆ ಸೇರಿದಂತೆ ಸಿವಿಲ್ ಕಾಮಗಾರಿಗಳು, ಪೂರೈಕೆ, ನಿರ್ಮಾಣ, ಪರೀಕ್ಷೆ ಮತ್ತು ಚಾಲನೆಗೊಳಿಸುವ ಕಾಮಗಾರಿ.	CESC/Proj-1/2025-26/245/Call-2

ಸದರಿ ಕಾಮಗಾರಿ ಮತ್ತು ಟೆಂಡರ್‌ನ ವಿವರಗಳನ್ನು KPP ಪೋರ್ಟಲ್ **https://kppp.karnataka.gov.in/** ನಲ್ಲಿ **ದಿನಾಂಕ: 05.07.2025** ಅಥವಾ ನಂತರ ಪಡೆಯಬಹುದಾಗಿರುತ್ತದೆ. KPP ಪೋರ್ಟಲ್‌ನ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ **+91-8046010000/8068948777** ಗೆ ಅಥವಾ ಇ-ಮೇಲ್ ವಿಳಾಸ **support@eprochelpdesk.com** ಗೆ ಸಂಪರ್ಕಿಸಬಹುದಾಗಿದೆ.
ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912
ಸಹಿ/- ಪ್ರಧಾನ ವ್ಯವಸ್ಥಾಪಕರು, ಯೋಜನೆಗಳು, ಚಾವಿಸನಿನಿ, ಮೈಸೂರು
ವಾಸಾಸಂಇ/ಮೈಸೂರು/590/ಎಸ್‌ಎಸ್‌ಸಿ/2025-26

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
ಕರ್ನಾಟಕ ಸರ್ಕಾರ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ-1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು - 560052.
No: KREIS/INFR/OTH/117/2025-ADMN/E-221454 ದಿನಾಂಕ: 05.07.2025
ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ **ವಸತಿ ಶಾಲೆ/ಕಾಲೇಜುಗಳಿಗೆ ಇ-ಪೋರ್ಟಲ್ ಮುಖಾಂತರ ವಸತಿ ಶಾಲೆ/ಕಾಲೇಜುಗಳಿಗೆ ಗ್ರೈಂಡರ್‌ಗಳನ್ನು ಒದಗಿಸಲು** ಆಹ್ವಾನಿಸಲಾದ ಟೆಂಡರ್ ಇಂಡೆಂಟ್ ಸಂಖ್ಯೆ: **KREIS/2025-26/IND0081** ದಿನಾಂಕ: 05.07.2025ರಂದು ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, **ಸದರಿ ಟೆಂಡರ್‌ಗಳಿಗೆ ಅಂತಿಮ ದಿನಾಂಕ: 04.08.2025** ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ನೋಡಬಹುದಾಗಿದೆ.
ಸಹಿ/- ಜಂಟಿ ನಿರ್ದೇಶಕರು (ಆಡಳಿತ) ಹಾಗೂ ಟೆಂಡರ್ ಆಹ್ವಾನ ಪ್ರಾಧಿಕಾರ, ಕ.ವ.ಶಿ.ಸಂ.ಸಂಘ
DIPR/CP/YC/1656/2025-26

ಶಾಲಾ ಶಿಕ್ಷಣ ಇಲಾಖೆ
ನಿರ್ದೇಶಕರು, ಪಿ ಎಂ ಪೋಷಣ್ (ಮಧ್ಯಾಹ್ನ ಉಪಾಹಾರ ಯೋಜನೆ),
ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು-560 001
ಸಂ: ಎಂ2/PM POSHAN (MDMS)/Assaying Agency1765812/2025-26 ದಿ:04.07.2025
ಟೆಂಡರ್ ಅಧಿಸೂಚನೆ
2025-26 ನೇ ಸಾಲಿನಲ್ಲಿ ಶಾಲಾ ಶಿಕ್ಷಣ ಇಲಾಖಾ ವತಿಯಿಂದ ಪಿ ಎಂ ಪೋಷಣ್ ಶಕ್ತಿ ನಿರ್ಮಾಣ್ ಕಾರ್ಯಕ್ರಮದಡಿ ಶಾಲಾ ಮಕ್ಕಳಿಗೆ ಬಿಸಿಯೂಟ ಸಿದ್ಧಪಡಿಸಿ ವಿತರಿಸಲು ರಾಜ್ಯದ ಎಲ್ಲಾ ಜಿಲ್ಲೆಗಳ ಬೇಡಿಕೆಗೆ ಅನುಗುಣವಾಗಿ ಆಹಾರ ಧಾನ್ಯಗಳನ್ನು ಇ-ಟೆಂಡರ್ ಮೂಲಕ ಖರೀದಿ ಮಾಡಿ ಸರಬರಾಜುಗೊಳಿಸಲು ಸರ್ಕಾರದಿಂದ ಆದೇಶವಾಗಿದ್ದು, ಇದರಂತೆ ಅರ್ಹ ಸರಬರಾಜುದಾರರಿಂದ ಜಿಲ್ಲೆಯ ತಾಲ್ಲೂಕುವಾರು ಗೋದಾಮುಗಳಿಗೆ **ಸಾಮಾನ್ಯ ಅಕ್ಕಿ, ತೊಗರಿಬೇಳೆ, ಸೂರ್ಯಕಾಂತಿ ಎಣ್ಣೆ ಮತ್ತು ಉಪ್ಪು ಸರಬರಾಜುಗೊಂಡಾಗ ಆಹಾರ ಧಾನ್ಯಗಳ ಗುಣಮಟ್ಟವನ್ನು ಮತ್ತು ಸುರಕ್ಷತೆಯನ್ನು ಪರಿಶೀಲಿಸಿ ವರದಿ ಸಲ್ಲಿಸಲು “ಮೂರನೇ ವ್ಯಕ್ತಿ ಅಸ್ಸೆಯರ್” ಏಜೆನ್ಸಿಯನ್ನು ರಾಜ್ಯ ಹಂತದಲ್ಲಿ ನೇಮಿಸುವ ಸಂಬಂಧ** ಟೆಂಡರ್ ಅಧಿಸೂಚನೆ ಸಂಖ್ಯೆ: ಎಂ2/PM- POSHAN (MDMS)/Assaying Agency1765812/2025-26 ರಲ್ಲಿ ಆಹ್ವಾನಿಸಿದ್ದು, ಇ-ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 14.07.2025** ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ **https://kppp.karnataka.gov.in**ರಲ್ಲಿ ಸಂಪರ್ಕಿಸಿ.
ಸಹಿ/-ನಿರ್ದೇಶಕರು, ಪಿ ಎಂ ಪೋಷಣ್‌ಶಕ್ತಿ ನಿರ್ಮಾಣ್, ಬೆಂಗಳೂರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ
Email: ee_pwdbellary@yahoo.com ದೂರವಾಣಿ ಸಂ: 08392 266123
ಸಂ:ಕಾನಿಇ/ಲೋಇ/ಬವಿ/ಟಿ.ಎಸ್-6/ಕೆಕೆಆರ್‌ಡಿಬಿ/2025-26/1871 ದಿನಾಂಕ:04.07.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https:kppp.karnataka.gov.in**ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1)	PWD/2025-26/RD/WORK_INDENT22316 (Reserved for SC Category)	100.00
2)	PWD/2025-26/RD/WORK_INDENT22429	75.00
3)	PWD/2025-26/RD/WORK_INDENT22430 (Reserved for CAT-II(A) Category)	75.00
4)	PWD/2025-26/BD/WORK_INDENT22304	66.00
5)	PWD/2025-26/BD/WORK_INDENT20054	200.00
6)	PWD/2025-26/RD/WORK_INDENT22453	75.00
7)	PWD/2025-26/RD/WORK_INDENT22452	75.00
8)	PWD/2025-26/RD/WORK_INDENT2245	75.00
9)	PWD/2025-26/RD/WORK_INDENT22287 (Reserved for CAT-I Category)	90.00

ಸೂಚನೆ: ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.
ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.
ಅ)ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ-ಬಿಡ್ ಸಭೆ ದಿನಾಂಕ ಮತ್ತು ಸಮಯ : **09-07-2025 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೊಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಆ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **11-07-2025 ರಂದು 12.00 ಗಂಟೆಯ ವರೆಗೆ.** ಇ)ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **14-07-2025 ರಂದು 16.00 ಗಂಟೆಯ ವರೆಗೆ.** ಈ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.: **15-07-2025 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**
ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/244/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ
ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ
ದೊಡ್ಡಕೆರೆ ಮೈದಾನ, ಇಂದಿರಾನಗರ, ಮೈಸೂರು-570010.
ದೂರವಾಣಿ (ಕಛೇರಿ): 0821-2523626, ಇ-ಮೇಲ್: exhibitionauthority@gmail.com
ಸಂಖ್ಯೆ: ಕವಪ್ರಾ/ಮುಕಾನಿ/2025-26 ದಿನಾಂಕ: 04.07.2025
ಪ್ರಕಟಣೆ
ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣವನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಗೆ “ಇ” ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನ ವಿವರಗಳು ಈ ಕೆಳಕಂಡಂತಿದೆ.

ಕ್ರ. ಸಂ	ಕಾಮಗಾರಿಯ ಹೆಸರು	ಟೆಂಡರ್‌ನ ಮೊತ್ತ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	Construction of Dragon Pond with allied works at Karnataka Exhibition Premises, Mysuru.	ರೂ. 1,49,28,113/-	04.07.2025 ಸಂಜೆ 04.00ಕ್ಕೆ

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಕಛೇರಿ ವೇಳೆಯಲ್ಲಿ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು (ಸಿವಿಲ್), ರವರನ್ನು ಸಂಪರ್ಕಿಸಿ ಹಾಗೂ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಮಾಹಿತಿ ಪಡೆಯಬಹುದು ಎಂದು ಈ ಮೂಲಕ ಕೋರಿದೆ.
ಸಹಿ/- ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ, ಮೈಸೂರು
ವಾಸಾಸಂಇ/ಮೈಸೂರು/ಶಿರಡಿ ಸಾಯಿ/585/2025-26

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ
ಕೋಲಾರ - 563101
e-mail: eepwdkolar07@gmail.com website: www.kpwd.gov.in e-portal: http://kppp.karnataka.gov.in
ದೂರವಾಣಿ ಸಂಖ್ಯೆ: 08152-222022, ಫ್ಯಾಕ್ಸ್ ಸಂಖ್ಯೆ:08152-227443
ಇ-ಟೆಂಡರ್ ಪ್ರಕಟಣೆ- ಕೆಡಬ್ಲ್ಯು -1,3&4
ಟೆಂಡರ್ ಪ್ರಕಟಣೆ ಸಂಖ್ಯೆ-13/2025-26 ದಿನಾಂಕ: 03.07.2025
ಕೋಲಾರ ಜಿಲ್ಲೆ ಕೋಲಾರ, ಕೆ.ಜಿ.ಎಫ್ ಹಾಗೂ ಶ್ರೀನಿವಾಸಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 5054- ಜಿಲ್ಲಾ ಹಾಗೂ ರಾಜ್ಯ ಹೆದ್ದಾರಿ ಇತರೆ ರಸ್ತೆಗಳ ಸುಧಾರಣೆ, 5054- ಜಿಲ್ಲಾ ಮತ್ತು ಇತರೆ ರಸ್ತೆಗಳ ನವೀಕರಣ ಮತ್ತು 8443-ಠೇವಣಿ ವಂತಿಗೆ ಅಡಿಯಲ್ಲಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, **ಕಾಮಗಾರಿಯ ಅಂದಾಜು ಮೊತ್ತ: ಕನಿಷ್ಟ: ರೂ. 15.00 ಲಕ್ಷಗಳು ಹಾಗೂ ಗರಿಷ್ಟ: 800.00 ಲಕ್ಷಗಳು ಮತ್ತು ಇ.ಎಂ.ಡಿ ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ನಲ್ಲಿ ನಮೂದಿಸಿರುತ್ತಾರೆ ಕಾಲಾವಧಿ : 03-09 ತಿಂಗಳು ನಿರ್ವಹಿಸಲು ಸಿವಿಲ್ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ.** ಗುತ್ತಿಗೆದಾರರು ಕೆಡಬ್ಲ್ಯು-1,3&4 ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆಪಿಪಿ ಪೋರ್ಟಲ್ **(Viz., http://kppp.karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.
ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್‌ನಲ್ಲಿ ದಿನಾಂಕ: 19.07.2025 ರಂದು ಸಂಜೆ 16.00 ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: 21.07.2025 ರಂದು ಬೆಳಿಗ್ಗೆ 11.00 ಗಂಟೆಯ ನಂತರ ಕೆ.ಪಿ.ಪಿ ಪೋರ್ಟಲ್ ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು **ಕೆ.ಪಿ.ಪಿ ಪೋರ್ಟಲ್ (Viz.,http://kppp.karnataka.gov.in)**ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.
ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:166/ಕೆಎಸ್‌ಎಂಸಿಎ/2025-26

‘ಪಿಎಂಎಫ್‌ಎಂಇ ಯೋಜನೆ 1 ವರ್ಷ ವಿಸ್ತರಣೆ’

ರಾಜ್ಯದಲ್ಲಿ 5 ಸಾವಿರ ಫಲಾನುಭವಿಗಳಿಗೆ ಸಹಾಯಧನ ಕಲ್ಪಿಸುವ ಗುರಿ– ಕೃಷಿ ಸಚಿವ ಎನ್‌. ಚಲುವರಾಯಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ಯಮ (ಪಿಎಂಎಫ್‌ಎಂಇ) ಯೋಜನೆಯನ್ನು ಒಂದು ವರ್ಷ ವಿಸ್ತರಿಸಿದ್ದು, ರಾಜ್ಯದಲ್ಲಿ 5 ಸಾವಿರ ಫಲಾನುಭವಿಗಳಿಗೆ ಸಹಾಯಧನ ಕಲ್ಪಿಸುವ ಗುರಿ ನೀಡಿದೆ’ ಎಂದು ಕೃಷಿ ಸಚಿವ ಎನ್‌.ಚಲುವರಾಯಸ್ವಾಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ‘ಕೃಷಿಕರನ್ನು ಉದ್ಯಮಿಗಳನ್ನಾಗಿ ಪರಿವರ್ತಿಸುವ ಗುರಿ ಹೊಂದಿರುವ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮವು (ಕೆಪೆಕ್) ಈ ಯೋಜನೆಯನ್ನು ಜಾರಿಗೊಳಿಸುತ್ತಿದೆ. ವೈಯಕ್ತಿಕ ಆಹಾರ ಸಂಸ್ಕರಣ ಉದ್ಯಮಿಗಳು, ರೈತರ ಗುಂಪುಗಳು, ಕೃಷಿ ಉತ್ಪಾದಕರ ಸಂಸ್ಥೆಗಳಿಗೆ (ಎಫ್‌ಪಿಒ) ಯೋಜನೆಯಡಿ ಶೇ 50ರಷ್ಟು ಇಲ್ಲವೇ ಗರಿಷ್ಠ ₹15 ಲಕ್ಷವರೆಗೆ ಸಹಾಯಧನ ಸಿಗಲಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಕ್ರಮವಾಗಿ 60:40ರ ಅನುಪಾತದಲ್ಲಿ ಸಹಾಯಧನ ಭರಿಸಲಿದೆ’ ಎಂದರು.



ಪಿಎಂಎಫ್‌ಎಂಇ ಯೋಜನೆಗೆ ಕರ್ನಾಟಕ ಸರ್ಕಾರ ಶೇ 15ರಷ್ಟು ಟಾಪ್‌ಅಪ್ ಸೌಲಭ್ಯ ಕಲ್ಪಿಸಿದೆ. ಅಲ್ಲದೆ, ಬಜೆಟ್‌ನಲ್ಲಿ ₹ 206 ಕೋಟಿ ಕಾಯ್ದಿರಿಸಲಾಗಿದೆ

ಎನ್‌. ಚಲುವರಾಯಸ್ವಾಮಿ, ಕೃಷಿ ಸಚಿವ

‘ಕೇಂದ್ರ ಸರ್ಕಾರ 2021– 2025ರ ವರೆಗೆ ಪಿಎಂಎಫ್‌ಎಂಎ ಯೋಜನೆಯಡಿ ಐದು ವರ್ಷ ಅವಧಿಗೆ ಇಡೀ ದೇಶಕ್ಕೆ ₹10 ಸಾವಿರ ಕೋಟಿ (ಕೇಂದ್ರ ಶೇ 60- ರಾಜ್ಯ ಶೇ 40) ಸಹಾಯಧನ ನೀಡುವ ಸೌಲಭ್ಯ ಜಾರಿಗೊಳಿಸಿತ್ತು. ಐದು ವರ್ಷದಲ್ಲಿ ರಾಜ್ಯದಲ್ಲಿ 20,051 ಅರ್ಜಿ ಸಲ್ಲಿಕೆಯಾಗಿದ್ದು, 6,698 ಅರ್ಜಿಗಳಿಗೆ ಸಾಲ ಮಂಜೂರಾಗಿದೆ. ಕಿರು ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿ ಸಬ್ಸಿಡಿ ಸೇರಿ ಒಟ್ಟು ₹723 ಕೋಟಿ ಹೂಡಿಕೆಯಾಗಿದೆ. 4,489 ಫಲಾನುಭವಿಗಳಿಗೆ ₹162 ಕೋಟಿ ಸಹಾಯಧನ ಬಿಡುಗಡೆ ಆಗಿದೆ’ ಎಂದರು.

‘ಯೋಜನೆಯಡಿ ಸಿರಿಧಾನ್ಯ ಸಂಸ್ಕರಣೆ, ಬೆಲ್ಲ, ನಿಂಬೆ ಉತ್ಪನ್ನಗಳು, ಬೇಕರಿ ಉತ್ಪನ್ನಗಳು, ಗಾಣದ ಎಣ್ಣೆ, ಮೆಣಸಿನಪುಡಿ, ಶುಂಠಿ ಸಂಸ್ಕರಣಾ ಘಟಕ, ಅನಾನಸ್ ಘಟಕ, ಮಸಾಲ ಉತ್ಪನ್ನಗಳ ಘಟಕ, ತೆಂಗಿನ ಉತ್ಪನ್ನ, ಕೋಳಿ, ಸಮುದ್ರ ಉತ್ಪನ್ನಗಳ ಸಂಸ್ಕರಣಾ ಘಟಕ, ರೊಟ್ಟಿ, ಉಪ್ಪಿನಕಾಯಿ, ಹಪ್ಪಳ ಇತರೆ ಘಟಕ ಸ್ಥಾಪನೆಗೆ ಅನುದಾನ ನೀಡಲಾಗಿದೆ’ ಎಂದರು.

ಸೋಮವಾರದಿಂದ ಸಹಾಯಧನ ಪ್ರಕ್ರಿಯೆ ಶುರು

‘ಕಿರು ಆಹಾರ ಸಂಸ್ಕರಣಾ ಉದ್ದಿಮೆ, ಘಟಕಗಳ ಸ್ಥಾಪನೆಗೆ ಸಹಾಯಧನ ನೀಡುವ ಪ್ರಕ್ರಿಯೆ ಸೋಮವಾರದಿಂದ ಆರಂಭವಾಗಲಿದೆ’ ಎಂದು ಚಲುವರಾಯಸ್ವಾಮಿ ತಿಳಿಸಿದರು.

‘ಉದ್ದಿಮೆ ಸ್ಥಾಪಿಸಿ ಸಹಾಯಧನ ಪಡೆಯಲು 18 ವರ್ಷ ತುಂಬಿರಬೇಕು. ಜಿಲ್ಲಾಸಂಪನ್ಮೂಲ ವ್ಯಕ್ತಿಗಳು ಆಸಕ್ತರಿಗೆ ಡಿಪಿಆರ್ ಸಿದ್ಧಪಡಿಸುವುದರಿಂದ ಹಿಡಿದು ಸಾಲ ಮಂಜೂರಾಗಿ ಸಬ್ಸಿಡಿ ಪಡೆಯುವವರೆಗೆ ನೆರವಾಗಲಿದ್ದಾರೆ’ ಎಂದು ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್‌.ಶಿವಪ್ರಕಾಶ್ ತಿಳಿಸಿದರು.

‘ಮೈಸೂರಿನ ಸಿಎಫ್‌ಟಿಆರ್‌ಐ ಎರಡು ದಿನದ ತರಬೇತಿ ನೀಡಿ ನಂತರ ನಡೆಯುವ ಪರೀಕ್ಷೆಯಲ್ಲಿ ಅರ್ಹರಾದವರನ್ನು ಜಿಲ್ಲಾ ಸಂಪನ್ಮೂಲ ಅಧಿಕಾರಿಗಳನ್ನಾಗಿ ನಿಯೋಜಿಸಲಾಗುತ್ತದೆ’ ಎಂದರು.

‘ಈವರೆಗೆ ಶೇ 61ರಷ್ಟು ಬಿತ್ತನೆ’

ಬೆಂಗಳೂರು: ‘ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ ಈವರೆಗೆ ಶೇ 61ರಷ್ಟು (50.57 ಹೆಕ್ಟೇರ್ ಪ್ರದೇಶ) ಬಿತ್ತನೆಯಾಗಿದ್ದು, ಮುಂಗಾರು ಹಂಗಾಮಿನಲ್ಲಿ 84 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ತಲುಪುವ ವಿಶ್ವಾಸವಿದೆ’ ಎಂದು ಸಚಿವ ಎನ್‌. ಚಲುವರಾಯಸ್ವಾಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ‘ಮುಂಗಾರು ಹಂಗಾಮಿನಲ್ಲಿ ಕೆಲವು ಭಾಗಗಳಲ್ಲಿ ಆಗಸ್ಟ್ 15ರ ವರೆಗೆ ಬಿತ್ತನೆ ನಡೆಯಲಿದೆ. ಹೀಗಾಗಿ, ಬಿತ್ತನೆ ಬೀಜ, ರಸಗೊಬ್ಬರ ಕೊರತೆ ಆಗದಂತೆ ಅಗತ್ಯ ಪ್ರಮಾಣದಲ್ಲಿ ದಾಸ್ತಾನು ಮಾಡಿಕೊಳ್ಳಲಾಗಿದೆ’ ಎಂದರು.

‘ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ 26.77 ಲಕ್ಷ ಟನ್ ರಸಗೊಬ್ಬರ ಬೇಡಿಕೆಯ ನಿರೀಕ್ಷೆ ಇದೆ. ಜುಲೈ 3ರವರೆಗೆ 13.73 ಲಕ್ಷ ಟನ್ ರಸಗೊಬ್ಬರ ಮಾರಾಟವಾಗಿದ್ದು, 9 ಲಕ್ಷ ಟನ್ ದಾಸ್ತಾನಿದೆ’ ಎಂದರು.

‘ಕೃಷಿ, ತೋಟಗಾರಿಕೆ ವಿಶ್ವವಿದ್ಯಾಲಯಗಳು ಹಾಗೂ ಸರ್ಕಾರಿ ಸಂಸ್ಥೆಗಳಿಗೆ ಒಟ್ಟು 14 ಕಡೆ ಇನ್‌ಕ್ಯುಬೇಷನ್ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ. ವಿಜಯಪುರದಲ್ಲಿ ರೈತರು ಸಂಸ್ಕರಿಸಿದ ಒಣದ್ರಾಕ್ಷಿ, ಇತರೆ ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳ ಶೇಖರಣೆಗೆ 4 ಸಾವಿರ ಟನ್ ಸಾಮರ್ಥ್ಯದ ಶೀತಲಗೃಹ ನಿರ್ಮಿಸಲಾಗಿದೆ. ಹುಬ್ಬಳ್ಳಿಯ ಎಪಿಎಂಸಿ ಆವರಣದಲ್ಲಿ 6 ಸಾವಿರ ಟನ್ ಸಾಮರ್ಥ್ಯದ ಗೋದಾಮು ಕಾರ್ಯಾಚರಣೆಗೆ ಸಿದ್ಧವಾಗಿದೆ’ ಎಂದು ವಿವರಿಸಿದರು.

ಕೃಷಿ ಆಯುಕ್ತ ವೈ.ಎಸ್‌. ಪಾಟೀಲ, ಕೆಪೆಕ್ ಅಧ್ಯಕ್ಷ ಬಿ.ಎಚ್‌.ಹರೀಶ ಇದ್ದರು.

ಸುದ್ದಿ 2 ನಿಮಿಷ

‘6 ಸಾವಿರ ಹುದ್ದೆಗಳಿಗೆ ಶೀಘ್ರ ನೇಮಕ’

ಕಲಬುರಗಿ: ‘ವನ್ಯಜೀವಿಗಳ ಸಂರಕ್ಷಣೆ ಹಾಗೂ ಅರಣ್ಯ ಜಮೀನು ಒತ್ತುವರಿಯನ್ನು ಪರಿಣಾಮಕಾರಿಯಾಗಿ ತಡೆಯಲು ಇಲಾಖೆಯಲ್ಲಿ ಖಾಲಿ ಇರುವ 6 ಸಾವಿರ ಕಾಯಂ ಹಾಗೂ ಗುತ್ತಿಗೆ ಆಧಾರಿತ ಹುದ್ದೆಗಳನ್ನು ಶೀಘ್ರವೇ ಭರ್ತಿ ಮಾಡಲಾಗುವುದು’ ಎಂದು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಇತ್ತೀಚೆಗೆ 341 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. 540 ಹುದ್ದೆಗಳ ಭರ್ತಿಗೆ ಪ್ರಕ್ರಿಯೆ ನಡೆಯುತ್ತಿದೆ’ ಎಂದರು.

‘ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅರಣ್ಯ ರಕ್ಷಕರಿಗೆ ಸಕಾಲಕ್ಕೆ ವೇತನ ಪಾವತಿಯಾಗದಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಪ್ರತಿ ತಿಂಗಳು 5ನೇ ತಾರೀಖಿನೊಳಗೆ ವೇತನ ಪಾವತಿ ಮಾಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ’ ಎಂದರು.



‘ಬೆಂಗಳೂರು ನಗರ ಸೇರಿದಂತೆ ರಾಜ್ಯದಾದ್ಯಂತ ಒಟ್ಟಾರೆ 6,231 ಎಕರೆ ಅರಣ್ಯ ಭೂಮಿ ಒತ್ತುವರಿ ತೆರವುಗೊಳಿಸಲಾಗಿದೆ. ಇದರಿಂದ ₹ 10 ಸಾವಿರ ಕೋಟಿ ಮೌಲ್ಯದ ಅರಣ್ಯ ಜಮೀನು ಇಲಾಖೆಯ ಸುಪರ್ದಿಗೆ ಬಂದಂತಾಗಿದೆ’ ಎಂದು ವಿವರಿಸಿದರು.

‘ಜುಲೈ 14ಕ್ಕೆ ಸಿಗಂದೂರು ಸೇತುವೆ ಲೋಕಾರ್ಪಣೆ’

ಶಿವಮೊಗ್ಗ: ಸಾಗರ ತಾಲ್ಲೂಕಿನ ಅಂಬಾರಗೋಡ್ಲು- ಕಳಸವಳ್ಳಿ ನಡುವೆ ನಿರ್ಮಿಸಲಾಗಿರುವ ತೂಗು ಸೇತುವೆಯನ್ನು ಕೇಂದ್ರದ ಹೆದ್ದಾರಿ ಮತ್ತು ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಜುಲೈ 14ರಂದು ಲೋಕಾರ್ಪಣೆ ಮಾಡಲಿದ್ದಾರೆ.

ಇಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಸಂಸದ ಬಿ.ವೈ. ರಾಘವೇಂದ್ರ, ₹473 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ, 2.44 ಕಿ.ಮೀ ಉದ್ದದ ಈ ಸೇತುವೆಯು ಗುಜರಾತಿನ ಓಖಾ ನಂತರ ದೇಶದಲ್ಲಿಯೇ ಎರಡನೇ ಅತಿ ದೊಡ್ಡ ತೂಗು ಸೇತುವೆ ಆಗಿದೆ. ಉದ್ಘಾಟನೆಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸಹ ಪಾಲ್ಗೊಳ್ಳಲಿದ್ದಾರೆ ಎಂದರು.

ಮಲೆನಾಡಿನ ಪ್ರಮುಖ ಯಾತ್ರಾ ಸ್ಥಳ ಸಿಗಂದೂರಿಗೆ ಈ ಸೇತುವೆ ಸಂಪರ್ಕ ಕಲ್ಪಿಸುವ ಕಾರಣಕ್ಕೆ ‘ಸಿಗಂದೂರು ಶ್ರೀ ಚೌಡೇಶ್ವರಿ ಸೇತುವೆ’ ಎಂದು ನಾಮಕರಣ ಮಾಡಲು ಮಲೆನಾಡು ಭಾಗದ ಬಿಜೆಪಿ ಮುಖಂಡರು ಸೇರಿ ನಿರ್ಧರಿಸಿದ್ದೇವೆ. ಆ ಬಗ್ಗೆ ಎನ್‌ಒಸಿ ಕೊಟ್ಟು ರಾಜ್ಯ ಸರ್ಕಾರ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲಿ ಎಂದು ಒತ್ತಾಯಿಸಿದರು.



ಉತ್ತರ ಕನ್ನಡ ಜಿಲ್ಲೆಯ ಅನಮೋಡ ಗಡಿಭಾಗದಿಂದ 4 ಕಿ.ಮೀ ದೂರದಲ್ಲಿ, ಬೆಳಗಾವಿ – ಪಣಜಿ ರಾಷ್ಟ್ರೀಯ ಹೆದ್ದಾರಿ 4ಎ ಅಂಚಿನಲ್ಲಿ ಭೂಕುಸಿತ ಸಂಭವಿಸಿದೆ

ಮಳೆ: ಅನಮೋಡ ಘಟ್ಟದಲ್ಲಿ ಕುಸಿತ

ಪ್ರಜಾವಾಣಿ ವಾರ್ತೆ

ಕಾರವಾರ: ಸತತ ಮಳೆಯಿಂದ ಜೊಯಿಡಾ ತಾಲ್ಲೂಕಿನ ಅನಮೋಡ ಗಡಿಭಾಗದಿಂದ 4 ಕಿ.ಮೀ ದೂರದಲ್ಲಿ, ಗೋವಾ ರಾಜ್ಯದ ಅನಮೋಡ ಘಟ್ಟದಲ್ಲಿ ರಾಷ್ಟ್ರೀಯ ಹೆದ್ದಾರಿ 4ಎ ಅಂಚಿನಲ್ಲಿ ಭೂಕುಸಿತ ಸಂಭವಿಸಿದೆ. ಇದರಿಂದ ಈ ಮಾರ್ಗದಲ್ಲಿ ಸದ್ಯಕ್ಕೆ ವಾಹನಗಳ ಸಂಚಾರ ಸ್ಥಗಿತಗೊಳಿಸಲಾಗಿದೆ.

‘ಭೂ ಕುಸಿತದಿಂದ ಹೆದ್ದಾರಿಯ ಅಂಚು ಕೊಚ್ಚಿಹೋಗಿದೆ. ಸದ್ಯ ಲಘು ವಾಹನಗಳು ಸಂಚರಿಸುತ್ತಿದ್ದರೂ, ಮುನ್ನೆಚ್ಚರಿಕೆ ಕ್ರಮವಾಗಿ ಉಳಿದ ವಾಹನ ಸಂಚಾರ ಸ್ಥಗಿತಗೊಳಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎ.ನಾರಾಯಣ ತಿಳಿಸಿದ್ದಾರೆ.

ಬೆಳಗಾವಿ, ಹುಬ್ಬಳ್ಳಿ ಭಾಗದಿಂದ ರಾಮನಗರ ಮಾರ್ಗವಾಗಿ ಗೋವಾ ಸಾಗಲು ಮುಖ್ಯ ಮಾರ್ಗ ಇದಾಗಿದ್ದು, ನೂರಾರು ವಾಹನಗಳು ನಿತ್ಯ ಸಂಚರಿಸುತ್ತವೆ. ಈ ಮಾರ್ಗವು ಸಂಪೂರ್ಣ ಸ್ಥಗಿತಗೊಂಡರೆ ವಾಹನಗಳು ನೂರಾರು ಕಿ.ಮೀ ಸುತ್ತು ಬಳಸಿ ಸಂಚರಿಸಬೇಕಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ವೇಗದ ಗಾಳಿ ಸಹಿತ ಸಾಧಾರಣ ಪ್ರಮಾಣದಲ್ಲಿ ಮಳೆ ಮುಂದುವರಿದಿದೆ.

ಕೊಡಗು: ಮುಂದುವರಿದ ಮಳೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಶನಿವಾರವೂ ಮಳೆ ಮುಂದುವರಿದಿದೆ. ಭಾಗಮಂಡಲದಲ್ಲಿ 13 ಸೆಂ.ಮೀ., ಶಾಂತಳ್ಳಿಯಲ್ಲಿ 9, ಮಡಿಕೇರಿ, ನಾಪೋಕ್ಲು, ಸಂಪಾಜೆಯಲ್ಲಿ ತಲಾ 5, ಸೋಮವಾರಪೇಟೆ, ಪೊನ್ನಂಪೇಟೆ, ಹುದಿಕೇರಿ, ಶ್ರೀಮಂಗಲದಲ್ಲಿ ತಲಾ 3 ಸೆಂ.ಮೀ. ಮಳೆಯಾಗಿದೆ.

ಜಿಲ್ಲೆಯಾದ್ಯಂತ ಜುಲೈ 6ರಿಂದ ಆ.5ರವರೆಗೆ ಸರಕು, ಸಾಗಣೆಯ ಭಾರಿ ವಾಹನಗಳ ಸಂಚಾರ ನಿಷೇಧಿಸಲಾಗಿದೆ’ ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಆದೇಶ ಹೊರಡಿಸಿದ್ದಾರೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	122.86	24,421	46,160
ಹಾರಂಗಿ	2,859	2,852.20	7,038	6,833
ಕಬಿನಿ	2,284.00	2,280	13,044	9,375
ಹೇಮಾವತಿ	2,922	2,918.86	13,478	8,150
ಲಿಂಗನಮಕ್ಕಿ	1,819	1,791.20	48,348	5,326
ಸೂಪಾ (ಮೀ)	564	540.84	25,804	1,355.80
ಮಾಣಿ	595	584.86	6,300	0
ತುಂಗಭದ್ರಾ	1,633	1,625.01	72,931	64,702
ಮಲಪ್ರಭಾ	2,079.5	2,064.95	9,197	194
ಘಟಪ್ರಭಾ	2175	2,156.30	23,105	1,457
ಭದ್ರಾ *	186	168.5	21,180	5,196
ಆಲಮಟ್ಟಿ (ಮೀ)	519.6	517.26	1,02,140	1,00,670
ನಾರಾಯಣಪುರ (ಮೀ)	492.25	490.70	1,00,000	95,265

* ನೆಲಮಟ್ಟದಿಂದ

ಐವಿಎಫ್: ತಾಯಿಯಾಗುತ್ತಿರುವ ನಟಿ ಭಾವನಾ ರಾಮಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟಿ ಭಾವನಾ ರಾಮಣ್ಣ ಮದುವೆಯಾಗದೆ ತಾವು ತಾಯಿಯಾಗುತ್ತಿರುವ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಹಂಚಿಕೊಂಡಿದ್ದು, ಇದಕ್ಕೆ ಅನೇಕರಿಂದ ಪ್ರಶಂಸೆ ವ್ಯಕ್ತವಾಗಿದೆ. ಐವಿಎಫ್ ತಂತ್ರಜ್ಞಾನದ ಮೂಲಕ ಅವರು ಗರ್ಭ ಧರಿಸಿದ್ದು, ಈಗ ಅವರಿಗೆ ಆರು ತಿಂಗಳು ತುಂಬಿದೆ.

‘ಒಂದು ಹೊಸ ಅಧ್ಯಾಯ, ಒಂದು ಹೊಸ ಲಯ. ಇದನ್ನು ನಾನು ಹೇಳುತ್ತೇನೆ ಎಂದು ಊಹಿಸಿಯೇ ಇರಲಿಲ್ಲ. ನಾನು ಈಗ ಆರು ತಿಂಗಳ ಗರ್ಭಿಣಿ. ಅವಳಿ ಮಕ್ಕಳ ತಾಯಿಯಾಗುತ್ತಿದ್ದೇನೆ. ನನ್ನಲ್ಲಿ ಧನ್ಯತಾಭಾವ ಆವರಿಸಿದೆ’ ಎಂದು ಅವರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

‘20, 30ನೇ ವಯಸ್ಸಿನಲ್ಲಿ ತಾಯಿ ಆಗುವ ಬಗ್ಗೆ ನಾನು ಆಲೋಚಿಸಿರಲಿಲ್ಲ. ಆದರೆ ವಯಸ್ಸು 40 ದಾಟಿದಾಗ ತಾಯಿಯಾಗುವ ಬಯಕೆ ತೀವ್ರವಾಗಿತ್ತು. ಒಂಟಿ ಮಹಿಳೆಯಾಗಿ ಈ ದಾರಿ ಸುಲಭದ್ದಾಗಿರಲಿಲ್ಲ. ಮೊದಲ ಪ್ರಯತ್ನದಲ್ಲೇ ಗರ್ಭಿಣಿ ಆದೆ’ ಎಂದಿದ್ದಾರೆ. ಜತೆಗೆ ಬೇಬಿ ಬಂಪ್ ಚಿತ್ರಗಳನ್ನೂ ಹಂಚಿಕೊಂಡಿದ್ದಾರೆ.



ಭಾವನಾ ರಾಮಣ್ಣ

‘ನನ್ನ ಮಕ್ಕಳಿಗೆ ತಂದೆ ಇಲ್ಲದೇ ಇರಬಹುದು. ಆದರೆ ಮಕ್ಕಳ ಜೊತೆಗೆ ನನ್ನ ಸಹೋದರರು, ಸ್ನೇಹಿತರು ಇರುತ್ತಾರೆ. ನನ್ನಿಷ್ಟದ ಸಂಗಾತಿ ಸಿಕ್ಕಿದ್ದರೆ ನಾನು ಆತನಿಂದಲೇ ಮಗು ಪಡೆಯುತ್ತಿದ್ದೆ. ತಾಯಿಯಾಗಬೇಕೆಂಬ ಅತೀವ ತುಡಿತದಿಂದಲೇ ಈ ಮಾರ್ಗ ಆಯ್ಕೆಮಾಡಿಕೊಂಡೆ’ ಎಂದಿದ್ದಾರೆ.

ಅವರ ಈ ಪೋಸ್ಟ್‌ಗೆ ಸಾಕಷ್ಟು ಪ್ರಶಂಸೆ ವ್ಯಕ್ತವಾಗಿದೆ.

ಲಸಿಕೆ ಅಡ್ಡ ಪರಿಣಾಮ: ಅಧ್ಯಯನ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೃದಯಾಘಾತ, ಹೃದಯಸ್ತಂಭನದಿಂದ ಹಠಾತ್ ಸಾವು ಸಂಭವಿಸುವಲ್ಲಿ ಕೊರೊನಾ ಸೋಂಕು, ಕೋವಿಡ್ ಮತ್ತು ಕೋವಿಡ್ ಲಸಿಕೆಗಳ ಅಡ್ಡಪರಿಣಾಮ ಕಾರಣವೇ ಎಂಬುದರ ಬಗ್ಗೆ ವಿಸ್ತೃತ ಅಧ್ಯಯನದ ಅಗತ್ಯವಿದೆ ಎಂದು ರಾಜ್ಯ ಸರ್ಕಾರ ರಚಿಸಿದ್ದ ತಜ್ಞರ ಸಮಿತಿ ಅಭಿಪ್ರಾಯಪಟ್ಟಿದೆ.

ರಾಜ್ಯದ ಯುವಕರು ಹಠಾತ್ ಹೃದಯಾಘಾತಕ್ಕೆ ಒಳಗಾಗುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿದ್ದ ಬೆನ್ನಲ್ಲೇ, ಈ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಸರ್ಕಾರ ಸೂಚಿಸಿತ್ತು. ಅದಕ್ಕಾಗಿ, ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕ ಡಾ. ರವೀಂದ್ರನಾಥ್ ಅವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯನ್ನೂ ರಚಿಸಿತ್ತು. ಈ ಸಮಿತಿಯ ವರದಿ ಸಿದ್ಧವಾಗಿದ್ದು, ಅದರ ಪ್ರಮುಖಾಂಶಗಳಲ್ಲಿ ಹೀಗೆ ಪ್ರತಿಪಾದಿಸಲಾಗಿದೆ.

‘ಹೃದಯ ಸಂಬಂಧಿ ಕಾಯಿಲೆಗಳಿಂದ ವರದಿಯಾಗುತ್ತಿರುವ ಹಠಾತ್ ಮರಣ ಪ್ರಕರಣಗಳಿಗೆ ‘ದೀರ್ಘಕಾಲದ ಕೋವಿಡ್’ ಕಾರಣ ಎಂಬ ಪ್ರತಿಪಾದನೆಯನ್ನು ಬೆಂಬಲಿಸುವ ದತ್ತಾಂಶಗಳು ನಮ್ಮ ಎದುರು ಇಲ್ಲ’ ಎಂದಿದೆ.

‘ಆದರೆ, ಕೊರೊನಾ ಸೋಂಕು ಮತ್ತು ಲಸಿಕೆಯ ದೀರ್ಘಕಾಲಿನ ಅಡ್ಡ ಪರಿಣಾಮಗಳ ಬಗ್ಗೆ ದೊಡ್ಡ ಮಟ್ಟದ ಸಂಶೋಧನೆಯ ಅಗತ್ಯವಿದೆ. ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿನಂತಹ (ಐಸಿಎಂಆರ್) ಸಂಸ್ಥೆಗಳು ಈ ವಿಚಾರ ಕುರಿತು ಬಹುಶಿಸ್ತೀಯ ಅಧ್ಯಯನ ನಡೆಸಬೇಕು’ ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

ಅಧ್ಯಯನ ವಿವರ

- 251 ಅಧ್ಯಯನಕ್ಕೆ ಒಳಪಡಿಸಿದ ರೋಗಿಗಳು
- 19 ಈ ಹಿಂದೆ ಕೋವಿಡ್ ದೃಢಪಟ್ಟಿದ್ದ ರೋಗಿಗಳು
- 53 ಕೋವಿಡ್ ಲಸಿಕೆಯ ಒಂದು ಡೋಸ್ ಪಡೆದವರು
- 180 ಕೋವಿಡ್ ಲಸಿಕೆಯ ಎರಡು ಡೋಸ್ ಪಡೆದವರು
- 17 ಕೋವಿಡ್ ಲಸಿಕೆಯ ಮೂರು ಡೋಸ್ ಪಡೆದವರು

ಅಧ್ಯಯನಕ್ಕೆ ಒಳಪಟ್ಟವರಿಗೆ ಇದ್ದ ಇತರ ಆರೋಗ್ಯದ ಸಮಸ್ಯೆಗಳು

- 87 ಮಧುಮೇಹ ಇದ್ದವರು
- 102 ಅಧಿಕ ರಕ್ತದೊತ್ತಡ ಇದ್ದವರು
- 35 ರಕ್ತದಲ್ಲಿ ಅಧಿಕ ಕೊಬ್ಬಿನಾಂಶ ಇದ್ದವರು
- 40 ಕುಟುಂಬದಲ್ಲಿ ಹೃದ್ರೋಗ ಇತಿಹಾಸ ಇದ್ದವರು
- 77 ಮಂದಿಗೆ ಯಾವುದೇ ಸಮಸ್ಯೆಗಳು ಇರಲಿಲ್ಲ

ಸಲಹೆ

- ದೈಹಿಕ ಚಟುವಟಿಕೆ ಉತ್ತೇಜಿಸಬೇಕು. ಧೂಮಪಾನ ನಿಲ್ಲಿಸಬೇಕು
- ಡಿಜಿಟಲ್ ಸಾಧನಗಳ ವೀಕ್ಷಣೆಯ ಸಮಯವನ್ನು ಕಡಿಮೆ ಮಾಡಬೇಕು
- ದೇಹಕ್ಕೆ ಅಗತ್ಯವಿರುವಷ್ಟು ನಿದ್ದೆ ಮಾಡುವುದನ್ನು ರೂಢಿಸಿಕೊಳ್ಳಿ. ಒತ್ತಡ ನಿಭಾಯಿಸಿ

ಶಿಫಾರಸ್ಸು

- ಯುವಜನರ ಹಠಾತ್ ಸಾವು ಪ್ರಕರಣಗಳ ಶವಪರೀಕ್ಷೆ ವರದಿ ಆಧಾರಿತ ನೋಂದಣಿ ಆರಂಭಿಸಬೇಕು
- ಶಾಲಾ ಹಂತದಲ್ಲಿಯೇ ಹೃದಯ ತಪಾಸಣೆ, ಜನ್ಮಜಾತ ಹೃದಯ ಕಾಯಿಲೆಗಳಿಗೆ ಸಂಬಂಧಿಸಿದಂತೆ ವಿವರವಾದ ವೈದ್ಯಕೀಯ ಪರೀಕ್ಷೆ ನಡೆಸಬೇಕು. ಇದರಿಂದ ಅಧಿಕ ತೂಕ, ಬೊಜ್ಜು, ಅಧಿಕ ರಕ್ತದೊತ್ತಡದಂತಹ ಸಮಸ್ಯೆಗಳನ್ನು ಗುರುತಿಸಬಹುದಾಗಿದೆ
- ಹೃದಯ ರಕ್ತನಾಳದ ಕಾಯಿಲೆಗಳು, ಅವುಗಳ ಕಾರಣಗಳು, ಅಪಾಯಕಾರಿ ಅಂಶಗಳು, ಆರಂಭಿಕ ಹಂತದಲ್ಲೇ ಪತ್ತೆ ಮತ್ತು ತಡೆಗಟ್ಟುವ ಬಗ್ಗೆ ಸಾರ್ವಜನಿಕ ಆರೋಗ್ಯ ಅಭಿಯಾನಗಳ ಮೂಲಕ ಅರಿವು ಮೂಡಿಸಬೇಕು
- ಆರೋಗ್ಯಕರ ಆಹಾರ ಸೇವನೆ ಮತ್ತು ಉತ್ತಮ ಜೀವನಶೈಲಿ ಅಳವಡಿಕೆಗಳ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು. ಆಹಾರದಲ್ಲಿ ಸಕ್ಕರೆ ಮತ್ತು ಉಪ್ಪಿನ ಅಂಶವನ್ನು ಕಡಿಮೆ ಮಾಡಬೇಕು

‘ಕಳವಳಗಳಿಗೆ ಸ್ಪಂದಿಸುವುದು ನನ್ನ ಕರ್ತವ್ಯ’

‘ಪ್ರೀತಿಪಾತ್ರರನ್ನು ಅನಿರೀಕ್ಷಿತವಾಗಿ ಕಳೆದುಕೊಂಡ ಜನರ ನಿಜವಾದ ಕಳವಳಗಳಿಗೆ ಸ್ಪಂದಿಸುವ ಕರ್ತವ್ಯ ನನ್ನ ಮೇಲಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ.

‘ಹೃದಯಾಘಾತ ಹೆಚ್ಚುತ್ತಿರುವುದಕ್ಕೆ ಕೋವಿಡ್ ಲಸಿಕೆ ಕಾರಣ ಇರಬಹುದು’ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಯನ್ನು ಖಂಡಿಸಿದ್ದ ಬಯೋಕಾನ್ ಕಂಪನಿ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ, ‘ಇದು ವಾಸ್ತವಕ್ಕೆ ವಿರುದ್ಧವಾಗಿದ್ದು, ದಾರಿ ತಪ್ಪಿಸುವಂತಿದೆ’ ಎಂದು ‘ಎಕ್ಸ್’ ವೇದಿಕೆಯಲ್ಲಿ ಹೇಳಿದ್ದರು.

ಕಿರಣ್ ಮಜುಂದಾರ್ ಶಾ ಅವರ ಈ ಹೇಳಿಕೆಗೆ ತಮ್ಮ ‘ಎಕ್ಸ್’ ಖಾತೆಯಲ್ಲಿ ತಿರುಗೇಟು ನೀಡಿರುವ ಮುಖ್ಯಮಂತ್ರಿ, ‘ಪೋಷಕರು ತಮ್ಮ ಚಿಕ್ಕ ಮಕ್ಕಳನ್ನು ಅಥವಾ ಕುಟುಂಬಗಳು ತಮ್ಮ ಅನ್ನದಾತರನ್ನು ಕಳೆದುಕೊಂಡಾಗ ಸ್ಪಷ್ಟತೆಯನ್ನು ಹುಡುಕುವುದು ತಪ್ಪು ಮಾಹಿತಿಯಲ್ಲ. ಅದು ಸಹಾನುಭೂತಿಯಲ್ಲಿ ಬೇರೂರಿರುವ ಆಡಳಿತದ ಕ್ರಿಯೆ’ ಎಂದಿದ್ದಾರೆ.

ಯುವತಿಗೆ ವಂಚನೆ: ಬಿಜೆಪಿ ಮುಖಂಡನ ಪುತ್ರನ ಬಂಧನ

ಪುತ್ತೂರು (ದಕ್ಷಿಣ ಕನ್ನಡ): ಸಹಪಾಠಿ ಯುವತಿಯೊಂದಿಗೆ ಸ್ನೇಹ ಬೆಳೆಸಿ, ಆಕೆ ತಾಯಿಯಾಗುವಂತೆ ಮಾಡಿ, ವಂಚಿಸಿದ ಆರೋಪಿಯನ್ನು ಪೊಲೀಸರು ಮೈಸೂರು ಜಿಲ್ಲೆ ತಿ.ನರಸಿಪುರದಲ್ಲಿ ಬಂಧಿಸಿದ್ದಾರೆ.

ಆರೋಪಿ ತಲೆಮರೆಸಿಕೊಳ್ಳಲು ಸಹಕಾರ ನೀಡಿದ ಆರೋಪದಲ್ಲಿ ಆತನ ತಂದೆಯ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡು, ಬಂಧಿಸಿದ್ದಾರೆ.

ಪುತ್ತೂರು ನಗರದ ಬಪ್ಪಳಿಗೆ ನಿವಾಸಿ ಕೃಷ್ಣ ಜೆ. ರಾವ್ (21) ಮತ್ತು ಆತನ ತಂದೆ ಬಿಜೆಪಿ ಮುಖಂಡ, ನಗರಸಭೆ ಸದಸ್ಯ ಜಗನ್ನಿವಾಸ ರಾವ್ ಬಂಧಿತರು ಎಂದು ಪೊಲೀಸರು ತಿಳಿಸಿದ್ದಾರೆ.

ವೃದ್ಧ ದಂಪತಿಗೆ ಆಸ್ತಿ ಮರಳಿಸಲು ಆದೇಶ

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಉಮರಾಣಿ ಗ್ರಾಮದ ವೃದ್ಧ ದಂಪತಿಗೆ ಸ್ವಯಾರ್ಜಿತ ಆಸ್ತಿ ಮರಳಿಸುವಲ್ಲಿ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.

ಉಮರಾಣಿಯಲ್ಲಿ ರಾಮನಗೌಡ ಪಾಟೀಲ ಹಾಗೂ ಶೈಲಾ ದಂಪತಿ 2 ಎಕರೆ 10 ಗುಂಟೆ ಜಮೀನು ಮತ್ತು ತೋಟದ ಮನೆ ಹೊಂದಿದ್ದಾರೆ. ಅವರ ಇಬ್ಬರು ಪುತ್ರರು ಆಸ್ತಿ ದಾಖಲೆಗಳನ್ನು ಸುಪರ್ದಿಗೆ ತೆಗೆದುಕೊಂಡು, ತಂದೆ– ತಾಯಿಯನ್ನು ಮನೆಯಿಂದ ಹೊರ ಹಾಕಿದ್ದರು. ನೊಂದ ದಂಪತಿ ಚಿಕ್ಕೋಡಿ ಉಪ ವಿಭಾಗಾಧಿಕಾರಿಯವರ ನ್ಯಾಯಾಲಯದ ಮೊರೆ ಹೋಗಿದ್ದರು.

ಈ ಬಗ್ಗೆ ಜೂನ್ 20ರಂದು ‘ಪ್ರಜಾವಾಣಿ’ ಮುಖಪುಟದಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು. ಇದಕ್ಕೆ ಸ್ಪಂದಿಸಿದ ಚಿಕ್ಕೋಡಿ ಉಪ ವಿಭಾಗಾಧಿಕಾರಿ ಸುಭಾಷ ಸಂಪಗಾಂವಿ ‘ಹಿರಿಯ ನಾಗರಿಕರ ರಕ್ಷಣಾ ಕಾಯ್ದೆ–2007’ರಡಿ ಆಸ್ತಿ ಮರಳಿಸುವಂತೆ ಆದೇಶ ಹೊರಡಿಸಿದ್ದಾರೆ. ಆದೇಶದಲ್ಲಿ ‘ಪ್ರಜಾವಾಣಿ’ ವರದಿಯನ್ನೂ ನಮೂದಿಸಿದ್ದಾರೆ.

ವರದಿ ಪರಿಣಾಮ

‘ಮೈಸೂರು ಸಾಹಿತ್ಯ ಸಂಭ್ರಮ’ದಲ್ಲಿ ಬುಕರ್ ಪ್ರಶಸ್ತಿ ವಿಜೇತ ಲೇಖಕಿ ಬಾನು ಮುಷ್ತಾಕ್

‘ಬರಹ ಜೀವಪರ, ಜನಪರ ಆಗಿರಲಿ..’

• ಮೋಹನ್‌ಕುಮಾರ ಸಿ.

ಮುಖ್ಯಾಂಶಗಳು

- ಗಂಡಾಳಿಕೆ ಸಮಾಜದಲ್ಲಿ ಜೀವಂತ
- ಅನುವಾದ ಸೃಜನತ್ವದ ರೂಪಾಂತರ

ಮೈಸೂರು: ಹೊರಗೆ ತುಂತುರು ಮಳೆ ಜಿನುಗುತ್ತಿದ್ದರೆ, ಒಳಗೆ ಕನ್ನಡ ಅಸ್ಮಿತೆ, ಸ್ತ್ರೀವಾದ, ಮುಸ್ಲಿಂ ಸಂವೇದನೆ, ತಂತ್ರಜ್ಞಾನ, ಸಾಹಿತ್ಯ–ಸಂಗೀತ ಕುರಿತ ಚರ್ಚೆ ಕಾವೇರಿತ್ತು.

– ಇಲ್ಲಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ‘ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್’ ಹಾಗೂ ‘ಮೈಸೂರು ಬುಕ್ಸ್ ಕ್ಲಬ್ಸ್’ ಶನಿವಾರ ಆಯೋಜಿಸಿದ್ದ 9ನೇ ಆವೃತ್ತಿಯ ‘ಮೈಸೂರು ಸಾಹಿತ್ಯ ಸಂಭ್ರಮ’ವು ವೈವಿಧ್ಯಮಯ ಚಿತ್ರಣಕ್ಕೆ ಸಾಕ್ಷಿಯಾಗಿತ್ತು.

ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ ವಿಜೇತ ಲೇಖಕಿ ಬಾನು ಮುಷ್ತಾಕ್, ಅನುವಾದಕಿ ದೀಪಾ ಭಾಸ್ತಿ ಅವರ ಗೋಷ್ಠಿಯೊಂದಿಗೆ ಉತ್ಸವ ಅರಳಿತು. ಹಾಸನದಿಂದ ಲಂಡನ್‌ವರೆಗೆ ಬಾನು ಅವರು ಮೂಡಿಸಿದ ಹೆಜ್ಜೆಗುರುತುಗಳ ಮಾತಿಗೆ ಓದುಗರು ಕಿವಿಯರಳಿಸಿದರೆ, ದೀಪಾ ಅವರ ಭಾಷಾಂತರದ ಸವಾಲುಗಳ ಪಾಠಕ್ಕೆ ತಲೆದೂಗಿದರು.

ಜೀವಪರ ಆಗಿರಬೇಕು: ‘ಕಥೆಗಳು ಬದುಕಿಗೆ ಅಭಿಮುಖ ಆಗಿರುತ್ತವೆ. ಅವು ಎಂದಿಗೂ ಜೀವಪರ, ಜನಪರ ಆಗಿರಬೇಕು. ದೇಶದ ಸಮಸ್ಯೆಗಳಿಗೆ ಬರಹಗಾರ ಪ್ರತಿಸ್ಪಂದಿಸಲೇಬೇಕು. ಪರಿಹಾರ ಹುಡುಕುವಂತೆ ಮಾಡಬೇಕು’ ಎಂದು ಬಾನು ಪ್ರತಿಪಾದಿಸಿದರು.

ಭರವಸೆ: ‘ನನ್ನ ಕಥೆಗಳ ಪ್ರಧಾನ ಮನೋಭೂಮಿಕೆ ಭರವಸೆ ಆಗಿದೆ. ಕಥೆಯ ಯಾವ ಪಾತ್ರ, ಮಹಿಳೆ, ವಸ್ತುವೂ ನಿರಾಶಾವಾದದ ಕಡೆ ಹೋಗುವುದಿಲ್ಲ. ಬದುಕು ಎಂದಿಗೂ ಗೋಳೇ ಅಲ್ಲ. ಬಡವರು ಸಮಸ್ಯೆಯಿದೆ ಎಂದು ಗೋಳಾಡುತ್ತಲೇ ಇರುತ್ತಾರೆಯೇ? ಹೋರಾಡುತ್ತಾರೆ’ ಎಂದು ಉದಾಹರಿಸಿದರು.



‘ಮೈಸೂರು ಸಾಹಿತ್ಯ ಸಂಭ್ರಮ’ಕ್ಕೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಹಾಗೂ ಲೇಖಕಿ ಬಾನು ಮುಷ್ತಾಕ್ ಚಾಲನೆ ನೀಡಿದರು. ಶುಭಾ ಸಂಜಯ್ ಅರಸ್, ಪ್ರಹ್ಲಾದ ರಾಮರಾವ್, ಸ್ಯಾಮ್ ಚೆರಿಯನ್, ದೀಪಾ ಭಾಸ್ತಿ ಪಾಲ್ಗೊಂಡಿದ್ದರು – ಚಿತ್ರ: ಹಂಪಾ ನಾಗರಾಜ

‘ಅನುವಾದವು ಲೇಖಕರ ಅಭಿವ್ಯಕ್ತಿಯನ್ನು ಮತ್ತೊಂದು ಭಾಷೆಗೆ ದಾಟಿಸುವುದಾಗಿದೆ. ಪದಶಃ ಅನುವಾದವಲ್ಲದೇ, ಅದು ಸೃಜನತ್ವದ ರೂಪಾಂತರ ಆಗಿದೆ. ಅನುವಾದಕರು ಭಾಷೆಗೆ ನಿಷ್ಠರಾಗಿರಬೇಕು’ ಎಂದು ದೀಪಾ ಭಾಸ್ತಿ ಹೇಳಿದರು.

ಭಾವಗನ್ನಡಿ: ಉತ್ಸವಕ್ಕೆ ಚಾಲನೆ ನೀಡಿದ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ‘ಸಾಹಿತ್ಯವು ಜನರ ಹೋರಾಟ, ಕನಸುಗಳ ಭಾವಗನ್ನಡಿಯಾಗಿದೆ. ಜನ ಸಂಸ್ಕೃತಿಯೊಂದಿಗೆ ಬೆರೆತಿರುವ ಅದು ನಮ್ಮ ಸೃಜಶೀಲತೆ, ಬಹುತ್ವ, ಸೌಹಾರ್ದತೆ, ಬೌದ್ಧಿಕ ಸ್ವಾತಂತ್ರ್ಯದ ಸಂಭ್ರಮವಾಗಿದೆ’ ಎಂದು ಅವರು ಹೇಳಿದರು.

ಡಿಆರ್‌ಡಿಒ ನಿವೃತ್ತ ವಿಜ್ಞಾನಿ ಪ್ರಹ್ಲಾದ್ ರಾಮ್‌ರಾವ್, ‘ಸಂಗೀತ, ನಾಟಕ, ನೃತ್ಯ, ಕವಿತ್ವ, ವಿಜ್ಞಾನ, ತಂತ್ರಜ್ಞಾನದ ಬೆಳವಣಿಗೆಯೇ ದೇಶದ ಬೆಳವಣಿಗೆಯಾಗಿದೆ’ ಎಂದು ಹೇಳಿದರು.

ಟ್ರಸ್ಟ್‌ನ ಅಧ್ಯಕ್ಷೆ ಶುಭಾ ಸಂಜಯ್ ಅರಸ್, ಉಪಾಧ್ಯಕ್ಷ ಸ್ಯಾಮ್ ಚೆರಿಯನ್, ಕಾರ್ಯದರ್ಶಿ ತಂಗಂ ಪಣಕ್ಕಲ್ ಪಾಲ್ಗೊಂಡಿದ್ದರು.

‘ಪರಿಷತ್ತು ಮುಖ್ಯವೋ.. ಅಧ್ಯಕ್ಷರೋ’

‘ಕನ್ನಡ ಸಾಹಿತ್ಯ ಪರಿಷತ್ತು ಈಗಿರುವ ಪರಿಸ್ಥಿತಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ನೀವು ಒಪ್ಪಿಕೊಳ್ಳುವುದಿಲ್ಲ ಎಂದುಕೊಂಡಿದ್ದೆ’ ಎಂಬ ಪ್ರಶ್ನೆಗೆ ಉತ್ತರಿಸಿದ ಬಾನು ಮುಷ್ತಾಕ್, ‘ಪರಿಷತ್ತು ಮುಖ್ಯವೋ.. ಅಧ್ಯಕ್ಷರೋ’ ಎಂದು ಮರುಪ್ರಶ್ನೆ ಹಾಕಿದರು.

‘ಕಸಾಪ ಅಧ್ಯಕ್ಷರ ನಡವಳಿಕೆ ಪ್ರಶ್ನಿಸಬೇಕು; ಅವರ ವಿರುದ್ಧ ತನಿಖೆ ಆಗಬೇಕು ಎಂಬುದನ್ನು ಒಪ್ಪುತ್ತೇನೆ. ಸರ್ಕಾರವೂ ತನಿಖೆಗೆ ಆದೇಶಿಸಿದೆ. ಫಲಿತಾಂಶ ನೋಡೋಣ’ ಎಂದರು.

‘ಕಸಾಪ ಅಧ್ಯಕ್ಷರದು ಬದಲಾವಣೆಯೇ, ಒತ್ತಡವೇ ಎನ್ನುವುದು ತಿಳಿಯಬೇಕಿದೆ’

ಪ್ರಜಾವಾಣಿ ವಾರ್ತೆ

ಮೈಸೂರು: ‘88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನ ಒಪ್ಪಿಕೊಳ್ಳುವ ಬಗ್ಗೆ ಮುಂದಿನ ಬೆಳವಣಿಗೆಗಳನ್ನು ಗಮನಿಸಿ ನಿರ್ಧರಿಸುತ್ತೇನೆ’ ಎಂದು ಬುಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಕ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಸಂಘದಿಂದ ಶನಿವಾರ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದ ಅವರು, ‘ಹಾವೇರಿಯಲ್ಲಿ ನಡೆದ ಸಮ್ಮೇಳನದಲ್ಲಿ ಅಲ್ಪಸಂಖ್ಯಾತರಿಗೆ ಗೋಷ್ಠಿಗೂ ಅವಕಾಶ ನೀಡದ ಅಧ್ಯಕ್ಷರು (ಮಹೇಶ್ ಜೋಶಿ), ಈ ಬಾರಿ ಸರ್ವಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿದ್ದಾರೆ. ಇದನ್ನು ಅವರಲ್ಲಾದ ಬದಲಾವಣೆಯೇ, ಒತ್ತಡವೇ, ಸಾಮಾಜಿಕ ಸ್ಥಿತ್ಯಂತರವೇ ಅಥವಾ ಅನಿವಾರ್ಯವೇ ಎಂಬುದನ್ನು ತಿಳಿದುಕೊಳ್ಳಬೇಕಿದೆ’ ಎಂದರು.

‘ಮಹೇಶ್ ಜೋಶಿ ಅವರ ಮೇಲಿನ ಆರೋಪಗಳು ಸರ್ವಾಧ್ಯಕ್ಷ ಸ್ಥಾನ ಒಪ್ಪಿಕೊಳ್ಳದಿರಲು ಮುಖ್ಯ ಕಾರಣವಾಗಿದ್ದು, ಇಂತಹ ಅಧ್ಯಕ್ಷರಿರುವಾಗ ಈ ಸ್ಥಾನಮಾನ ಒಪ್ಪಿಕೊಳ್ಳಬೇಕೋ ಎಂಬ ಪ್ರಶ್ನೆ ಇದೆ. ಸಮ್ಮೇಳನದ ಲೆಕ್ಕಾಚಾರದಲ್ಲಿ ದೋಷವಾದಾಗ ಸರ್ಕಾರ ಏನು ಮಾಡುತ್ತಿದೆ ಎಂಬ ಪ್ರಶ್ನೆ ಬರುತ್ತದೆ. ತನಿಖೆ ನಡೆಸಿ, ತಪ್ಪಿದ್ದರೆ ಕ್ರಮ ಕೈಗೊಳ್ಳಬೇಕಿದೆ. ಅದರ ಹೊರಾತಾಗಿ ಪ್ರಜಾಸತ್ತಾತ್ಮಕವಾಗಿ ಸರ್ವಾಧ್ಯಕ್ಷರ ಆಯ್ಕೆ ಮಾಡಿದ್ದು, ಸಂಸ್ಥೆಯ ಆಹ್ವಾನಕ್ಕೆ ಧನ್ಯವಾದ ಸಲ್ಲಿಸುತ್ತೇನೆ’ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಒಂದು ವರ್ಗ ನಿಮ್ಮನ್ನು ಅಭಿನಂದಿಸಲಿಲ್ಲವೇಕೆ ಎಂಬ ಪ್ರಶ್ನೆಗೆ, ‘ನನ್ನ ಕಥೆಗಳಲ್ಲಿ ಬರುವ ಪಾತ್ರಗಳು ಆಶಾವಾದವನ್ನೇ ಹಂಚಿವೆ; ನನ್ನ ವ್ಯಕ್ತಿತ್ವವೂ ಅದೇ ಆಗಿದೆ. ಅವರು ಮುಂದಿನ ದಿನಗಳಲ್ಲಾದರೂ ಅಭಿನಂದಿಸುತ್ತಾರೆಂಬ ನಂಬಿಕೆ ಇದೆ’ ಎಂದರು.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ವಿರುದ್ಧ ವಿಧಾನಪರಿಷತ್‌ನ ಬಿಜೆಪಿಯ ಸದಸ್ಯ ಎನ್‌. ರವಿಕುಮಾರ್ ಅವಹೇಳನಕಾರಿ ಹೇಳಿಕೆ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿ, ‘ಸಮಾಜದಲ್ಲಿ ಗಂಡಾಳಿಕೆ ವ್ಯವಸ್ಥೆ ಇನ್ನೂ ಹೋಗಿಲ್ಲ. ಆದರೆ, ಶಾಲಿನಿ ಪ್ರಜಾಸತಾತ್ಮಕ ಅಧಿಕಾರ ಹೊಂದಿದ್ದಾರೆ. ಇದನ್ನು ಅಪಮಾನವಾಗಿ ತೆಗೆದುಕೊಳ್ಳದೆ, ಸಾರ್ವಜನಿಕವಾಗಿ ಮಹಿಳಾ ನಿಂದನೆ ಮಾಡುವವರ ವಿರುದ್ಧ ಕಾಯ್ದೆ ತರಲಿ. ಅಶ್ಲೀಲ ಮಾತನಾಡುವವರಿಗೆ ಮಾನಸಿಕ ಚಿಕಿತ್ಸೆ ಆಗಬೇಕಿದೆ’ ಎಂದರು.

ದಸರಾ ಉದ್ಘಾಟನೆಗೆ ಆಹ್ವಾನಿಸುವ ಬಗ್ಗೆ ಚರ್ಚೆ ಆಗುತ್ತಿರುವುದಕ್ಕೆ ಪ್ರತಿಕ್ರಿಯಿಸಿ, ‘ಕೂಸು ಹುಟ್ಟುವ ಮುನ್ನವೇ ಹೆಸರಿಡುವುದು ಬೇಡ. ಮುಖ್ಯಮಂತ್ರಿಯವರ ನಿರ್ಧಾರಕ್ಕೆ ಕಾಯೋಣ’ ಎಂದು ನಗೆ ಚೆಲ್ಲಿದರು.

ಸುತ್ತೂರು ಮಠದಿಂದ ಅಭಿನಂದನೆ: ಬಾನು ಮುಷ್ತಾಕ್ ಅವರನ್ನು ಇಲ್ಲಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠದಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿನಂದಿಸಿದರು.

ಮಠಕ್ಕೆ ಆಹ್ವಾನಿಸಿದ್ದ ಶ್ರೀಗಳು, ಬಾನು ಸಾಧನೆಯನ್ನು ಶ್ಲಾಘಿಸಿದರು. ಸಾಹಿತ್ಯ ವಲಯದವರು, ಪ್ರಗತಿಪರ ಹೋರಾಟಗಾರರು ಹಾಗೂ ಸಾಹಿತ್ಯ ಪ್ರೇಮಿಗಳು ಕೂಡ ಪಾಲ್ಗೊಂಡಿದ್ದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಚಿಟಿಕೆ ಸುದ್ದಿ

ಅಮೆರಿಕದಲ್ಲಿ ನೇಹಲ್ ಮೋದಿ ಬಂಧನ

ನವದೆಹಲಿ (ಪಿಟಿಐ): ದೇಶದಿಂದ ಪಲಾಯನ ಮಾಡಿರುವ ವಜ್ರ ವ್ಯಾಪಾರಿ ನೀರವ್ ಮೋದಿ ಅವರ ತಮ್ಮ ನೇಹಲ್ ಮೋದಿ ಅವರನ್ನು ಅಮೆರಿಕದಲ್ಲಿ ಬಂಧಿಸಲಾಗಿದೆ.

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನೇಹಲ್ ಮೋದಿ ಅವರನ್ನು ಭಾರತಕ್ಕೆ ಹಸ್ತಾಂತರಿಸುವಂತೆ ಜಾರಿ ನಿರ್ದೇಶನಾಲಯ ಮತ್ತು ಸಿಬಿಐ ಅಮೆರಿಕಕ್ಕೆ ಜಂಟಿಯಾಗಿ ಮನವಿ ಸಲ್ಲಿಸಿದ್ದವು. 'ಈ ಪ್ರಕರಣದ ಮುಂದಿನ ವಿಚಾರಣೆ ಜುಲೈ 17ರಂದು ನಡೆಯಲಿದ್ದು, ನೇಹಲ್ ಜಾಮೀನು ಕೋರಿ ಅರ್ಜಿ ಸಲ್ಲಿಸುವ ಸಾಧ್ಯತೆ ಇದೆ. ಆದರೆ, ಕೋರ್ಟ್ ಇದನ್ನು ತಿರಸ್ಕರಿಸಬಹುದು' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.



ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಿಂದ (ಪಿಎನ್‌ಬಿ) ₹13 ಸಾವಿರ ಕೋಟಿ ಸಾಲ ಪಡೆದು, ವಂಚಿಸಿದ ಪ್ರಕರಣದಲ್ಲಿ ನೀರವ್ ಮೋದಿ ಮತ್ತು ಮೆಹುಲ್ ಚೋಕ್ಸಿ ಅವರೊಂದಿಗೆ ನೇಹಲ್ ಮೋದಿಯ ಪಾತ್ರವೂ ಇದ್ದು, ಈ ಕುರಿತು ತನಿಖೆ ನಡೆಯಲಿದೆ ಎಂದು ಜಾರಿ ನಿರ್ದೇಶನಾಲಯ ಹೇಳಿದೆ.

ಕಾರ್ಖಾನೆಯಲ್ಲಿ ಸ್ಫೋಟ: ಗಾಯಾಳು ಸಾವು

ಹೈದರಾಬಾದ್ (ಪಿಟಿಐ): ಸಂಗಾರೆಡ್ಡಿ ಜಿಲ್ಲೆಯ ಸಿಗಾಚಿ ಔಷಧ ಕಾರ್ಖಾನೆಯಲ್ಲಿ ಸಂಭವಿಸಿದ ಸ್ಫೋಟದ ಗಾಯಾಳುಗಳಲ್ಲಿ ಒಬ್ಬರು ಶನಿವಾರ ಮೃತಪಟ್ಟಿದ್ದಾರೆ. ಇದರಿಂದ ದುರಂತದಲ್ಲಿ ಬಲಿಯಾದವರ ಸಂಖ್ಯೆ 40ಕ್ಕೆ ಏರಿಕೆಯಾಗಿದೆ.

ಜೂನ್ 30ರಂದು ನಡೆದ ಸ್ಫೋಟದಲ್ಲಿ ಉತ್ತರ ಪ್ರದೇಶದ 48 ವರ್ಷದ ಕಾರ್ಮಿಕರೊಬ್ಬರಿಗೆ ಶೇಕಡ 70ರಷ್ಟು ಸುಟ್ಟ ಗಾಯಗಳಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಅವರು ಮೃತಪಟ್ಟರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಒಟ್ಟು 19 ಗಾಯಾಳುಗಳು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಸಂಗಾರೆಡ್ಡಿ ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿ ಚಂದ್ರಶೇಖರ್ ಮಾಹಿತಿ ನೀಡಿದರು. ದುರಂತದಲ್ಲಿ ಇನ್ನೂ 9 ಮಂದಿ ನಾಪತ್ತೆಯಾಗಿದ್ದು, ಅವರಿಗಾಗಿ ಶೋಧ ಕಾರ್ಯ ಮುಂದುವರಿದಿದೆ ಎಂದು ಹೇಳಿದರು.

ಡಿಎನ್‌ಎ ಪರೀಕ್ಷೆ ಮೂಲಕ ಮೃತದೇಹಗಳ ಗುರುತು ಪತ್ತೆಹಚ್ಚುವ ಮತ್ತು ಅವುಗಳನ್ನು ಕುಟುಂಬ ಸದಸ್ಯರಿಗೆ ಹಸ್ತಾಂತರಿಸುವ ಪ್ರಕ್ರಿಯೆಯೂ ನಡೆಯುತ್ತಿದೆ ಎಂದರು.

ಪಾಕ್ ವಶದಲ್ಲಿರುವ ರೈತನ ಕರೆತರಲು ಒತ್ತಾಯ

ಚಂಡೀಗಢ (ಪಿಟಿಐ): ಆಕಸ್ಮಿಕವಾಗಿ ಪಾಕಿಸ್ತಾನ ಗಡಿಯೊಳಗೆ ಪ್ರವೇಶಿಸಿರುವ ಪಂಜಾಬ್‌ನ ಫಿರೋಜ್‌ಪುರದ ರೈತನನ್ನು ಸುರಕ್ಷಿತವಾಗಿ ಕರೆತರುವಂತೆ ಆತನ ಕುಟುಂಬಸ್ಥರು ವಿದೇಶಾಂಗ ಸಚಿವಾಲಯವನ್ನು ಒತ್ತಾಯಿಸಿದ್ದಾರೆ.

ಪಾಕಿಸ್ತಾನ ಗಡಿಯಲ್ಲಿರುವ ತಮ್ಮ ಜಮೀನಿಗೆ ಅಮೃತ್‌ಪಾಲ್ ಸಿಂಗ್ ಅವರು ಜೂನ್ 21ರಂದು ಕೃಷಿ ಕೆಲಸಕ್ಕೆಂದು ಹೋಗಿದ್ದರು. ಗಡಿಭಾಗದಿಂದ ಸಂಜೆ 5 ಗಂಟೆಯೊಳಗೆ ವಾಪಾಸ್ ಬರಲು ಅವರಿಗೆ ಸಾಧ್ಯವಾಗಿರಲಿಲ್ಲ.

ಪಾಕಿಸ್ತಾನದ ಕಡೆಗಿರುವ ಮಾನವ ಹೆಜ್ಜೆ ಗುರುತುಗಳನ್ನು ಪತ್ತೆ ಹಚ್ಚಿದ್ದ ಗಡಿ ಭದ್ರತಾ ಪಡೆಯು (ಬಿಎಸ್‌ಎಫ್) ಈ ಬಗ್ಗೆ ಪಾಕಿಸ್ತಾನಿ ರೇಂಜರ್‌ಗಳೊಂದಿಗೆ ಮೂರರಿಂದ ನಾಲ್ಕು ಸಭೆಗಳನ್ನು ನಡೆಸಿತ್ತು. ಭಾರತೀಯನನ್ನು ವಶಕ್ಕೆ ಪಡೆದಿರುವುದನ್ನು ಆರಂಭದಲ್ಲಿ ಪಾಕಿಸ್ತಾನ ಒಪ್ಪಿಕೊಂಡಿರಲಿಲ್ಲ. ಅಮೃತ್‌ಪಾಲ್ ಸ್ಥಳೀಯ ಪೊಲೀಸರ ವಶದಲ್ಲಿರುವ ಬಗ್ಗೆ ಜೂನ್ 27ರಂದು ಪಾಕಿಸ್ತಾನ ದೃಢಪಡಿಸಿತ್ತು.

ಬಾದಲ್ 'ಧಾರ್ಮಿಕ ಅಪರಾಧದ ತಪ್ಪಿತಸ್ಥ'

ಚಂಡೀಗಢ (ಪಿಟಿಐ): ಬಿಹಾರದ ತಖ್ತ್ ಶ್ರೀ ಪಾಟ್ನಾ ಸಾಹಿಬ್‌ನ ನಿರ್ದೇಶನವನ್ನು ನಿರ್ಲಕ್ಷಿಸಿದ ಹಾಗೂ ತನ್ನ ಮುಂದೆ ಹಾಜರಾಗದ ಕಾರಣಕ್ಕೆ ಶಿರೋಮಣಿ ಅಕಾಲಿ ದಳದ ಮುಖ್ಯಸ್ಥ ಸುಖ್‌ಬೀರ್ ಸಿಂಗ್ ಬಾದಲ್ ಅವರನ್ನು 'ಧಾರ್ಮಿಕ ಅಪರಾಧದ ತಪ್ಪಿತಸ್ಥ (ತನ್‌ಖೈಯಾ)' ಎಂದು ಶನಿವಾರ ಘೋಷಿಸಲಾಗಿದೆ.


ಸುಖ್‌ಬೀರ್

ಪಂಜಾಬ್‌ನಲ್ಲಿ 2007ರಿಂದ 2017ರ ವರೆಗೆ ಶಿರೋಮಣಿ ಅಕಾಲಿ ದಳ ಸರ್ಕಾರವು ಮಾಡಿದ ತಪ್ಪುಗಳಿಗೆ ಕಳೆದ ವರ್ಷ ಆಗಸ್ಟ್‌ನಲ್ಲಿ ಅಕಾಲ್ ತಖ್ತ್ 'ತನ್‌ಖೈಯಾ' ಎಂದು ಉಚ್ಚರಿಸಿತ್ತು. 'ಬಾದಲ್ ಅವರನ್ನು ಧಾರ್ಮಿಕ ಅಪರಾಧದ ತಪ್ಪಿತಸ್ಥ' ಎಂದು ಘೋಷಿಸಲು ಬಿಹಾರದ ಪಾಟ್ನಾದಲ್ಲಿ ತಖ್ತ್ ಶ್ರೀ ಪಾಟ್ನಾ ಸಾಹಿಬ್ ಜಥೇದಾರ್ ಮತ್ತು 'ಗ್ರಂಥಿ' ಮುಖ್ಯಸ್ಥ ಗಿಯಾನಿ ಬಲದೇವ್ ಸಿಂಗ್ ಅವರು ಶುಕ್ರವಾರ ನಿರ್ಧರಿಸಿದ್ದರು.

'ಮುಂಬೈ ಬೇರ್ಪಡಿಸುವ ಹುನ್ನಾರ'

ಮಹಾರಾಷ್ಟ್ರ: ತ್ರಿಭಾಷಾ ಸೂತ್ರದ ಹೇರಿಕೆ ಕುರಿತು ರಾಜ್ ಠಾಕ್ರೆ ಅಭಿಮತ

ಮುಂಬೈ/ಪಂಢರಪುರ (ಪಿಟಿಐ): 'ರಾಜ್ಯದ ಮೇಲೆ ತ್ರಿಭಾಷಾ ಸೂತ್ರವನ್ನು ಹೇರುವುದರ ಹಿಂದೆ ಮುಂಬೈ ನಗರವನ್ನು ಮಹಾರಾಷ್ಟ್ರದಿಂದ ಬೇರ್ಪಡಿಸುವ ಹುನ್ನಾರ ಅಡಗಿದೆ. ಮರಾಠಿ ಜನರ ಒಗ್ಗಟ್ಟಿನ ಕಾರಣದಿಂದ ಸರ್ಕಾರವು ತನ್ನ ನಿರ್ಧಾರದಿಂದ ಹಿಂದೆ ಸರಿಯಿತು' ಎಂದು ಎಂಎನ್‌ಎಸ್ ಮುಖ್ಯಸ್ಥ ರಾಜ್ ಠಾಕ್ರೆ ಶನಿವಾರ ಹೇಳಿದರು.

ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಹಿಂದಿ ಭಾಷೆಯನ್ನು ಕಲಿಸುವ ಬಗ್ಗೆ ರಾಜ್ಯ ಸರ್ಕಾರವು ಆದೇಶ ಹೊರಡಿಸಿತ್ತು. ಭಾರಿ ವಿರೋಧ ವ್ಯಕ್ತವಾದ ಕಾರಣ ಈ ಆದೇಶವನ್ನು ಸರ್ಕಾರ ಹಿಂಪಡೆಯಿತು. ಈ ಬಗ್ಗೆ ಎಂಎನ್‌ಎಸ್ ಮತ್ತು ಶಿವಸೇನೆ (ಉದ್ಧವ್ ಬಣ) ಪಕ್ಷಗಳು ವರ್ಲಿಯಲ್ಲಿ 'ವಿಜಯ' ರ್ಯಾಲಿಯನ್ನು ಆಯೋಜಿಸಿದ್ದವು.

ರ್ಯಾಲಿಯಲ್ಲಿ ಮಾತನಾಡಿದ ರಾಜ್, 'ಭಾಷೆ ಕುರಿತ ವಿವಾದದ ಬಳಿಕ ಸರ್ಕಾರವು ಜಾತಿ ಹೆಸರಿನಲ್ಲಿ ಜನರನ್ನು ವಿಭಜಿಸಲು ಮುಂದಾಗುತ್ತದೆ. ವಿಭಜನೆ ಮತ್ತು ಆಡಳಿತ– ಇವೇ ಬಿಜೆಪಿಯ ಮೂಲಮಂತ್ರ' ಎಂದರು.

'ಹಿಂದೂ ಹಾಗೂ ಮುಸ್ಲಿಮರನ್ನು ವಿಭಜಿಸಲು ಕಳೆದ ವಿಧಾನಸಭಾ ಚುನಾವಣೆ ವೇಳೆ ಬಿಜೆಪಿಯು 'ವಿಭಜನೆಗೊಂಡರೆ ನಾಶವಾಗುತ್ತೇವೆ' (ಬಟೇಂಗೆ ತೋ ಕಟೇಂಗೆ) ಘೋಷಣೆ ರೂಪಿಸಿತ್ತು. ಮರಾಠಿ ಜನರು ತಮ್ಮೊಳಗೇ ಜಗಳವಾಡಿಕೊಂಡಿದ್ದರಿಂದಲೇ ರಾಜ್ಯ ದಲ್ಲಿ ದೆಹಲಿಯ ಗುಲಾಮರು ಅಧಿಕಾರ ಹಿಡಿದರು' ಎಂದು ವಾಗ್ದಾಳಿ ನಡೆಸಿದರು.


ವರ್ಲಿಯಲ್ಲಿ ಆಯೋಜಿಸಿದ್ದ 'ವಿಜಯ' ರ್ಯಾಲಿಯಲ್ಲಿ ಎಂಎನ್‌ಎಸ್ ಮುಖ್ಯಸ್ಥ ರಾಜ್ ಠಾಕ್ರೆ ಹಾಗೂ ಶಿವಸೇನಾ (ಉದ್ಧವ್ ಬಣ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಒಟ್ಟಿಗೆ ವೇದಿಕೆ ಹಂಚಿಕೊಂಡರು –ಎಎಫ್‌ಪಿ ಚಿತ್ರ

ಬದಲಾಗುತ್ತಿರುವ ರಾಜಕೀಯ ಲೆಕ್ಕಾಚಾರ

20 ವರ್ಷಗಳ ಬಳಿಕ ರಾಜ್ ಠಾಕ್ರೆ ಹಾಗೂ ಉದ್ಧವ್ ಠಾಕ್ರೆ ಅವರು ಒಟ್ಟಿಗೆ ವೇದಿಕೆ ಹಂಚಿಕೊಂಡಿದ್ದಾರೆ. ರ್ಯಾಲಿಯಲ್ಲಿ ಎರಡೂ ಪಕ್ಷಗಳ ಕಾರ್ಯಕರ್ತರು ಭಾರಿ ಸಂಖ್ಯೆಯಲ್ಲಿ ಜಮಾಯಿಸಿದ್ದರು. 'ಒಟ್ಟಿಗೆ ಚುನಾವಣೆ ಎದುರಿಸುತ್ತೇವೆ' ಎಂದು ಉದ್ಧವ್ ಅವರು ಹೇಳುತ್ತಿದ್ದಂತೆಯೇ ಕಾರ್ಯಕರ್ತರು ಚಪ್ಪಾಳೆ ತಟ್ಟಿ ಹರ್ಷ ವ್ಯಕ್ತಪಡಿಸಿದರು.

ರಾಜ್ ಅವರು ಮಗ ಅಮಿತ್ ಠಾಕ್ರೆ ಹಾಗೂ ಉದ್ಧವ್ ಅವರ ಮಗ ಆದಿತ್ಯ ಠಾಕ್ರೆ ಕೂಡ ಇದೇ ಮೊದಲ ಬಾರಿಗೆ ವೇದಿಕೆ ಹಂಚಿಕೊಂಡರು. ಎನ್‌ಸಿಪಿ (ಶರದ್ ಬಣ) ಕಾರ್ಯಾಧ್ಯಕ್ಷೆ ಸುಪ್ರಿಯಾ ಸುಳೆ ಸೇರಿದಂತೆ ಹಲವು ನಾಯಕರು ರ್ಯಾಲಿಯಲ್ಲಿ ಉಪಸ್ಥಿತರಿದ್ದರೂ ರಾಜ್ ಮತ್ತು ಉದ್ಧವ್ ಮಾತ್ರವೇ ವೇದಿಕೆ ಮೇಲಿದ್ದರು. ಇಬ್ಬರೂ ಸಹೋದರರು ಸೇರಿರುವುದು ಎರಡೂ ಪಕ್ಷಗಳಿಗೆ ಹೊಸ ಹುರುಪು ನೀಡುತ್ತದೆ. ಚುನಾವಣೆಯಲ್ಲಿ ಅನುಕೂಲವೂ ಆಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಆದೇಶವನ್ನು ಸರ್ಕಾರ ಹಿಂಪಡೆದಿದ್ದರ ಕುರಿತು ಸಹೋದರರು ಸಂಭ್ರಮಾಚರಣೆ ಮಾಡಬೇಕೆನ್ನಿಸಿದರೆ ಮಾಡಲಿ. ಸಂಭ್ರಮಾಚರಣೆ ಮಾಡುವುದು ಮತ್ತು ಇಬ್ಬರು ಸಹೋದರರು ಮೈತ್ರಿ ಮಾಡಿಕೊಳ್ಳುವುದು ಎರಡೂ ಬೇರೆ ಬೇರೆ ವಿಚಾರ
ಹರ್ಷವರ್ಧನ್ ಸಪಕಲ್, ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ

ಒಟ್ಟಿಗೆ ಇರಲೆಂದೇ ನಾವು ಈಗ ಒಂದುಗೂಡಿದ್ದೇವೆ. ಮುಂಬೈನ ಪಾಲಿಕೆ ಚುನಾವಣೆಯಲ್ಲಿ ಮತ್ತು ರಾಜ್ಯದಲ್ಲಿ ಮುಂಬರುವ ಚುನಾವಣೆಯಲ್ಲಿ ಒಟ್ಟಿಗೆ ಸ್ಪರ್ಧಿಸಿ ಅಧಿಕಾರ ಹಿಡಿಯುತ್ತೇವೆ
ಉದ್ಧವ್ ಠಾಕ್ರೆ, ಶಿವಸೇನೆ (ಉದ್ಧವ್ ಬಣ) ಮುಖ್ಯಸ್ಥ

ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರೇ ನನ್ನನ್ನು ಮತ್ತು ಉದ್ಧವ್ ಅನ್ನು ಒಂದುಗೂಡಿಸಿದ್ದಾರೆ. ಬಾಳಾ ಸಾಹೇಬ್ ಠಾಕ್ರೆ ಅವರಿಗೂ ಇದು ಸಾಧ್ಯವಾಗಿರಲಿಲ್ಲ
ರಾಜ್ ಠಾಕ್ರೆ, ಎಂಎನ್‌ಎಸ್ ಮುಖ್ಯಸ್ಥ

ರಾಜಕಾರಣದಲ್ಲಿ ತಮ್ಮ ಭವಿಷ್ಯವನ್ನು ಭದ್ರ ಮಾಡಿಕೊಳ್ಳುವ ಹತಾಶ ಯತ್ನವಿದು. ರ್ಯಾಲಿಯು ಕುಟುಂಬದ ಪುನರ್ಮಿಲನದಂತಿತ್ತು
ಬಿಜೆಪಿ

ನಾನು ಇನ್ನೂ 30–40 ವರ್ಷ ಬದುಕುವೆ: ದಲೈ ಲಾಮಾ

ಧರ್ಮಶಾಲಾ (ಪಿಟಿಐ): 'ಜನರ ಸೇವೆಗಾಗಿ ಇನ್ನೂ 30ರಿಂದ 40 ವರ್ಷ ಬದುಕಲಿದ್ದೇನೆ' ಎಂದು ಟಿಬೆಟ್‌ನ ಬೌದ್ಧ ಧರ್ಮಗುರು ಹಾಗೂ ಆಧ್ಯಾತ್ಮಿಕ ಗುರು ದಲೈ ಲಾಮಾ ತಿಳಿಸಿದ್ದಾರೆ. ಆ ಮೂಲಕ ಉತ್ತರಾಧಿಕಾರಿ ಆಯ್ಕೆ ಮೂಲಕ ವಿಶ್ರಾಂತಿ ಪಡೆಯಲಿದ್ದಾರೆ ಎಂಬ ಊಹಾಪೋಹಗಳನ್ನು ತಳ್ಳಿಹಾಕಿದ್ದಾರೆ.

ಭಾನುವಾರ 90ನೇ ಹುಟ್ಟುಹಬ್ಬ ಆಚರಿಸಿಕೊಳ್ಳಲಿರುವ ಅವರು ಇಲ್ಲಿನ ಮೆಕ್ಲೋಡ್ ಗಂಜ್ ಮುಖ್ಯ ದಲೈ ಲಾಮಾ ದೇವಾಲಯದಲ್ಲಿ ಶನಿವಾರ ದೀರ್ಘಾಯುಸ್ಸಿಗಾಗಿ ಹಮ್ಮಿಕೊಂಡಿದ್ದ ಪ್ರಾರ್ಥನೆಯಲ್ಲಿ ಮಾತನಾಡಿದರು. 'ನಾನು ಅನೇಕ ಭವಿಷ್ಯವಾಣಿಗಳನ್ನು ನೋಡಿದ್ದೇನೆ. ನನಗೆ ಅವಲೋಕಿತೇಶ್ವರ (ಬೌದ್ಧ ಧರ್ಮದ ಪ್ರಕಾರ, ವಿಶ್ವದ ದೇವರು) ಅವರ ಆಶೀರ್ವಾದ ಇದೆ ಎಂದು ನಂಬಿದ್ದೇನೆ. ಇದುವರೆಗೂ ನಾನು ಅತ್ಯುತ್ತಮ ಕೆಲಸಗಳನ್ನು ಮಾಡಿದ್ದೇನೆ. ಇನ್ನೂ 30ರಿಂದ 40 ವರ್ಷ ಬದುಕಲಿದ್ದೇನೆ. ನಿಮ್ಮ ಆಶೀರ್ವಾದದಿಂದಲೇ ಎಲ್ಲವೂ ಸಾಧ್ಯವಾಗಿದೆ' ಎಂದರು.

ಲಾಮಾ ಅವರ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಬೌದ್ಧ ಧರ್ಮ ಅನುಸರಿಸುತ್ತಿರುವ ಕೇಂದ್ರ ಸಚಿವ ಕಿರಣ್ ರಿಜಿಜು, ರಾಜೀವ್ ರಂಜನ್ ಸಿಂಗ್, ಅರುಣಾಚಲ ಪ್ರದೇಶ ಮುಖ್ಯಮಂತ್ರಿ ಪೆಮಾ ಖಂಡು, ಸಿಕ್ಕಿಂ ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಾಂಗ್, ಹಾಲಿವುಡ್ ನಟ ರಿಚರ್ಡ್ ಗೇರ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು.

'ಬಾಲ್ಯದಿಂದಲೂ ಅವಲೋಕಿತೇಶ್ವರ ಜೊತೆಗೆ ಬಲವಾದ ಸಂಬಂಧ ಹೊಂದಿರುವುದು ನನಗೆ ಅನುಭವಕ್ಕೆ ಬಂದಿದೆ. ಆದ್ದರಿಂದಲೇ ಬೌದ್ಧ ಧರ್ಮದ ಸೇವೆ ಮಾಡುತ್ತಿದ್ದು, ಟಿಬೆಟ್‌ನ ಪರಿಸ್ಥಿತಿಯಲ್ಲಿಯೂ ಸುಧಾರಿಸಿದೆ. ಈಗಲೂ ನಾನು 130 ವರ್ಷದವರೆಗೂ ಬದುಕಲಿದ್ದೇನೆ ಎಂದು ನಂಬಿದ್ದೇನೆ' ಎಂದರು.


ಧರ್ಮಶಾಲಾದಲ್ಲಿರುವ ದೇವಾಲಯದಲ್ಲಿ ದೀರ್ಘಾಯುಸ್ಸಿಗಾಗಿ ಹಮ್ಮಿಕೊಂಡಿರುವ ಪ್ರಾರ್ಥನೆಯಲ್ಲಿ ಭಾಗವಹಿಸಿದ ದಲೈ ಲಾಮಾ–ಪಿಟಿಐ ಚಿತ್ರ

ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಸಾವಿರಾರು ಭಕ್ತರು ಭಾಗಿ

ಪುರಿ: 'ಬಹುದಾ' ರಥಯಾತ್ರೆ ಸಂಪನ್ನ

● ಉ.ಮ.ಮಹೇಶ್

ಪುರಿ (ಒಡಿಶಾ): ಧಾರ್ಮಿಕ ಯಾತ್ರಾಸ್ಥಳ ಪುರಿಯಲ್ಲಿ 9 ದಿನ ಅಸಂಖ್ಯ ಭಕ್ತರನ್ನು ನಿತ್ಯ ಸೂಜಿಗಲ್ಲಿನಂತೆ ಸೆಳೆದಿದ್ದ ಪುರಿ ಜಗನ್ನಾಥ ದೇವರ 'ಬಹುದಾ' ರಥಯಾತ್ರೆ ಶನಿವಾರ ಅದ್ದೂರಿಯಾಗಿ ಸಂಪನ್ನಗೊಂಡಿತು.

ಜಗನ್ನಾಥ, ಸುಭದ್ರಾ, ಬಲಭದ್ರ ಅವರ ಮೂರ್ತಿಗಳಿದ್ದ ಅಲಂಕೃತ ರಥಗಳಾದ ನಂದಿಘೋಷ, ದರ್ಪದಳನ ಮತ್ತು ತಳಧ್ವಜ ರಥಬೀದಿಯಲ್ಲಿ ಸಾಗಿ ರಾತ್ರಿ 8 ಗಂಟೆ ಸುಮಾರಿಗೆ ಜಗನ್ನಾಥ ಮಂದಿರವನ್ನು ತಲುಪಿದವು.

ಭಾನುವಾರ ಈ ಮೂರೂ ಮೂರ್ತಿಗಳಿಗೆ ಸಾಂಪ್ರದಾಯಿಕ ಚಿನ್ನಾಭರಣ ಅಲಂಕಾರ 'ಸೋನಾ ವೇಷ' ಮತ್ತು ಮೂಲಸ್ಥಾನದಲ್ಲಿ ಮೂರ್ತಿಗಳ ಪ್ರತಿಷ್ಠಾಪನೆಯ ಮೂಲಕ ಈ ವರ್ಷದ ಹೆಸರಾಂತ ರಥಯಾತ್ರೆಗೆ ತೆರೆಬೀಳಲಿದೆ.

ಸುಮಾರು 200 ಅಡಿ ಅಗಲದ ರಸ್ತೆಯಲ್ಲಿ ಗುಂಡೀಚಾ ದೇವಸ್ಥಾನದಿಂದ ಮಂದಿರ ತಲುಪುವವರೆಗೂ 3.7 ಕಿ.ಮೀ ಕ್ರಮಿಸಿದ ಈ ರಥಯಾತ್ರೆಗೆ, ರಸ್ತೆಯುದ್ದಕ್ಕೂ ಕಿಕ್ಕಿರಿದು ಸೇರಿದ್ದ ಲಕ್ಷಾಂತರ ಜನರು ಸಾಕ್ಷಿಯಾದರು. ಹಲವರು ರಥಕ್ಕೆ ಕಟ್ಟಲಾಗಿದ್ದ ಹಗ್ಗ ಹಿಡಿದು ಎಳೆದು ಸಾರ್ಥಕ ಭಾವವನ್ನು ಸಂಭ್ರಮಿಸಿದರು.

'ಜಗನ್ನಾಥ ಸ್ವಾಮಿ ನಯನ ಪಥಧಾಮಿ ಭವತುಮೆ..' 'ಜೈ ಜಗನ್ನಾಥ, ಜೈ ಸುಭದ್ರಾ, ಜೈ ಬಲದೇವ..', ಬೋಲೊ ಜೈ ಜಗನ್ನಾಥ..' ಘೋಷಣೆಗಳು ಲಯಬದ್ಧ ಕರತಾಡನದ ಜೊತೆಗೆ ಮಾರ್ದನಿಸಿತು. ಕಾಲಿಡಲೂ ಜಾಗವಿಲ್ಲದಂತೆ ಕಿಕ್ಕಿರಿದು ಸೇರಿದ್ದ ಜನರ ನಡುವೆ ಹಾದು ರಥಗಳು ನಿಗದಿತ ಸ್ಥಾನ ತಲುಪುತ್ತಿದ್ದಂತೆ ಜಿಲ್ಲಾಡಳಿತ, ಅಧಿಕಾರಿಗಳು ನಿರಾಳರಾದರು.

ಆಷಾಢದ ಶುಕ್ಲ ಪಕ್ಷ ದ್ವಿತೀಯ ನಿಮಿತ್ತ ರಥೋತ್ಸವ ಆರಂಭವಾಗಿದ್ದ ಜೂನ್ 27ರಂದು ವಿಪರೀತ ಸೆಕೆ, ದಟ್ಟಣೆಯಿಂದ 625 ಮಂದಿ ಅಸ್ವಸ್ಥಗೊಂಡಿದ್ದರು. ನಂತರ ಎರಡೇ ದಿನದಲ್ಲಿ ಗುಂಡೀಚಾ ಮಂದಿರದ ಬಳಿ ಸಂಭವಿಸಿದ್ದ ಕಾಲ್ತುಳಿತದಲ್ಲಿ ಮೂವರು ಅಸುನೀಗಿದ್ದರು.

ಇದರಿಂದ ಎಚ್ಚೆತ್ತಿದ್ದ ಜಿಲ್ಲಾಡಳಿತ, ಪೊಲೀಸ್ ಇಲಾಖೆ ಮುಂಜಾಗ್ರತೆ ವಹಿಸಿದ್ದು, ಭದ್ರತೆ ಬಲಪಡಿಸಿತ್ತು. ಜೊತೆಗೆ, ಅಲ್ಲಲ್ಲಿ ಭಕ್ತಸಮೂಹದ ಮೇಲೆ ನೀರು ಸಿಂಪಡಿಸಲು ವ್ಯವಸ್ಥೆ ಮಾಡಲಾಗಿತ್ತು. ಆದರೂ, ನಿಯಂತ್ರಣ ಮೀರಿದ ಜನಸಂದಣಿಯಿತ್ತು. ಆಗಾಗ್ಗೆ ಸುರಿದ ತುಂತುರು ಮಳೆಯೂ ಜನರನ್ನು ತಣ್ಣಗಿಡಲು ನೆರವಾಯಿತು.


ಪುರಿಯಲ್ಲಿ ಶನಿವಾರ ಜರುಗಿದ ಜಗನ್ನಾಥ ಸ್ವಾಮಿ ಮೂರ್ತಿಯಿದ್ದ ಬಹುದಾ ರಥಯಾತ್ರೆಗೆ ಅಸಂಖ್ಯಾತ ಭಕ್ತರು ಸಾಕ್ಷಿಯಾದರು ಪಿಟಿಐ ಚಿತ್ರ

20 ಎಕರೆ ವಿಸ್ತೀರ್ಣದಲ್ಲಿ ಇಸ್ಕಾನ್ ಸಂಕೀರ್ಣ ನಿರ್ಮಿಸಲು ಕ್ರಮ

ಪುರಿಯಲ್ಲಿ ಜಗನ್ನಾಥ ರಥಯಾತ್ರೆ ನಡೆಯುವ ಅವಧಿಯಲ್ಲಿ ಕರ್ನಾಟಕ ಮೂಲದ ಪ್ರವಾಸಿಗರಿಗೆ ಸುಗಮ ದರ್ಶನ, ವಾಸ್ತವ್ಯ ಸೇರಿದಂತೆ ಅಗತ್ಯ ಸೇವೆ ಒದಗಿಸಲು ಶಾಶ್ವತ ವ್ಯವಸ್ಥೆಯ ನಿರ್ಮಾಣಕ್ಕೆ ಇಸ್ಕಾನ್ ಚಾಲನೆ ನೀಡಿದೆ.

ಪುರಿ ಹೊರವಲಯದಲ್ಲಿ 20 ಎಕರೆ ಜಮೀನು ಖರೀದಿಸಿದ್ದು, ಸ್ಥಳೀಯ ಭಕ್ತರಿರುವ ಟ್ರಸ್ಟ್ ಸಹಯೋಗದಲ್ಲಿ ಈ ಯೋಜನೆ ಕಾರ್ಯಗತಗೊಳಿಸಲಾಗುವುದು ಎಂದು ಬೆಂಗಳೂರು ಇಸ್ಕಾನ್‌ನ ಉಪಾಧ್ಯಕ್ಷ ನವೀನ ನೀರದ ದಾಸ ತಿಳಿಸಿದರು.

ದೇಗುಲ, ವಾಸ್ತವ್ಯ ಕೊಠಡಿಗಳು, ಅಕ್ಷಯಪಾತ್ರ ಅಡುಗೆ ಕೋಣೆ, ಬಹುಜನ ವಾಸ್ತವ್ಯ ಕೊಠಡಿ (ಡಾರ್ಮಿಟರಿ), ಭಜನಾ ಮಂದಿರ, ಗ್ರಂಥಾಲಯ, ಆಯುರ್ವೇದ ಕೇಂದ್ರ ಹಾಗೂ ಮಾಹಿತಿ ಕೇಂದ್ರಗಳನ್ನು ಉದ್ದೇಶಿತ ಸಂಕೀರ್ಣವು ಹೊಂದಿರಲಿದೆ ಎಂದು ಇಸ್ಕಾನ್ ಅಂತರರಾಷ್ಟ್ರೀಯ ಮಾಧ್ಯಮ ವಿಭಾಗದ ಸಂಯೋಜಕರೂ ಆಗಿರುವ ಅವರು ವಿವರಿಸಿದರು. ಬೆಂಗಳೂರು ಇಸ್ಕಾನ್‌ನ ಮಾನ್ಯತೆ ಹೊಂದಿರುವ ಸ್ಥಳೀಯ ಮುಖಂಡರ ಟ್ರಸ್ಟ್ ಈ ಸಂಕೀರ್ಣವನ್ನು ನಿರ್ವಹಿಸಲಿದೆ. ಸ್ಥಳೀಯ ಪರಂಪರೆ, ಸಂಸ್ಕೃತಿ ಮತ್ತು ವಾಸ್ತುಶಿಲ್ಪವನ್ನು ಬಿಂಬಿಸುವಂತೆ ಸಂಕೀರ್ಣ ನಿರ್ಮಾಣ ಆಗಲಿದೆ. ಈ ಸಂಕೀರ್ಣದಲ್ಲಿ ಕೃಷ್ಣ ದೇಗುಲದ ಜೊತೆಗೆ ಜಗನ್ನಾಥ, ಸುಭದ್ರಾ ಮತ್ತು ಬಲರಾಮರ ಆಲಯವು ಇರಲಿದೆ ಎಂದರು.

ಆನ್‌ಲೈನ್ ಮೂಲಕ ನಡೆದ ಈ ಸಂವಾದದ ವೇಳೆ ಇಸ್ಕಾನ್ ಬೆಂಗಳೂರು ಮಾಧ್ಯಮ ವಿಭಾಗದ ಉಸ್ತುವಾರಿ ಮೊಹೋತ್ಸಾಹ ಚೈತನ್ಯ ದಾಸ ಮತ್ತು ವಿಮಲ ಕೃಷ್ಣದಾಸ ಅವರು ಪುರಿಯಲ್ಲಿ ಉಪಸ್ಥಿತರಿದ್ದರು.

ಉತ್ಸವದ ಕೊನೆಯ ದಿನ ಮೂರು ದೇವರ ಮೂರ್ತಿಗಳನ್ನು ಮರಳಿ ಸ್ವಸ್ಥಾನ ಅಂದರೆ ದ್ವಾರಕೆಗೆ ಕರೆತರಲಾಗುತ್ತದೆ. ಇದಕ್ಕೆ ಸಾಕ್ಷಿಯಾಗುವ ಎಲ್ಲರನ್ನು ವೃಂದಾವನ ವಾಸಿಗಳು ಎಂದೇ ನಾವು ಭಾವಿಸುತ್ತೇವೆ
ಮೊಹೋತ್ಸಾಹ ಚೈತನ್ಯ ದಾಸ, ಇಸ್ಕಾನ್, ಬೆಂಗಳೂರು

ಸಂಜಯ್ ಭಂಡಾರಿ 'ಆರ್ಥಿಕ ಅಪರಾಧಿ'



ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಹಾಗೂ ತೆರಿಗೆ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಲಂಡನ್ ಮೂಲದ ಶಸ್ತ್ರಾಸ್ತ್ರ ಸಲಹೆಗಾರ ಸಂಜಯ್ ಭಂಡಾರಿ ಅವರನ್ನು 'ಪಲಾಯನ ಮಾಡಿದ ಆರ್ಥಿಕ ಅಪರಾಧಿ' ಎಂದು ದೆಹಲಿ ಕೋರ್ಟ್ ಶನಿವಾರ ಘೋಷಿಸಿದೆ.

ಭಂಡಾರಿ 2016ರಿಂದ ಲಂಡನ್‌ನಲ್ಲಿ ತಲೆಮರೆಸಿಕೊಂಡಿದ್ದಾರೆ ಎಂದು ಆರೋಪಿಸಿ ಜಾರಿ ನಿರ್ದೇಶನಾಲಯ ಕೋರ್ಟ್‌ಗೆ ಮನವಿ ಸಲ್ಲಿಸಿತ್ತು. ಭಂಡಾರಿ ಹಸ್ತಾಂತರಕ್ಕೆ ಭಾರತ ಸಲ್ಲಿಸಿದ್ದ ಮನವಿಯನ್ನು ಇತ್ತೀಚೆಗೆ ಲಂಡನ್ ಕೋರ್ಟ್ ತಿರಸ್ಕರಿಸಿತ್ತು. ಇದೀಗ ದೆಹಲಿ ವಿಶೇಷ ನ್ಯಾಯಾಲಯ, ಇ.ಡಿ ಮನವಿಯನ್ನು ಪರಿಗಣಿಸಿ 2018ರ 'ದೇಶಭ್ರಷ್ಟ ಆರ್ಥಿಕ ಅಪರಾಧಿಗಳ ಕಾಯ್ದೆ'ಯಡಿ ಭಂಡಾರಿಯನ್ನು 'ಪಲಾಯನ ಮಾಡಿದ ಆರ್ಥಿಕ ಅಪರಾಧಿ'ಯಾಗಿ ಘೋಷಿಸಿದೆ.

ಭಂಡಾರಿ ಮತ್ತು ಇತರರ ವಿರುದ್ಧ ಹಣ ಅಕ್ರಮ ವರ್ಗಾವಣೆ ಪ್ರಕರಣದಡಿ ಜಾರಿ ನಿರ್ದೇಶನಾಲಯ 2017ರಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿದೆ.

ಸಾಂವಿಧಾನಿಕ ಪ್ರಸ್ತುತತೆ ಇಲ್ಲ: ಸಿಬಲ್


ಕಪಿಲ್ ಸಿಬಲ್

ನವದೆಹಲಿ (ಪಿಟಿಐ): ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಯಶವಂತ್ ವರ್ಮಾ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಆಂತರಿಕ ತನಿಖಾ ವರದಿಗೆ 'ಸಾಂವಿಧಾನಿಕ ಪ್ರಸ್ತುತತೆ ಇಲ್ಲ' ಎಂದು ರಾಜ್ಯಸಭಾ ಸಂಸದ ಹಾಗೂ ವಕೀಲ ಕಪಿಲ್ ಸಿಬಲ್ ಶನಿವಾರ ಇಲ್ಲಿ ಹೇಳಿದರು. ನ್ಯಾಯಾಧೀಶರ ವಿಚಾರಣಾ ಕಾಯ್ದೆಯಡಿ ನಡೆಯುವ ತನಿಖೆಗಷ್ಟೇ ಮಾನ್ಯತೆಯಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಅರಣ್ಯ ನಾಶ: ಕಾರಣ ನೀಡಿ'

ಮುಖ್ಯಾಂಶಗಳು
- ಸ್ಪಷ್ಟನೆ ಕೋರಿ ಅರಣ್ಯ ಸಚಿವಾಲಯಕ್ಕೆ ಪತ್ರ
- ಪತ್ರವನ್ನು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ ಜೈರಾಮ್ ರಮೇಶ್
- ಈಚೆಗೆ ಪ್ರಧಾನಿಗೆ ಪತ್ರ ಬರೆದಿದ್ದ ಅರಣ್ಯ ಹಕ್ಕು ಸಂಘಟನೆಗಳು

ನವದೆಹಲಿ (ಪಿಟಿಐ): ಅರಣ್ಯ ಹಕ್ಕು ಕಾಯ್ದೆ (ಎಫ್‌ಆರ್‌ಎ) 2006ರ ಅಡಿಯಲ್ಲಿ ಭೂಮಿಯ ಹಕ್ಕುಗಳನ್ನು ನೀಡಿರುವುದು ಅರಣ್ಯ ನಾಶಕ್ಕೆ ಕಾರಣವಾಗಿದೆ ಎಂಬ ಹೇಳಿಕೆಯನ್ನು ಸಮರ್ಥಿಸುವ ವೈಜ್ಞಾನಿಕ ಪುರಾವೆಗಳನ್ನು ಒದಗಿಸುವಂತೆ ಬುಡಕಟ್ಟು ವ್ಯವಹಾರಗಳ ಸಚಿವಾಲಯವು ಕೇಂದ್ರ ಪರಿಸರ ಸಚಿವಾಲಯವನ್ನು ಕೇಳಿಕೊಂಡಿದೆ.

'ಅರಣ್ಯ ನಾಶಕ್ಕೆ ಕಾರಣವಾಗಿರುವ ಹಲವಾರು ಅಂಶಗಳಲ್ಲಿ ಎಫ್‌ಆರ್‌ಎ ಅಡಿಯಲ್ಲಿ ಜಮೀನಿನ ಹಕ್ಕುಗಳನ್ನು ನೀಡಿರುವುದೂ ಸೇರಿದೆ ಎಂದು ಭಾರತದ ಅರಣ್ಯ ಸ್ಥಿತಿಗತಿಯ ವಾರ್ಷಿಕ ವರದಿ ತಿಳಿಸಿದೆ. ಇದನ್ನು ಸಾಬೀತುಪಡಿಸಲು ಪರಿಸರ ಸಚಿವಾಲಯವು ವಿವರವಾದ ವೈಜ್ಞಾನಿಕ ಪುರಾವೆಗಳನ್ನು ಒದಗಿಸಬೇಕು' ಎಂದು ಬುಡಕಟ್ಟು ವ್ಯವಹಾರಗಳ ಸಚಿವಾಲಯ ಪತ್ರದಲ್ಲಿ ಕೋರಿದೆ.

ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಅವರು ಈ ಪತ್ರವನ್ನು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದು, ಕೇಂದ್ರ ಪರಿಸರ ಸಚಿವಾಲಯ ಎಫ್‌ಆರ್‌ಎಯನ್ನು ಬುಡಮೇಲು ಮಾಡಲು ಹೊರಟಿದೆ ಎಂದು ಆಕ್ಷೇಪಿಸಿ 150ಕ್ಕೂ ಹೆಚ್ಚು ಅರಣ್ಯ ಹಕ್ಕು ಸಂಘಟನೆಗಳು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಈಚೆಗೆ ಪತ್ರ ಬರೆದಿದ್ದವು. ಇದೀಗ ಬುಡಕಟ್ಟು ವ್ಯವಹಾರಗಳ ಸಚಿವಾಲಯ ಕೂಡಾ ವಿವರಣೆ ಕೇಳಿದೆ ಎಂದಿದ್ದಾರೆ.

'ಅರಣ್ಯ ಹಕ್ಕು ಕಾಯ್ದೆ ಅಡಿ ನೀಡಿರುವ ಹಕ್ಕುಪತ್ರಗಳು ಅರಣ್ಯ ನಾಶಕ್ಕೆ ಕಾರಣ' ಎಂದು ಕೇಂದ್ರ ಅರಣ್ಯ ಸಚಿವ ಭೂಪೇಂದ್ರ ಯಾದವ್ ನೀಡಿರುವ ಹೇಳಿಕೆಗೆ ಸ್ಪಷ್ಟನೆ ಕೋರಿ ಅರಣ್ಯ ಹಕ್ಕು ಸಂಘಟನೆಗಳು ಪತ್ರ ಬರೆದಿದ್ದವು.

ಗ್ರಾ.ಪಂ: ವಾಣಿಜ್ಯ ಆಸ್ತಿ ತೆರಿಗೆ ಪರಿಷ್ಕರಣೆ

ಒಂದನೇ ಪುಟದಿಂದ...

ಈಗ ಜಾರಿಯಲ್ಲಿರುವ ನಿಯಮಗಳಲ್ಲಿ, ಸ್ಥಿರಾಸ್ತಿ ಮಾರ್ಗಸೂಚಿ ದರದ ಆಧಾರದಲ್ಲಿ ಪ್ರದೇಶ–1, ಪ್ರದೇಶ–2, ಪ್ರದೇಶ–3 ಮತ್ತು ಪ್ರದೇಶ–4 ಎಂದು ನಾಲ್ಕು ವರ್ಗೀಕರಣ ಮಾಡಲಾಗುತ್ತಿದೆ. ಪ್ರದೇಶ–1ರಲ್ಲಿನ ಆಸ್ತಿಗಳಿಗೆ ಗರಿಷ್ಠ ಪ್ರಮಾಣದ ತೆರಿಗೆ ಅನ್ವಯವಾಗುತ್ತಿದ್ದರೆ, ಪ್ರದೇಶ–4ರಲ್ಲಿನ ಆಸ್ತಿಗಳಿಗೆ ಕನಿಷ್ಠ ಪ್ರಮಾಣದ ತೆರಿಗೆ ಅನ್ವಯವಾಗುತ್ತಿದೆ. ಕರಡು ನಿಯಮಗಳಲ್ಲಿ ಈ ವರ್ಗೀಕರಣವನ್ನು ಆರಕ್ಕೆ ಹೆಚ್ಚಿಸಲಾಗಿದೆ.

ಕರಡು ನಿಯಮಗಳಲ್ಲಿ ವರ್ಗೀಕರಣದ ಮಾನದಂಡಗಳನ್ನು ಬದಲಿಸಲಾಗಿದೆ. ಈಗ ಕಡಿಮೆ ತೆರಿಗೆ ಅನ್ವಯವಾಗುತ್ತಿರುವ ಸ್ವತ್ತುಗಳಿಗೆ, ಇನ್ನು ಮುಂದೆ ಹೆಚ್ಚು ತೆರಿಗೆ ಕಟ್ಟಬೇಕಾಗಲಿದೆ.

ಈಗ ಪ್ರದೇಶ–2ರಲ್ಲಿ (ಪ್ರತಿ ಚದರ ಮೀಟರ್‌ಗೆ ₹40,001ರಿಂದ ₹60,000ರದವರೆಗೆ ಸ್ಥಿರಾಸ್ತಿ ಮಾರ್ಗಸೂಚಿ ದರ) ಇರುವ ವಸತಿ ಕಟ್ಟಡಗಳಿಗೆ, ಅವುಗಳ ಮೌಲ್ಯದ ಶೇ 0.09ರಷ್ಟು ಆಸ್ತಿ ತೆರಿಗೆ ವಿಧಿಸಲಾಗುತ್ತಿದೆ. ಕರಡು ನಿಯಮ ಜಾರಿಯಾದ ನಂತರ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯ ₹50,001 ಮತ್ತು ಅದಕ್ಕಿಂತ ಹೆಚ್ಚು ಇರುವ ವಸತಿ ಕಟ್ಟಡಗಳಿಗೆ, ಅವುಗಳ ಮೌಲ್ಯದ ಶೇ 0.10ರಷ್ಟು ಆಸ್ತಿ ತೆರಿಗೆ ಅನ್ವಯವಾಗಲಿದೆ. ಇದೇ ವರ್ಗದ ಸರ್ವಿಸ್ ಅಪಾರ್ಟ್‌ಮೆಂಟ್, ವಿಲ್ಲಾಮೆಂಟ್‌ಗಳ ತೆರಿಗೆಯು ಅವುಗಳ ಆಸ್ತಿ ಮೌಲ್ಯದ ಶೇ 0.30ರಿಂದ ಶೇ 40ಕ್ಕೆ ಏರಿಕೆಯಾಗಲಿದೆ. ವಾಣಿಜ್ಯ ಸಂಕೀರ್ಣ, ಮಾಲ್‌ನಂತಹ ಕಟ್ಟಡಗಳ ತೆರಿಗೆಯು ಅವುಗಳ ಮೌಲ್ಯದ ಶೇ 0.40ರಿಂದ ಶೇ 0.50ಕ್ಕೆ ಏರಿಕೆಯಾಗಲಿದೆ.

ತೆರಿಗೆ ಮೂಲದ ಆದಾಯ ಸಂಗ್ರಹ ಹೆಚ್ಚಳಕ್ಕೆ ರಾಜ್ಯ ಸರ್ಕಾರವು ತಜ್ಞರ ಸಲಹೆ ಪಡೆದಿತ್ತು. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಆಸ್ತಿಗಳ ಮೇಲಿನ ತೆರಿಗೆ ಹೆಚ್ಚಳಕ್ಕೆ ಅವಕಾಶ ಇರುವುದನ್ನು ತಜ್ಞರ ಸಮಿತಿ ಗುರುತಿಸಿತ್ತು. ಜತೆಗೆ ತೆರಿಗೆ ಸಂಗ್ರಹವನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರೆ, ಹಲವು ಸಾವಿರ ಕೋಟಿಯಷ್ಟು ಆದಾಯ ವೃದ್ಧಿಸಬಹುದು ಎಂದು ತಿಳಿಸಿತ್ತು.


ಜಾರಿಯಲ್ಲಿರುವ ತೆರಿಗೆ ದರ

ಸ್ಥಿರಾಸ್ತಿ ಮಾರ್ಗಸೂಚಿ ದರ ಆಧರಿಸಿದ ವರ್ಗ	ಅಪಾರ್ಟ್‌ಮೆಂಟ್ /ವಿಲ್ಲಾ	ಸರ್ವಿಸ್ ಅಪಾರ್ಟ್‌ಮೆಂಟ್ ವಿಲ್ಲಾಮೆಂಟ್	ವಾಣಿಜ್ಯ/ ಮಾಲ್ ಕಟ್ಟಡ
ಪ್ರದೇಶ–1: ₹60,001ಕ್ಕಿಂತ ಹೆಚ್ಚು (ಪ್ರತಿ ಚ.ಮೀ.ಗೆ)	0.10%	0.40%	0.50%
ಪ್ರದೇಶ–2: ₹40,001ರಿಂದ ₹60,000 (ಪ್ರತಿ ಚ.ಮೀ.ಗೆ)	0.09%	0.30%	0.40%
ಪ್ರದೇಶ–3: ₹20,001ರಿಂದ ₹40,000 (ಪ್ರತಿ ಚ.ಮೀ.ಗೆ)	0.08%	0.25%	0.30%
ಪ್ರದೇಶ–4: ₹20,000ದವರೆಗೆ (ಪ್ರತಿ ಚ.ಮೀ.ಗೆ)	0.07%	0.20%	0.20%

ಪ್ರಸ್ತಾವಿತ ತೆರಿಗೆ ದರ

ಸ್ಥಿರಾಸ್ತಿ ಮಾರ್ಗಸೂಚಿ ದರ ಆಧರಿಸಿದ ವರ್ಗ	ಅಪಾರ್ಟ್‌ಮೆಂಟ್ /ವಿಲ್ಲಾ	ಸರ್ವಿಸ್ ಅಪಾರ್ಟ್‌ಮೆಂಟ್ /ವಿಲ್ಲಾಮೆಂಟ್	ವಾಣಿಜ್ಯ/ ಮಾಲ್ ಕಟ್ಟಡ
ಪ್ರದೇಶ–1: ₹50,001ಕ್ಕಿಂತ ಹೆಚ್ಚು (ಪ್ರತಿ ಚ.ಮೀ.ಗೆ)	0.10%	0.40%	0.50%
ಪ್ರದೇಶ–2: ₹40,001ರಿಂದ ₹50,000 (ಪ್ರತಿ ಚ.ಮೀ.ಗೆ)	0.09%	0.40%	0.50%
ಪ್ರದೇಶ–3: ₹30,001ರಿಂದ ₹40,000 (ಪ್ರತಿ ಚ.ಮೀ.ಗೆ)	0.08%	0.30%	0.40%
ಪ್ರದೇಶ–4: ₹20,001ರಿಂದ ₹30,000 (ಪ್ರತಿ ಚ.ಮೀ.ಗೆ)	0.07%	0.30%	0.40%
ಪ್ರದೇಶ–5: ₹10,001ರಿಂದ ₹20,000 (ಪ್ರತಿ ಚ.ಮೀ.ಗೆ)	0.06%	0.20%	0.30%
ಪ್ರದೇಶ–6: ₹10,000ದವರೆಗೆ (ಪ್ರತಿ ಚ.ಮೀ.ಗೆ)	0.05%	0.20%	0.30%

ಶೌಚಾಲಯದಿಂದ ವಿಚಾರಣೆಗೆ ಹಾಜರು!



ಅಹಮದಾಬಾದ್ (ಪಿಟಿಐ): ಶೌಚಾಲಯದಲ್ಲಿ ಕುಳಿತು ವರ್ಚುವಲ್ ವಿಚಾರಣೆಗೆ ಹಾಜರಾದ ವ್ಯಕ್ತಿಯ ವಿರುದ್ಧ ಗುಜರಾತ್ ಹೈಕೋರ್ಟ್ ಸ್ವಯಂಪ್ರೇರಿತ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿಕೊಂಡಿದೆ. ಜೂನ್ 20ರಂದು ನ್ಯಾಯಮೂರ್ತಿ ನಿರ್ಝರ್ ಎಸ್. ದೇಸಾಯಿ ಪ್ರಕರಣವೊಂದನ್ನು ವಿಚಾರಣೆ ನಡೆಸುತ್ತಿದ್ದಾಗ ಘಟನೆ ನಡೆದಿದ್ದು, ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

'ವಿಡಿಯೊದಲ್ಲಿ ಕಾಣುತ್ತಿರುವ ವ್ಯಕ್ತಿಯ ವಿರುದ್ಧ ಸ್ವಯಂ ಪ್ರೇರಿತ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿ' ಎಂದು ನ್ಯಾಯಮೂರ್ತಿಗಳಾದ ಎ.ಎಸ್. ಸುಪೆಹಿಯಾ ಮತ್ತು ಆರ್.ಟಿ. ವಚ್ಛಾನಿ ಅವರಿದ್ದ ವಿಭಾಗೀಯ ಪೀಠವು ಜೂನ್ 30ರಂದು ಹೈಕೋರ್ಟ್ ರಿಜಿಸ್ಟ್ರಿಗೆ ನಿರ್ದೇಶನ ನೀಡಿ ಆದೇಶ ಹೊರಡಿಸಿದೆ.

ವೀಡಿಯೊದಲ್ಲಿ, ಹಳದಿ ಟಿ-ಶರ್ಟ್ ಧರಿಸಿದ ವ್ಯಕ್ತಿಯೊಬ್ಬರು ಮೊಬೈಲ್ ಫೋನ್ ಬಳಸಿ ಲಾಗಿನ್ ಆಗುವುದು ದಾಖಲಾಗಿದ್ದು, ಪರದೆಯ ಮೇಲೆ ಅವರ ಹೆಸರು 'ಸಮದ್ ಬತ್ತೇರಿ' ಎಂದು ಗುರುತಿಸಲಾಗಿದೆ. 'ಈ ನ್ಯಾಯಾಲಯದ ಪ್ರತಿಷ್ಠೆಯನ್ನು ಹಾಳುಮಾಡುವ ಕುಖ್ಯಾತ ವೀಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕವಾಗಿ ಪ್ರಸಾರವಾಗುತ್ತಿದೆ. ಅದನ್ನು ತಕ್ಷಣವೇ ನಿಷೇಧಿಸಬೇಕು ಮತ್ತು ಅಳಿಸಬೇಕು' ಎಂದು ಪೀಠವು ಹೇಳಿದೆ. ಜುಲೈ 3 ರಂದು ಆದೇಶವನ್ನು ಪ್ರಕಟಿಸಲಾಗಿದೆ.

ಕರ್ನಾಟಕ ಸರ್ಕಾರ
(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.
ಇ–ಟೆಂಡರ್ ಪ್ರಕಟಣೆ
ಸಂ : ಕಾಇಂ : ಗ್ರಾಕುನೀ&ನೈಇ:ವಿಶಿ:ತಾಶಾ: JJM ಟೆಂಡರ್ ಹುದ್ದೆ/2025–26/589 ದಿನಾಂಕ: 03.07.2025
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999–2000 ರ ಪ್ರಕಾರ ಭಾರತೀಯ ಕಂಪನಿಗಳ ಕಾಯ್ದೆ 1956 ರ ಅನ್ವಯ ಹಾಗೂ ರಿಜಿಸ್ಟ್ರಾರ್ ಆಫ್ ಕಂಪನಿಸ್ನಲ್ಲಿ ನೊಂದಾಯಿಸಲ್ಪಟ್ಟ ಮಾನವ ಸಂಪನ್ಮೂಲ ಪೂರೈಕೆ ಏಜೆನ್ಸಿ/ಕಂಪನಿಗಳಿಂದ/ಸಂಸ್ಥೆಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಶಿವಮೊಗ್ಗ ಜಿಲ್ಲಾ ಪಂಚಾಯತ್ ಹಾಗೂ ಅಧೀನ ತಾಲ್ಲೂಕು ಪಂಚಾಯತ್ ಗಳಲ್ಲಿ ಎನ್.ಆರ್.ಎಲ್.ಎಮ್– ಸಂಜೀವಿನಿ ಯೋಜನೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಸಂಪೂರ್ಣ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲಗಳನ್ನು ಒದಗಿಸಲು ಏಕ ಲಕೋಟೆ ಪದ್ಧತಿ ಹಾಗೂ ಸೀಲ್ ಬಂದ್ ಲಕೋಟೆಯಲ್ಲಿ ಇ–ಟೆಂಡರ್ ನ್ನು ಎರಡು ವರ್ಷದ ಅವಧಿಗೆ ಅರ್ಹ ಮಾನವ ಸಂಪನ್ಮೂಲ ಪೂರೈಕೆ ಏಜೆನ್ಸಿ/ಕಂಪನಿಗಳಿಂದ/ಸಂಸ್ಥೆಗಳಿಂದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಹ ಮಾನವ ಸಂಪನ್ಮೂಲ ಪೂರೈಕೆ ಏಜೆನ್ಸಿ/ಕಂಪನಿ/ಸಂಸ್ಥೆಗಳು ಕೆಪಿಪಿ ಪೋರ್ಟಲ್ https://kppp. karnataka.gov.in ಮುಖಾಂತರ ಟೆಂಡರ್ ನಲ್ಲಿ ಭಾಗವಹಿಸಬಹುದು. ಟೆಂಡರ್ ದಾಖಲೆಯಲ್ಲಿ ತಿಳಿಸಿರುವಂತೆ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಟೆಂಡರ್ ದಾರರು ಷರತ್ತು ಮತ್ತು ನಿಬಂಧನೆಗಳನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು, ಹೆಚ್ಚಿನ ವಿವರಗಳಿಗೆ ಈ ಪ್ರಕಟಣೆಯೊಂದಿಗೆ ಲಗತ್ತಿಸಲಾದ ಟೆಂಡರ್ ಡಾಕ್ಯುಮೆಂಟ್ ನಲ್ಲಿರುವ ವಿವರಗಳನ್ನು ಅನುಸರಿಸುವುದು. ಈ ಟೆಂಡರ್ ಗೆ ನಿಗದಿಪಡಿಸಿದ ಇ.ಎಂ.ಡಿ ಯನ್ನು ಕೆಪಿಪಿ ಪೋರ್ಟಲ್. ಕರ್ನಾಟಕ ಬೆಂಗಳೂರು, ಇವರಿಗೆ ಪಾವತಿಸುವ ಇ.ಎಂ.ಡಿ ಯು ಟೆಂಡರಿನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 45 ದಿನಗಳ ನಂತರದವರೆಗೆ ಮಾನ್ಯತೆ ಇರತಕ್ಕದ್ದು.

ಕ್ರ. ಸಂ	ಹೆಸರು	ಇಎಂಡಿ (ರೂ)
1.	Selection and Empanelment of Man Power Services to RDWS & SD Shivamogga RWSSD/2023-24/SE0066/CALL-2	289500.00

ಕೆಪಿಪಿ ಪೋರ್ಟಲ್ ವ್ಯವಸ್ಥೆಯಡಿ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ.

1.	ಕೆಪಿಪಿ ಪೋರ್ಟಲ್ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	03.07.2025 ಬೆಳಗ್ಗೆ 06.00 ಘಂಟೆ ನಂತರ
2.	ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಸಮಯ	11.07.2025 ಸಂಜೆ 05.30 ಘಂಟೆವರೆಗೆ
3.	ತಾಂತ್ರಿಕ ಟೆಂಡರ್ ನ್ನು ತೆರೆಯುವ ದಿನಾಂಕ ಮತ್ತು ಸಮಯ	14.07.2025 ಬೆಳಗ್ಗೆ 11.30 ನಂತರ
4.	ಆರ್ಥಿಕ ಟೆಂಡರ್ ನ್ನು ತೆರೆಯುವ ದಿನಾಂಕ ಮತ್ತು ಸಮಯ	16.07.2025 ಬೆಳಗ್ಗೆ 11.30 ಘಂಟೆ ನಂತರ

1. ಟೆಂಡರ್ ನ್ನು ಪೂರ್ಣ ಇಲ್ಲವೇ ಭಾಗಶಃ ಅಂಗೀಕರಿಸುವ ಇಲ್ಲವೇ ತಿರಸ್ಕರಿಸುವ ಅಧಿಕಾರವನ್ನು ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. ಸಂಬಂಧಿಸಿದ ಷರತ್ತು ಮತ್ತು ನಿಬಂಧನೆಗಳು ಹಾಗೂ ವಿವರಗಳಿಗೆ ವೆಬ್‌ಸೈಟ್ https://kppp.karnataka.gov.in . ಯಿಂದ ಸಂಪರ್ಕಿಸಬಹುದಾಗಿದೆ.
ಸಹಿ/–
ಕಾರ್ಯಪಾಲಕ ಇಂಜಿನಿಯರ್,
ಗ್ರಾ.ಕು.ನೀ & ನೈ ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ./ಶಿ/ನಂ.18–07 /ಝೇಂಕಾರ್/2025–26

ಇ–ಟೆಂಡರ್ ಪ್ರಕಟಣೆ
STD:CR:14/2025-26 ದಿನಾಂಕ: 03.07.2025
ಕೋಲಾರ ಜಿಲ್ಲೆ ಕೆಜಿಎಫ್ ತಾಲ್ಲೂಕು, ಬಂಗಾರು ತಿರುಪತಿ (ಗುಟ್ಟಹಳ್ಳಿ), ಶ್ರೀ ವೆಂಕಟರಮಣಸ್ವಾಮಿ ದೇವಾಲಯದ 2025–26ನೇ ಸಾಲಿನ ಒಂದು ವರ್ಷದ ಅವಧಿಗೆ (ಶ್ರಾವಣ ಮಾಸದಿಂದ ಆಶಾಢ ಮಾಸದ ವರೆಗೆ) ಮುಡಿ ಕೂದಲು ಸಂಗ್ರಹಣೆ ಹಕ್ಕನ್ನು ದಿನಾಂಕ: 03.07.2025 ರಂದು ಟೆಂಡರ್ ಕಂ ಇ ಹರಾಜು ಮೂಲಕ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ವಿಲೆ ಮಾಡಲಾಗಿದ್ದು, ಇಷ್ಟ ಉಳ್ಳವರು ಟೆಂಡರ್ ಕಂ ಇ–ಹರಾಜಿನಲ್ಲಿ ಭಾಗವಹಿಸಿ ಬಿಡ್ಡು ಮಾಡಬಹುದಾಗಿರುತ್ತದೆ.

Tender Schedule:

Tender Reference No	
Last Date & Time for tender Queries/Clarifications	13.07.2025 Up to 16.00 hrs
Last Date & Time for receipt of tenders	14.07.2025 Up to 17.00 hrs
Date & Time for Opening of Financial Bids	15.07.2025 Up to 17.30 hrs

Auction Schedule :

Auction Reference No	
Last Date & Time for Submit Participation of interest in Auction	10.07.2025 Up to 11.00 to 17.30 hr
Date and Time to confirm Participation of Interest in Auction	11.07.2025 up to 10.00 hr
Start Date and Time of Evaluation	14.07.2025 up to 10.00 hr
Live Auction Start & End Date	15.07.2025 up to 11.00 to 17.30 hr

ಸಹಿ/ ಕಾರ್ಯನಿರ್ವಾಹಕ ಅಧಿಕಾರಿ,
ಶ್ರೀ ವೆಂಕಟರಮಣ ಸ್ವಾಮಿ ದೇವಾಲಯ ಬಂಗಾರು ತಿರುಪತಿ, ಕೆಜಿಎಫ್ ತಾಲ್ಲೂಕು

ಕರ್ನಾಟಕ ಸರ್ಕಾರ (ಸ್ವಾಯತ್ತ ಸಂಸ್ಥೆ)
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
ಸಂಖ್ಯೆ. SABVMCRI/SUP/22/2024-25 (CALL-4) ದಿನಾಂಕ: 05.07.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ ಅಧೀನದಲ್ಲಿ ಬರುವ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ಯುರಾಲಜಿ ವಿಭಾಗಕ್ಕೆ ಅವಶ್ಯವಿರುವ MOBILE C-ARM WITH FLUOROSCOPY ಅನ್ನು ಖರೀದಿಸಿ ಅಳವಡಿಸಲು ಕೆಟಿಪಿಪಿ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಅಲ್ಪಾವಧಿ ಇ–ಟೆಂಡರನ್ನು ಆಹ್ವಾನಿಸಲಾಗಿದೆ
1. ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಪ್ರಾರಂಭದ ದಿನಾಂಕ: 04.07.2025 2. ಟೆಂಡರ್ ಬಗ್ಗೆ ಪ್ರಶ್ನಾವಳಿಗಳಿಗೆ ಅಂತಿಮ ದಿನಾಂಕ: 07.07.2025 ರ ಸಂಜೆ 05:30 ಗಂಟೆ. 3. ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಅಂತಿಮ ದಿನಾಂಕ: 14.07.2025 ರ ಸಂಜೆ 05.30 ಗಂಟೆ. 4. ಟೆಂಡರ್‌ಗಳನ್ನು ತೆರೆಯುವ ದಿನಾಂಕ (ಮೊದಲನೆ ಲಕೋಟೆ): 16.07.2025 ರ ಬೆಳಗ್ಗೆ 10.30 ಗಂಟೆ. ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್/ ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ. ಸಹಿ/–
ನಿರ್ದೇಶಕರು ಹಾಗೂ ಡೀನ್
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
ಡಿಐಪಿಆರ್/ಸಿಪಿ/1664/ಸಿಸಿಎಲ್/2025–26



ಹುಲಿಗಳ ಸಾವಿನ ಸುತ್ತಮುತ್ತ...

ಮಲೆ ಮಹದೇಶ್ವರ ವನ್ಯಜೀವಿ ಧಾಮದಲ್ಲಿ ಈಚೆಗೆ ಹುಲಿ ಮತ್ತು ನಾಲ್ಕು ಮರಿಗಳು ವಿಷಪ್ರಾಶನದಿಂದ ಮೃತಪಟ್ಟವು. ಇದು ರಾಷ್ಟ್ರಮಟ್ಟದಲ್ಲಿ ದೊಡ್ಡ ಸುದ್ದಿ ಆಯಿತು. ಈ ದುರಂತಕ್ಕೆ ಕಾರಣಗಳೇನು? ಅರಣ್ಯ ಇಲಾಖೆ ರಕ್ಷಣೆಯಲ್ಲಿ ಎಡವಿತೆ? ಹಾಗೆಯೇ ಈ ಘಟನೆ ಹುಲಿ ಸಂರಕ್ಷಣೆಗೆ ಹಿನ್ನಡೆಯೇ? ಈ ಕುರಿತಾದ ವಿಶ್ಲೇಷಣೆ ಇಲ್ಲಿದೆ.

• ಕೃಪಾಕರ ಸೇನಾನಿ

‘ಮಲೆ ಮಹದೇಶ್ವರ ಕಾಡಿನಲ್ಲಿ ಐದು ಹುಲಿಗಳ ಸಾವು’ ಇದೊಂದು ಸೂಕ್ಷ್ಮ ಮನಸ್ಸುಗಳನ್ನು ತೀವ್ರವಾಗಿ ಕಲಕಿದ ಘಟನೆ.

ಮಾಧ್ಯಮಗಳು ರಾಷ್ಟ್ರಮಟ್ಟದಲ್ಲಿ ಈ ಸುದ್ದಿಯನ್ನು ವಿವರವಾಗಿ ಬಿತ್ತರಿಸಿದವು. ಕಾಡಿಗೆ ಸಂಬಂಧಿಸಿದ ವಿಷಯಗಳನ್ನು ಮಾಧ್ಯಮಗಳು ಇಷ್ಟು ಗಂಭೀರವಾಗಿ ಪರಿಗಣಿಸಿದ ಉದಾಹರಣೆಗಳನ್ನು ನಾವು ಕಂಡಿಲ್ಲ.

2004ರಲ್ಲಿ ರಾಜಸ್ಥಾನದ ಸರಿಸ್ಕಾ ಹುಲಿಧಾಮದಲ್ಲಿ ಕಳ್ಳ ಬೇಟೆಗಾರರು ಕಾಡಿನಲ್ಲಿದ್ದ ಎಲ್ಲಾ ಹುಲಿಗಳನ್ನು ನಿರ್ನಾಮ ಮಾಡಿದಾಗ ಕೂಡ ಮಾಧ್ಯಮಗಳು ವಿಷಯವನ್ನು ಇಷ್ಟು ತೀವ್ರವಾಗಿ ಪರಿಗಣಿಸಿರಲಿಲ್ಲ. ಇತ್ತೀಚಿಗೆ ನಿಕೋಬಾರ್ ದ್ವೀಪವೊಂದರಲ್ಲಿ ಅದಾನಿ ಸಂಸ್ಥೆ 33,000 ಎಕರೆ ಕಾಡನ್ನು ನೆಲಸಮಗೊಳಿಸಿ ಅಲ್ಲಿ ನೆಲೆಸಿದ್ದ ‘ಶಾಂಪೆನ್’ ಬುಡಕಟ್ಟು ಜನಾಂಗವನ್ನು ವಿನಾಶದಂಚಿಗೆ ತಳ್ಳಿದಾಗಲೂ ದೊಡ್ಡ ಸುದ್ದಿಯಾಗಲಿಲ್ಲ.

ಆದರೆ, ಈ ಐದು ಹುಲಿಗಳ ಸಾವಿಗೆ ಸುದ್ದಿ ಮಾಧ್ಯಮಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಸದಾ ಸಕ್ರಿಯರಾಗಿರುವ ಕೋಟಿ ಕೋಟಿ ಜನರ ಪ್ರತಿಕ್ರಿಯೆಗಳು ತೀವ್ರವಾಗಿದ್ದವು.

ಹಂತಕರನ್ನು ಬಂಧಿಸಬೇಕೆಂದು, ವಿಚಾರಣೆ ಇಲ್ಲದೆ ಅವರನ್ನು ಗಲ್ಲಿಗೇರಿಸಬೇಕೆಂಬ ಕಠಿಣ ಮಾತುಗಳು ಎಲ್ಲೆಲ್ಲೂ ಹರಿದಾಡಿದವು. ಆದರೆ ದೂರದಲ್ಲೆಲ್ಲೋ ಕುಳಿತು ಘಟನೆಗಳನ್ನು ನಿಷ್ಠುರವಾಗಿ ಖಂಡಿಸಿ, ಪರಿಹಾರ ಸೂಚಿಸುವ ಈ ಭಾವನಾತ್ಮಕ ಬರಹಗಳಲ್ಲಿ ಲೋಪದೋಷಗಳೇ ಹೆಚ್ಚಾಗಿರುತ್ತವೆ. ಹಾಗಾಗಿ ವಿಶ್ಲೇಷಣೆಗಳು ಬಹಳಷ್ಟು ಬಾರಿ ಅರ್ಥ ಕಳೆದುಕೊಳ್ಳುತ್ತವೆ.

ಮಲೆ ಮಹದೇಶ್ವರ ಕಾಡಿನ ಹುಲಿಗಳ ಸಾವಿನ ಪ್ರಕರಣದಲ್ಲಿ ಸಹ ನಿಜ ಸ್ಥಿತಿ ಏನೆಂದು ಅರಿಯಲೆತ್ನಿಸಿದರೆ ಹೊಸ ಪ್ರಪಂಚವೇ ತೆರೆದುಕೊಳ್ಳುತ್ತದೆ. ಹುಲಿ ಹಿಡಿದ ದನಕ್ಕೆ ಅಲ್ಲಿ ಮಾಲೀಕನೇ ಇಲ್ಲ! ಮಾಲೀಕರಿಲ್ಲದ ದನಗಳೆಂದರೇನು? ಅವು ಎಲ್ಲಿಂದ ಬಂದವು? ಏಕೆ ಬಂದವು? ಮಾಲೀಕನಿಲ್ಲದ ದನಗಳಿಗೆ ಅರಣ್ಯ ಇಲಾಖೆ ಪರಿಹಾರ ನೀಡುವುದಾದರೂ ಹೇಗೆ? ಹಾಗಾದರೆ ವಿಷ ಹಾಕಿದವರು ಯಾರು? ಅವರ ಹಿನ್ನೆಲೆ ಏನು?

ಅಲ್ಲದೇ, ಕಾಡಿನಲ್ಲಿ ಗಸ್ತು ತಿರುಗುವ ಮಂದಿಯ ಗಮನಕ್ಕೆ, ರಸ್ತೆಗೆ ಕೇವಲ 200–300 ಅಡಿ ದೂರದಲ್ಲಿದ್ದ ಹಸುವಿನ ಕಳೇಬರ ಕಂಡು-ಬರಲಿಲ್ಲವೆಂದರೆ ಹೇಗೆ? ಇದು ವೃತ್ತಿಪರತೆ ಇಲ್ಲದ ಬೇಜವಾಬ್ದಾರಿ-ತನ ಎಂದು ಮಾಧ್ಯಮಗಳಲ್ಲಿ, ಜಾಲತಾಣಗಳಲ್ಲಿ ಜರಿಯುವುದು ಸಾಮಾನ್ಯವಾಗಿತ್ತು.

ಇಲ್ಲಿ ವಾಸ್ತವತೆಯನ್ನು ಸ್ವಲ್ಪ ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡೋಣ. ಮಲೆ ಮಹದೇಶ್ವರ ಧಾಮದ ವಿಸ್ತೀರ್ಣ 900 ಚದರ ಕಿಲೋಮೀಟರ್. ಕಾಡಿನ ಗಸ್ತು ತಿರುಗುವ ಕೆಲಸಕ್ಕೆ ನೇಮಕಗೊಂಡಿರುವ ನೌಕರರು 195 ಮಂದಿ. ಅಂದರೆ ಇಬ್ಬರು ಜೊತೆಗೂಡಿ ಪ್ರತಿ ದಿನ 2,000 ಎಕರೆ ಕಾಡನ್ನು ಸುತ್ತಬೇಕು. ದಿನಕ್ಕೆ 40–50 ಕಿಲೋಮೀಟರ್ ದೂರವನ್ನು ನಡಿಗೆಯಲ್ಲಿ ಕ್ರಮಿಸಬೇಕಾಗುತ್ತದೆ. ಇದು ಸಾಧ್ಯವಾಗಬಹುದಾದ ಕೆಲಸವೆ? ಈ ಹಿನ್ನೆಲೆಯಲ್ಲಿ, ನಡೆದು ಸಾಗುವಾಗ ಅಕ್ಕಪಕ್ಕ ಸರಿದು ಹುಲ್ಲುಪೊದೆಗಳ ಒಳಗೆ ಪರಿಶೀಲಿಸುವುದು ಆಗದ ಮಾತು. ಅದೃಷ್ಟವಶಾತ್ ಗಾಳಿ ವಿಮುಖವಾಗಿ ಬೀಸುತ್ತಿರುವಾಗ ಕಳೇಬರಗಳು ಕೊಳೆತು ವಾಸನೆ ಬಂದಲ್ಲಿ ಗ್ರಹಿಸಲು ಸಾಧ್ಯ. ಒಂದು ಪಕ್ಷ ರಸ್ತೆಯ ಮೇಲೆ ಘಟನೆ ಸಂಭವಿಸಿ ಯಾವುದಾದರೂ ಗುರುತುಗಳು ದಾಖಲಾಗಿದ್ದಲ್ಲಿ ಮಾತ್ರ ಸಣ್ಣ ಸೂಚನೆ ದೊರಕಬಹುದು. ಆ ವಿವರಗಳನ್ನು ಅರಿಯಲು ಅಗಾಧ ಅನುಭವ ಬೇಕಾಗುತ್ತದೆ.

ಜೊತೆಗೆ ಬೇಟೆಯಾಡಿದ ಪ್ರಾಣಿಯನ್ನು ಹುಲಿ ಚಿರತೆಗಳು ಪೊದೆಯೊಳಗೆ ಅಡಗಿಸಿಡುವುದು ಸಾಮಾನ್ಯ ಸ್ವಭಾವ. ಮುಂಗಾರುವಿನಲ್ಲಿ ಗಿಡಮರಗಳು ಚಿಗುರೊಡೆದು ಪೊದೆಗಳು ಹರಡಿ ಕಾಡು ದಟ್ಟವಾಗಿರುತ್ತದೆ. ಆಗಂತು ಕತ್ತಲು ಕೋಣೆಯಲ್ಲಿ ಕಪ್ಪು ಬೆಕ್ಕು ಹುಡುಕುವ ಕೆಲಸವಾಗಿಬಿಡುತ್ತದೆ. ಕೆಲವೊಮ್ಮೆ ಕಾಡಿನಲ್ಲಿ ದೈತ್ಯಾಕಾರದ ಆನೆ ಸಾವನ್ನಪ್ಪಿದಾಗಲೂ ಕೂಡ ಅದರ ಕುರುಹು ಸುಲಭದಲ್ಲಿ ಸಿಗುವುದಿಲ್ಲ.

ಕಾಗೆಯೋ, ಹಂದಿಯೋ, ಮುಂಗುಸಿಯೋ ಕಳೇಬರವನ್ನು ಮೊದಲಿಗೆ ಪತ್ತೆ ಹಚ್ಚಬೇಕು. ಇವುಗಳ ಮೂಲಕ ರಣಹದ್ದಿಗೆ ಸೂಚನೆ ಸಿಗಬೇಕು. ನಂತರ ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸುವ ಆದಿವಾಸಿಗಳಿಗೋ ಅಥವಾ ಅರಣ್ಯ ಇಲಾಖೆಯ ವಾಚರ್‌ಗಳಿಗೋ ತಿಳಿಯಬೇಕು.


ಚಿತ್ರಗಳು: ಶಿವಕುಮಾರ್ ಬಿ. ಮೈಸೂರು

ಮಲೆ ಮಹದೇಶ್ವರ ಕಾಡಿನೊಳಗೆ ಒಟ್ಟು ಹತ್ತೊಂಬತ್ತು ಹಳ್ಳಿಗಳಿವೆ. ಇಲ್ಲಿ ಐವತ್ತೊಂದು ಸಾವಿರ ಜನ ನೆಲೆಸಿದ್ದಾರೆ. ಅವರ ಬಳಿ 35,000ಕ್ಕೂ ಹೆಚ್ಚು ಜಾನುವಾರುಗಳಿವೆ. (ಇದು ಎಂಟು ವರ್ಷಗಳ ಹಿಂದಿನ ಅಂಕಿಅಂಶ).

ಇದರ ಹೊರತಾಗಿ 30,000ಕ್ಕೂ ಹೆಚ್ಚು ದನಗಳು ನೆರೆಯ ತಮಿಳುನಾಡಿನಿಂದ ಅಕ್ರಮವಾಗಿ ಕಾಡನ್ನು ಪ್ರವೇಶಿಸುತ್ತವೆ. ಈ ದನಗಳೇಕೆ ಇಲ್ಲಿಗೆ ಬರುತ್ತವೆ. ಅವುಗಳ ಆರೈಕೆ ಮೇಲ್ವಿಚಾರಣೆ ನೋಡಿಕೊಳ್ಳುವವರು ಯಾರು? ಈ ಪ್ರಶ್ನೆಗಳು ದೊಡ್ಡ ಜಾಲವನ್ನು ತೆರೆದಿಡುತ್ತವೆ. ಮಲೆ ಮಹದೇಶ್ವರ ಕಾಡಿಗೆ ಸೇರಿದಂತಿರುವ ತಮಿಳುನಾಡಿನ ನೆರೆಯ ಕಾಡುಗಳು ಹುಲಿ ಯೋಜನೆಗಳಾಗಿ ಘೋಷಿಸಲ್ಪಟ್ಟಿವೆ. ಹುಲಿ ಯೋಜನೆಯಲ್ಲಿ ಜಾನುವಾರು ನಿಷಿದ್ಧ. ಇದರಿಂದಾಗಿ ದನಗಳನ್ನು ಕಳ್ಳ ರಸ್ತೆಗಳ ಮೂಲಕ ಕರ್ನಾಟಕದ ಕಾಡಿನೊಳಗೆ ತರುವುದು ವಾಡಿಕೆ. ಇದನ್ನು ತಡೆಗಟ್ಟಲು ನಮ್ಮ ಅರಣ್ಯ ಇಲಾಖೆಗೆ ಸಿಬ್ಬಂದಿಯ ಕೊರತೆ.

ಹೀಗೆ ಬರುವ ದನಗಳಿಂದ ಮಲೆ ಮಹದೇಶ್ವರ ಕಾಡಿನಲ್ಲಿ ನೆಲೆಸಿರುವ ಕೆಲವು ಮಂದಿಗೆ ಉದ್ಯೋಗ, ವ್ಯಾಪಾರ ತೆರೆದುಕೊ-ಳ್ಳುತ್ತದೆ. ದನಗಳನ್ನು ಕಾಡಿನಲ್ಲಿ ಮೇಯಿಸುವ ಹೊಣೆಗಾರಿಕೆ ಇವರ-ದಾಗಿರುತ್ತದೆ. ಈ ಕೆಲಸಕ್ಕೆ ಅಲ್ಪಸ್ವಲ್ಪ ಹಣ ದಕ್ಕುತ್ತದೆ. ಕಾಡಿನಲ್ಲಿ ಅವುಗಳಿಗೆ ಮೇವು, ನೀರು ಪೂರೈಸುವುದು ಸಮಸ್ಯೆಯಾಗುವುದಿಲ್ಲ. ಮುಂಜಾನೆ ಅವುಗಳನ್ನು ಕಾಡಿಗೆ ಬಿಟ್ಟು ಸಂಜೆಗೆ ಮನೆ ಬಳಿಯ ಕೊಟ್ಟಿಗೆಯ ಆವರಣದಲ್ಲಿ ಕೂಡುವುದಷ್ಟೇ ಅವರ ಕೆಲಸ. ಅಲ್ಲಿ ಬೀಳುವ ಸಗಣಿಯನ್ನು ಗುಡ್ಡೆ ಮಾಡಿ ವರ್ಷಕೊಮ್ಮೆ ತಮಿಳುನಾಡಿನ ರೈತರಿಗೆ ಮಾರಾಟ ಮಾಡುವುದು ಮುಖ್ಯ ಆಕರ್ಷಣೆ. ಈ ವ್ಯವಹಾರ-ದಲ್ಲಿ ತೊಡಗಿದ ಪ್ರತಿ ಕುಟುಂಬ ವಾರ್ಷಿಕವಾಗಿ ಸರಾಸರಿ ಎರಡರಿಂದ ಮೂರು ಲಕ್ಷ ಆದಾಯ ಗಳಿಸುತ್ತದೆ.

ಇದೇ ಹಿನ್ನೆಲೆಯಲ್ಲಿ ಅಲ್ಲಿಯ ಜನ ಮತ್ತು ಜನಪ್ರತಿನಿಧಿಗಳು ಮಲೆ ಮಹದೇಶ್ವರ ಹುಲಿ ಯೋಜನೆ ಅನುಷ್ಠಾನವನ್ನು ವಿರೋಧಿಸಿದರೆಂಬ ಆರೋಪವಿದೆ. ಈ ಯೋಜನೆ ಅನುಷ್ಠಾನಗೊಂಡರೆ ಈ ಕಾರ್ಯ-ಚಟುವಟಿಕೆಗಳಿಗೆ ಕಡಿವಾಣ ಬೀಳಬಹುದು ಎಂಬುವುದು ಅವರ ಆಲೋಚನೆ.

ಆದರೆ ಅಲ್ಲಿನ ಅಪ್ಪಟ ರೈತರ ಕಷ್ಟವೆಂದರೆ ಬೆಳೆದ ಬೆಳೆಯನ್ನು ಆನೆ ಮತ್ತು ಕಾಡುಹಂದಿಗಳಿಂದ ರಕ್ಷಿಸಿಕೊಳ್ಳುವುದು. ಇದು ತೀರ ಸವಾಲಿನ ಕೆಲಸ. ಇದರಿಂದಾಗಿ ಚಂಗಡಿ ಗ್ರಾಮದ 150 ಕುಟುಂಬಗಳು ಸೂಕ್ತ ಪರಿಹಾರದೊಂದಿಗೆ ಪರ್ಯಾಯ ಕೃಷಿ ಭೂಮಿ ನೀಡಿ ಸ್ಥಳಾಂತರಿಸುವಂತೆ ಅರ್ಜಿ ಸಲ್ಲಿಸಿದ್ದವು. ಆದರೆ ಎಂಟು ವರ್ಷ ಕಳೆದರೂ ಕಣ್ಣಿಲ್ಲದ, ಕಿವಿ ಕೇಳದ ವ್ಯವಸ್ಥೆ ಇಂದಿಗೂ ಆ ಮನವಿಗೆ ಸ್ಪಂದಿಸಿಲ್ಲ.

ಚಂಗಡಿಯ ಗ್ರಾಮದ ಮಂದಿಗೆ ಸರ್ಕಾರ ರೂಪಿಸಬಹುದಾದ ಪುನರ್ವಸತಿ ಯೋಜನೆಯನ್ನು ಹಲವಾರು ಹಳ್ಳಿಗಳ ಜನ ಕುತೂಹಲದಿಂದ ಎದುರು ನೋಡುತ್ತಿದ್ದರು. ಅದು ಯಶಸ್ವಿಯಾದರೆ ತಾವು ಸಹ ಕಾಡಿನಿಂದ ಹೊರನಡೆದು ಹೊಸ ಬದುಕನ್ನು ಕಟ್ಟಿಕೊಳ್ಳುವ ಭರವಸೆ ಹೊಂದಿದ್ದರು. ಇದು ಕಾರ್ಯರೂಪಕ್ಕೆ ಬಂದಿದ್ದರೆ ಕಾಡುಜೀವಿಗಳ ಬದುಕು ಹಸನಾಗುತ್ತಿತ್ತು. ರೈತರ ಭವಿಷ್ಯ ಉಜ್ವಲವಾಗುತ್ತಿತ್ತೆಂದು ಅಲ್ಲಿಯ ರೈತ ಮುಖಂಡ ಹೊನ್ನೂರು ಪ್ರಕಾಶ್ ನೆನಪಿಸಿದರು.

ಇಂಥ ಯೋಜನೆಗಳು ಕಾರ್ಯಗತವಾಗಬೇಕಾದರೆ ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರದ ನೆರವು ಕೂಡ ಅತ್ಯಗತ್ಯ. ಆದರೆ ಇಂಥ ಕೆಲಸದಲ್ಲಿ ಯಾವ ಸರ್ಕಾರಗಳಿಗೂ ಆಸಕ್ತಿ ಇದ್ದಂತೆ ಕಾಣುತ್ತಿಲ್ಲ. ಕಾಡಿನ ಬಗ್ಗೆಯಾಗಲಿ, ಕಾಡು ಜೀವಿಗಳ ಬಗ್ಗೆಯಾಗಲಿ, ಕಲ್ಮಶವಿಲ್ಲದೆ ಹರಿಯುವ ನದಿ ಅಥವಾ ಶುದ್ಧ ಗಾಳಿಯ ಬಗ್ಗೆ ನಂಬಿಕೆ ಇಲ್ಲವಾದಾಗ ಏನು ಮಾಡಲು ಸಾಧ್ಯ? ಹುಲಿ ಯೋಜನೆಗಳ ಕಾಡುಗಳಿಗೆ ಪ್ರತಿ ವರ್ಷ ನೀಡುವ ಅನುದಾನವನ್ನು ಕೇಂದ್ರ ಕ್ರಮೇಣ ಕಡಿತಗೊಳಿ-ಸುತ್ತಿದೆ. ಹುಲಿ ಯೋಜನೆಯೊಳಗಿನ ವ್ಯಾಪ್ತಿಯಲ್ಲಿ ಪುನರ್ವಸತಿ ಯೋಜನೆಗಳನ್ನು ಸ್ಥಗಿತಗೊಳಿಸಿದೆ. ಆದರೆ ಪ್ರತಿ ವರ್ಷ ವನ್ಯಜೀವಿ ಸಪ್ತಾಹ ಬಂದಾಗ, ತಮ್ಮ ಅವಧಿಯಲ್ಲಿ ವೃದ್ಧಿಯಾದ ಹುಲಿಗಳ ಸಂಖ್ಯೆಯನ್ನು ಪ್ರಸ್ತಾಪಿಸಿ ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುತ್ತದೆ. ಅಥವಾ ಇಂಥ ದೊಡ್ಡ ದುರಂತಗಳಾದಾಗ ಕೆಲವು ಅಧಿಕಾರಿಗಳನ್ನು ಅಮಾನತುಗೊಳಿಸಿ ಕೈತೊಳೆದುಕೊಳ್ಳುತ್ತದೆ.

ಇಲ್ಲಿ ಸ್ಥಳೀಯರ ಬದುಕು ಸುಧಾರಿಸಿದಾಗಷ್ಟೇ ಕಾಡು ಚಿಗುರುತ್ತದೆ. ಹಕ್ಕಿಗಳು ಹಾಡುತ್ತವೆ. ಕಾಡು ಸಂಭ್ರಮಿಸುತ್ತದೆ. ಆಗ ಕಾಡಿನ ಮೌನ ಮಾತನಾಡುತ್ತದೆ. ಇದು ಸರಳವಾದ ಸತ್ಯ. ಬೆವರು ಸುರಿಸಿ ಬೆಳೆದ ಬೆಳೆಯನ್ನು ಕಳೆದುಕೊಂಡು, ಬದುಕಿಗೆ ಕನಿಷ್ಠ ಸೌಲಭ್ಯಗಳಿಲ್ಲದೆ ರೈತರು ಬದುಕು ನಡೆಸುತ್ತಿರುವುದು ವಾಸ್ತವ ಸ್ಥಿತಿ. ಕಾಡು ಪ್ರಾಣಿಗಳೇ ಅವರ ಪಾಲಿಗೆ ವೈರಿಗಳಾಗಿವೆ.

ಇದರ ಆಧಾರದ ಮೇಲೆ ಮಲೆ ಮಹದೇಶ್ವರ ಕಾಡಿನ ಭವಿಷ್ಯವನ್ನು ರೂಪಿಸಲು ಅಚ್ಚುಕಟ್ಟಾದ ಪುನರ್ವಸತಿ ಯೋಜನೆಯೊಂದೇ ಶಾಶ್ವತ ಪರಿಹಾರ. ಆದರೆ ಇಲ್ಲಿ ಸ್ಥಳೀಯ ರೈತರ ಅಭಿಪ್ರಾಯಗಳಿಗೆ ಪ್ರಾಮುಖ್ಯತೆ ಇರಬೇಕಾಗುತ್ತದೆ.

ಈ ಚರ್ಚೆಯನ್ನು ಆರಂಭಿಸಿದ ಮೂಲ ಉದ್ದೇಶ ಹುಲಿ ದನವನ್ನು ಬೇಟೆಯಾಡಲು ಕಾರಣಗಳೇನಿರಬಹುದೆಂಬುದನ್ನು ಪ್ರಾಮಾಣಿಕವಾಗಿ ಯೋಚಿಸುವುದು. 900 ಚದರ ಕಿಲೋಮೀಟರ್ ವ್ಯಾಪ್ತಿಯ ಕಾಡಿನಲ್ಲಿ 65 ಸಾವಿರಕ್ಕೂ ಹೆಚ್ಚು ಜಾನುವಾರುಗಳು ದಿನವಿಡೀ ಮೇಯ್ದು ವಾಪಸಾದರೆ, ಜಿಂಕೆ, ಕಡವೆ, ಕಾಡೆಮ್ಮೆಗ-ಳಂತಹ ಸಸ್ಯಹಾರಿ ಪ್ರಾಣಿಗಳಿಗೆ ಆಹಾರವೇ ಉಳಿದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಅವು ಬದುಕಿ ಸಂತಾನ ವೃದ್ಧಿಸುವುದು ಹೇಗೆ? ಇವುಗಳ ಸಂಖ್ಯೆ ಕಡಿಮೆಯಾಗುತ್ತಾ ಸಾಗಿದಂತೆ ಹುಲಿಗಳ ದೈನಂದಿನ ಬದುಕಿನ ಮೇಲೆ ಒತ್ತಡ ಹೆಚ್ಚಾಗುತ್ತದೆ. ಹಾಗಾದಾಗ ಅವು ಜಾನುವಾರುಗಳನ್ನು ಬೇಟೆಯಾಡುವುದು ಅನಿವಾರ್ಯವಾಗುತ್ತದೆ.

ಹುಲಿಗಳ ಈ ಅಸಹಾಯಕತೆಯನ್ನು 2017ರಲ್ಲಿ ಜರುಗಿದ ಅಧ್ಯಯನ ಅನಾವರಣಗೊಳಿಸುತ್ತದೆ. 9ನೇ ಪುಟಕ್ಕೆ...



ಕುಂಚದಲ್ಲಿ ಬಸವಣ್ಣನ ಜೀವನ ದರುಶನ


• ಶಶಿಕಾಂತ ಎಸ್. ಶೆಂಬೆಳ್ಳಿ

ಹನ್ನೆರಡನೇ ಶತಮಾನದ ಸಮಾಜ ಸುಧಾರಕ ಬಸವಣ್ಣ-ನವರ ಬಗ್ಗೆ ಅನೇಕ ವಚನಗಳಲ್ಲಿ ಉಲ್ಲೇಖವಿದೆ. ಅನೇಕ ಜನ ಜನಪದರು ಹಾಡಿ ಹೊಗಳಿದ್ದಾರೆ. ಸಾಹಿತಿಗಳು ಸಾಹಿತ್ಯ ರಚಿಸಿದ್ದಾರೆ. ಅಲ್ಲೊಬ್ಬರು, ಇಲ್ಲೊಬ್ಬರು ಬಿಡಿ ಬಿಡಿಯಾದ ಚಿತ್ರಗಳನ್ನೂ ಬಿಡಿಸಿದ್ದಾರೆ. ಆದರೆ, ನಿವೃತ್ತ ಚಿತ್ರಕಲಾ ಶಿಕ್ಷಕ ಸಿ.ಬಿ. ಸೋಮಶೆಟ್ಟಿ ಅವರು ತಮ್ಮ ಕುಂಚದ ಮೂಲಕ ಅವರ ಸಮಗ್ರ ವ್ಯಕ್ತಿತ್ವವನ್ನು ಕಟ್ಟಿಕೊಡುವ ಕೆಲಸ ಮಾಡಿದ್ದಾರೆ.

ಬಸವಣ್ಣನವರು ಹುಟ್ಟಿನಿಂದ ಐಕ್ಯರಾಗುವ ಕಾಲಾವಧಿಯ ಪ್ರಮುಖ ಘಟನಾವಳಿಗಳನ್ನು 124 ಜಲವರ್ಣದ ಕಲಾಕೃತಿಗಳಲ್ಲಿ ಚಿತ್ರಿಸಿದ್ದಾರೆ. ತೈಲವರ್ಣಕ್ಕೆ ಹೋಲಿಸಿದರೆ ಜಲವರ್ಣ ಸೂಕ್ಷ್ಮವಾದ ಕೆಲಸ. ಸವಾಲಿನ ಕೆಲಸವಾಗಿದ್ದರೂ ಅದನ್ನೇ ಆಯ್ಕೆ ಮಾಡಿಕೊಂಡು ಕಲಾಕೃತಿಗಳಿಗೆ ಜೀವಂತಿಕೆ ಕೊಟ್ಟಿರುವುದು ವಿಶೇಷ.

ಬಸವಣ್ಣನವರ ಜನನ, ಶಿಕ್ಷಣ, ಇಷ್ಟಲಿಂಗ ಆವಿಷ್ಕಾರ, ಕರಣಿಕ ವೃತ್ತಿ, ವಿವಾಹ, ದಲಿತರ ಓಣಿಗೆ ಭೇಟಿ, ಕಳ್ಳ ಮನೆಗೆ ಬಂದ ಸನ್ನಿವೇಶ, ಅನುಭವ ಮಂಟಪದ ಚರ್ಚಾಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡುವುದು, ಅನುಭವ ಮಂಟಪಕ್ಕೆ ಅಕ್ಕಮಹಾದೇವಿಯ ಪ್ರವೇಶ, ಹರಳಯ್ಯನವರ ಮನೆಗೆ ಭೇಟಿ, ತೊಡೆಯ ಚರ್ಮದಿಂದ ತಯಾರಿಸಿದ ಚಮ್ಮಾವುಗೆ ತಲೆಯ ಮೇಲೆ ಹೊತ್ತುಕೊಂಡದ್ದು, ಅಂತರ್ಜಾತಿ ವಿವಾಹ, ಪ್ರಧಾನಿ ಪಟ್ಟ ತ್ಯಾಗ ಮಾಡಿ ಹೊರಡುವುದು, ಗಡಿಪಾರು ಶಿಕ್ಷೆ, ಶರಣರಿಗೆ ಎಳೆಹೂಟೆ ಶಿಕ್ಷೆ, ವಚನಗಳ ಕಟ್ಟುಗಳನ್ನು ಹೊತ್ತುಕೊಂಡು ಹೋಗುವುದು, ಅಂತಿಮವಾಗಿ ಕೂಡಲಸಂಗಮದಲ್ಲಿ ಬಸವಣ್ಣನವರು ಐಕ್ಯರಾಗುವ ಸನ್ನಿವೇಶಗಳು ಕಲಾಕೃತಿಗಳಲ್ಲಿ ಜೀವತಳೆದಿವೆ.

ಎಲ್ಲ ಕಲಾಕೃತಿಗಳು 2.5X2 ಅಡಿ ಇದ್ದು, 2006ರಲ್ಲಿ ಚಿತ್ರಕಲಾ ಶಿಕ್ಷಕ ಹುದ್ದೆಯಿಂದ ನಿವೃತ್ತರಾದ ಸೋಮಶೆಟ್ಟಿ ಅವರು ಈ ಕೆಲಸವನ್ನು ತಪಸ್ಸಿನ ರೀತಿಯಲ್ಲಿ ಮಾಡಿರುವುದು ವಿಶೇಷ. 2007ರಲ್ಲಿ ಕೈಗೆತ್ತಿಕೊಂಡ ಯೋಜನೆ ಪೂರ್ಣಗೊಂಡಿದ್ದು 2022ರಲ್ಲಿ. ಎಲ್ಲ ಕಲಾಕೃತಿಗಳ ರಚನೆಗೆ ಸೋಮಶೆಟ್ಟಿ ಅವರು ಒಟ್ಟು 15 ವರ್ಷಗಳನ್ನು ಸವೆಸಿದ್ದಾರೆ. ಕೆಲಸ ಆರಂಭಿಸುವು-ದಕ್ಕೂ ಮುನ್ನ ಸತತ ಎರಡು ವರ್ಷ ಬಸವಣ್ಣನವರಿಗೆ ಸಂಬಂಧಿಸಿದಂತೆ ವಚನ ಸಾಹಿತ್ಯ, ಜನಪದ ಸಾಹಿತ್ಯ ಹಾಗೂ ಹಲವು ಪುಸ್ತಕಗಳನ್ನು ಓದಿ ಮನದಟ್ಟು ಮಾಡಿಕೊಂಡಿದ್ದಾರೆ. ಸತ್ಯಕ್ಕೆ ಅಪಚಾರವಾಗದಿರಲಿ ಎಂಬ ಉದ್ದೇಶದಿಂದ ಆಳವಾದ ಅಧ್ಯಯನ ಮಾಡಿ, ಹಲವು ಸಾಹಿತಿಗಳು, ವಿಷಯ ತಜ್ಞರೊಂದಿಗೆ ಚರ್ಚಿಸಿ ಕಲಾಕೃತಿಗಳಿಗೆ ಜೀವ ತುಂಬಿದ್ದಾರೆ.


ತಮ್ಮ ಕಲಾಕೃತಿಗಳೊಂದಿಗೆ ಸಿ.ಬಿ. ಸೋಮಶೆಟ್ಟಿ
ಚಿತ್ರಗಳು: ಲೋಕೇಶ ವಿ. ಬಿರಾದಾರ

ಈ ಎಲ್ಲ ಕಲಾಕೃತಿಗಳ ಪ್ರದರ್ಶನಕ್ಕೆ ಬೀದರ್‌ನ ಬಸವ ನಗರದಲ್ಲಿರುವ ಇವರ ಮನೆಯ ಒಂದು ಭಾಗದಲ್ಲಿ ಅತ್ಯುತ್ತಮವಾದ ಗ್ಯಾಲರಿ ನಿರ್ಮಿಸಿದ್ದಾರೆ. ಇವರ ಮನೆಗೆ ‘ಕಲಾ ಕುಂಜ’ ಎಂದು ಹೆಸರಿಟ್ಟರೆ, ಗ್ಯಾಲರಿಗೆ ‘ಸಿ.ಬಿ. ಸೋಮಶೆಟ್ಟಿ ಆರ್ಟ್ ಗ್ಯಾಲರಿ’ ಎಂದು ನಾಮಕರಣ ಮಾಡಿದ್ದಾರೆ. ಸೂಕ್ತ ಬೆಳಕಿನ ವ್ಯವಸ್ಥೆ ಮಾಡಿ, ಫ್ರೇಮ್ ಹಾಕಿದ ಕಲಾಕೃತಿಗಳನ್ನು ಅಚ್ಚುಕಟ್ಟಾಗಿ ಜೋಡಿಸಿ ಇರಿಸಿದ್ದಾರೆ. ಪ್ರತಿಯೊಂದು ಕಲಾಕೃತಿಯ ಅಡಿಯಲ್ಲಿ ಸಣ್ಣ ಟಿಪ್ಪಣಿ ಇದೆ.

ಈ 124 ಕಲಾಕೃತಿಗಳನ್ನು ಒಳಗೊಂಡಿರುವ ‘ಶ್ರೀಗುರು ಬಸವಚಿತ್ರ ಚರಿತ’ ಎಂಬ ಚಿತ್ರ ಸಂಪುಟವನ್ನು ಹೊರತಂದಿದ್ದಾರೆ. 330 ಪುಟಗಳ ಈ ಸಂಪುಟದ ಪ್ರತಿಯೊಂದು ಚಿತ್ರದ ಬದಿಯಲ್ಲಿ ಇಂಗ್ಲಿಷ್ ಹಾಗೂ ಕನ್ನಡದಲ್ಲಿ ಅದರ ಬಗ್ಗೆ ವಿವರಣೆ ಇದೆ. ಬಸವ ಕಲ್ಯಾಣದ ಗಾಯತ್ರಿ ತಾಯಿ ಮತ್ತು ಗಂಗಾಧರ ದೇವರು ಆ ಕೆಲಸ ಮಾಡಿದ್ದಾರೆ. ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಮಲ್ಲಿಕಾರ್ಜುನ ಪಾಟೀಲ ಅವರು ಇಂಗ್ಲಿಷ್ ಭಾಷೆಗೆ ಅನುವಾದ ಮಾಡಿದ್ದಾರೆ. ಇನ್ನಷ್ಟೇ ಈ ಪುಸ್ತಕ ಬಿಡುಗಡೆಗೊಳ್ಳಬೇಕಿದೆ. ಆದರೆ, ಮೊದಲ ಹಂತದಲ್ಲಿ ಪ್ರಕಟಿಸಿರುವ ಎರಡು ಸಾವಿರ ಪುಸ್ತಕಗಳಲ್ಲಿ ಅರ್ಧಕ್ಕಿಂತ ಹೆಚ್ಚು ಮಾರಾಟವಾಗಿವೆ.

770 ಅಮರಗಣಂಗಳ ರೇಖಾಚಿತ್ರ

ಹನ್ನೆರಡನೇ ಶತಮಾನದ 770 ಅಮರಗಣಂಗಳ ರೇಖಾಚಿತ್ರಗಳನ್ನು ಒಳಗೊಂಡಿರುವ ‘ಅಮರಗಣಂಗಳ ಕಾಯಕ ಚಿತ್ರ ದರ್ಶನ’ ಹೆಸರಿನ ಪುಸ್ತಕ ಕೂಡ ಹೊರತರುವ ಯೋಜನೆ ಹಾಕಿಕೊಂಡಿದ್ದಾರೆ. ಈಗಾಗಲೇ 400 ಶರಣರ ರೇಖಾಚಿತ್ರವಿರುವ ಪುಸ್ತಕ ಪ್ರಕಟಿಸಿದ್ದು, ಇನ್ನು 370 ಶರಣರ ಪುಸ್ತಕಕ್ಕೆ ಅಂತಿಮ ರೂಪ ಕೊಡುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ.

‘ಎಲ್ಲರೂ 770 ಅಮರಗಣಂಗಳು ಎಂದು ಭಾಷಣದಲ್ಲಿ ಹೇಳುತ್ತಿರುತ್ತಾರೆ. ಆದರೆ, ಅವರ ಬಗ್ಗೆ ಹೆಚ್ಚಿನವರಿಗೆ ಗೊತ್ತಿಲ್ಲ. ಎಲ್ಲರಿಗೂ ಅವರ ಬಗ್ಗೆ ಗೊತ್ತಾಗಬೇಕು ಎನ್ನುವ ಉದ್ದೇಶದಿಂದ ಈ ಕೆಲಸ ಮಾಡಿದ್ದೇನೆ. ಬಾಲ್ಯದಿಂದಲೂ ನಮ್ಮ ಕುಟುಂಬ ಹಾಗೂ ನನ್ನ ಮೇಲೆ ಬಸವಾದಿ ಶರಣರ ಪ್ರಭಾವ ದಟ್ಟವಾಗಿದೆ. ಜೀವ ಇರುವುದರೊಳಗೆ ಏನಾದರೂ ಮಾಡಬೇಕೆಂಬ ತುಡಿತ ಇತ್ತು. 11ನೇ ಪುಟಕ್ಕೆ...

ಪ್ರಜಾವಾಣಿ
ದೀಪಾವಳಿ ವಿಶೇಷಾಂಕ 2025
ದೀಪಾವಳಿ ಕಥಾ–ಕವನ ಸ್ಪರ್ಧೆಯ ಪ್ರವೇಶಗಳಿಗೆ ಆಹ್ವಾನ
ಪ್ರವೇಶಗಳು ತಲುಪಲು ಕೊನೆಯ ದಿನ 31ನೇ ಜುಲೈ, 2025
ಕನ್ನಡ ಕಥಾ ಜಗತ್ತಿನ ವಾರ್ಷಿಕ ಸಂಭ್ರಮ
ಕಥಾ ಸ್ಪರ್ಧೆ
ಮೊದಲ ಬಹುಮಾನ ₹20,000
ಎರಡನೇ ಬಹುಮಾನ ₹15,000
ಮೂರನೇ ಬಹುಮಾನ ₹10,000
ಕವನ ಸ್ಪರ್ಧೆ
ಮೊದಲ ಬಹುಮಾನ ₹5,000
ಎರಡನೇ ಬಹುಮಾನ ₹3,000
ಮೂರನೇ ಬಹುಮಾನ ₹2,500
ಕಥೆ – ಕವನ ಕಳಿಸುವ ಮುನ್ನ
- ಸ್ಪರ್ಧೆಗೆ ಕಳುಹಿಸುವ ಕಥೆ, ಕವನಗಳು ಸ್ವತಂತ್ರ ರಚನೆ ಆಗಿರಬೇಕು. ಈ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾಜಿಕ ಜಾಲತಾಣ, ಅಂತರ್ಜಾಲ ಸೇರಿದಂತೆ ಎಲ್ಲಿಯೂ ಪ್ರಕಟ ಅಥವಾ ಪ್ರಸಾರ ಆಗಿರಬಾರದು
- ಕಥೆಗೆ ಗರಿಷ್ಠ ಮಿತಿ–ಎರಡು ಸಾವಿರ ಪದಗಳು
- ಕಥೆ- ಕವನಗಳು ಯೂನಿಕೋಡ್‌ನಲ್ಲಿ ಇರಬೇಕು
- ಕಥೆ/ ಕವನ ಇರುವ ಪುಟದಲ್ಲಿ ಹೆಸರು, ವಿವರ ಬರೆಯುವಂತಿಲ್ಲ. ಪ್ರತ್ಯೇಕ ಪುಟದಲ್ಲಿ ಹೆಸರು, ಅಂಚೆ ವಿಳಾಸ, ಫೋನ್ ನಂಬರ್, ಇ-ಮೇಲ್ ವಿಳಾಸ ಒದಗಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ವರ್ಣಮಯ ಭಾವಚಿತ್ರದೊಂದಿಗೆ 80 ಪದ ಮೀರದಂತೆ ಕಿರು ಪರಿಚಯವನ್ನೂ ಜೊತೆಗೆ ಕಳುಹಿಸಬೇಕು
- ಅಂಚೆ ಮೂಲಕ ಕಳುಹಿಸುವವರು ಪ್ರವೇಶಗಳ ಲಕೋಟೆಯ ಮೇಲೆ ಸ್ಪರ್ಧೆಯ ವಿಭಾಗವನ್ನು ಸ್ಪಷ್ಟವಾಗಿ ನಮೂದಿಸಬೇಕು
- ‘ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್’ನ ಸಿಬ್ಬಂದಿ ಹಾಗೂ ಅವರ ಕುಟುಂಬದವರು ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶವಿಲ್ಲ.
- ಸ್ಪರ್ಧೆಗೆ ಕಳುಹಿಸಿರುವ ರಚನೆಗಳನ್ನು ಹಿಂದಿರುಗಿಸುವುದಿಲ್ಲ
- ಬಹುಮಾನಿತ ಕಥೆ, ಕವನಗಳನ್ನು ಯಾವುದೇ ಸ್ವರೂಪದಲ್ಲಿ ಯಾವಾಗ ಬೇಕಾದರೂ ಬಳಸುವ ಹಕ್ಕುಗಳನ್ನು ‘ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್’ ಕಾಯ್ದಿರಿಸಿಕೊಂಡಿದೆ
- ಸಂಪಾದಕರ ತೀರ್ಮಾನವೇ ಅಂತಿಮ
ಇ–ಮೇಲ್: deepavali@prajavani.co.in
ವಿಳಾಸ
ಸಂಪಾದಕರು, ದೀಪಾವಳಿ ವಿಶೇಷಾಂಕ ವಿಭಾಗ ಪ್ರಜಾವಾಣಿ,
ನಂ.75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು–560001

ಗುರುದಕ್ಷಿಣೆ ಯಕ್ಷಗಾನದ ಹೊಸ ಅಧ್ಯಾಯ

ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ವಿದ್ಯಾರ್ಥಿಗಳು ಕೇವಲ 20 ದಿನಗಳಲ್ಲಿ ಯಕ್ಷಗಾನ ತರಬೇತಿಯನ್ನು ಪಡೆದು 'ಗುರುದಕ್ಷಿಣೆ' ಎಂಬ ಪ್ರಸಂಗವನ್ನು ಪ್ರದರ್ಶಿಸಿದರು. ಈ ವಿದ್ಯಾರ್ಥಿಗಳ್ಯಾರೂ ಕನ್ನಡಿಗರಲ್ಲ. ಆದರೆ ಇವರು ಇಡೀ ಪ್ರಸಂಗವನ್ನು ಕನ್ನಡದಲ್ಲಿಯೇ ಪ್ರಸ್ತುತಪಡಿಸಿದ್ದು ವಿಶೇಷವಾಗಿತ್ತು. ಈ ಹೆಜ್ಜೆ ಯಕ್ಷಗಾನವನ್ನು ಜಾಗತಿಕವಾಗಿಸುವ ಯತ್ನಕ್ಕೆ ಮತ್ತಷ್ಟು ಬಲ ನೀಡಿದೆ..

• ರವಿ ಮಡೋಡಿ



ದೆಹಲಿಯ ಎನ್.ಎಸ್.ಡಿ ವಿದ್ಯಾರ್ಥಿಗಳಿಂದ 'ಗುರುದಕ್ಷಿಣೆ' ಯಕ್ಷಗಾನ ಪ್ರಸಂಗ ಪ್ರದರ್ಶನ

ಇತ್ತೀಚಿನ ದಿನಗಳಲ್ಲಿ ಯಕ್ಷಗಾನವನ್ನು ಕಲಿಯುವ ಹೊಸ ಮನಸ್ಸುಗಳು ದೇಶದ ಮೂಲೆಮೂಲೆಗಳಿಂದ ಬರುತ್ತಿರುವುದು ಖುಷಿಯ ಸಂಗತಿ. ಇದಕ್ಕೆ ಉದಾಹರಣೆ ಎಂಬಂತೆ ದೆಹಲಿಯ ರಾಷ್ಟ್ರೀಯ ನಾಟಕ ಶಾಲೆ (ಎನ್.ಎಸ್.ಡಿ)ಯ ವಿದ್ಯಾರ್ಥಿಗಳು ಕೇವಲ 20 ದಿನಗಳಲ್ಲಿ ಯಕ್ಷಗಾನ ತರಬೇತಿಯನ್ನು ಪಡೆದು 'ಗುರುದಕ್ಷಿಣೆ' ಎಂಬ ಪ್ರಸಂಗವನ್ನು ಪ್ರದರ್ಶಿಸಿದರು. ಈ ಪ್ರಯೋಗದ ನಿರ್ದೇಶನವನ್ನು ಬನ್ನಂಜೆ ಸಂಜೀವ ಸುವರ್ಣ ಅವರು ನಿರ್ವಹಿಸಿದ್ದರು. ಇದು ಕೇವಲ ಒಂದು ಯಕ್ಷಗಾನ ಪ್ರದರ್ಶನ ಮಾತ್ರವಲ್ಲ. ಈ ಪ್ರಯೋಗವು ಹಲವು ಆಯಾಮಗಳನ್ನು ಒಳಗೊಂಡಿದ್ದು ತರಬೇತಿ ವಿಧಾನ, ಕಲೆಯನ್ನು ಹೊರ ಜಗತ್ತಿಗೆ ಪರಿಚಯಿಸುವ ರೀತಿ, ಪ್ರಸ್ತುತಿಯ ಶುದ್ಧತೆ, ಹೊಸ ತಲೆಮಾರಿಗೆ ಯಕ್ಷಗಾನವನ್ನು ಪರಿಚಯಿಸಿ ಸಾಧಿಸುವ ಪ್ರಯತ್ನ ಮುಂತಾದ ಭಾಗವಾಗಿ ಇದನ್ನು ಕಾಣಬೇಕಾಗಿದೆ.



ಸರ್ವೇಸಾಮಾನ್ಯವಾಗಿ ಯಕ್ಷಗಾನವು ಕನ್ನಡದಲ್ಲಿ ಪ್ರಸ್ತುತವಾಗುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಆದರೆ ಈ ವಿದ್ಯಾರ್ಥಿಗಳು ಕನ್ನಡಿಗರಲ್ಲ. ದೇಶದ ಬೇರೆ, ಬೇರೆ ರಾಜ್ಯಗಳಿಂದ ಬಂದ ಇವರಿಗೆ ಕನ್ನಡದ ಬಗ್ಗೆ ಯಾವುದೇ ಅರಿವೂ ಇರಲಿಲ್ಲ. ಕಳೆದ ವರ್ಷವೂ ಅಲ್ಲಿಯ ವಿದ್ಯಾರ್ಥಿಗಳು ಯಕ್ಷಗಾನವನ್ನು ಪ್ರಯೋಗಿಸಿದ್ದರಾದರೂ ಅವರು ಅದನ್ನು ಹಿಂದಿಯಲ್ಲಿಯೇ ಪ್ರಸ್ತುತಪಡಿಸಿದ್ದರು. ಆದರೆ ಈಗ ಹೊಸ ಬ್ಯಾಚಿನ ವಿದ್ಯಾರ್ಥಿಗಳು ಒಂದು ಹೆಜ್ಜೆ ಮುಂದೆ ಸಾಗಿ, ಕೇವಲ ಕೆಲವೇ ದಿನಗಳಲ್ಲಿ ಯಕ್ಷಗಾನದ ಹೆಜ್ಜೆಗಳನ್ನು, ಅದರ ನೃತ್ಯ ಭಾಷೆ, ಆಂಗಿಕ ಅಭಿನಯವನ್ನು ಕಲಿತು, ವಿಶ್ವಾಸಪೂರ್ಣವಾಗಿ ರಂಗಪಟುತ್ವವನ್ನು ಅಭ್ಯಸಿಸಿ, ಕನ್ನಡ ಭಾಷೆಯಲ್ಲಿಯೇ ಇಡೀ ಯಕ್ಷಗಾನವನ್ನು ಪ್ರಸ್ತುತಪಡಿಸಿದ್ದು ನಿಜಕ್ಕೂ ಪ್ರಶಂಸೆಗೆ ಅರ್ಹವಾಗಿದೆ. ಇಂತಹ ಪ್ರಯೋಗಗಳು ಯಕ್ಷಗಾನದಂಥ ಶ್ರೇಷ್ಠವಾದ ಕಲೆಯನ್ನು ಭಾಷೆಯನ್ನು ಮೀರಿ, ರಾಷ್ಟ್ರಮಟ್ಟದಲ್ಲಿ ವಿಸ್ತರಿಸಲು ಪೂರಕವಾಗಿದೆ ಎನ್ನಬಹುದು.

ಈ ಪ್ರಯೋಗಕ್ಕೆ ಭಾಷೆಯ ಕಾರಣಕ್ಕಾಗಿ ವಿನಾಯಿತಿ ನೀಡಬೇಕೆಂದೇನೂ ಇಲ್ಲ. ಇಲ್ಲಿ ವಿದ್ಯಾರ್ಥಿಗಳು ತಮ್ಮ ಪ್ರಸ್ತುತಿಯಲ್ಲಿ ಹೇಳಬೇಕಾದ ಅಂಶಗಳನ್ನು ಬಹು ಚೆನ್ನಾಗಿ ಮತ್ತು ಸ್ಪಷ್ಟವಾಗಿ ಮಂಡಿಸಿದ್ದರು. ಹಾಗಾಗಿ ಇದನ್ನು ಕೇವಲ ಮಹತ್ವದ ಪ್ರಾರಂಭವೆಂದು ಮಿತಿಗೊಳಿಸದೇ, ಯಕ್ಷಗಾನೀಯ ಅಂಶಗಳ ದೃಷ್ಟಿಯಿಂದ ಹೆಚ್ಚು ಚರ್ಚಿಸಬೇಕಾಗಿರುವ ಅಗತ್ಯವಿದೆ. ಈ ರಂಗ ಪ್ರಯೋಗವು ಸೃಷ್ಟಿಸಿರುವ ಪರಿಣಾಮಗಳನ್ನು ಮನಗಂಡು, ಅವು ನಿರ್ದೇಶನದ ಮೂಲಕ ಹೇಗೆ ಸೃಜನಾತ್ಮಶೀಲತೆಯನ್ನು ಬಿಟ್ಟುಕೊಡದೇ ಪ್ರಸ್ತುತ ರಂಗಭೂಮಿಯಲ್ಲಿರುವ ಕೆಲವು ಅಪಸವ್ಯಗಳಿಂದ ಮುಕ್ತಿಯನ್ನು ನೀಡಬಲ್ಲವು ಎಂಬುದಕ್ಕೆ ದಿಕ್ಸೂಚಿಯಾಗಿದೆ.

ಇಲ್ಲಿ ಪ್ರಯೋಗವು ಆರಂಭವಾಗಿದ್ದು ಪೂರ್ವರಂಗದಿಂದ. ಹಿಂದಿನ ಕಾಲದಲ್ಲಿ ಯಕ್ಷಗಾನದಲ್ಲಿನ ಪೂರ್ವರಂಗವೇ ಕನಿಷ್ಠ ಮೂರು-ನಾಲ್ಕು ಗಂಟೆಗಳ ಕಾಲ ನಡೆಯುತ್ತಿದ್ದವು. ಆದರೆ ಇಂದು ತಾಳ್ಮೆ ಮತ್ತು ಬದ್ಧತೆಯ ಕೊರತೆಯಿಂದ ಅದು ನಿಧಾನವಾಗಿ ಯಕ್ಷಗಾನ ರಂಗದಿಂದ ಕಣ್ಮರೆಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ಇಡೀ ಪ್ರಸಂಗವೇ ತೊಂಬತ್ತು ನಿಮಿಷದ ಅವಧಿಯಾಗಿದ್ದರೂ ಕೂಡ ಪೂರ್ವರಂಗದ ಝಲಕ್‌ಗಳನ್ನು ಬಿಡದೇ ಪ್ರಸಂಗದೊಂದಿಗೆ ಪ್ರಸ್ತುತಪಡಿಸಿದ ಕ್ರಮ ನಿಜಕ್ಕೂ ಮಾದರಿ ಎನ್ನಬಹುದು. ವಿದ್ಯಾರ್ಥಿಗಳು ಶೃತಿಬದ್ಧವಾಗಿ ಭಾಗವತರೊಂದಿಗೆ ಹಾಡುತ್ತ ಸಭಾವಂದನೆಯನ್ನು ಮಾಡಿದ್ದು ವಿಶೇಷವಾಗಿತ್ತು.

ರಂಗ ಸೃಷ್ಟಿಸಿದ ಎರಡು ಭಾವನಾತ್ಮಕ ಸನ್ನಿವೇಶಗಳು ನಮ್ಮನ್ನು ಕಾಡುವಂತೆ ಮಾಡುತ್ತವೆ. ಮೊದಲನೆಯದು, ಏಕಲವ್ಯನು ಬಿಲ್ಲು ವಿದ್ಯೆ ಕಲಿಯುವ ಅಪಾರ ಹಂಬಲದೊಂದಿಗೆ ಗುರು ದ್ರೋಣರ ಬಳಿಗೆ ಬರುವ ಕ್ಷಣ. ಇಲ್ಲಿ ನಿರ್ದೇಶಕರು ಮತ್ತು ಕಲಾವಿದರು ಪಾತ್ರಗಳನ್ನು ಏಕಪಕ್ಷೀಯವಾಗಿ ಚಿತ್ರಿಸದೇ, ದ್ರೋಣರ ತಿರಸ್ಕಾರವನ್ನು ತೀಕ್ಷ್ಣವಾಗಿ ಬಿಂಬಿಸುವ ಬದಲು ಆಂತರಿಕ ಸಂಘರ್ಷಕ್ಕೆ ಸ್ಥಳ ನೀಡಿದ್ದು ವಿಶೇಷವಾಗಿತ್ತು. ಅತ್ತ ಏಕಲವ್ಯನನ್ನು, ಅವನ ಆಸಕ್ತಿಯನ್ನು ಬಿಟ್ಟುಕೊಡುವುದಕ್ಕೆ ಸಾಧ್ಯವಾಗದೇ ದ್ರೋಣರಲ್ಲಿ ಮೂಡಿದ ತಾಕಲಾಟವು ಒಮ್ಮೆಗೆ ಮಿಡಿದಿದ್ದು ಕಾಣುವಂತಿತ್ತು. ಅಂಗಲಾಚಿ ಬೇಡಿದರೂ ಕಾರಣವಿಲ್ಲದೇ ತಿರಸ್ಕಾರಕ್ಕೆ ಒಳಗಾಗುವ ಏಕಲವ್ಯನ ಪರಿಸ್ಥಿತಿಯನ್ನು ಕಲಾವಿದರು ಚೆನ್ನಾಗಿಯೇ ಕಟ್ಟಿಕೊಟ್ಟರು. ಈ ಎರಡು ಪಾತ್ರಗಳ ಭಾವವನ್ನು, ಹಲವು ಅರ್ಥ ವ್ಯಾಪ್ತಿಯನ್ನು ಮುಖಾಮುಖಿಯಾಗಿಸುವ ನಿರ್ದೇಶಕರ ಪ್ರಯತ್ನ ಇಲ್ಲಿ ಯಶಸ್ವಿಯಾಗಿದೆ. ಇದೇ ರೀತಿಯಲ್ಲಿ ಕಾಡುವ ಮತ್ತೊಂದು ಸನ್ನಿವೇಶವೆಂದರೆ, ಅದು ಏಕಲವ್ಯ ಹಾಗೂ ಅವನ ತಾಯಿಯೊಂದಿಗಿನ ಸನ್ನಿವೇಶ. ತಾಯಿಗೆ ಮಗನು ಧನುರ್ವಿದ್ಯೆ ಕಲಿಯಬೇಕೆಂಬ ಹಂಬಲ ಇದ್ದರೂ, ತನ್ನ ಸಾಮಾಜಿಕ ಪರಿಸ್ಥಿತಿಗೆ ಕೈಗೊಂಬೆಯಾಗಿ ಮಗನಿಗೆ ಹೇಳಲಾಗದ ಅಸಹಾಯಕತೆ ರಂಗದಲ್ಲಿ ಸಹಜವಾಗಿಯೇ ಬಂದಿತ್ತು. ಅಲ್ಲಿ ಮಗನ ಚಡಪಡಿಕೆ, ಉತ್ಸಾಹ, ಎಲ್ಲವೂ ಕೂಡ ಆಪ್ತವಾಗಿ ಕಾಣಿಸಿದ್ದು ವಿಶೇಷವಾಗಿತ್ತು. ಭಾಷೆಯ ಅಡಚಣೆಗಳಿಂದಾಗಿ ಇಂತಹ ಭಾವನಾತ್ಮಕ ಕ್ಷಣಗಳು ಪ್ರೇಕ್ಷಕರಿಗೆ ತಲುಪದ ಅಪಾಯವಿದ್ದರೂ, ಕಲಾವಿದರು ಅದನ್ನು ಅತ್ಯುತ್ತಮವಾಗಿ ತಲುಪಿಸಿ, ಅಭಿನಯದ ಶಕ್ತಿಯ ಮೂಲಕ ಭಾವವ್ಯಕ್ತಿಯ ತೀವ್ರತೆಯನ್ನು ಕಾಪಾಡಿದರು.

ಹಾಗಂತ ಸಣ್ಣಪುಟ್ಟ ದೋಷಗಳು, ಕೊರತೆಗಳು ಎಲ್ಲಾ ಪ್ರದರ್ಶನಗಳಲ್ಲಿಯೂ ಇರುವಂತೆಯೇ ಇಲ್ಲಿ ಕೂಡ ಕಂಡುಬಂದವು ಎಂಬುದು ಸ್ವಾಭಾವಿಕ. ಆದರೂ ಇದು ವಿದ್ಯಾರ್ಥಿಗಳಿಂದ ನಡೆದಿರುವ ಪ್ರಥಮ ಪ್ರಯೋಗವಾಗಿರುವ ಕಾರಣದಿಂದಾಗಿ, ಈ ಬಗ್ಗೆಯೂ ಚಿಂತಿಸಿ ಮುಂದಿನ ಬಾರಿಗೆ ಹೆಚ್ಚಿನ ಪರಿಪಕ್ವತೆಯನ್ನು ತರುವ ಅವಕಾಶವಿದೆ. ಉದಾಹರಣೆಗೆ, ದ್ರೋಣರು ತಮ್ಮ ಶಿಷ್ಯರಲ್ಲಿ ಲೋಕದ ವಿವಿಧ ಪ್ರಶ್ನೆಗಳನ್ನು ಕೇಳುವ ಮತ್ತು ಶಿಷ್ಯರಿಂದ ಉತ್ತರ ನಿರೀಕ್ಷಿಸುವ ಭಾಗ ಸ್ವಲ್ಪ ದೀರ್ಘವಾದಂತೆ ತೋರಿತು. ಈ ಭಾಗವನ್ನು ಇನ್ನಷ್ಟು ಸಂಕ್ಷಿಪ್ತಗೊಳಿಸಬಹುದಿತ್ತು. ಅಷ್ಟೇ ಅಲ್ಲದೆ, ವಿರೋಚಿತ ಧನುರ್ವಿದ್ಯೆಯ ಕೆಲವು ಸನ್ನಿವೇಶಗಳನ್ನು ದೃಶ್ಯ ರೂಪದಲ್ಲಿ ರಂಗಕ್ಕೆ ತರುವ ಅವಕಾಶವಿದ್ದರೆ ಅದನ್ನು ತರಬಹುದು. ಜೊತೆಗೆ ಯಕ್ಷಗಾನದಲ್ಲಿ ಭಾಗವತಿಕೆ ಹಾಗೂ ಅದಕ್ಕೆ ಹೊಂದುವ ಕುಣಿತಗಳಿಗೆ ಪ್ರಮುಖ ಸ್ಥಾನವಿರುವುದರಿಂದ, ಒಟ್ಟಂದದ ಈ ಪ್ರಯೋಗದಲ್ಲಿ ಈ ಅಂಶಗಳಿಗೆ ಸ್ವಲ್ಪ ಕಡಿಮೆ ಅವಕಾಶ ದೊರೆತಿರುವುದನ್ನು ಗಮನಿಸಬಹುದು.

ಹೀಗೆ ದಕ್ಷ ನಿರ್ದೇಶನ, ಭಾವಪೂರ್ಣ ಅಭಿನಯ ಮತ್ತು ಸಾಂಪ್ರದಾಯಿಕ ಯಕ್ಷಗಾನದ ಅಂಶಗಳೊಂದಿಗೆ ಹೊಸತನ್ನು ಸಂಧಾನಿಸಿದ ಈ ಪ್ರಯೋಗ, ಯಕ್ಷಗಾನದ ಭವಿಷ್ಯವನ್ನು ವಿಸ್ತಾರಗೊಳಿಸುವ ಅವಕಾಶಗಳನ್ನೊಳಗೊಂಡ ಮಾದರಿಯಾಗಿ ರೂಪುಗೊಂಡಿದೆ. ಭಾಷಾ ಮಿತಿ, ಕಾಲಾವಕಾಶದ ಅಡಚಣೆಗಳ ಹೊರತಾದ ಕಲಾತ್ಮಕತೆ ಹೇಗೆ ಸಾಧ್ಯ ಎಂಬುದಕ್ಕೆ ಇದು ಸ್ಪಷ್ಟ ಉತ್ತರವನ್ನು ನೀಡುತ್ತದೆ. ಇಂತಹ ಪ್ರಯೋಗಗಳು ಕೇವಲ ರಂಗಪ್ರದರ್ಶನವಲ್ಲ, ಯಕ್ಷಗಾನ ರಂಗಭೂಮಿಗೆ ಹೊಸ ದಿಕ್ಕು, ಹೊಸ ಚೈತನ್ಯ, ಹೊಸ ಕನಸುಗಳನ್ನು ನೀಡುತ್ತದೆ ಎಂಬುದನ್ನು ನಿಚ್ಚಳವಾಗಿ ಹೇಳಬಹುದು.



ಹುಲಿಗಳ ಸಾವಿನ ಸುತ್ತಮುತ್ತ...

8ನೇ ಪುಟದಿಂದ...

ಆ ವರದಿಯ ಪ್ರಕಾರ ಆ ದಿನಗಳಲ್ಲಿ ಮೂರು ಮರಿಗಳನ್ನು ಸೇರಿದಂತೆ ಇದ್ದ ಹುಲಿಗಳ ಸಂಖ್ಯೆ ಹತ್ತು. ಈಗ ಜೀವಿಸಿರುವ ಹುಲಿಗಳ ಸಂಖ್ಯೆಯೂ ಹತ್ತು. ಎಂಟು ವರ್ಷಗಳ ಅವಧಿಯಲ್ಲಿ ಅವುಗಳ ಸಂತತಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಇದು ಕಾಡಿನಲ್ಲಿರುವ ಸಂಪನ್ಮೂಲಗಳ ಸ್ಥಿತಿಗಳನ್ನು ಸ್ಪಷ್ಟವಾಗಿ ಹೇಳುತ್ತದೆ.

ಇದಲ್ಲದೆ ಮಲೆ ಮಹದೇಶ್ವರ ಕಾಡಿಗೆ ತನ್ನದೇ ಆದ ಮಹತ್ವವಿದೆ. ಕಾವೇರಿ ವನ್ಯಧಾಮ, ಬಿಳಿಗಿರಿರಂಗನ ಬೆಟ್ಟ ಮತ್ತು ನೆರೆಯ ತಮಿಳುನಾಡಿನ ಅರಣ್ಯಗಳಿಗೆ ಇದು ಸಂಪರ್ಕ ಕೊಂಡಿ. ಕಾಡುಗಳ ನಡುವೆ ವೈವಿಧ್ಯಮಯ ಹಾಗೂ ಆರೋಗ್ಯಕರ ಜೀನ್‌ಗಳು ಪರಿಣಾಮಕಾರಿಯಾಗಿ ಹರಿದಾಡಲು ಇದು ಹೆದ್ದಾರಿ.

ಕಾಡು ಚೇತರಿಸಿಕೊಂಡು ಜೀವ ಸಂಕುಲಗಳು ಸಂಭಾಷಿಸಲು ಆರಂಭಿಸಿದಾಗ, 65 ಸಾವಿರ ಜಾನುವಾರುಗಳ ನಿತ್ಯ ಅಲೆದಾಟದಲ್ಲಿ ಬರಡಾದ ಭೂಮಿ ಮೃದುವಾಗುತ್ತದೆ. ಮಳೆಯ ಹನಿಗಳು ಭೂಮಿಯೊಳಗೆ ಇಳಿದು ಜಲಮೂಲಗಳು ವೃದ್ಧಿಗೊಳ್ಳುತ್ತವೆ. ಝರಿಗಳು ಜಿನುಗಿ ಹರಿದು, ಕಾವೇರಿಗೆ ಧುಮುಕಿ ಕಾಡಿಗಷ್ಟೇ ಅಲ್ಲದೆ ತಮಿಳುನಾಡಿನ ಜನರಿಗೂ ನೆಮ್ಮದಿ ತರುತ್ತದೆ.

ಆದರೆ, ಇಂದಿನ ಪರಿಸ್ಥಿತಿ ಹೀಗೆ ಮುಂದುವರಿದಲ್ಲಿ ಅಲ್ಲಿನ ಹುಲಿಗಳು ನಶಿಸಿಹೋಗಿ ಲಕ್ಷಾಂತರ ಅನುಯಾಯಿಗಳಿರುವ ಶಕ್ತಿದೇವ ಮಹಾದೇವನಿಗೆ ಓಡಾಡಲು ವಾಹನವೇ ಇಲ್ಲದಂತಾಗುತ್ತದೆ. ಖಂಡಿತವಾಗಿ ಹೀಗಾಗುವುದು ಬೇಡ!

ಕುಡಿಯಾಟ್ಟಂ ನಲ್ಲಿ ಕಂಗೊಳಿಸಿದ ಮೃಚ್ಛಕಟಿಕಂ

• ಪ್ರತಿಭಾ ನಂದಕುಮಾರ್

ಬೆಂಗಳೂರಿನ ರಂಗಶಂಕರದಲ್ಲಿ ಪ್ರದರ್ಶನಗೊಂಡ ಕುಡಿಯಾಟ್ಟಂ ಶೈಲಿಯ 'ಮೃಚ್ಛಕಟಿಕಂ' ನಾಟಕ ಭೂಮಿಜಾ ಸಂಸ್ಥೆಯು ಪ್ರಸ್ತುತಪಡಿಸುತ್ತಿರುವ ಕಾರ್ಯಕ್ರಮಗಳಲ್ಲಿ ವಿಶಿಷ್ಟ ಸ್ಥಾನವನ್ನು ಪಡೆಯುತ್ತದೆ. ಏಕೆಂದರೆ ಕ್ರಿ.ಶ ಐದನೇ ಶತಮಾನದಲ್ಲಿದ್ದನೆಂದು ಹೇಳಲಾದ ಶೂದ್ರಕ ಮಹಾರಾಜ ಸಂಸ್ಕೃತದಲ್ಲಿ ರಚಿಸಿದ ನಾಟಕವಿದು. ಭಾರತದ ಅತ್ಯಂತ ಪ್ರಾಚೀನ ರಂಗಕಲೆ ಕುಡಿಯಾಟ್ಟಂ ಪ್ರಕಾರ ಇವೆರಡೂ ಸಂಗತಿಗಳು ಪ್ರಸ್ತುತ ಸಮಕಾಲೀನ ರಂಗಭೂಮಿಯಲ್ಲಿ ಮೇಳೈಸಿದ ರೀತಿ ಮತ್ತು ಇಂದಿನ ಪ್ರೇಕ್ಷಕರು ಅದನ್ನು ಮನದುಂಬಿ ಸ್ವೀಕರಿಸಿದ ಬಗೆ ರಂಗಕಲೆಯ ಕುರಿತು ಮಹತ್ವದ ಸಂದೇಶವನ್ನು ನೀಡುತ್ತದೆ. ಹಳತನ್ನು ಹೊಸದಾಗಿಸಿದ ಈ ಪ್ರಯೋಗ ಇತ್ತೀಚಿನ ರಂಗ ಪ್ರಯೋಗಗಳಲ್ಲಿ ಮಹತ್ವದ ಸ್ಥಾನ ಪಡೆಯುತ್ತದೆ.

'ಮೃಚ್ಛಕಟಿಕಂ' ಅಂದಿನ ಕಾಲಕ್ಕೂ ಅತ್ಯಾಧುನಿಕವೆನ್ನಿಸಿಕೊಂಡಿತ್ತು ಮತ್ತು ಸುಮಾರು ಸಾವಿರ ವರ್ಷಗಳಿಗೂ ಮೀರಿ ಭಾರತೀಯ ನಾಟಕಕಾರರ ಮೇಲೆ ದಟ್ಟ ಪ್ರಭಾವ ಬೀರಿತು. ಇಂದಿಗೂ ಕೂಡಾ 'ಮೃಚ್ಛಕಟಿಕಂ' ಟೆಂಪ್ಲೇಟ್‌ನ ಛಾಯೆ ನಮ್ಮ ನಾಟಕಗಳಲ್ಲಿ ಅಲ್ಲಲ್ಲಿ ಕಂಡೇ ಕಾಣುತ್ತದೆ. ಒಬ್ಬಳು ಸುಂದರಿ ದೇವದಾಸಿಗಾಗಿ ಒಬ್ಬ ಸದ್ಗುಣಿ ವರ್ತಕ ಮತ್ತು ಒಬ್ಬ ದುಷ್ಟ ಶ್ರೀಮಂತನ ನಡುವಿನ ಸಂಘರ್ಷ ಇದರ ವಸ್ತು. ಜೊತೆಗೆ ರಾಜಕೀಯ, ಸಾಮಾನ್ಯ ಜನರ ಜೀವನ ಅವರ ವರ್ತನೆ, ನಾಯಕಿ ವಸಂತಸೇನೆಯ ದಿಟ್ಟ ವ್ಯಕ್ತಿತ್ವ ಎಲ್ಲವೂ ಕಾಲಾಂತರದಲ್ಲಿ ನಮ್ಮ ನಾಟಕಗಳಲ್ಲಿ ಬೇರೆಬೇರೆ ರೀತಿಯಲ್ಲಿ ಮರುಕಳಿಸಿವೆ.

ಇದು ಸುಪ್ರಸಿದ್ಧ ಕುಡಿಯಾಟ್ಟಂ ಕಲಾವಿದ 80ರ ವಯಸ್ಸಿನ ಜಿ. ವೇಣು ಅವರ ಸಾಹಸ. ಈ ಹಿಂದೆಯೇ ಕಾಳಿದಾಸನ 'ಶಾಕುಂತಲಂ', ಭಾಸನ 'ಊರುಭಂಗಂ' ನಾಟಕಗಳನ್ನು ಕುಡಿಯಾಟ್ಟಂ ಶೈಲಿಯಲ್ಲಿ ಪ್ರಯೋಗಿಸಿ ರಾಷ್ಟ್ರಮಟ್ಟದಲ್ಲಿ ಮೆಚ್ಚುಗೆ ಗಳಿಸಿದವರು. ನಿರ್ದೇಶಕ ಜಿ. ವೇಣು ಅವರು ಹೇಳಿದಂತೆ, 'ಎರಡು ಸಾವಿರ ವರ್ಷಗಳ ನಂತರವೂ ಕುಡಿಯಾಟ್ಟಂನಲ್ಲಿ 'ಮೃಚ್ಛಕಟಿಕ'ವನ್ನು ಮಾಡುತ್ತೇವೆ ಎಂದಾಗ ಹಳಬರು ತೀವ್ರವಾಗಿ ವಿರೋಧಿಸಿದರು. ಹಿಂದೆ ನಾವು 'ಶಾಕುಂತಲಂ' ಮಾಡಿದಾಗಲೂ ವಿರೋಧಿಸಿದ್ದರು. ಅವರ ಪ್ರಕಾರ ಶಕುಂತಲೆಯಾಗಲೀ, ವಸಂತಸೇನೆಯಾಗಲೀ ಕುಡಿಯಾಟ್ಟಂ ನಾಯಕಿಯರಾಗಲು ಅರ್ಹರಲ್ಲ ಮತ್ತು ದೇವಸ್ಥಾನದಲ್ಲಿ ಪ್ರದರ್ಶಿಸಲು ಯೋಗ್ಯವಲ್ಲ.'




ಕುಡಿಯಾಟ್ಟಂ ಶೈಲಿಯಲ್ಲಿ ಪ್ರದರ್ಶನಗೊಂಡ ಮೃಚ್ಛಕಟಿಕಂ

ಇದು ದೇವಸ್ಥಾನದಲ್ಲಿ ಪ್ರಯೋಗವಾಗಲು ಇರುವ ಇನ್ನೊಂದು ತಡೆ ಎಂದರೆ ಪರಂಪರಾಗತವಾಗಿ ಕುಡಿಯಾಟ್ಟಂ ಮಾಡುವ ಕುಟುಂಬ/ ಜಾತಿಗೆ ಸೇರದ ಕಲಾವಿದರು ಇದನ್ನು ಮಾಡುತ್ತಿರುವುದು. 'ವಾಸ್ತವವಾಗಿ ಅವರಿಗೆ ದೇವಸ್ಥಾನದೊಳಗೆ ಪ್ರವೇಶವೇ ಇಲ್ಲ. ಇನ್ನು ಕುಡಿಯಾಟ್ಟಂ ಮಾಡುವುದೇನು ಬಂತು!' ಆದರೆ ಕೇರಳದ ನಟನಕೈರಳಿ ತಂಡ ಎಲ್ಲ ತಡೆಗಳನ್ನೂ ಮೀರಿ ನಾಟಕ ಪ್ರದರ್ಶಿಸಿತು. ಜನಮೆಚ್ಚುಗೆ ಗಳಿಸಿತು. ಇದಕ್ಕೆ ಒತ್ತಾಸೆಯಾಗಿ ನಿಂತಿದ್ದು ಭೂಮಿಜಾ ಸಂಸ್ಥೆಯ ಗಾಯತ್ರಿ ಕೃಷ್ಣ. ಸೆರೆಂಡಿಪಿಟಿ ಉತ್ಸವದಲ್ಲಿ ಗಾಯತ್ರಿಯವರು 'ಶಾಕುಂತಲಂ' ನೋಡಿ ಮೆಚ್ಚಿ ಕೇರಳಕ್ಕೆ ಹೋಗಿ ವೇಣು ಅವರನ್ನು ಭೇಟಿ ಮಾಡಿದರು. ನಿಮ್ಮ ಮುಂದಿನ ಪ್ರೊಡಕ್ಷನ್ ಯಾವುದು ಅಂದಾಗ ವೇಣು ಹೊಸದು ಮಾಡಲು ಕಷ್ಟವಿದೆ ಅಂದರಂತೆ. ಆದರೆ ರೋಹಿಣಿ ನಿಲೇಕಣಿ ದತ್ತಿದಾನ ಸಂಸ್ಥೆ ಇಡೀ ಪ್ರೊಡಕ್ಷನ್‌ಗೆ ಆರ್ಥಿಕ ನೆರವು ನೀಡಿ ಸಾಧ್ಯವಾಗಿಸಿತು.

ನಿರ್ದೇಶಕ ಜಿ.ವೇಣು ಅವರು ಹೇಳಿದಂತೆ 'ಡಿಯಾಟ್ಟಂ ಪ್ರೊಡಕ್ಷನ್‌ಗೆ ಧನಸಹಾಯ ಸಿಗುವುದಿಲ್ಲ. ಅದು ಯುನೆಸ್ಕೊ ಟ್ಯಾಗ್ ಪಡೆದುಕೊಂಡಿದ್ದರೂ ಸರಿ. ಬೇರೆ ದೇಶಗಳಲ್ಲಿ ಅಂತಹ ಟ್ಯಾಗ್ ಸಿಕ್ಕಿದರೆ ಆ ಕಲೆಯನ್ನು ಇಡೀ ದೇಶ ರಾಷ್ಟ್ರೀಯ ಸಂಪತ್ತು ಎಂದು ಭಾವಿಸಿ ಪೋಷಿಸುತ್ತಾರೆ. ನಮ್ಮಲ್ಲಿ ಯಾವುದೇ ಸಾಂಪ್ರದಾಯಿಕ ಕಲೆಗಳಿಗೂ ಪ್ರೋತ್ಸಾಹ ಸಿಗುವುದಿಲ್ಲ. ಇದೊಂದು ದುರಂತ' ಎಂದರು.

ಭಾರತೀಯ ಕಲೆಗಳ ಪುನರುಜ್ಜೀವನಕ್ಕೆ ಸಾಕಷ್ಟು ಶ್ರಮಿಸಿದ ಕಮಲಾದೇವಿ ಚಟ್ಟೋಪಾಧ್ಯಾಯ ಅವರೇ ಕುಡಿಯಾಟ್ಟಂನ ಮೆಂಟರ್ ಆಗಿದ್ದರು.



ಜಿ.ವೇಣು

ಕಮಲಾದೇವಿಯವರೇ ಒಮ್ಮೆ ನಾರ್ಮಲ್ ಶೈಲಿಯ ನಾಟಕದಲ್ಲಿ ವಸಂತಸೇನೆಯ ಪಾತ್ರ ವಹಿಸಿದ್ದರಂತೆ ಮತ್ತು ಆ ಪಾತ್ರದ ಬಗ್ಗೆ ಅವರಿಗೆ ಬಹಳ ಅಭಿಮಾನವಿತ್ತಂತೆ. ವೇಣು ಅವರಿಗೆ ಸ್ವತಃ ಕಮಲಾದೇವಿಯವರೇ ಕುಡಿಯಾಟ್ಟಂನಲ್ಲಿ 'ಮೃಚ್ಛಕಟಿಕಂ' ಮಾಡಿ ಅಂತ ಸೂಚಿಸಿದ್ದರಂತೆ. 'ಮೃಚ್ಛಕಟಿಕ'ವನ್ನು ಜಾನಪದ ಶೈಲಿಯಲ್ಲಿ ನಿರ್ದೇಶಿಸಿದ್ದ ಹಬೀಬ್ ತನ್ವಿರ್ ಅವರು ವೇಣು ಅವರ 'ಶಾಕುಂತಲಂ' ನಾಟಕವನ್ನು 2004 ರಲ್ಲಿ ನೋಡಿ 'ಮೃಚ್ಛಕಟಿಕ'ವನ್ನು ಕುಟ್ಟಿಯಾಟ್ಟಂನಲ್ಲಿ ಮಾಡಿ ಎಂದು ಒತ್ತಾಯಪೂರ್ವಕವಾಗಿ ಹೇಳಿದ್ದರಂತೆ.

ವೇಣು ಅವರು ಎದುರಿಸಿದ ಮಿತಿ ಎಂದರೆ ಈ ನಾಟಕ ಮೂಲದಲ್ಲಿ ಐದು ಗಂಟೆ ಅವಧಿಯಲ್ಲಿ ಮಾಡಬೇಕಾದ ನಾಟಕ. ಇವತ್ತಿನ ಕಾಲಕ್ಕೆ ತಕ್ಕಂತೆ ನಾನು ನಾಟಕವನ್ನು ಎರಡೂವರೆ ಗಂಟೆಗಳಿಗೆ ಇಳಿಸಬೇಕಾಯಿತು. ಹಾಗಾಗಿ ಪ್ರಸಿದ್ಧ ಶಕಾರನ ಪಾತ್ರವನ್ನು ತೆರೆಮರೆಯ ಧ್ವನಿಗೆ ಮಿತಿಗೊಳಿಸಬೇಕಾಯಿತು. ಆದರೂ ಕುಡಿಯಾಟ್ಟಂನ ಶುದ್ಧ ಶೈಲಿಯಲ್ಲಿ ಇದನ್ನು ರಂಗ ಪ್ರದರ್ಶನಕ್ಕೆ ಸಿದ್ಧಗೊಳಿಸಿದ್ದರ ಬಗ್ಗೆ ತಮಗೆ ಸಮಾಧಾನ ಇರುವುದಾಗಿ ಹೇಳುತ್ತಾರೆ.

ಸಾಂಪ್ರದಾಯಿಕ ಕಲೆಗಳನ್ನು ಉಳಿಸಿಕೊಳ್ಳಲು ಇಂತಹ ಪ್ರೋತ್ಸಾಹಕರು ಹಾಗೂ ಆಸಕ್ತಿಯುಳ್ಳ ಕಲಾವಿದರ ತಂಡ ಎರಡೂ ಇಂದಿನ ತುರ್ತಾಗಿದೆ. ಇಂದಿನ ಯುವಜನತೆ ಪಾಪ್ ಕಲೆಗಳಿಗೆ ಮಾರುಹೋಗಿದ್ದಾರೆ. ಅವರಿಗೆ ಸಾಂಪ್ರಾದಾಯಿಕ ಕಲೆಗಳಲ್ಲಿ ಆಸಕ್ತಿ ಇಲ್ಲ ಎನ್ನುವ ವಾದಕ್ಕೆ ಸಡ್ಡು ಹೊಡೆದಂತೆ ಈಚೆಗೆ ಜೋಗೇರ ಹಾಡಿನ 'ಅನ್ಯಾಯಕಾರಿ ಬ್ರಹ್ಮಾ ಸುಂದರ ಸನ್ಯಾಸಿ ಮಾಡಬಹುದೇ' ಎಂದು ಹಾಸ್ಟೆಲಿನ ಹುಡುಗಿಯರು ಮಾಡಿದ ರೀಲ್ಸ್ ವೈರಲ್ ಆಯಿತು. ಹಳತು ಬೇಕಾಗಿಲ್ಲ ಎಂದು ಗುಡಿಸಿ ಹಾಕುವ ಬದಲು ಹಳತನ್ನು ಹೊಸದು ಮಾಡಿ ಕೊಟ್ಟರೆ ಮುಂದಿನ ಪೀಳಿಗೆ ಖಂಡಿತಾ ಅದನ್ನು ಎತ್ತಿಕೊಳ್ಳುತ್ತದೆ. ಕಲೆಯನ್ನು ಉಳಿಸಿಕೊಳ್ಳುವುದು ಅಂದರೆ ಇದೇ. ರಂಗಶಂಕರದಲ್ಲಿ ಬಂದಿದ್ದ ಯುವ ಪ್ರೇಕ್ಷಕರು ಇಡೀ ನಾಟಕಕ್ಕೆ ಸ್ಪಂದಿಸಿದ ರೀತಿ ಆಹ್ಲಾದಕರವಾಗಿತ್ತು. ನಗಬೇಕಾದಲ್ಲಿ ನಕ್ಕು, ಚಪ್ಪಾಳೆ ತಟ್ಟುವಲ್ಲಿ ತಟ್ಟಿ ಕೊನೆಗೆ ನಾಟಕ ಮುಗಿದಾಗ ಎದ್ದು ನಿಂತು ಕೈತಟ್ಟಿ ಮೆಚ್ಚುಗೆ ಸೂಚಿಸಿದರು.

ಮುನ್ನೋಟ 06-07-2025 ರಿಂದ 12-07-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಧಾರ್ಮಿಕ ವಿಷಯಗಳಲ್ಲಿ ಆಸಕ್ತಿ ಹೆಚ್ಚುತ್ತದೆ. ಆದಾಯವು ತೃಪ್ತಿದಾಯಕವಾಗಿರುತ್ತದೆ. ಮಧ್ಯವರ್ತಿಗಳ ಆದಾಯ ಹೆಚ್ಚುತ್ತದೆ. ಕ್ರೀಡಾ ತರಬೇತಿದಾರರ ಆದಾಯ ಹೆಚ್ಚುತ್ತದೆ. ಧಾರ್ಮಿಕ ವಿಷಯಗಳನ್ನು ಅಧ್ಯಯನ ಮಾಡುವವರಿಗೆ ಹೆಚ್ಚಿನ ಅನುಕೂಲಗಳು ಲಭಿಸುತ್ತವೆ. ಪ್ರೀತಿ, ಪ್ರೇಮದಲ್ಲಿ ಇರುವವರಿಗೆ ಯಶಸ್ಸು ದೊರೆಯುವ ಸಾಧ್ಯತೆಗಳಿವೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಜನಗಳ ನಡುವೆ ಹೆಚ್ಚು ಗುರುತಿಸಿ ಕೊಳ್ಳುವಿರಿ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ನಿಮ್ಮ ವ್ಯವಹಾರಗಳಿಗೆ ಸಹೋದರರು ಅಡ್ಡಿಯಾಗಬಹುದು. ಗಣಿತ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಗತಿ ಇರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಮಕ್ಕಳಿಂದ ಸಹಾಯ ದೊರೆಯುತ್ತದೆ. ಶೀತ ಬಾಧೆ ಇರುವವರು ಎಚ್ಚರವಹಿಸಿ. ಸಂಗಾತಿಯಿಂದ ಸಂಸಾರದಲ್ಲಿ ಒಮ್ಮೊಮ್ಮೆ ಕಾವೇರಿದ ವಾತಾವರಣ ಸೃಷ್ಟಿಯಾಗಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಆತ್ಮವಿಶ್ವಾಸವನ್ನು ಸಾಕಷ್ಟು ಹೆಚ್ಚು ಮಾಡಿಕೊಳ್ಳುವಿರಿ. ವ್ಯವಹಾರದಿಂದ ಆದಾಯ ಹೆಚ್ಚಾಗುತ್ತದೆ. ನಿಮ್ಮ ಸ್ವಂತ ಕೆಲಸಗಳಿಗೆ ಮಾತ್ರ ಚುರುಕಾಗಿರುವಿರಿ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವಿರುತ್ತದೆ. ಮೂಳೆ ಸಂಬಂಧಿ ದೋಷಗಳು ಕೆಲವು ಕ್ರೀಡಾಪಟುಗಳಿಗೆ ಕಾಡಬಹುದು. ಸಂಗಾತಿಯಿಂದ ನಿಮಗೆ ಆರ್ಥಿಕ ಸಹಕಾರ ದೊರೆಯುತ್ತದೆ. ತಂದೆಯೊಡನೆ ಸಂಬಂಧ ಸುಧಾರಿಸಿಕೊಳ್ಳುವುದು ಒಳ್ಳೆಯದು. ಉದ್ಯೋಗದಲ್ಲಿ ಅನುಕೂಲವಿರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಸಾಕಷ್ಟು ವ್ಯಾವಹಾರಿಕವಾಗಿ ಆಲೋಚನೆ ಮಾಡುವಿರಿ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ಬಂಧುಗಳನ್ನು ನಿಮ್ಮ ವ್ಯವಹಾರದಲ್ಲಿ ಸೇರಿಸಿಕೊಳ್ಳುವಿರಿ. ಭೂಮಿ ವ್ಯವಹಾರಗಳಿಂದ ಹೆಚ್ಚು ಲಾಭ ಬರುತ್ತದೆ. ಹೈನುಗಾರಿಕೆ ಮಾಡುವವರಿಗೆ ಸಾಕಷ್ಟು ಅಭಿವೃದ್ಧಿ ಇರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವಿಲ್ಲ. ಪಿತ್ತ ವಿಕಾರಗಳು ಹೆಚ್ಚಾಗಬಹುದು. ತಂದೆಯೊಡನೆ ಸಂಬಂಧ ಸ್ವಲ್ಪ ಸುಧಾರಿಸುತ್ತದೆ. ಕೃಷಿಯಿಂದ ಸ್ವಲ್ಪ ಆದಾಯವಿರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ನಿಮ್ಮಲ್ಲಿ ಒಂದು ರೀತಿಯ ಕೋಪವಿರುತ್ತದೆ. ಆದಾಯ ಕಡಿಮೆ ಇದ್ದು, ಅಷ್ಟೇ ಖರ್ಚು ಇರುತ್ತದೆ. ಬಹಳ ಚುರುಕಾಗಿ ಕೆಲಸ ಮಾಡಿ ಜನರ ಗಮನ ಸೆಳೆಯುವಿರಿ. ತಾಯಿಯ ಜೊತೆ ಸಂಬಂಧ ಸುಧಾರಿಸಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಈಗ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಯಶಸ್ಸು ಸಿಗುತ್ತದೆ. ಆರೋಗ್ಯದಲ್ಲಿ ಏರುಪೇರಾದರೂ ಆತಂಕ ಇರುವುದಿಲ್ಲ. ಆಭರಣ ವ್ಯಾಪಾರಿಗಳಿಗೆ ಲಾಭವಿದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಬಹಳ ಜಾಣ್ಮೆಯಿಂದ ಜನ ಬೆಂಬಲ ಗಳಿಸಲು ಪ್ರಯತ್ನ ಪಡುವಿರಿ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ನಿಮ್ಮದೇ ಆದ ತಪ್ಪುಗಳಿಂದ ಬಂಧುಗಳ ವಿರೋಧವನ್ನು ಕಟ್ಟಿಕೊಳ್ಳುವಿರಿ. ಸರ್ಕಾರಿ ವ್ಯವಹಾರಗಳಲ್ಲಿ ಸಾಕಷ್ಟು ಲಾಭವಿರುತ್ತದೆ. ಮಧ್ಯವರ್ತಿ ಕೆಲಸ ಮಾಡುವವರಿಗೆ ಸಾಕಷ್ಟು ಆದಾಯವಿರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ವಾರದ ಆರಂಭ ಸಂತೋಷದಾಯಕವಾಗಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ನಿಮ್ಮ ಕೆಲಸ ಕಾರ್ಯಗಳಲ್ಲಿ ಹಿರಿಯರ ಸಲಹೆ ಬಹಳ ಮುಖ್ಯವಾಗುತ್ತದೆ. ಕೃಷಿಭೂಮಿಯನ್ನು ಅಭಿವೃದ್ಧಿಪಡಿಸುವ ಯೋಗವಿದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ಮಾತ್ರ ಇರುತ್ತದೆ. ನಿಮ್ಮ ಮಕ್ಕಳಿಂದ ನಿರೀಕ್ಷಿತ ಗೌರವ ಲಭಿಸುವುದಿಲ್ಲ. ಮೂಳೆ ಸಂಬಂಧಿ ದೋಷಗಳು ಈಗ ಮರುಕಳಿಸಬಹುದು. ಕೇಶಾಲಂಕಾರ ಮಾಡುವವರಿಗೆ ಆದಾಯ ಕಡಿಮೆಯಾಗಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ವಾರದ ಆರಂಭದಲ್ಲಿ ಬಹಳಷ್ಟು ಆಲಸಿತನವಿರುತ್ತದೆ. ಆದಾಯದ ಹರಿವಿದ್ದರೂ ಅದು ನಿಮಗೆ ತಲುಪುವುದು ನಿಧಾನವಾಗುತ್ತದೆ. ಶತ್ರುಗಳನ್ನು ಹುಡುಕಿ ಎಚ್ಚರಿಕೆ ಕೊಡುವಿರಿ. ಕೃಷಿ ಪಂಡಿತರಿಗೆ ಗೌರವ ಹೆಚ್ಚುತ್ತದೆ. ಕೃಷಿಭೂಮಿಯನ್ನು ವಿಸ್ತರಣೆ ಮಾಡುವ ಯೋಗವಿದೆ. ಈಗ ವಿದ್ಯಾರ್ಥಿಗಳಿಗೆ ಅಪೇಕ್ಷಿತ ಫಲಿತಾಂಶವಿರುವುದಿಲ್ಲ. ಮಕ್ಕಳ ಬಗ್ಗೆ ಎಚ್ಚರ ವಹಿಸಿರಿ. ಉಷ್ಣ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಬಹಳ ಗಾಂಭೀರ್ಯ ನಿಮ್ಮಲ್ಲಿ ತುಂಬಿರುತ್ತದೆ. ಆದಾಯವು ಕಡಿಮೆ ಇದ್ದರೂ ತೊಂದರೆ ಇರುವುದಿಲ್ಲ. ನಿಮ್ಮ ಶತ್ರುಗಳೇ ನಿಮ್ಮ ಮಿತ್ರರಾಗುವರು. ವಿದ್ಯಾರ್ಥಿಗಳಿಗೆ ನಿರೀಕ್ಷೆಯ ಹತ್ತಿರ ಮಾತ್ರ ಫಲಿತಾಂಶ ಬರುತ್ತದೆ. ಧರ್ಮ ವಿದ್ಯೆಯನ್ನು ಕಲಿಯುತ್ತಿರುವವರಿಗೆ ಅಭಿವೃದ್ಧಿ ಇರುತ್ತದೆ. ಸ್ತ್ರೀಯರೊಡನೆ ಮಾಡಿದ ಹಣಕಾಸಿನ ವ್ಯವಹಾರ ನಷ್ಟಕ್ಕೆ ಕಾರಣವಾಗಬಹುದು. ನಿಮ್ಮ ಸಂಗಾತಿಯ ಆದಾಯ ಹೆಚ್ಚುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ವೃತ್ತಿಯಲ್ಲಿ ಬಹಳ ಶ್ರಮಪಟ್ಟು ಹೆಸರು ಗಳಿಸುವಿರಿ. ಆದಾಯವು ಕಡಿಮೆ ಇದ್ದರೂ, ಅದರಲ್ಲೇ ನಿಭಾಯಿಸುವಿರಿ. ನಿಮ್ಮ ಶತ್ರುಗಳು ನಿಮ್ಮನ್ನು ಕಂಡರೆ ಭಯಪಡುವರು. ವಿದ್ಯಾರ್ಥಿಗಳಿಗೆ ಉತ್ತಮಫಲಿತಾಂಶ ಪಡೆಯುವ ಯೋಗವಿದೆ. ತಲೆನೋವು ಇರುವವರು ಎಚ್ಚರವಹಿಸಿ. ಸಂಗಾತಿ ಜತೆಗೂಡಿ ಮಾಡಿದ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಕೃಷಿಯಿಂದ ನಿರೀಕ್ಷಿತ ಲಾಭವಿಲ್ಲ. ವೃತ್ತಿಯಲ್ಲಿದ್ದ ತೊಂದರೆಗಳು ನಿವಾರಣೆಯಾಗುತ್ತವೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ರಾಜಕಾರಣಿಗಳಿಗೆ ಮಾತು ಬಂಡವಾಳವಾಗಿ ಪರಿವರ್ತನೆಯಾಗುತ್ತದೆ. ಆದಾಯವು ಕಡಿಮೆ ಇರುತ್ತದೆ. ಸಂಸಾರದಲ್ಲಿ ಈಗ ಸಂತೋಷವಿರುತ್ತದೆ. ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ನರಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಸಂಗಾತಿಯ ಕೋಪಕ್ಕೆ ಗುರಿಯಾಗಬಹುದು. ಹೈನುಗಾರಿಕೆಯು ಸ್ವಲ್ಪಮಟ್ಟಿನ ಆದಾಯವನ್ನು ತರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಆದಾಯವು ಕಡಿಮೆ ಇರುತ್ತದೆ. ಕೆಲವರಿಗೆ ಈಗ ಸರ್ಕಾರಿ ಸಂಬಂಧಿತ ಆಸ್ತಿಯನ್ನು ಪಡೆಯುವ ಯೋಗವಿದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ಚರ್ಮ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಮಕ್ಕಳಿಗಾಗಿ ಸ್ವಲ್ಪ ಹಣ ಖರ್ಚು ಮಾಡುವಿರಿ. ಸಂಗಾತಿಯು ಮಾಡುವ ವ್ಯವಹಾರಗಳಲ್ಲಿ ಲಾಭವಿರುತ್ತದೆ.


ಪದಬಂಧ 2899

ಮೇಲಿನಿಂದ ಕೆಳಕ್ಕೆ

1.	ಮರೆತಿದ್ದರೂ ಮತ್ತೆ ಬರುವ ನೆನಪು	3
2.	ಅಚ್ಚರಿಗೊಂದು ಪರ್ಯಾಯ	3
3.	ವಿವರವಾದ ಲೆಕ್ಕ ವ್ಯವಹಾರದ ಮೇಲಿನ ಹತೋಟಿ	4
4.	ಆನಂದದ ಆಸ್ವಾದನೆಯಲ್ಲಿ ಆಗುವ ತೊಡಕು	4
7.	ಮತ್ತೇರಿದ ಗಜ ಪಡೆದ ಕನ್ನಡದ ಹೆಸರು	3
8.	ಒಳ್ಳೆಯ ನಡೆ, ನುಡಿ, ಸ್ವಭಾವ ಎಲ್ಲಾ ಒಟ್ಟಿಗೆ ಸೇರಿದೆ	5
9.	ವಿಷ್ಣು ಪತ್ನಿ ನೆಲಸಿರುವ ಕ್ಷೇತ್ರ	4
10.	ಎಲ್ಲದರ ಹಿಂದೆ ಅಡಗಿರುವ ಬೃಹತ್ ನಿಜಾಯಿತಿ	4
12.	ಮನೆಯಲ್ಲಿರುವ ದೊಡ್ಡವ	3
13.	ಪಕ್ಷಕ್ಕಾಗಲಿ, ಯಜಮಾನನಿಗಾಗಲಿ ಬದ್ಧನಾದವ	4
14.	ಸಂಗೀತದ ಆಲಾಪನೆಯಲ್ಲಿ ಬರುವ ಮದನ ಸತಿ	4
15.	ಸಂತೋಷದಿಂದ ಕೂಡಿದ ಹುಡುಗಿ	3
16.	ಮಳೆಗಾಗಿ ಈ ದೇವನ ಮೊರೆ ಹೋಗಬೇಕು	3

ಎಡದಿಂದ ಬಲಕ್ಕೆ

1.	ತಿಳಿವಳಿಕೆಯನ್ನು ನೀಡುವ ಪರಮಾತ್ಮಿಕೆ	4
3.	ಆಕರ್ಷಣೆಯಿಂದಲೇ ಚಿಗುರು ಮೂಡಿಸುವ ಸೃಷ್ಟಿ ವ್ಯವಸ್ಥೆ	3
5.	ಮೈಲಿಗಲ್ಲುಗಳನ್ನು ಮೆಲುಕುಹಾಕುವ ಒಂದು ಸಂಪುಟ	6
6.	ಮನಸ್ಸನ್ನು ಆಕರ್ಷಿಸುವ ಕಲೆಯ ಸೌಂದರ್ಯದಿಂದ ತುಂಬಿಹೋದದ್ದು	4
8.	ದೇವಕಾರ್ಯಕ್ಕೆ ಸಮಾನವೆನಿಸಿಕೊಳ್ಳುವ ಆಡಳಿತಾವಸ್ಥೆಯ ಸೇವೆ	6
10.	ಗೃಹಭಂಗ ಮಾಡುವದರಲ್ಲಿ ಇವನದು ಎತ್ತಿದ ಕೈ	5
11.	ಮಾರ್ಗದರ್ಶಕನಿಂದಾಗುವ ಚಮತ್ಕಾರ	5
13.	ದಿನವೂ ಮನೆಯಲ್ಲಿ ನಡೆಯುವ ಕೌಸಲ್ಯಾಪುತ್ರನ ಕಥೆ	6
15.	ಕುದುರೆ ಮುಖದ ಪರಮಾತ್ಮ ತಿಂದ ಕಡಲೆ ಬೆಲ್ಲದ ಸಿಹಿಖಾದ್ಯ	4
17.	ತಿರುವಣ್ಣಾಮಲೈನಲ್ಲಿ ನೆಲಸಿದ ಜ್ಞಾನ ಯೋಗಿ	6
18.	ಧ್ಯಾನಾವಸ್ಥೆಯಲ್ಲಿ ಹರಿಯುವ ನದಿ	3
19.	ನಿಧಾನ ಮತ್ತು ಆಲಸ್ಯದಿಂದ ಕೂಡಿದ ಸ್ವಭಾವ ತ್ರಿಗುಣಗಳಲ್ಲಿ ಒಂದು	4




ಪದಬಂಧ ಉತ್ತರ -2898

ಮೇಲಿಂದ ಕೆಳಕ್ಕೆ

1.ಅಖಾಡ 2.ದುರ್ಯೋಧನ 3.ಸಾರ್ವತ್ರಿಕ 4.ರಿದಮ್ 6.ವಣಿಕ 8.ಜಾಲಾರಿ 9.ಪಾರದರ್ಶಕ 11.ವಿಚಾರವಂತ 15.ಆಣತಿ 17.ತವರು 19.ರಮಾಕಾಂತ 20.ಹರಿರಾಮ 21.ಕುಂಭಕ 24.ಜುಲ್ಮಾನೆ

ಎಡದಿಂದ ಬಲಕ್ಕೆ

1.ಅಮೃತಬಿಂದು 3.ಸಾಧನಕೇರಿ 5.ಡವ 7.ಧರಿತ್ರಿ 8.ಜಾಮ್ 9.ಪಾನ 10.ಕವಿ 12.ಕಠೋರ 13.ಚಾಕರಿ 14.ದಶಾವತಾರ 15.ಆದರ್ಶ 16.ವಂಚಿತ 18.ಕರ 20.ಹತ 21.ಕುಂತಿ 22.ಮಾದರಿ 23.ರುಜು 25.ಕಲ್ಪನಾತೀತ 26.ಮಹಡಿಮನೆ


ಮಹೇಶ್ ಕಾಳೆ

‘ಸಂಗೀತ ನನ್ನ ಬದುಕಿನ ಭಾಗ, ಭಕ್ತಿರಸವೇ ಸಂಗೀತದ ಶಕ್ತಿ’–ಹೀಗೆ ಸ್ಪಷ್ಟಮಾತುಗಳಲ್ಲಿ ಹೇಳಿದವರು ಅಭಂಗಗಳ ಮೂಲಕ ಮನೆಮಾತಾದ ಹಿಂದೂಸ್ತಾನಿ ಗಾಯಕ ಮಹೇಶ್ ಕಾಳೆ. ಸದ್ಯದ ಮಟ್ಟಿಗೆ ದೇಶದ ಬಹುಬೇಡಿಕೆಯ ಕಲಾವಿದ. ಸಂಗೀತದ ‘ಅಭಂಗ’ ಪ್ರಕಾರದಲ್ಲಿ ಹೆಚ್ಚು ಜನಪ್ರಿಯವಾಗಿರುವ ಇವರು, ‘ಅಭಂಗವಾರಿ ಸಂಗೀತ ಯಾತ್ರೆ’ಯ ಭಾಗವಾಗಿ ಜುಲೈ 13 ರಂದು ಸಂಜೆ 6.30ಕ್ಕೆ ಬೆಂಗಳೂರಿನ ಚೌಡಯ್ಯ ಹಾಲ್‌ನಲ್ಲಿ ಸಂಗೀತ ಕಛೇರಿ ನೀಡುತ್ತಿದ್ದಾರೆ. ಈ ಸಂದರ್ಭದಲ್ಲಿ ‘ಭಾನುವಾರ ಪುರವಣಿ’ಯೊಂದಿಗೆ ಮಾತನಾಡಿದ್ದಾರೆ.

‘ಅಭಂಗವಾರಿ ಭಕ್ತಿಸಂಗೀತದ ತೀರ್ಥಯಾತ್ರೆ’

ಸಿನಿಮಾ ಸಂಗೀತದಲ್ಲೂ ಜನಪ್ರಿಯ

ಮಹೇಶ್ ಕಾಳೆ ಪುಣೆ ಮೂಲದ ಹಿಂದೂಸ್ತಾನಿ ಗಾಯಕ. ಹಿಂದೂಸ್ತಾನಿ ಗಾಯನ, ಅಭಂಗ, ದಾದ್ರ, ಠಪ್ಪ, ಠುಮ್ರಿ, ಭಕ್ತಿ ಸಂಗೀತ ಮಾತ್ರವಲ್ಲದೆ ನಾಟ್ಯ ಸಂಗೀತದಲ್ಲೂ ಪರಿಣತಿ ಸಾಧಿಸಿದವರು. ತಾಯಿ ಮಿನಾಲ್ ಕಾಳೆ ಸಂಗೀತದ ಮೊದಲ ಗುರು. ಆರನೇ ವಯಸ್ಸಿನಲ್ಲೇ ಸಂಗೀತದ ತಾಲೀಮು ಆರಂಭ. ಮುಂದೆ ಆಗ್ರಾ ಘರಾಣದ ಮೇರು ಗಾಯಕ ಪಂ.ಜಿತೇಂದ್ರ ಅಭಿಷೇಕಿ ಅವರಿಂದ ಸಂಗೀತದ ಮಾರ್ಗದರ್ಶನ ಪಡೆದವರು. ಸಿನಿಮಾ ಸಂಗೀತದಲ್ಲೂ ಇವರು ಜನಪ್ರಿಯರು. ಮರಾಠಿ ಚಿತ್ರ ‘ಕತ್ಯಾರ್ ಕಲ್ಜತ್ ಘುಸ್ಲಿ’ ಗೆ ಇವರು 63ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಲ್ಲಿ ಅತ್ಯುತ್ತಮ ಹಿನ್ನೆಲೆ ಗಾಯಕ ಪ್ರಶಸ್ತಿ ಪಡೆದಿದ್ದಾರೆ.

ಎಲೆಕ್ಟ್ರಾನಿಕ್ ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಹಾಗೂ ಅಮೆರಿಕದ ಸಂತ ಕ್ಲಾರಾ ವಿವಿಯಲ್ಲಿ ಎಂಜಿನಿಯರಿಂಗ್‌ನಲ್ಲೇ ಇನ್ನೊಂದು ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ‘ಮಹೇಶ್ ಕೇಲ್ ಸ್ಕೂಲ್ ಆಫ್ ಮ್ಯೂಸಿಕ್’ ಸಂಸ್ಥೆ ಸ್ಥಾಪಿಸಿ ಸಂಗೀತವನ್ನು ಮುಂದಿನ ಪೀಳಿಗೆಗೆ ದಾಟಿಸುವ ಕೆಲಸವನ್ನೂ ಮಾಡುತ್ತಿದ್ದಾರೆ.

• ಉಮಾ ಅನಂತ್

• ಶಾಸ್ತ್ರೀಯ ಸಂಗೀತದ ‘ಮಳೆ ರಾಗ’ಗಳನ್ನು ಹಾಡುವುದೆಂದರೆ ಬಹಳ ಇಷ್ಟ ಎಂದಿರಿ. ಏಕೆ?

ಸಂಗೀತದಲ್ಲಿ ಆಯಾಯ ಪ್ರಹರಕ್ಕೆ, ಕಾಲಕ್ಕೆ, ಋತುವಿಗೆ ಹಾಡುವಂಥ ರಾಗಗಳಿವೆ. ಇದರಲ್ಲಿ ಮಳೆ ರಾಗಗಳಾದ ಮೇಘ ಮಲ್ಹಾರ್, ಮಿಯಾ ಮಲ್ಹಾರ್, ಗೌಡ್ ಮಲ್ಹಾರ್, ದೇಶ್ ಮಲ್ಹಾರ್, ಸುರ್ ಮಲ್ಹಾರ್, ರಾಮದಾಸಿ ಮಲ್ಹಾರ್ ಮುಂತಾದ ರಾಗಗಳು ಮಳೆಗಾಲಕ್ಕಾಗಿಯೇ ಇರುವಂಥವು. ಈ ರಾಗಗಳು ಮಳೆಯ ಧ್ವನಿ ಹಾಗೂ ಮೋಡಗಳ ವರ್ಣನೆಯನ್ನು ಸಂಗೀತದಲ್ಲಿ ಅಭಿವ್ಯಕ್ತಿಸುತ್ತವೆ. ಇದೇ ರೀತಿ ಕರ್ನಾಟಕ ಸಂಗೀತದ ‘ಅಮೃತವರ್ಷಿಣಿ’ ರಾಗದಲ್ಲಿ ಒಂದು ಬಂದೀಶ್ ಅನ್ನು ರಚಿಸಿದ್ದೇನೆ. ‘ತಾಲ ಸುರ್ ಗಾನ್..’ ಇದು ಮಳೆಯ ವೈಭವವನ್ನು ಅನಾವರಣಗೊಳಿಸುತ್ತದೆ. ಅಲ್ಲದೆ ರಾಗಗಳಲ್ಲಿ ಪ್ರಯೋಗವನ್ನೂ ಮಾಡಿದ್ದೇನೆ. ಜನಪದ ಗೀತೆಯನ್ನು ಶಾಸ್ತ್ರೀಯ ಚೌಕಟ್ಟಿನಲ್ಲಿ ಹಾಡಿದ್ದೇನೆ. ‘ಜೋಗ್’ ರಾಗದಲ್ಲಿ ಜನಪದ ಟೋನ್ ತಂದಿದ್ದೇನೆ. ಇದು ಚಿಂತನೆ ಹಾಗೂ ಲವಲವಿಕೆಯನ್ನು ಕೇಳುಗರಲ್ಲಿ ಹುಟ್ಟುಹಾಕುತ್ತದೆ. ರಾಗ ಬಸಂತ್, ಇದು ವಸಂತ ಋತುವಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದು, ಹೊಸತನ, ಹೊಸ ಚೈತನ್ಯ ತುಂಬುವಂತೆ ಮಾಡುತ್ತದೆ. ಹೀಗೆ ರಾಗಗಳೊಂದಿಗೆ ಪ್ರಯೋಗಶೀಲ ಗುಣವನ್ನು ಬೆಳೆಸಿಕೊಂಡರೆ ಕೇಳುಗರು ಹೆಚ್ಚು ಆಪ್ತರಾಗುತ್ತಾರೆ.

• ಸಂಗೀತದ ಜೊತೆಗೆ ಜೀವನ ಪ್ರೀತಿ ಕೂಡ ಮುಖ್ಯ. ಅದರಲ್ಲೂ ಜನರ ಪ್ರೀತಿ ಗಳಿಸುವುದು ಬಹಳ ಮುಖ್ಯ’ ಎಂದಿರಿ. ಈ ಮಾತನ್ನು ನೀವು ಹೇಗೆ ಪ್ರತಿಪಾದಿಸುತ್ತೀರಿ?

ನಾನು ಎಲ್ಲೇ ಸಂಗೀತ ಕಛೇರಿಗೆ ಹೋದರೂ ಕೇಳುಗರು ಕಿಕ್ಕಿರಿದು ಸೇರುತ್ತಾರೆ. ಎಷ್ಟೋ ಕಡೆಗಳಲ್ಲಿ ನಾನು ಹಾಡುವುದರ ಜೊತೆಗೆ ಕೇಳುಗರನ್ನೂ ಸಂಗೀತದಲ್ಲಿ ತೊಡಗಿಸಿಕೊಳ್ಳುವಂತೆ ಹಾಡುತ್ತೇನೆ. ಇದರಿಂದ ಜನ ನಮಗೆ ಹತ್ತಿರವಾಗುತ್ತಾರೆ. ಮನೆ ಮಗನಂತೆ ನನ್ನನ್ನು ಸ್ವೀಕರಿಸುತ್ತಾರೆ. ಸಾಮಾಜಿಕ ಬದುಕಿನಲ್ಲೂ ಅಷ್ಟೆ. ಎಲ್ಲರನ್ನೂ ನಾವು ಪ್ರೀತಿಸಬೇಕು, ‘ಅವರೊಂದಿಗೆ ನಾವಾಗಿ, ನಮ್ಮೊಂದಿಗೆ ಅವರಾಗಿ’ ಬೆರೆಯುವಂತಹ ವಾತಾವರಣವನ್ನು ನಾವೇ ಸೃಷ್ಟಿಸಿಕೊಳ್ಳಬೇಕು. ಉದಾಹರಣೆಗಾಗಿ: ನಾನು ಪುಣೆಯಲ್ಲಿ ಮಾಸ್ಟರ್ಸ್ ಮಾಡುತ್ತಿರುವಾಗ ಪೀಜಿಯಲ್ಲಿದ್ದೆ. ಮನೆಯಲ್ಲಿ ಹಣಕಾಸಿನ ತೊಂದರೆ ಇದ್ದ ಕಾರಣ ಸಣ್ಣ ರೂಮ್ ಅನ್ನು ಇಬ್ಬರು ಶೇರ್ ಮಾಡ್ತಿದ್ದೆವು. ನನ್ನ ರೂಮ್‌ಮೇಟ್ ಎಂಜಿನಿಯರ್. ತಡರಾತ್ರಿ ರೂಮಿಗೆ ಬಂದು ಮಲಗುತ್ತಿದ್ದ. ನಾನು ನಸುಕಿನಲ್ಲೇ ಎದ್ದು ರಿಯಾಜ್ ಮಾಡಬೇಕಿತ್ತು. ರಾತ್ರಿ ಬಹಳ ಹೊತ್ತಾದ ಮೇಲೆ ಬರುತ್ತಿದ್ದ ಸ್ನೇಹಿತನಿಗೆ ನಿದ್ದೆಗೆ ಯಾವುದೇ ತೊಂದರೆಯಾಗಬಾರದೆಂದು ನಾನು ಬೆಳಿಗ್ಗೆ ನಾಲ್ಕಕ್ಕೇ ಎದ್ದು ಬಾತ್‌ರೂಮಿಗೆ ಹೋಗಿ ಮುಖದ ಮೇಲೆ ದಿಂಬು ಇಟ್ಟುಕೊಂಡು ಆಕಾರ, ಊಕಾರ, ಓಂಕಾರಗಳನ್ನು ಮಂದ್ರದಲ್ಲಿ ಹಾಡುತ್ತಾ ಕುಳಿತಿರುತ್ತಿದ್ದೆ. ಹೀಗಾಗಿ ಆತನ ನಿದ್ದೆಗೂ ತೊಂದರೆಯಾಗುತ್ತಿರಲಿಲ್ಲ. ನಾವಿಬ್ಬರೂ ನಮ್ಮ ವೃತ್ತಿ ಹಾಗೂ ಬದುಕನ್ನು ಪ್ರೀತಿಸುತ್ತಿದ್ದೆವು. ಹೀಗಾಗಿ ನಮ್ಮಿಬ್ಬರ ಮಧ್ಯೆ ಉತ್ತಮ ಸಾಮರಸ್ಯ ಇತ್ತು. ಹೀಗೆ ಜೀವನ ಪ್ರೀತಿ ಎಂಬುದು ನಮ್ಮ ನಡವಳಿಕೆಯಿಂದ ವ್ಯಕ್ತವಾಗಬೇಕು.

• ನೀವು ಶಾಸ್ತ್ರೀಯ ಸಂಗೀತದ ಜೊತೆಗೆ ‘ಅಭಂಗ ಪ್ರಕಾರ’ದಲ್ಲಿ ಹೆಚ್ಚು ಜನಪ್ರಿಯರಾಗಿದ್ದೀರಿ. ಈ ಶೈಲಿಯ ಗಾಯನಕ್ಕೆ ನೀವು ಹೆಚ್ಚು ಪ್ರಾಶಸ್ತ್ಯವನ್ನೂ ನೀಡುತ್ತಿದ್ದೀರಿ. ಇದಕ್ಕೆ ನಿರ್ದಿಷ್ಟ ಕಾರಣಗಳಿವೆಯೇ?

ಪುಣೆಯಲ್ಲಿ ಅಭಂಗ ಬಹಳ ಜನಪ್ರಿಯ. ಇದಕ್ಕೆ ತನ್ನದೇ ಆದ ದೊಡ್ಡ ಕೇಳುಗರ ಸಮುದಾಯವೇ ಇದೆ. ಮರಾಠಿ ಅಭಂಗ ಭಕ್ತಿಯ ಸಿಂಚನ ನೀಡುತ್ತದೆ. ಮನಸ್ಸನ್ನು ಉಲ್ಲಾಸಗೊಳಿಸಿ, ಬದುಕಿನ ನೋವನ್ನು ಮರೆಸುತ್ತದೆ. ಪಂಡಿತ ಭೀಮಸೇನ ಜೋಶಿ ಹಾಡಿರುವ ಪಂಢರಪುರದ ಪುರಂದರ ವಿಠಲನ ಬಗ್ಗೆ ಇರುವ ‘ಮಾಝೆ ಮಾಹೇರಾ ಪಂಢರಿ, ಆಹೆ ಭೀವರೇಚ್ಯಾ ತೀರಿ...’ ಜನಪ್ರಿಯತೆಯ ಉತ್ತುಂಗಕ್ಕೇರಿದ್ದು ಇದೇ ಕಾರಣಕ್ಕಾಗಿ. ನನಗೂ ಅಭಂಗ ಹಾಡೋದು ಬಹಳ ಇಷ್ಟ. ಜನರ ನಾಡಿಮಿಡಿತ ಅರಿತ ನಾನು ಅಭಂಗಗಳಿಗೇ ಹೆಚ್ಚು ಒಲವು ತೋರಲಾರಂಭಿಸಿದೆ.

ಮರಾಠಿ ಅಭಂಗಗಳು ವಿಠಲನ ಮಹಿಮೆಯನ್ನು ಕೊಂಡಾಡಿ ಹಾಡಲಾಗಿರುವ ಭಕ್ತಿಪ್ರಧಾನ ಕಾವ್ಯದ ಒಂದು ರೂಪ. ಆಷಾಢ ಏಕಾದಶಿಯಂದು (ಜುಲೈ 6) ಸಹಸ್ರಾರು ಸಂಖ್ಯೆಯ ವಾರಕರಿಗಳು ಏಕ್ತಾರಿ ಮೀಟುತ್ತಾ ವಿಠಲನ ಭಜನೆಗಳನ್ನು ಹಾಡುತ್ತಾ ಪಾದಯಾತ್ರೆ ಮಾಡುತ್ತಾರೆ. ಪಂಢರಪುರದಲ್ಲಿ ವಿಠಲನ ಸನ್ನಿಧಿಗೆ ಜಮಾಯಿಸುತ್ತಾರೆ. ಈ ಸಂದರ್ಭದಲ್ಲಿ ಪ್ರತೀವರ್ಷ ನಾನು ಇಲ್ಲಿ ಅಭಂಗಗಳನ್ನು ಹಾಡುತ್ತಲೇ ಬಂದಿದ್ದೇನೆ.

ಕರ್ನಾಟಕದಲ್ಲಿ ಪುರಂದರ ದಾಸರ ದೇವರನಾಮವನ್ನು ಬಹಳಷ್ಟು ಮಂದಿ ಇಷ್ಟಪಡುತ್ತಾರೆ. ಬೆಂಗಳೂರಿಗೆ ಬಂದಾಗ ದಾಸರ ಪದಕ್ಕೇ ಪ್ರಾಶಸ್ತ್ಯ ಕೊಡುತ್ತೇನೆ.

• ‘ಅಭಂಗವಾರಿ’ ಸರಣಿ ಕಛೇರಿಯ ಪರಿಕಲ್ಪನೆ ಸಾಕಾರಗೊಂಡದ್ದು ಹೇಗೆ?


ಅಭಂಗವಾರಿ ಎಂಬುದು ‘ಅಭಂಗ’ ಶೈಲಿಯ ಹಾಡುಗಾರಿಕೆಯ ಕಛೇರಿಗಳು. ಈ ಅಭಂಗವಾರಿ ಎಂದರೆ ಭಕ್ತಿಸಂಗೀತದ ತೀರ್ಥಯಾತ್ರೆ ಎಂದರ್ಥ. ಇದರಲ್ಲಿ ಭಕ್ತಿನಾಮ ಸಂಕೀರ್ತನೆಗಳನ್ನು ಹಾಡುತ್ತಾ ಬಂದಿದ್ದೇನೆ. ಮುಂಬೈ, ಚೆನ್ನೈ, ಕೋಲ್ಕತ್ತ, ಪುಣೆ, ಬೆಂಗಳೂರಿನಲ್ಲಿ ಈ ಸರಣಿಯ ಕಛೇರಿ ನಡೆಸುವ ತೀರ್ಮಾನ ಮಾಡಿದ್ದೆ. ಸಂಗೀತದ ಮೂಲಕ ಬದುಕಿನ ಜಂಜಡಗಳನ್ನು ಕಳೆಯುವುದು, ಜನರಲ್ಲಿ ಜೀವನಪ್ರೀತಿ ಮೂಡಿಸುವುದು ಇದರ ಮುಖ್ಯ ಉದ್ದೇಶ. ಈ ಸರಣಿಯಲ್ಲಿ ಮರಾಠಿ ಅಭಂಗಗಳನ್ನು ಹಾಡುತ್ತೇನೆ. ‘ಸದಾ ಮಾಝೆ ಡೋಲಾ...’, ಸುಖಾ ಚೇ ಜೇ ಸುಖ್, ಆಮ್ಹಿ ವಿಠಲಾಚೆ ವಾರಕರಿ’ ಮುಂತಾದ ರಚನೆಗಳನ್ನು ಹಾಡುತ್ತೇನೆ. ಸಂದರ್ಭಕ್ಕೆ ಹಾಗೂ ಪ್ರಾದೇಶಿಕತೆಗೆ ಅನುಗುಣವಾಗಿ ಭಕ್ತಿರಸ ಸಿಂಚನ ನೀಡುವುದು ಇದರ ಹಿಂದಿನ ಉದ್ದೇಶ.

ತಾಯಿ ಕೊಟ್ಟ ಬಳುವಳಿ ಜನಪದ ಜೋಳಿಗೆ

ಜಗ್ಗಣಕ್ಕ ಮೂಲಕ ಜನಪದ ಸುಧೆ...

ಗೋ.ನಾ.ಸ್ವಾಮಿ ‘ಜಗ್ಗಣಕ್ಕ ಸಂಗೀತ ಸುಗ್ಗಿ’ ಎಂಬ ಕಾರ್ಯಕ್ರಮದ ಮೂಲಕ ಜನಪದ ಗಾಯಕರಿಗೆ ವೇದಿಕೆ ಒದಗಿಸುತ್ತಿದ್ದಾರೆ. ರಾಜ್ಯದಾದ್ಯಂತ ಸುಮಾರು 152 ತಾಲ್ಲೂಕುಗಳಲ್ಲಿ ಈ ಕಾರ್ಯಕ್ರಮ ಮಾಡಿ ಹೊಸ ಪ್ರತಿಭೆಗಳನ್ನು ಶೋಧಿಸುವ ಗುರಿ ಹೊಂದಿದ್ದಾರೆ.

‘ಸಿನಿಮಾದ ಮಾಯಾಲೋಕಕ್ಕೆ ಸಿಲುಕಿ ದೇಸಿ ಜನಪದ ಕಲೆಗಳು ದೂರವಾಗುತ್ತಿವೆ. ಗ್ರಾಮೀಣ ಭಾಗದ ಗಾಯಕರನ್ನು ಗುರುತಿಸಿ ಬೆಳೆಸುವ ಉದ್ದೇಶ ಈ ಕಾರ್ಯಕ್ರಮದ ಹಿಂದಿದೆ’ ಎಂದು ಅವರು ಹೇಳುತ್ತಾರೆ.


ಗೋ.ನಾ.ಸ್ವಾಮಿ

• ಕೆ.ಓಂಕಾರ ಮೂರ್ತಿ

ತಾಯಿ ಜಯಮ್ಮ ಹಳ್ಳಿಗಳಲ್ಲಿ ಮದುವೆಗಳಿಗೆ ಹೋಗಿ ಸೋಬಾನೆ ಪದ ಹಾಡುತ್ತಿದ್ದರು. ಅವ್ವನ ಮಡಿಲಲ್ಲಿ ಮಲಗಿರುತ್ತಿದ್ದ ಐದು ವರ್ಷದ ಹುಡುಗ ಹಾಡುಗಳನ್ನು ಗುನುಗುತ್ತಾ ನಿದ್ರೆಗೆ ಜಾರುತ್ತಿದ್ದ. 32ನೇ ವಯಸ್ಸಿಗೆ ಅವ್ವ ತೀರಿಕೊಂಡರು. ಆಗ ಆ ಹುಡುಗನಿಗೆ ಹತ್ತು ವರ್ಷ. ಅಷ್ಟರಲ್ಲಿ ಅವ್ವ ಹಾಡುತ್ತಿದ್ದ ಸೋಬಾನೆ ಪದಗಳು ಈ ಹುಡುಗನ ಎದೆಯೊಳಗೆ ಇಳಿದುಬಿಟ್ಟಿದ್ದವು. ಮುಂದೆ ಇದೇ ಸಂಗೀತದ ಆಸಕ್ತಿಗೆ ದಾರಿ ತೋರಿಸಿತು.

ಈಗ ದೇಶ–ವಿದೇಶಗಳಲ್ಲಿ ಜನಪದ ಹಾಡುಗಳ ಮೂಲಕ ಜನಪದ ಸೊಗಡನ್ನು ಹರಡುತ್ತಿರುವ ಗೋ.ನಾ.ಸ್ವಾಮಿ ಅವರೇ ಅವತ್ತಿನ ಬಾಲಕ.

ಜನಪದ ಹಾಡಿನ ಮೋಹ ಹೆಚ್ಚಾಗುತ್ತಿದ್ದಂತೆ ಶಿಕ್ಷಕ ಹುದ್ದೆಯಿಂದ ಸ್ವಯಂ ನಿವೃತ್ತಿ ಪಡೆದ ಅವರು ತಮ್ಮನ್ನು ಸಂಪೂರ್ಣವಾಗಿ ಹಾಡುಗಾರಿಕೆಯಲ್ಲಿ ತೊಡಗಿಸಿಕೊಂಡರು. ಜನಪದ ಗೀತೆಗಳ ಮೂಲಕ ಜನರ ಮನಸ್ಸು ಆವರಿಸಿಕೊಂಡಿದ್ದಾರೆ. ಗಾಯಕ, ಗೀತ ರಚನೆಕಾರ, ನಿರೂಪಕ, ಸಂಗೀತ ಸಂಯೋಜಕ–ಹೀಗೆ ಬಹುಮುಖ ಪ್ರತಿಭೆಯಿಂದ ಗುರುತಿಸಿಕೊಂಡಿದ್ದಾರೆ. ಇವರದು ಕೋಲಾರ ತಾಲ್ಲೂಕಿನ ಸುಗಟೂರು.

ನಾಲ್ಕು ದಶಕಗಳಿಂದ ಜನಪದ ಗೀತೆಗಳ ಹಾಡುಗಾರಿಕೆಯಲ್ಲಿ ತೊಡಗಿರುವ ಇವರು ಸುಮಾರು 64 ದೇಶಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಅಮೆರಿಕದಲ್ಲಿ ನಡೆದ ‘ಅಕ್ಕ’ ಸಮ್ಮೇಳನದಲ್ಲೂ ಹಾಡಿದ್ದಾರೆ. ಆಗಸ್ಟ್ ಅಂತ್ಯಕ್ಕೆ ಫ್ಲೋರಿಡಾದ ಲೇಕ್‌ಲ್ಯಾಂಡ್‌ನಲ್ಲಿ ನಡೆಯಲಿರುವ ನಾವಿಕ ವಿಶ್ವ ಕನ್ನಡ ಸಮ್ಮೇಳನಕ್ಕೆ ಆಹ್ವಾನ ಬಂದಿದ್ದು, ಸಿದ್ಧತೆ ನಡೆಸುತ್ತಿದ್ದಾರೆ.

‘ತುಮಕೂರು ಜಿಲ್ಲೆಯ ಶಿರಾದಲ್ಲಿ ಶಿಕ್ಷಕನಾಗಿದ್ದೆ. 2005ರಲ್ಲಿ ಮುಖ್ಯ ಶಿಕ್ಷಕನಾಗಿ ಬಡ್ತಿ ಲಭಿಸಿತು. ಅಲ್ಲಿದ್ದಾಗ ನನ್ನ ಸಂಗೀತದ ಬದುಕಿಗೆ ಮಹತ್ವದ ತಿರುವು ಲಭಿಸಿತಾದರೂ ಹಾಡುಗಾರಿಕೆಗೆ ಏನೋ ಅಡ್ಡಿಯಾಗುತ್ತಿದೆ ಎನಿಸತೊಡಗಿತು. ಶಿಕ್ಷಕ ವೃತ್ತಿಯಲ್ಲಿದ್ದುಕೊಂಡು ಗಾಯನಕ್ಕೆ ಹೆಚ್ಚಿನ ಸಮಯ ಕೊಡಲು ಸಾಧ್ಯವಾಗುತ್ತಿರಲಿಲ್ಲ. ಈ ಕ್ಷೇತ್ರದಲ್ಲಿ ಹೆಸರು ಮಾಡಿ ತಾಯಿ ಹೆಸರು ಉಳಿಸಬೇಕೆಂದು 2007ರಲ್ಲೇ ಶಿಕ್ಷಕ ವೃತ್ತಿಯಿಂದ ಸ್ವಯಂ ನಿವೃತ್ತಿ ಪಡೆದೆ. ಬೆಂಗಳೂರಿಗೆ ಬಂದು ಜನಪದ ಹಾಡುಗಾರಿಕೆಯಲ್ಲಿ ತೊಡಗಿಸಿಕೊಂಡೆ’ ಎಂದು ಗೋ.ನಾ.ಸ್ವಾಮಿ ನುಡಿಯುತ್ತಾರೆ.

ಇವರ ತಂದೆ, ತಾಯಿ, ಅಕ್ಕಂದಿರು, ಅಣ್ಣ ಮಾಲೂರು ತಾಲ್ಲೂಕಿನ ಯಲುವಗುಳಿ ಗ್ರಾಮದಲ್ಲಿ ಕೂಲಿ ಮಾಡಿ ಬದುಕುತ್ತಿದ್ದರು. ತಾಯಿ ತೀರಿ ಹೋದ ಮೇಲೆ ಸೋದರ ಮಾವನ ಮನೆ ಇದ್ದ ಸುಗಟೂರಿಗೆ ಇವರನ್ನು ಓದಲು ಕಳಿಸಿದರು. ತಾಯಿಯ ಗಾಯನದಿಂದ ಪ್ರಭಾವಿತರಾದ ಇವರು 5ನೇ ತರಗತಿಯಲ್ಲಿ ಓದುವಾಗಲೇ ಹಾಡುತ್ತಿದ್ದರು. ಸುಗಟೂರಿನಲ್ಲಿ ಎಸ್‌ಎಸ್‌ಎಲ್‌ಸಿ ಪೂರೈಸಿ ನಂತರ ಟಿಸಿಎಚ್ ಮುಗಿಸುತ್ತಿದ್ದಂತೆ ಶಿಕ್ಷಕ ಕೆಲಸವೂ ಲಭಿಸಿತು. ಆಗ ಇವರಿಗೆ ಕೇವಲ 19 ವರ್ಷ.

‘ಶಿರಾದಲ್ಲಿ ಶಿಕ್ಷಕ ವೃತ್ತಿ ಆರಂಭವಾಯಿತು. ಅಲ್ಲೇ ಸಂಗೀತ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ನಾನೇ ರಚಿಸಿದ ಜನಪದ ಶೈಲಿಯ ಗೀತೆಗಳನ್ನು ಹಾಡುತ್ತಿದ್ದೆ. ಇದೇ ರೀತಿ 450ಕ್ಕೂ ಅಧಿಕ ಗೀತೆಗಳನ್ನು ಬರೆದಿದ್ದೇನೆ. ‘ಮಧುರ ಅಲೆಗಳು’ ನನ್ನ ಮೊದಲ ಧ್ವನಿಸುರುಳಿ (ಆಲ್ಬಂ). ‘ಅಮ್ಮನ ಮನೆ’ ಯೂಟ್ಯೂಬ್‌ನಿಂದ 22 ಲಕ್ಷ ಮಂದಿ ವೀಕ್ಷಿಸಿದ್ದಾರೆ. ಕೋವಿಡ್‌ಗೆ ಮೊದಲು ಕೋಲಾರಕ್ಕೆ ಎಸ್.ಬಿ.ಬಾಲಸುಬ್ರಹ್ಮಣ್ಯಂ ಅವರನ್ನೂ ಆಹ್ವಾನಿಸಿ ಸಂಗೀತ ಕಾರ್ಯಕ್ರಮ ನೀಡಿದ್ದೆವು’ ಎಂದು 55 ವರ್ಷ ವಯಸ್ಸಿನ ಗೋ.ನಾ.ಸ್ವಾಮಿ ನೆನಪಿಸಿಕೊಳ್ಳುತ್ತಾರೆ.

ಇತ್ತೀಚಿನ ವರ್ಷಗಳಲ್ಲಿ ಎಲ್ಲಾ ಕಾರ್ಯಕ್ರಮಗಳಲ್ಲಿ ಸಿನಿಮಾ ಹಾಡುಗಳೇ ಆವರಿಸಿಕೊಂಡಿವೆ. ಜನಪದ ಹಾಡುಗಳಿಗೆ ಬೇಡಿಕೆ ತೀರಾ ಕಡಿಮೆ. ಆದರೆ, ವಿದೇಶಗಳಲ್ಲಿ ಕೆಲ ಪ್ರದೇಶಗಳಲ್ಲಿ ಜನಪದ ಹಾಡು ಹಾಡಿದ ಮೇಲೆ ಅಲ್ಲಿನ ಜನರಿಗೆ ಜನಪದದ ಮೇಲಿನ ಪ್ರೀತಿ ಬಂದಿದೆ. ಜನಪದ ಹಾಡುಗಳನ್ನು ಹಾಡಿ ಎಂದು ಹುರಿದುಂಬಿಸುವುದನ್ನು ನೋಡಿದರೆ ತುಂಬಾ ಖುಷಿಯಾಗುತ್ತದೆ ಎನ್ನುತ್ತಾರೆ.

ಪ್ರಯಾಣಿಕರ ಹೈಟೆಕ್ ತಂಗುದಾಣ ಕೊಡುಗೆ

ಗೋ.ನಾ.ಸ್ವಾಮಿ ಹಾಡು ಹಾಡುತ್ತಾ ರಾಜ್ಯ, ದೇಶ, ವಿದೇಶ ಸುತ್ತುತ್ತಿದ್ದರೂ ತಮ್ಮ ಊರು ಮರೆತಿಲ್ಲ. ಸುಗಟೂರು ಗ್ರಾಮದಲ್ಲಿ ಪ್ರಯಾಣಿಕರ ಹೈಟೆಕ್ ಪ್ರಯಾಣಿಕರ ತಂಗುದಾಣ ನಿರ್ಮಿಸಿ ಬೆಳೆದೂರಿನ ಜನರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ.

ಕಲ್ಲಿನ ಬೆಂಚ್‌ಗಳು, ದಿನಪತ್ರಿಕೆಗಳು, ಶುದ್ಧ ನೀರಿನ ವ್ಯವಸ್ಥೆ, ಫ್ಯಾನ್, ಎಫ್.ಎಂ ರೇಡಿಯೊ, ಬಣ್ಣದ ಲೈಟ್‌ಗಳು, ಮೊಬೈಲ್ ಚಾರ್ಜಿಂಗ್ ಪಾಯಿಂಟ್ ಸೌಲಭ್ಯ ಈ ನಿಲ್ದಾಣದಲ್ಲಿವೆ. ಸಿ.ಸಿ.ಟಿ.ವಿ ಕ್ಯಾಮೆರಾ, ಉಚಿತ ವೈಫೈ, ಟಿ.ವಿ, ಬಸ್ಸುಗಳ ವೇಳಾಪಟ್ಟಿ ಫಲಕ ಅಳವಡಿಸಲೂ ಮುಂದಾಗಿದ್ದಾರೆ. ಸುಮಾರು ₹ 7 ಲಕ್ಷ ಸ್ವಂತ ಹಣ ಖರ್ಚು ಮಾಡಿ ಈ ನಿಲ್ದಾಣಕ್ಕೆ ಕಾಯಕಲ್ಪ ಕಲ್ಪಿಸಿದ್ದಾರೆ.

‘ನನ್ನ ಬೆಳೆಸಿದ ಊರಿನ ಜನರಿಗೆ ನನ್ನ ಕಡೆಯಿಂದ ಸಣ್ಣ ಸಹಾಯ ಮಾಡಬೇಕು ಅಂದುಕೊಂಡು ಈ ಕೆಲಸ ಮಾಡಿದ್ದೇನೆ. ಗಾಯನದಿಂದ ಬಂದ ಹಣವನ್ನೇ ಇದಕ್ಕೆ ಬಳಸಿದ್ದೇನೆ’ ಎನ್ನುತ್ತಾರೆ.


ಸುಗಟೂರು ಗ್ರಾಮದಲ್ಲಿ ಗೋ.ನಾ.ಸ್ವಾಮಿ ನಿರ್ಮಿಸಿರುವ ಪ್ರಯಾಣಿಕರ ತಂಗುದಾಣ

ಕಥೆ

ಗಿರೀಶ್ ಜಿ.ಎಸ್. ಅವರ
“ಸಾರ್, ನಂಗೊಂದ್ ಮನೆ ಕೊಡಿ...”

prajavani.net/short-story

ಕವನ

ಅನಿತಾ ಪಿ.ತಾಕೊಡೆ ಅವರ
ಕಾರಣಗಳು ತಿಳಿಯುವುದೇ ಇಲ್ಲ

www.prajavani.net/poetry

ಸಾದರ ಸ್ವೀಕಾರ

ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಶಿಲಾಮೌನಿ

ಶಿಲಾಮೌನಿ (ನಾ). ಕಲ್ಲಿನಂತೆ ಮಾತಾಡದೆ ಸುಮ್ಮನಿರುವವನು.

ರಾವಣನು ಸೀತೆಯನ್ನು ಹೊತ್ತುಕೊಂಡು ಹೋಗಿ ಗುಪ್ತ ಗೃಹದ ಮಧ್ಯೆ ಇಳಿಸುವನು. ಅಲ್ಲಿಗೆ ಹೋದ ಚಂದ್ರನಖಿ ಸಾಂತ್ವನದ ಮಾತಾಡುವಳು. ಆಗ ಸೀತೆ ಒಂದೆರಡು ಮಾತಾಡಿ, ಅನಂತರ ಮಾತನಾಡದೆ ಸುಮ್ಮನಿದ್ದ ಬಗೆಯನ್ನು ‘ಶಿಲಾಮೌನಿ’ ಪದದಿಂದ ಕುವೆಂಪು ಹೀಗೆ ರೇಖಿಸಿದ್ದಾರೆ:

‘ಮೇಲೊಂದುಮಂ
ನುಡಿದೋರದೆಯೆ ಸೀತೆಯಾದಳು ಶಿಲಾಮೌನಿ.’

ಮಿಳ್ತುನೆಳಲು

ಮಿಳ್ತುನೆಳಲು (ನಾ). ಸಾವಿನ ನೆರಳು

ರಾವಣನು ಮೂರ್ಛೆಹೋದ ಸೀತೆಯನ್ನು ಹೊತ್ತುಕೊಂಡು ಬಂದು ಲಂಕೆಯ ತನ್ನ ಸಿರಿ ಅರಮನೆಯಲ್ಲಿ ಇಳಿದದ್ದನ್ನು ಕುವೆಂಪು ‘ಮಿಳ್ತುನೆಳಲಂತೆ’ ಎಂಬ ಉಪಮಾನದಲ್ಲಿ ಹೀಗೆ ಬಣ್ಣಿಸಿದ್ದಾರೆ:

‘ಮಿಳ್ತುನೆಳಲಂತೆವೋಲ್
ಇಳಿದನ್ ತ್ರಿಕೂಟ ಗಿರಿ ಶೃಂಗ ಶೃಂಗಾರದಾ
ಕನಕ ಲಂಕಾ ಲಕ್ಷ್ಮಿಯಂಕಮೆನಲೆಸೆದಿರ್ದ
ಸಿರಿಯರಮನೆಗೆ’


ನಲ್ವಾಸು

ನಲ್ವಾಸು (ನಾ). ಮೃದುವಾದ ಶಯ್ಯೆ; ಮೆತ್ತನೆಯ ಹಾಸುಗೆ

ರಾವಣನು ತಂಗಿ ಚಂದ್ರನಖಿಗೆ ಸೀತೆಯನ್ನು ಒಪ್ಪಿಸಿ ಹೋಗುವನು. ಆಗ ಅವಳು ದಶರಥನ ಸೊಸೆಯನ್ನು ಮಲಗಿಸಿದ ಹಾಸುಗೆಯನ್ನು ಕುವೆಂಪು ಅವರು ‘ನಲ್ವಾಸು’ ಪದದಿಂದ ಹೀಗೆ ಬಣ್ಣಿಸಿದ್ದಾರೆ:

‘ದಶರಥನ ಸೊಸೆಯನಿರಿಸಿದಳಂಚೆ ತಿಪ್ಪುಳಿಂ
ಸಮೆದ ನಲ್ವಾಸಿನೊಳ್’

ಮೊದಲ ಓದು



ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ ಕಥನ


ಕಾರಂತ ಕಥನ
ಲೇ: ಡಾ. ಟಿ. ರಾಜೇಂದ್ರ ತಗಡ್ಡಿ
ಪ್ರ: ಸುವ್ವಿ ಪಬ್ಲಿಕೇಷನ್ಸ್,
ಸಂ: 9620083614

‘**ಕಾರಂತ** ಕಥನ ಸ್ತ್ರೀವಾದಿ ಓದು’ ವಿಮರ್ಶಾತ್ಮಕ ಮಾದರಿಯಲ್ಲಿ ರೂಪಿಸಿದ ಸಂಶೋಧನಾ ಕೃತಿ. ರಾಜೇಂದ್ರ ಅವರು ಕಾರಂತರ 45 ಕಾದಂಬರಿಗಳನ್ನು ಆಧಾರವಾಗಿ ಇಟ್ಟುಕೊಂಡು ಅವುಗಳಲ್ಲಿ ಮಹಿಳೆಯನ್ನೇ ಕೇಂದ್ರೀಕರಿಸಿ ಮಾಡಿದ ಅಧ್ಯಯನ ಕುತೂಹಲ ಹುಟ್ಟಿಸುತ್ತದೆ. ಕಾರಂತ ಕಥನವನ್ನು ‘ಓದಿನ ಪರ್ಯಾವರಣ’, ‘ನಿಸರ್ಗ ಕೇಂದ್ರಿತ ಸ್ತ್ರೀ ಮಾದರಿಗಳು’, ‘ಕುಟುಂಬ ಕೇಂದ್ರಿತ ಸ್ತ್ರೀ ಮಾದರಿಗಳು’, ‘ಗಂಡು ಹೆಣ್ಣು: ಲಿಂಗರಾಜಕಾರಣ, ಕಲೆ, ಸಾಹಿತ್ಯ ಸ್ತ್ರೀ ಬಿಂಬಗಳು’, ‘ಮುಗಿಯದ ಮುನ್ನ’ ಎಂಬ ಐದು ಅಧ್ಯಾಯಗಳಲ್ಲಿ ಲೇಖಕ ತಮ್ಮ ಬರಹವನ್ನು ವಿಸ್ತರಿಸಿದ್ದಾರೆ.

ಸ್ತ್ರೀ–ಪುರುಷ ಇದು ಜೈವಿಕ ವ್ಯತ್ಯಾಸ. ಎಲ್ಲ ಪ್ರಾಣಿ ಪಕ್ಷಿಗಳಲ್ಲಿ ಪ್ರಕೃತಿ ಸಹಜ. ಆ ಭಿನ್ನತೆ ವಿರೋಧ ಲಿಂಗಗಳ ಆಕರ್ಷಣೆ ಮತ್ತು ತಮ್ಮ ತಮ್ಮ ಕ್ರಿಯೆಯ ಸಂದರ್ಭ ಬಿಟ್ಟರೆ ಉಳಿದಂತೆ ಸಮಾನ. ಕುಟುಂಬ ವ್ಯವಸ್ಥೆಯಲ್ಲಿ ಪುರುಷ ಯಜಮಾನಿಕೆಯ ಸ್ಥಾನದಲ್ಲಿಯೇ ಇದ್ದರೆ, ಮಹಿಳೆ ಅವನ ಸಹಾಯಕಳ ಸ್ಥಾನದಲ್ಲಿ ಇರುತ್ತಾಳೆ. ಇದು ಜಾಗತಿಕವಾಗಿ ಕಂಡು ಬರುವ ಸಾಮಾಜಿಕ ವಿದ್ಯಮಾನ ಇದನ್ನು ಕಾರಂತರು ತಮ್ಮ ಕಾದಂಬರಿಗಳಲ್ಲಿ ವಿವರವಾಗಿ ತರುತ್ತಾರೆ. ಹೊಲ ಗದ್ದೆಗಳಲ್ಲಿ ದುಡಿದು ಕುಟುಂಬವನ್ನು ನಿರ್ವಹಿಸುವ ದಿಟ್ಟ ಮಹಿಳೆಯರ ಹಲವು ನಿದರ್ಶನಗಳನ್ನು ಲೇಖಕ ಗುರುತಿಸುತ್ತಾರೆ.

ಕಾರಂತರು, ಹೆಣ್ಣಿನ ಸೌಂದರ್ಯ ಹೊಗಳಿಕೆ, ನಿಸರ್ಗದ ಹೋಲಿಕೆಯ ವೈಭವ, ಅಬಲೆ–ಕೋಮಲೆ ಎಂಬ ಸಹಾನುಭೂತಿ, ವಿಧವಾ ಪದ್ಧತಿ, ಸತಿ ಪದ್ಧತಿ, ಬಂಜೆ, ವೇಶ್ಯಾವೃತ್ತಿ ರೀತಿಯ ಕಂದಾಚಾರಗಳನ್ನು ಖಂಡಿಸುತ್ತಾರೆ. ಮಾತ್ರವಲ್ಲ, ಪುರುಷನಿಗೆ ಇಲ್ಲದ ಶೀಲ ಮಹಿಳೆಗೆ ಏಕೆ ಎನ್ನುವ ಪ್ರಶ್ನೆಯನ್ನು ತಾರ್ಕಿಕವಾಗಿ ನಿರೂಪಿಸುತ್ತ, ವೇಶ್ಯೆಯರು ಪಾತಿವ್ರತ್ಯದ ಸಾತತ್ಯತೆಯನ್ನು ಹೊಂದಿದ್ದಾರೆ ಎಂಬ ನಿಲುವನ್ನು ಲೇಖಕ ದಾಖಲಿಸುತ್ತಾರೆ.

ಪುಟ: 210 ₹220



ಹಳ್ಳಿ ಸೊಗಡಿನ ಕಥೆಗಳು

ನಾಟಿ ಹುಂಜ ಮತ್ತು ಇತರೆ ಕಥೆಗಳು
ಲೇ: ಗುರುಪ್ರಸಾದ್ ಕಂಟಲಗೆರೆ
ಪ್ರ: ಜೀರುಂಡೆ
ಸಂ: 9742225779


ಓದು ಮುಗಿದ ಬಳಿಕ ಅದರ ಗುಂಗಿನಿಂದ ಹೊರಬರಲು ಸಮಯ ಹಿಡಿದರೆ ಅದು ನಿಮ್ಮನ್ನು ಆವಾಹಿಸಿಕೊಂಡಿದೆ ಎಂದರ್ಥ. ಗುರುಪ್ರಸಾದ್ ಕಂಟಲಗೆರೆಯವರ ‘ನಾಟಿ ಹುಂಜ’ದಲ್ಲಿರುವ ಕಥೆಗಳಿಗೆ ಆ ಶಕ್ತಿ ಇದೆ. ಇಲ್ಲಿರುವ ಹತ್ತು ಕಥೆಗಳು ಭಿನ್ನ ಮಾದರಿಯವು. ಪ್ರತಿಯೊಂದರಲ್ಲೂ ಹಳ್ಳಿ ಜೀವನದ ಸೊಗಡು ಇದೆ. ಹಳ್ಳಿಯ ಜೀವನದಲ್ಲಿ ಸಾಮಾನ್ಯವಾಗಿ ನಡೆಯುವ ಸಂಗತಿಗಳನ್ನೇ ಮನೋಜ್ಞವಾಗಿ ಕಟ್ಟಿಕೊಟ್ಟಿದ್ದಾರೆ. ಸರಳ ವಿಷಯವನ್ನೂ ಓದುಗನ ಎದೆಗೆ ನಾಟುವಂತೆ, ಭಾವ ತೀವ್ರತೆಯಿಂದ ಬರೆಯುವ ಶೈಲಿ, ಎಲ್ಲೂ ಮುಕ್ಕಾಗದಂತೆ ಇರುವ ನಿರೂಪಣಾ ಸಾಮರ್ಥ್ಯ ಕಥೆಗಾರನ ಕಲಾತ್ಮಕತೆಗೆ ಸಾಕ್ಷಿ.

‘ಉಜ್ಗಲ್ಲು’ ಕಥೆಯಲ್ಲಿನ ಬಜ್ಗಲ್ಲೂರಿನ ಪರಿಸರ, ಅಲ್ಲಿನ ಜನರ ಕಾಯಕವನ್ನು ವರ್ಣಿಸುವುದರ ಜೊತೆಗೆ ಕಲ್ಲೊಂದು ಕುಟುಂಬದ ಏಳಿಗೆ ಹಾಗೂ ತಲ್ಲಣಕ್ಕೆ ಕಾರಣವಾದ ಬಗೆಯನ್ನು ಸೊಗಸಾಗಿ ವರ್ಣಿಸಿದ್ದಾರೆ. ಪರಂಪರಾಗತವಾಗಿ ಮಾಡಿಕೊಂಡು ಬಂದ ಕಸುಬನ್ನು ಬಂಡವಾಳಶಾಹಿಗಳು ಆಕ್ರಮಿಸಿಕೊಂಡ ಬಗೆಯನ್ನೂ ಕಥೆಗಾರ ಪರೋಕ್ಷವಾಗಿ ಕೆಲವೇ ಪದಗಳಲ್ಲಿ ಹೇಳಿದ್ದಾರೆ. ಅವರ ಮನದೊಳಗೆ ಹುದುಗಿರುವ ಇಂತಹ ಹಲವು ಬಗೆಯ ಸಮಾಜಪರ ಕಾಳಜಿಯನ್ನು ಕಾಣಬಹುದು.

ಪಾತ್ರ, ಹೆಸರುಗಳ ಆಯ್ಕೆಯೂ ನೈಜ ಎನಿಸುವಂತಿದೆ. ಕಥೆ ಹೆಣೆಯುವಾಗ ಸಣ್ಣ ವಿಚಾರಗಳಿಗೆ ಹೊಸ ಆಯಾಮ ನೀಡಿ ಕಥೆಯನ್ನು ವಿಸ್ತರಿಸುವ, ಎಲ್ಲಿಯೂ ಅತಿಯೆನಿಸದಂತೆ ನಿರೂಪಿಸುವ ಕಥೆಗಾರನಿಗೆ ಇರಬೇಕಾದ ಕಲೆ ಗುರುಪ್ರಸಾಸ್ ಅವರಿಗೆ ಸಿದ್ಧಿಸಿದೆ. ಓದುವ ವೇಳೆ ಬದಲಾಗುವ ಭಾವಗಳು ಇಲ್ಲಿನ ಕಥೆಗಳ ಸ್ಥಾಯಿಗುಣ. ಹೊಸ ತಲೆಮಾರಿನ ಓದುಗರಿಗೆ ಆಪ್ತ ಎನಿಸುವ ಭಾಷೆ, ಪ್ರಾದೇಶಿಕತೆ ಕಥೆಯನ್ನು ಪಕ್ವಗೊಳಿಸಿದೆ.

ಕಥೆಗಳಲ್ಲಿ ಅಲ್ಲಲ್ಲಿ ಬಳಕೆಯಾಗಿರುವ ಸ್ಥಳೀಯ ಭಾಷೆ, ಪದಗಳು ಬೇರೆ ಭಾಗದ ಓದುಗರಿಗೆ ಆಪ್ತವೆನಿಸದೇ ಇರಬಹುದು. ಬಳಸಲಾಗಿರುವ ಹಳ್ಳಿ ಸೊಗಡಿನ ಭಾಷೆ, ಪದಗಳ ಬಳಕೆಯೂ ಕೆಲ ಓದುಗರಿಗೆ ಪಥ್ಯವಾಗದು.

ಪುಟ: 116 ₹150



ಕುತೂಹಲ ಹೆಚ್ಚಿಸುವ ಕೃತಿ

ವಿಜ್ಞಾನದ ಜಾಡು ಬದಲಿಸಿದ ಜಾಣೆಯರು
ಲೇ: ಸರೋಜಾ ಪ್ರಕಾಶ್
ಪ್ರ: ಭೂಮಿ ಬುಕ್ಸ್
ಸಂ: 944917 7628

ವಿಜ್ಞಾನಕ್ಕೆ ಸಂಬಂಧಿಸಿದ ಪ್ರಮುಖ ಸಂಶೋಧನೆಗಳ ಚರ್ಚೆಗಳಾದರೆ ಅಲ್ಲಿ ಮೇಡಂ ಕ್ಯೂರಿ ಹೊರತುಪಡಿಸಿದರೆ ಉಳಿದೆಲ್ಲಾ ಹೆಸರುಗಳು ಪುರುಷ ವಿಜ್ಞಾನಿಗಳದ್ದೇ ಆಗಿರುತ್ತದೆ. ಭಾರತವನ್ನೂ ಒಳಗೊಂಡು ಜಗತ್ತಿನ ಹಲವು ರಾಷ್ಟ್ರಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಪುರುಷರಿಗೆ ಸರಿಸಮನಾಗಿ ಮಹಿಳೆಯರು ತೊಡಗಿದ್ದರೂ, ಬೆಳಕಿಗೆ ಬರುವುದು ಬೆರಳೆಣಿಕೆಯಷ್ಟು. ಆದರೆ ವಿಜ್ಞಾನ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದ ಪ್ರಮುಖ ಮಹಿಳೆಯರ ಕುರಿತ ಕೃತಿಯನ್ನು ಸರೋಜಾ ಪ್ರಕಾಶ್ ರಚಿಸಿದ್ದಾರೆ.

‘ವಿಜ್ಞಾನದ ಜಾಡು ಬದಲಿಸಿದ ಜಾಣೆಯರು’ ಎಂಬ ಈ ಕೃತಿಯ ರಚನೆಗೆ ಕಾರಣವಾದ ಸಂಗತಿಯಿಂದ ಹಿಡಿದು, ಇಲ್ಲಿ ದಾಖಲಾಗಿರುವ 13 ಪ್ರಮುಖ ಮಹಿಳಾ ವಿಜ್ಞಾನಿಗಳ ಸಾಧನೆಯವರೆಗೂ ಎಲ್ಲವೂ ಕುತೂಹಲ ಇಮ್ಮಡಿಗೊಳಿಸುವಂತವುಗಳೇ ಆಗಿವೆ. ಮೂಲ ವಿಜ್ಞಾನಕ್ಕೆ ಸಂಬಂಧಿಸಿದ ಸಿದ್ಧಾಂತಗಳಿಗೆ ತಳಪಾಯ ಹಾಕಿದ ಕೆಲವು ಪ್ರಮುಖ ಮಹಿಳಾ ವಿಜ್ಞಾನಿಗಳ ನೈಜಕಥೆಗಳನ್ನು ಹಿಡಿದಿಡುವ ಪ್ರಯತ್ನವನ್ನೂ ಲೇಖಕಿ ಮಾಡಿದ್ದಾರೆ. ಮಹಿಳಾ ವಿಜ್ಞಾನಿಗಳ ಸಂಶೋಧನೆ ಮಾತ್ರವಲ್ಲದೆ, 17, 18 ಹಾಗೂ 19ನೇ ಶತಮಾನದಲ್ಲಿ ಯುರೋಪ್, ಅಮೆರಿಕದಂತ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೂ ಲಿಂಗತಾರತಮ್ಯ ಹೇಗಿತ್ತು ಎಂಬುದರ ಸ್ಥಿತಿಗತಿಯ ವಿವರಣೆಯೂ ಇದರಲ್ಲಿ ಸಿಗಲಿದೆ. ಮಹಿಳೆಯರು ದೂರದರ್ಶಕ ಮುಟ್ಟುವಂತಿರಲಿಲ್ಲ, ಉನ್ನತ ಶಿಕ್ಷಣ ಪಡೆಯುವುದೂ ದೂರದ ಮಾತಾಗಿತ್ತು, ಒಂದೊಮ್ಮೆ ಹೊಸ ಆವಿಷ್ಕಾರ ಮಾಡಿದರೆ ಪೇಟೆಂಟ್ ಪಡೆಯಲು ಮಹಿಳಾ ವಿಜ್ಞಾನಿಗಳು ಪಟ್ಟ ಕಷ್ಟದ ಹಾದಿಯ ಪಯಣ ಹೇಗಿತ್ತು ಎಂಬ ಸಂಗತಿ ಇಲ್ಲಿ ದಾಖಲಾಗಿರುವ ಸಾಧಕ ಮಹಿಳೆಯರ ಕಥೆಗಳಲ್ಲೇ ಸಿಗುತ್ತವೆ.

ಬಗೆಬಗೆಯ ಕಬ್ಬು ಹಾಗೂ ಇಂಗ್ಲೆಂಡ್‌ನ ಅಗಲಗಲದ ಮ್ಯಾಗ್ನೊಲಿಯಾ ಹೂವು ಪರಿಚಯಿಸಿದ ಭಾರತದ ಜಾನಕಿ ಅಮ್ಮಾಳ್, ಕಳೆಯನ್ನೇ ಬಳಸಿ ಮಲೇರಿಯಾ ರೋಗಕ್ಕೆ ಮದ್ದು ಕಂಡುಹಿಡಿದ ಚೀನಾದ ತು ಯು ಯು, ಮೂರು ದಶಕಗಳ ಕಾಲ ಚಿಂಪಾಂಜಿಯೊಂದಿಗೇ ಜೀವಿಸಿ ಅವುಗಳ ಬಗ್ಗೆ ಸಂಶೋಧನಾ ಬರಹಗಳನ್ನು ದಾಖಲಿಸಿದ ಜೇನ್ ಗುಡಾಲ್ ಇವರೆ ಸರೋಜಾ ಪ್ರಕಾಶ್ ಅವರ ಕೃತಿಯ ನಾಯಕಿಯರು.

ಪುಟ: 220 ₹250



ಪಿರಮಿಡ್‌ಗಳಿಗೆ ಪ್ರವಾಸಿಗರ ಭೇಟಿ

ಸ್ಫೂರ್ತಿ ನೀಡುವ ಈಜಿಪ್ಟ್

ಪಿರಮಿಡ್‌ಗಳನ್ನು ಹೊತ್ತ ಈಜಿಪ್ಟ್ ಲಕ್ಷಾಂತರ ಪ್ರವಾಸಿಗರನ್ನು ಸೆಳೆಯುವ ತಾಣ. ಆ ನಗರ, ಅಲ್ಲಿರುವ ವಸ್ತುಸಂಗ್ರಹಾಲಯಗಳು ಭೂತಕಾಲದ ವೈಭವಗಳನ್ನು ಕಾಪಿಟ್ಟುಕೊಂಡಿವೆ. ಈಜಿಪ್ಟ್ ಪ್ರವಾಸದ ಕನಸನ್ನು ನನಸು ಮಾಡಿಕೊಂಡ ಲೇಖಕರು ಅಲ್ಲಿನ ಅನುಭವವನ್ನು ಕಟ್ಟಿಕೊಟ್ಟಿದ್ದಾರೆ.

• ಡಿ.ರಾಮಾನಾಯಕ್

ಈಜಿಪ್ಟ್‌ಗೆ ಭೇಟಿ ನೀಡಬೇಕು ಎನ್ನುವ ಕನಸು ಶಾಲಾ ದಿನಗಳಲ್ಲಿ ಮೊಳೆತದ್ದು. ಅಲ್ಲಿನ ಪಿರಮಿಡ್‌ಗಳು, ಫೇರೋಗಳು, ನೈಲ್ ನದಿ ಮತ್ತು ಪ್ರಾಚೀನ ನಾಗರಿಕತೆಗಳ ಕಥೆಗಳು ನನ್ನನ್ನು ಸೆಳೆದಿದ್ದವು. ಮೂವತ್ತು ವರ್ಷಗಳಿಂದ ವಿಶ್ವದ ಅನೇಕ ದೇಶಗಳಿಗೆ ಭೇಟಿ ನೀಡಿದ್ದೇನೆ. ಆದರೂ ಈಜಿಪ್ಟ್ ಏಕೋ, ಏನೋ ಕನಸಾಗಿಯೇ ಉಳಿದಿತ್ತು. ಅಂತಿಮವಾಗಿ, ನನ್ನ ಸ್ನೇಹಿತರ ಗುಂಪಿನೊಂದಿಗೆ ನೈಲ್ ನದಿ ದಂಡೆಯಲ್ಲಿ ಪ್ರಯಾಣಿಸಿದಾಗ ಬಹುವರ್ಷಗಳ ಕನಸು ನನಸಾಯಿತು.

ಈಜಿಪ್ಟ್ ಗಡಿಯಾಚಿನ ಪ್ರಾದೇಶಿಕ ಉದ್ವಿಗ್ನತೆಗಳು, ಅಲ್ಲಿನ ಸುರಕ್ಷತಾ ಸಮಸ್ಯೆಗಳು ಜೊತೆಗೆ ಭಾರತ ಮತ್ತು ನೆರೆ ರಾಷ್ಟ್ರದ ಇತ್ತೀಚಿನ ಸಂಘರ್ಷದಿಂದಾಗಿ ಭಾರತೀಯ ಪ್ರವಾಸಿಗರನ್ನು ಈಜಿಪ್ಟ್‌ನಲ್ಲಿ ಹೇಗೆ ಸ್ವೀಕರಿಸಬಹುದು ಎಂಬ ಬಗ್ಗೆ ನನಗೆ ಆರಂಭಿಕ ಚಿಂತೆ ಇದ್ದದ್ದು ನಿಜ. ಆದರೆ ಆ ಚಿಂತೆ ಬೇಗ ಕರಗಿಹೋಯಿತು. ಈಜಿಪ್ಟ್ ನಮ್ಮನ್ನು ಪ್ರೀತಿಯಿಂದ ಸ್ವಾಗತಿಸಿತು.

ಈಜಿಪ್ಟ್ ನಿಜವಾಗಿಯೂ ಭೂತ ಮತ್ತು ವರ್ತಮಾನಗಳನ್ನು ಜೊತೆ ಜೊತೆಯಾಗಿ ಸ್ವೀಕರಿಸುವ ದೇಶ. ಪ್ರಾಚೀನ ಮತ್ತು ಆಧುನಿಕತೆಗಳ ಘರ್ಷಣೆ ಅಲ್ಲಿಲ್ಲ-ಅವು ಸಂಭಾಷಿಸುವಂತೆ ತೋರುತ್ತವೆ. ಅಲ್ಲಿನ ನಗರಗಳಲ್ಲಿ ನಡೆಯುವಾಗ, ನಾವು ಪರಂಪರೆ ಮತ್ತು ಜೀವನದ ನಾಡಿಮಿಡಿತವನ್ನು ಏಕಕಾಲದಲ್ಲಿ ಅನುಭವಿಸುತ್ತೇವೆ. ಅದರ ವೈರುಧ್ಯ ಮತ್ತು ಸಂಕೀರ್ಣತೆಗಳನ್ನು ಸ್ವೀಕರಿಸಲು ಇಚ್ಛಿಸುವ ಪ್ರವಾಸಿಗರಿಗೆ, ಈಜಿಪ್ಟ್ ಮರೆಯಲಾಗದಷ್ಟು ಶ್ರೀಮಂತ ಅನುಭವವನ್ನು ನೀಡುತ್ತದೆ.

ನಮ್ಮ ಪ್ರವಾಸ ಮೆಡಿಟರೇನಿಯನ್ ಬಂದರು ನಗರವಾದ ಅಲೆಕ್ಸಾಂಡ್ರಿಯಾದಿಂದ ಪ್ರಾರಂಭವಾಯಿತು. ಪ್ರಾಚೀನ ಜಗತ್ತಿನ ಏಳು ಅದ್ಭುತಗಳಲ್ಲಿ ಒಂದಾದ ಅಲೆಕ್ಸಾಂಡ್ರಿಯಾದ ಪ್ರಸಿದ್ಧ ದೀಪಸ್ತಂಭ ಹಾಗೂ ಅಷ್ಟೇ ಪ್ರಸಿದ್ಧವಾದ ಗ್ರಂಥಾಲಯಕ್ಕೆ ಒಮ್ಮೆ ನೆಲೆಯಾಗಿದ್ದ ಈ ನಗರವು ಇನ್ನೂ ತನ್ನ ಗತಕಾಲದ ಬೌದ್ಧಿಕ ಚೈತನ್ಯವನ್ನು ಹೊಂದಿದೆ. ಇಂದು ಆ ಗ್ರಂಥಾಲಯವು ಡಿಸ್ಕ್ ಆಕಾರದ, ಅಲ್ಟ್ರಾ ಮಾರ್ಡನ್ ಬಿಬ್ಲಿಯೋಥೆಕಾ ಅಲೆಕ್ಸಾಂಡ್ರಿನಾ ಎಂಬ ಪರಂಪರೆಗೆ ಗೌರವವಾಗಿ ನಿಲ್ಲುತ್ತದೆ. ಈ ನಗರವು ಗ್ರೀಕೋ-ರೋಮನ್‌ನ ಹೆಗ್ಗುರುತುಗಳು, ಹಳೆಯದಾದ ಆಕರ್ಷಕ ಕೆಫೆಗಳು ಮತ್ತು ಮರಳಿನ ಕಡಲತೀರಗಳನ್ನು ಸಹ ಹೊಂದಿದೆ. 15ನೇ ಶತಮಾನದ ಸಮುದ್ರತೀರದ ಕೈಟ್ಬೇ ಸಿಟಾಡೆಲ್ ಈಗ ವಸ್ತುಸಂಗ್ರಹಾಲಯವಾಗಿದೆ.



ಅಲ್ಲಿಂದ ಕೈರೋಗೆ ಪ್ರಯಾಣಿಸಿದೆವು. ನೈಲ್ ನದಿಯ ಉದ್ದಕ್ಕೂ ಹರಡಿಕೊಂಡಿರುವ ಮತ್ತು ವ್ಯತಿರಿಕ್ತತೆಯಿಂದ ತುಂಬಿರುವ ನಗರವಿದು. ಈಜಿಪ್ಟ್ ರಾಜಧಾನಿಯಾದ ಇದರ ಹೃದಯಭಾಗದಲ್ಲಿ ತಹ್ರೀರ್ ಚೌಕ ಮತ್ತು ಈಜಿಪ್ಟ್ ನಾಗರಿಕತೆಯ ರಾಷ್ಟ್ರೀಯ ವಸ್ತುಸಂಗ್ರಹಾಲಯವಿದೆ. ಅಲ್ಲಿ ಪ್ರಾಚೀನ ಕಲಾಕೃತಿಗಳು, ರಾಜಮನೆತನದ ಮಮ್ಮಿಗಳು ಮತ್ತು ರಾಜ ಟುಟಾಂಖಾಮನ್‌ನ ಚಿನ್ನದ ನಿಧಿಗಳು, ದೇಶದ ವೈಭವದ ಭೂತಕಾಲವನ್ನು ಸ್ಪಷ್ಟವಾಗಿ ಜೀವಂತಗೊಳಿಸುತ್ತವೆ.

ಈ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿ ಹದಿನೆಂಟು ರಾಜರು, ನಾಲ್ವರು ರಾಣಿಯರು ಸೇರಿದಂತೆ ಒಟ್ಟು ಇಪ್ಪತ್ತೆರಡು ರಾಜಮನೆತನದ ಮಮ್ಮಿಗಳನ್ನು ಸಂರಕ್ಷಿಸಿ ಇಡಲಾಗಿದೆ. ಈ ಮಮ್ಮಿಗಳನ್ನು ನೋಡುತ್ತಿರುವಾಗ ಒಂದು ಮಮ್ಮಿ ಟಾಟಾ ಮಾಡುತ್ತಿರುವಂತೆ ಭಾಸವಾಯಿತು!

ಕೈರೋದ ಐತಿಹಾಸಿಕ ಕ್ವಾರ್ಟರ್ಸ್ ಪ್ರವಾಸಿಗರ ಮೇಲೆ ಆಳವಾದ ಪ್ರಭಾವ ಬೀರುತ್ತದೆ. ಇಲ್ಲಿನ ಐತಿಹಾಸಿಕ ವಸತಿಗೃಹಗಳು ಈಜಿಪ್ಟ್‌ನ ಶ್ರೀಮಂತ ಭೂತಕಾಲದ ಆಕರ್ಷಕ ನೋಟವನ್ನು ನೀಡುತ್ತವೆ. ಅದರ ವಾಸ್ತುಶಿಲ್ಪ, ಬೀದಿಗಳು ಮತ್ತು ಸಾಂಸ್ಕೃತಿಕ ಹೆಗ್ಗುರುತುಗಳನ್ನು ಪ್ರದರ್ಶಿಸುವ ಹಲವಾರು ತಾಣಗಳಿವೆ. ಇಲ್ಲಿನ ಕಿರಿದಾದ ಕಾಲುದಾರಿಗಳು ಮತ್ತು ಜನಸಂದಣಿ ಮಾರುಕಟ್ಟೆಗಳ ಮೂಲಕ ನಡೆಯುವಾಗ ನಮ್ಮ ದೇಶದ ಮುಂಬೈ ಮತ್ತು ಕೋಲ್ಕತ್ತ ನಗರಗಳ ಪಾರಂಪರಿಕ ಕಟ್ಟಡಗಳು, ದ್ವಿಚಕ್ರ ವಾಹನಗಳು, ರಿಕ್ಷಾಗಳು ಕೈರೋದ ಸಾಮಾನ್ಯ ಜನರ ದೈನಂದಿನ ಜೀವನವನ್ನು ನೆನಪಿಸಿದವು. ಅಲೆಕ್ಸಾಂಡ್ರಿಯಾದಲ್ಲಿ ಸೋವಿಯತ್ ಒಕ್ಕೂಟ ನಿರ್ಮಿತ ಸಾವಿರಾರು ಹಳದಿ ಮತ್ತು ಕಪ್ಪು ಲಾಡಾ ಕಾರುಗಳು ಜನನಿಬಿಡ ನಗರದ ಬೀದಿಗಳಲ್ಲಿ ಓಡಾಡುವುದು ಕೂಡ ಮುಂಬೈ ನಗರದಲ್ಲಿ ಇರುವಂಥ ಭಾವನೆ ಮೂಡಿಸಿತು.

ಸಂರಕ್ಷಿತ ಇಸ್ಲಾಮಿಕ್ ವಾಸ್ತುಶಿಲ್ಪ ಮತ್ತು ಸಂಸ್ಕೃತಿಗಾಗಿ ವಿಶ್ವದ ಅತ್ಯಂತ ಅಸಾಧಾರಣ ನಗರಗಳಲ್ಲಿ ಒಂದೆಂದು ಕರೆಯಲ್ಪಡುವ ಈ ಐತಿಹಾಸಿಕ ಕ್ವಾರ್ಟರ್ಸ್ 9 ಮತ್ತು 15ನೇ ಶತಮಾನಗಳ ನಡುವೆ ಅಭಿವೃದ್ಧಿ ಹೊಂದಿತು.





ಸ್ಫಿಂಕ್ಸ್ ಮೂರ್ತಿ

ಈ ಅವಧಿಯನ್ನು ಹೆಚ್ಚಾಗಿ ಇಸ್ಲಾಮಿಕ್ ನವೋದಯ ಎಂದು ಕರೆಯಲಾಗುತ್ತದೆ. ಆ ಸುವರ್ಣಯುಗದಲ್ಲಿ ಕೈರೋ ಜ್ಞಾನ ಮತ್ತು ಸೃಜನಶೀಲತೆಯ ದಾರಿದೀಪವಾಗಿತ್ತು. ಪ್ರಪಂಚದಾದ್ಯಂತದ ವಿದ್ವಾಂಸರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳನ್ನು ಆಕರ್ಷಿಸಿತು.

ಕೈರೋ ನಗರದ ಹೊರವಲಯದ ಗೀಜಾ ಪ್ರದೇಶದಲ್ಲಿ ಇರುವ ಮಹಾ ಪಿರಮಿಡ್, ಪ್ರಾಚೀನ ಈಜಿಪ್ಟಿನ ಮೂರು ಪಿರಮಿಡ್‌ಗಳಲ್ಲಿ ದೊಡ್ಡದಾಗಿದೆ. ಇದು ಉತ್ತರ ಈಜಿಪ್ಟ್‌ನ ನೈಲ್ ನದಿಯ ಪಶ್ಚಿಮ ದಂಡೆಯಲ್ಲಿರುವ ಕಲ್ಲಿನ ಪ್ರಸ್ಥಭೂಮಿಯಲ್ಲಿದೆ. ಇದನ್ನು ಈಜಿಪ್ಟ್‌ನ 4ನೇ ರಾಜವಂಶದ ಎರಡನೇ ರಾಜ ಖುಫು ಎಂಬುವವನು ನಿರ್ಮಿಸಿದನು ಮತ್ತು ಇದನ್ನು 25ನೇ ಶತಮಾನದ ಆರಂಭದಲ್ಲಿ ಪೂರ್ಣಗೊಳಿಸಲಾಯಿತು. ಗೀಜಾದ ಪಿರಮಿಡ್‌ಗಳನ್ನು ವಿಶ್ವದ ಏಳು ಅದ್ಭುತಗಳಲ್ಲಿ ಒಂದೆಂದು ಪರಿಗಣಿಸಲಾಗುತ್ತದೆ.

ಖಂಡಿತವಾಗಿಯೂ ಈ ಪಿರಮಿಡ್‌ಗಳು ಈಜಿಪ್ಟ್‌ನ ಅತ್ಯಂತ ಪ್ರತಿಮಾರೂಪದ ಮತ್ತು ವಿಸ್ಮಯಕಾರಿ ಸ್ಮಾರಕಗಳಾಗಿವೆ. ಹಾಗೂ ಅಲ್ಲಿನ ವಾಸ್ತುಶಿಲ್ಪ ಪರಂಪರೆಯ ಕಿರೀಟ ರತ್ನಗಳಾಗಿವೆ. ಈ ಭವ್ಯವಾದ ರಚನೆಗಳು ಕೇವಲ ಸಮಾಧಿಗಳಾಗಿರಲಿಲ್ಲ- ಅವು ಶಕ್ತಿ, ಮರಣಾನಂತರದ ಜೀವನ ಮತ್ತು ದೇವರುಗಳನ್ನು ಒಳಗೊಂಡಂತೆ ಪ್ರಾಚೀನ ಈಜಿಪ್ಟ್ ನಾಗರಿಕತೆಯ ಹಲವಾರು ಅಂಶಗಳನ್ನು ಪ್ರತಿನಿಧಿಸುವ ಸಂಕೇತಗಳಾಗಿ ಮಹತ್ವವನ್ನು ಹೊಂದಿವೆ.

ಮುಖ್ಯವಾಗಿ ಹಳೆಯ ಮತ್ತು ಮಧ್ಯ ಸಾಮ್ರಾಜ್ಯದ ಅವಧಿಗಳಲ್ಲಿ ನಿರ್ಮಿಸಲಾದ ಪಿರಮಿಡ್‌ಗಳು ಪ್ರಾಚೀನ, ಸ್ಮಾರಕ ಕಲ್ಲಿನ ರಚನೆಗಳಾಗಿದ್ದು, ಅಂದಿನ ಫೇರೋಗಳು ಮತ್ತು ಅವರ ಪತ್ನಿಯರ ಸಮಾಧಿಗಳಾಗಿವೆ. ಮರಣಾನಂತರದ ಜೀವನದಲ್ಲಿ ಅವರ ನಂಬಿಕೆ ಮತ್ತು ಅವರ ಆಳ್ವಿಕೆಯ ದೈವಿಕ ಸ್ವರೂಪವನ್ನು ಪ್ರತಿಬಿಂಬಿಸುವ ವಿಶ್ರಾಂತಿ ಸೇವಾ ಸ್ಥಳಗಳಾಗಿವೆ.

ಪ್ರಾಚೀನ ಈಜಿಪ್ಟ್‌ನಲ್ಲಿ ಸಿಂಹದ ದೇಹ ಮತ್ತು ಮಾನವ ತಲೆಯೊಂದಿಗೆ ಚಿತ್ರಿಸಲಾದ ಸ್ಫಿಂಕ್ಸ್ ಮೂರ್ತಿಯು ಶಕ್ತಿ, ಬುದ್ಧಿವಂತಿಕೆ ಮತ್ತು ರಕ್ಷಣೆಯನ್ನು ಸಂಕೇತಿಸುತ್ತದೆ. ಇದನ್ನು ಹೆಚ್ಚಾಗಿ ರಾಜಮನೆತನ ಮತ್ತು ಸೂರ್ಯ ದೇವರೊಂದಿಗೆ ಸಂಬಂಧಿಸಲಾಗಿದೆ. ನಿರ್ದಿಷ್ಟವಾಗಿ ಗೀಜಾದ ಗ್ರೇಟ್ ಸ್ಫಿಂಕ್ಸ್ ಅನ್ನು ಫೇರೋನ ಶಕ್ತಿ ಮತ್ತು ದೈವಿಕ ಸಂಪರ್ಕದ ರಕ್ಷಕ ಮತ್ತು ಪ್ರಾತಿನಿಧ್ಯವಾಗಿ ನೋಡಲಾಗುತ್ತದೆ.

ಈ ಬೃಹತ್ ಸ್ಮಾರಕಗಳ ಮುಂದೆ ನಿಂತು, ಯಾರೊಬ್ಬರೂ ಏನೂ ಮಾಡಲು ಸಾಧ್ಯವಿಲ್ಲ. ಜೊತೆಗೆ ವಿನಮ್ರತೆಯನ್ನು, ತನ್ಮಯತೆಯನ್ನು ಅನುಭವಿಸದೆ ಇರಲು ಸಾಧ್ಯವಿಲ್ಲ. ಇವು ಕೇವಲ ಅವಶೇಷಗಳಲ್ಲ-ಅವು ಜ್ಞಾನ, ನಂಬಿಕೆ ಮತ್ತು ಮರಣಾನಂತರದ ಪ್ರಯಾಣವನ್ನು ಆಳವಾಗಿ ಗೌರವಿಸುವ ನಾಗರಿಕತೆಯ ಜೀವಂತ ಪುರಾವೆಗಳಾಗಿವೆ.

ಈಜಿಪ್ಟ್ ನನಗೆ ನೆನಪುಗಳನ್ನು ಮಾತ್ರ ಉಳಿಸಲಿಲ್ಲ. ಅದು ನನಗೆ ವಿಶಾಲವಾದ, ಕಾಲಾತೀತ ಮತ್ತು ಆಳವಾದ ಮಾನವೀಯತೆಯೊಂದಿಗಿನ ಸಂಪರ್ಕದ ಭಾವನೆಯನ್ನು ನೀಡಿತು. ಇದು ಸವಾಲುಗಳನ್ನು ಒಡ್ಡುವ, ಮೋಡಿ ಮಾಡುವ, ಅತಿಶಯೋಕ್ತಿಗೊಳಿಸುವ ಮತ್ತು ಸ್ಫೂರ್ತಿ ನೀಡುವ ಭೂಮಿ. ಇತಿಹಾಸ, ಸಂಸ್ಕೃತಿ ಪ್ರೀತಿಸುವ ಯಾರಿಗಾದರೂ ಈಜಿಪ್ಟ್ ಕೇವಲ ಭೇಟಿ ನೀಡುವ ಸ್ಥಳವಲ್ಲ-ಇದು ಹೃದಯವನ್ನು ತೆರೆದಿಟ್ಟುಕೊಂಡು ಅನುಭವಿಸುವ ಸ್ಥಳವಾಗಿದೆ.

❖



124 ಜಲವರ್ಣ ಕಲಾಕೃತಿಗಳನ್ನು ಒಳಗೊಂಡಿರುವ 'ಶ್ರೀ ಗುರುಬಸವ ಚಿತ್ರಚರಿತ' ಸಂಪುಟದೊಂದಿಗೆ ಸಿ.ಬಿ. ಸೋಮಶೆಟ್ಟಿ

ಕುಂಚದಲ್ಲಿ ಬಸವಣ್ಣನ ಜೀವನ ದರುಶನ

8ನೇ ಪುಟದಿಂದ...

ಅದರ ಫಲವೇ 124 ಜಲವರ್ಣದ ಕಲಾಕೃತಿಗಳು. ಈ ನನ್ನ ತಪಸ್ಸಿನ ಕೆಲಸಕ್ಕೆ ಮನೆಯವರೆಲ್ಲರೂ ಕೊಟ್ಟ ಸಹಕಾರ ಪದಗಳಲ್ಲಿ ಹೇಳಲು ಆಗುವುದಿಲ್ಲ' ಎನ್ನುತ್ತಾರೆ ಸೋಮಶೆಟ್ಟಿ. ಅಂದಹಾಗೆ, ಈ ಎಲ್ಲ ಕಾರ್ಯಕ್ಕೆ ಸೋಮಶೆಟ್ಟಿ ಅವರು ಅವರ ದುಡಿಮೆಯಿಂದ ₹35 ಲಕ್ಷ ವ್ಯಯಿಸಿದ್ದಾರೆ. ಶೀಘ್ರದಲ್ಲೇ ಗ್ಯಾಲರಿಯೊಂದಿಗೆ ಪುಸ್ತಕ ಬಿಡುಗಡೆಗೆ ತಯಾರಿ ನಡೆಸಿದ್ದು, ಅದು ಕೂಡ ಬಸವತತ್ವದ ಪ್ರಕಾರವೇ ನೆರವೇರಿಸಲು ಯೋಜನೆ ರೂಪಿಸುತ್ತಿದ್ದಾರೆ.

ಸೋಮಶೆಟ್ಟಿ ಅವರು ಬೀದರ್ ಜಿಲ್ಲೆ ಹುಮನಾಬಾದ್ ತಾಲ್ಲೂಕಿನ ಹಳ್ಳಿಖೇಡ್‌ನಲ್ಲಿ (ಬಿ) ಹುಟ್ಟಿ ಬೆಳೆದವರು. ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಅಂದಿನ ಕರ್ನಾಟಕದ ಭಾಗವಾಗಿದ್ದ ಇಂದಿನ ತೆಲಂಗಾಣದ ಜಹೀರಾಬಾದ್‌ನಲ್ಲಿ ಪೂರ್ಣಗೊಳಿಸಿದರು. ಬಳಿಕ ಕರ್ನಾಟಕಕ್ಕೆ ಬಂದು ಚಿತ್ರಕಲೆ ಕೋರ್ಸ್ ಆಯ್ಕೆ ಮಾಡಿಕೊಂಡರು. ರಾಜ್ಯಕ್ಕೆ ಎರಡನೇ ರ‍್ಯಾಂಕ್ ಗಳಿಸುವುದರ ಮೂಲಕ ಗಮನ ಸೆಳೆದರು. ಅನಂತರ ಬೀದರ್‌ನ ಕರ್ನಾಟಕ ಕಾಲೇಜಿನಲ್ಲಿ ಮೊದಲ ಯತ್ನದಲ್ಲೇ ಚಿತ್ರಕಲಾ ಶಿಕ್ಷಕರಾಗಿ ಸೇರಿ, ಅಲ್ಲಿಯೇ 32 ವರ್ಷ ಸೇವೆ ಸಲ್ಲಿಸಿದರು. ಶಿಕ್ಷಕ ವೃತ್ತಿಯೊಂದಿಗೆ ಬಸವಾದಿ ಶರಣರ ಅಸಂಖ್ಯ ಕಲಾಕೃತಿಗಳನ್ನು ರಚಿಸಿಕೊಟ್ಟಿದ್ದು, ರಾಜ್ಯದ ಹಲವೆಡೆಗಳಲ್ಲಿ ಇರಿಸಲಾಗಿದೆ.

ಬಸವ ಕಲ್ಯಾಣದ ಅನುಭವ ಮಂಟಪದಲ್ಲಿರುವ ಮುಖ್ಯ ಚಿತ್ರ ಬಿಡಿಸಿದ್ದು ಇವರೇ. ಬೀದರ್ ವಿಮಾನ ನಿಲ್ದಾಣ, ಬೆಂಗಳೂರಿನ ಬಸವ ಸಮಿತಿ ಸೇರಿದಂತೆ ಹಲವೆಡೆ ಇವರು ಬಿಡಿಸಿದ ಕಲಾಕೃತಿಗಳನ್ನು ನೋಡಬಹುದು. ಇಷ್ಟೇ ಅಲ್ಲ, ದೇಶದ ವಿವಿಧೆಡೆಗಳಲ್ಲಿ ಕಲಾ ಶಿಬಿರ, ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಸೇರಿದಂತೆ ವಿವಿಧ ಗೌರವ ಸನ್ಮಾನಗಳಿಗೆ ಪಾತ್ರರಾಗಿದ್ದಾರೆ. ❖



ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಮೋಜಿನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ಅಕ್ಷರ ಪಟ್ಟಿಯಿಂದ ಎರಡು ಬೇರೆ ಬೇರೆ ಅಕ್ಷರ ತುಂಬಿ ಪದ ರಚಿಸಿ.

ಉದಾ:

H	E	N	=	HEN
H	E	R	=	HER

ಅಕ್ಷರ ಪಟ್ಟಿ

X	N	M	N	N
T	D	D	Y	D
D	R	T	M	D
X	T	D	D	N

1	M	A	
	M	A	
2	S	A	
	S	A	
3	B	A	
	B	A	
4	C	A	
	C	A	
5	D	I	
	D	I	

6	F	A	
	F	A	
7	G	E	
	G	E	
8	H	A	
	H	A	
9	K	I	
	K	I	
10	M	I	
	M	I	

ಡಶ್ಗ ಚಕ್ಕು
ಕೇಶ್ರ ಷ್ತ ಕಥೆಯ

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಸಿನಿ ಸ್ವಾರಸ್ಯ

ಇಲ್ಲಿ ಕೊಟ್ಟಿರುವ ಚಲನಚಿತ್ರಗಳ ಹೆಸರುಗಳಿಂದ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಒಂದು ಊರಿನ ಹೆಸರು ಹುಡುಕಿ

1.ಹೊಸಬೆಳಕು
2.ಶಂಕರಗುರು
3.ಭಲೇಬಸವ
4.ಶಬ್ದವೇಧಿ
5.ಪುನರ್ಜನ್ಮ
6.ರವಿಚಂದ್ರ

ಉತ್ತರ:

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅಕ್ಷರ ಆಟ

ಇಲ್ಲಿ ಕೊಟ್ಟಿರುವ ಎರಡಕ್ಷರಗಳ ಮುಂದೆ ಅಕ್ಷರಪಟ್ಟಿಯಿಂದ ಆಯ್ದು ಒಂದಕ್ಷರ ತುಂಬಿ ಅರ್ಥಬದ್ಧ ಪದ ರಚಿಸಿ

1	ಕ	ಡ	
2	ಕ	ಡ	
3	ಕ	ಡ	
4	ಕ	ಡ	
5	ಕ	ಡ	
6	ಕ	ವ	
7	ಕ	ವ	
8	ಕ	ವ	
9	ಕ	ವ	
10	ಕ	ವ	

ಅಕ್ಷರಪಟ್ಟಿ

ಲು	ಗ	ಲು	ತ	ವೆ
ಡೆ	ನ	ಚ	ಣೆ	ಲೆ


ಪದ ಸಂಕಲನ


ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ರಘು	+	ಆಲ	+	ಹಾ	=	
2	ಮರ	+	ಕೊಳೆ	+	ತೆ	=	
3	ರವಿ	+	ಸಾಟಿ	+	ಕೋ	=	
4	ನಗ	+	ರಜ	+	ಸಾ	=	
5	ಗಾಡಿ	+	ಆರು	+	ಟ	=	

ಗುಂಡನನ್ನೇ ಹೆದರಿಸಿದ ಇಲಿ!

ಗುಂಡನ ಮನೆಯೊಳಗೊಂದು ತುಂಟ ಇಲಿ ಸೇರಿಕೊಂಡಿತ್ತು. ಅಡುಗೆ ಕೋಣೆಯಲ್ಲಿಟ್ಟಿದ್ದ ತಿಂಡಿಗಳನ್ನೆಲ್ಲಾ ತಿನ್ನುತ್ತಿತ್ತು. ಇದರಿಂದ ಬೇಸತ್ತ ಗುಂಡ ಒಂದು ದಿನ ಕೋಲು ತೆಗೆದುಕೊಂಡು ಆ ಇಲಿಯನ್ನು ಅಟ್ಟಾಡಿಸಿಕೊಂಡು ಹೋದ. ಇಲಿ ಬಿಲ ಸೇರಿತು. ಕೊಂಚ ಯೋಚಿಸಿದ ಗುಂಡ ಇಲಿಯನ್ನು ಹೆದರಿಸಲೆಂದು ಅಲ್ಲೇ ಗೋಡೆಗೆ ನೇತು ಹಾಕಿದ್ದ ಬೆಕ್ಕಿನ ಚಿತ್ರವನ್ನು ತೆಗೆದುಕೊಂಡು ಬೆಕ್ಕಿನಂತೆ ಕೂಗಿದ. ಸ್ವಲ್ಪ ಹೊತ್ತು ಇಲಿಯ ಸುಳಿವು ಇರಲಿಲ್ಲ. ಕೆಲ ಹೊತ್ತಿನ ಬಳಿಕ ಇಲಿ ನಾಯಿಯ ಚಿತ್ರವೊಂದನ್ನು ಹಿಡಿದು ಬೌ ಬೌ ಎನ್ನುತ್ತಾ ಬಿಲದಿಂದ ಹೊರಬಂದಾಗ ಗುಂಡ ಹೆದರಿ ಓಡಿದ.









ಗಣಿತದಲ್ಲಿ ಗರ್ದಿ ಗಮ್ಮತ್ತು

+ – × % ÷

ಮ್ಯಾಥೆಮ್ಯಾಜಿಕ್

1ರಿಂದ 20ರೊಳಗಿನ ಒಂದು ಸಂಖ್ಯೆ ಬರೆದುಕೊಳ್ಳಿ. ಅದಕ್ಕೆ 20 ಕೂಡಿಸಿರಿ. ಉತ್ತರಕ್ಕೆ 2ರಿಂದ ಗುಣಿಸಿ, 8 ಕಳೆಯಿರಿ. ಬಂದ ಉತ್ತರಕ್ಕೆ 2ರಿಂದ ಭಾಗಿಸಿ. ಭಾಗಲಬ್ಧದಲ್ಲಿ ಮೊದಲು ಬರೆದುಕೊಂಡಿದ್ದ ಸಂಖ್ಯೆ ಕಳೆಯಿರಿ. ಉತ್ತರ ಯಾವಾಗಲೂ 16 ಬರುತ್ತದೆ.

ಉದಾ: 7 ಬರೆದುಕೊಂಡ ಸಂಖ್ಯೆ

7+20=27	
27X2=54	
54-8=46	
46/2=23	
23-7=16	

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಕೆಳಗಿರುವ ಇಮೇಲ್‌ಗೆ ಕಳುಹಿಸಿ...

majakoora@prajavani.co.in



ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ:
1.ಸರಸಮಯ
2.ಉಗುರುಸುತ್ತು
3.ಕಡಲೆಬೀಜ 4.ಪ್ರಗತಿಪರ
5.ಸಾಗರ ಆಳ
ಜಾಣಪದ ಆಟ:
1.ಲೀಲಾವತಿ 2.ಅಶೋಕ
3.ಭವ್ಯ 4.ಆರತಿ 5.ಕಲ್ಪನಾ
6.ಕಾಂಚನ 7.ಅನಂತನಾಗ
8.ಶರಣ 9.ಶೃತಿ 10.ಅಂಬಿಕಾ
11.ಜಯಂತಿ 12.ಭಾರತಿ
ಸಣ್ಣಾಟ: 29X5 =



ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಭುವನ್ ಎಸ್.ಗುಡಿಯಾಳ
ಗಬ್ಬೂರು



ಅಭಿಷೇಕ್ ಎಂ.
ಪುತ್ತೂರು



ವಿನಯ್ ಎಂ.ರೇವಣ್ಣವರ
ವಿಜಯಪುರ



ಸಂಸ್ಕೃತಿ ಎಸ್.ಆರ್.
ಮಡಿಕೇರಿ



ವಿಶ್ವರಾಜ ಜೋಡಟ್ಟಿ
ಜಮಖಂಡಿ



ನಂದಿತಾ ಎಸ್.ಎಂ.
ಬೆಂಗಳೂರು

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹620
12 ಕ್ಕೆ	₹80
ಮೈಸೂರು: 100 ಕ್ಕೆ	₹625

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹225-572
ದ್ವಿತಳಿ (ಬಿ.ವಿ)	₹333-688

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹26100-26188
ತುಮಕೂರು	₹24500-29600

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1405 (1405)
ಸೋಯಾ (ರಿಫೈನ್ಡ್)	₹1210 (1210)
ಸೂರ್ಯಕಾಂತಿ (ರಿಫೈನ್ಡ್)	₹1350 (1350)
ಪಾಮೋಲಿನ್	₹1170 (1170)

ಅಮೆರಿಕಕ್ಕೆ ಭಾರತದಿಂದ ಪ್ರತಿಸುಂಕ?

ಅಮೆರಿಕದ ಸುಂಕಕ್ಕೆ ಪ್ರತಿಯಾಗಿ ಭಾರತದ ಕ್ರಮ, ಡಬ್ಲ್ಯುಟಿಒ ಸಂಘಟನೆಗೆ ಮಾಹಿತಿ

ನವದೆಹಲಿ (ಪಿಟಿಐ): ಭಾರತದಿಂದ ಬರುವ ಆಟೊಮೊಬೈಲ್ ಬಿಡಿಭಾಗಗಳಿಗೆ ಅಮೆರಿಕವು ರಕ್ಷಣಾತ್ಮಕ ಕ್ರಮಗಳ ಹೆಸರಿನಲ್ಲಿ ಸುಂಕ ಹೇರಿರುವುದಕ್ಕೆ ಪ್ರತೀಕಾರವಾಗಿ ಅಮೆರಿಕದ ಸರಕುಗಳ ಮೇಲೆ ತಾನೂ ಸುಂಕ ಹೇರುವ ಪ್ರಸ್ತಾವವನ್ನು ಭಾರತವು ಡಬ್ಲ್ಯುಟಿಒದಲ್ಲಿ ಇರಿಸಿದೆ.



'ವಿನಾಯಿತಿಗಳನ್ನು ಹಾಗೂ ಇತರ ಬಾಧ್ಯತೆಗಳನ್ನು ಅಮಾನತಿನಲ್ಲಿ ಇರಿಸುವ ಪ್ರಸ್ತಾವಿತ ಕ್ರಮವು ಅಮೆರಿಕದಿಂದ ಬರುವ ಆಯ್ದ ಉತ್ಪನ್ನಗಳ ಮೇಲೆ ಸುಂಕ ಹೆಚ್ಚಳದ ರೂಪವನ್ನು ಪಡೆಯಲಿದೆ' ಎಂದು ಭಾರತದ ಮನವಿ ಆಧರಿಸಿ ಡಬ್ಲ್ಯುಟಿಒ ಹೊರಡಿಸಿರುವ ಅಧಿಸೂಚನೆಯಲ್ಲಿ ಹೇಳಲಾಗಿದೆ.

ಡಬ್ಲ್ಯುಟಿಒದ ಸರಕು ವ್ಯಾಪಾರ ಮಂಡಳಿಗೆ ಭಾರತ ನೀಡಿರುವ ಮಾಹಿತಿಯಲ್ಲಿ, ಅಮೆರಿಕದಿಂದ ಬರುವ ಸರಕುಗಳಿಗೆ ನೀಡಿರುವ ವಿನಾಯಿತಿಗಳನ್ನು ಅಮಾನತಿನಲ್ಲಿ ಇರಿಸುವ ಬಗ್ಗೆ ವಿವರಿಸಲಾಗಿದೆ.

ಸುಂಕ ಹೆಚ್ಚಳದ ರೂಪದಲ್ಲಿ ರಕ್ಷಣಾತ್ಮಕ ಕ್ರಮವನ್ನು ಅಮೆರಿಕವು ಮಾರ್ಚ್ 26ರಂದು ಅಂಗೀಕರಿಸಿದೆ. ಪ್ರಯಾಣಿಕ ವಾಹನಗಳು ಹಾಗೂ ಲಘು ಟ್ರಕ್ಕುಗಳ ಮೇಲೆ ಮತ್ತು ಕೆಲವು ಆಟೊಮೊಬೈಲ್ ಬಿಡಿಭಾಗಗಳ ಮೇಲೆ ಅವುಗಳ ಮೌಲ್ಯದ ಮೇಲೆ ಶೇಕಡ 25ರಷ್ಟು ತೆರಿಗೆ ಹೆಚ್ಚಿಸುವುದು ಈ ಕ್ರಮ.

ಈ ಕ್ರಮವು ಆಟೊಮೊಬೈಲ್ ಬಿಡಿಭಾಗಗಳ ಮೇಲೆ ಮೇ 3ರಿಂದ ಜಾರಿಗೆ ಬಂದಿದೆ. ಅನಿರ್ದಿಷ್ಟ ಅವಧಿಯವರೆಗೆ ಇದು ಜಾರಿಯಲ್ಲಿ ಇರಲಿದೆ. ಈ ಕ್ರಮವನ್ನು ಅಮೆರಿಕವು ಡಬ್ಲ್ಯುಟಿಒಗೆ ತಿಳಿಸಿಲ್ಲ. ಅಮೆರಿಕ ತೆಗೆದುಕೊಂಡಿರುವ ಕ್ರಮವು ಗ್ಯಾಟ್ ಒಪ್ಪಂದ ಮತ್ತು ಇತರ ಒಪ್ಪಂದಗಳಿಗೆ ಅನುಗುಣವಾಗಿ ಇಲ್ಲ ಎಂದು ಭಾರತ ಹೇಳಿದೆ.

ಅಮೆರಿಕದ ಸುಂಕಗಳ ವಿಚಾರವಾಗಿ ಸಮಾಲೋಚನೆಗೆ ಭಾರತ ಕೋರಿದ್ದರೂ ಅದು ನಡೆದಿಲ್ಲ. ಹೀಗಾಗಿ, 'ವಿನಾಯಿತಿಗಳನ್ನು ಮತ್ತು ಇತರ ಹೊಣೆಗಾರಿಕೆಗಳನ್ನು ಅಮಾನತಿನಲ್ಲಿ ಇರಿಸುವ ಹಕ್ಕು ಭಾರತಕ್ಕೆ ಇದೆ' ಎಂದು ಡಬ್ಲ್ಯುಟಿಒ ಅಧಿಸೂಚನೆಯಲ್ಲಿ ಹೇಳಲಾಗಿದೆ.

ವ್ಯಾಪಾರ ಒಪ್ಪಂದವನ್ನು ಬಲಪಡಿಸುವ ಉದ್ದೇಶದೊಂದಿಗೆ ಭಾರತ ಮತ್ತು ಅಮೆರಿಕವು ಮಧ್ಯಂತರ ವ್ಯಾಪಾರ ಒಪ್ಪಂದದ ಬಗ್ಗೆ ಮಾತುಕತೆ ನಡೆಸುತ್ತಿರುವ ಸಂದರ್ಭದಲ್ಲಿಯೇ ಈ ಬೆಳವಣಿಗೆ ನಡೆದಿದೆ.

'ಮಾತುಕತೆ ಮೇಲೆ ಪರಿಣಾಮ ಬೀರದು'

ಅಮೆರಿಕದ ಸರಕುಗಳಿಗೆ ಪ್ರತಿಸುಂಕ ವಿಧಿಸುವ ಹಕ್ಕುಗಳನ್ನು ಕಾಯ್ದಿರಿಸಿಕೊಳ್ಳುವ ಭಾರತದ ನಿರ್ಧಾರವು ಅಮೆರಿಕದ ಜೊತೆ ನಡೆಯುತ್ತಿರುವ ವ್ಯಾಪಾರ ಒಪ್ಪಂದದ ಮಾತುಕತೆಯ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಡಬ್ಲ್ಯುಟಿಒಗೆ ನೀಡಿರುವ ಮಾಹಿತಿಯು ಭಾರತದ ಹಕ್ಕನ್ನು ಕಾಯ್ದಿರಿಸಿಕೊಳ್ಳುವ ದಿಸೆಯಲ್ಲಿ ಇರಿಸಿರುವ ಅಗತ್ಯ ಕ್ರಮ. ಅದು ಈಗ ನಡೆಯುತ್ತಿರುವ ಮಾತುಕತೆಗಳ ಮೇಲೆ ಪರಿಣಾಮ ಬೀರುವುದಿಲ್ಲ' ಎಂದು ಅವರು ಹೇಳಿದ್ದಾರೆ.

ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮೊದಲ ಹಂತವನ್ನು ಈ ವರ್ಷದ ಸೆಪ್ಟೆಂಬರ್, ಅಕ್ಟೋಬರ್ ವೇಳೆಗೆ ಸಾಧ್ಯವಾಗಿಸುವ ಉದ್ದೇಶವು ಎರಡೂ ದೇಶಗಳಿಗೆ ಇದೆ. ಮೊದಲ ಹಂತದ ಒಪ್ಪಂದ ಸಾಧ್ಯವಾಗುವುದಕ್ಕೂ ಮೊದಲು, ಮಧ್ಯಂತರ ವ್ಯಾಪಾರ ಒಪ್ಪಂದವನ್ನು ಮಾಡಿಕೊಳ್ಳಲು ಎರಡೂ ದೇಶಗಳ ನಡುವೆ ಮಾತುಕತೆ ನಡೆಯುತ್ತಿದೆ.

ದಿಢೀರ್ ಪ್ರವಾಹ, 24 ಮಂದಿ ಸಾವು

ಕೆರ್ವಿಲ್ಲೆ (ಅಮೆರಿಕ)(ಎಎಫ್‌ಪಿ): ಭಾರಿ ಮಳೆಯಿಂದಾಗಿ ಟೆಕ್ಸಾಸ್ ನಗರದಲ್ಲಿ ದಿಢೀರ್ ಪ್ರವಾಹ ಪರಿಸ್ಥಿತಿ ಸೃಷ್ಟಿಯಾಗಿದ್ದು, ಕನಿಷ್ಠ 24 ಮಂದಿ ಮೃತಪಟ್ಟಿದ್ದಾರೆ.

ನದಿ ತೀರದ ಬೇಸಿಗೆ ಶಿಬಿರದಿಂದ ನಾಪತ್ತೆಯಾಗಿರುವ 20 ಬಾಲಕಿಯರಿಗಾಗಿ ಶೋಧ ನಡೆಸಲಾಗುತ್ತಿದೆ.

ರಕ್ಷಣಾ ತಂಡವು ಅತಂತ್ರರಾಗಿ ಸಿಲುಕಿರುವ ಜನರನ್ನು ಪತ್ತೆ ಮಾಡಲು ಯತ್ನಿಸುತ್ತಿದೆ. 500 ಸಿಬ್ಬಂದಿ ಮತ್ತು 14 ಹೆಲಿಕಾಪ್ಟರ್‌ಗಳ ಮೂಲಕ ರಕ್ಷಣಾ ಕಾರ್ಯಾಚರಣೆ ನಡೆಸಲಾಗುತ್ತಿದೆ' ಎಂದು ಅಧಿಕಾರಿಗಳು ತಿಳಿಸಿದರು.

ಪ್ರಜಾವಾಣಿ


ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಏಳನೇ ವರ್ಷದ ಸವಿನೆನಪು



ಶ್ರೀ ಎಂ. ಗೋವಪ್ಪನವರು

ಜನನ: 26.05.1946 ನಿಧನ: 06.07.2018

ಕಂಬದಹಳ್ಳಿ, ಶಿಡ್ಲಘಟ್ಟ (ತಾ), ಚಿಕ್ಕಬಳ್ಳಾಪುರ (ಜಿ)

ನೀವು ನಮ್ಮನ್ನಗಲಿ ಏಳು ವರ್ಷ ಕಳೆದರೂ ನಿಮ್ಮ ಸೌಜನ್ಯ, ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಅಚ್ಚಳಿಯದೇ ಉಳಿದಿದೆ.

ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ, ಪತ್ನಿ, ಮಕ್ಕಳು, ಅಳಿಯಂದಿರು ಹಾಗೂ ಕುಟುಂಬ ವರ್ಗದವರು

ಅಡಿಕೆ ಧಾರಣೆ					
ಬೆಳ್ತಂಗಡಿ		ಹೊಳಲ್ಕೆರೆ		ಮಂಗಳೂರು	
ಕೋಕ	24000-26000	ರಾಶಿ	23000-23000	ಕೋಕ	16000-27000
ಹೊಸತು	26500-47500	ಸಿಪ್ಪೆಗೋಟು	12000-12000	ಹೊಸತು	26000-33500
		ಕುಂದಾಪುರ		ಪುತ್ತೂರು	
ಹಳತು	47500-52500	ಹಳೆಚಾಲಿ	40000-52500	ಕೋಕ	20000-27500
ಇತರೆ	26500-3300	ಹೊಸಚಾಲಿ	40000-47500	ಹೊಸತು	26000-47500

ಕಚ್ಚಾ ತೈಲ ಉತ್ಪಾದನೆ ಹೆಚ್ಚಿಸಲು ನಿರ್ಧಾರ

ಲಂಡನ್ (ಎಎಫ್‌ಪಿ/ರಾಯಿಟರ್ಸ್): ಕಚ್ಚಾ ತೈಲ ಉತ್ಪಾದನೆಯನ್ನು ಆಗಸ್ಟ್ ತಿಂಗಳಲ್ಲಿ ಪ್ರತಿದಿನಕ್ಕೆ 5.48 ಲಕ್ಷ ಬ್ಯಾರೆಲ್‌ನಷ್ಟು ಹೆಚ್ಚಿಸಲಾಗುತ್ತದೆ ಎಂದು ಸೌದಿ ಅರೇಬಿಯಾ, ರಷ್ಯಾ ಮತ್ತು 'ಒಪೆಕ್ +' ಒಕ್ಕೂಟದ ಆರು ದೇಶಗಳು ಶನಿವಾರ ತಿಳಿಸಿವೆ.

ಒಕ್ಕೂಟವು ಕಚ್ಚಾ ತೈಲ ಉತ್ಪಾದನೆಯನ್ನು ದಿನಕ್ಕೆ 4.11 ಲಕ್ಷ ಬ್ಯಾರೆಲ್‌ಗಳಷ್ಟು ಹೆಚ್ಚಿಸಬಹುದು ಎಂದು ತಜ್ಞರು ಅಂದಾಜಿಸಿದ್ದರು. ಆದರೆ ಈಗಿನ ತೀರ್ಮಾನವು ಈ ಅಂದಾಜಿಗಿಂತ ಹೆಚ್ಚಿನದಾಗಿದೆ.

'ಜಾಗತಿಕ ಆರ್ಥಿಕ ಮುನ್ನೋಟ ಸ್ಥಿರವಾಗಿ ಇರುವುದು, ಮಾರುಕಟ್ಟೆಯ ಮೂಲಭೂತ ಅಂಶಗಳು ಸುಸ್ಥಿತಿಯಲ್ಲಿ ಇರುವುದು' ಉತ್ಪಾದನೆ ಹೆಚ್ಚಿಸುವ ತೀರ್ಮಾನಕ್ಕೆ ಕಾರಣವಾದವು ಎಂದು ಒಕ್ಕೂಟದ ಹೇಳಿಕೆ ತಿಳಿಸಿದೆ.

12 ದೇಶಗಳ ಒಕ್ಕೂಟವಾಗಿರುವ 'ಒಪೆಕ್ +' 2022ರಲ್ಲಿ ಕಚ್ಚಾ ತೈಲ ಉತ್ಪಾದನೆ ಕಡಿತಕ್ಕೆ ಮುಂದಾಯಿತು. ತೈಲದ ಬೆಲೆಯು ಹೆಚ್ಚಳ ಕಾಣುವಂತೆ ಮಾಡುವುದು ಅವುಗಳ ಉದ್ದೇಶ ಆಗಿತ್ತು. ಆದರೆ ನಿಲುವು ಬದಲಿಸಿಕೊಂಡ ಎಂಟು ರಾಷ್ಟ್ರಗಳು, ಮೇ ತಿಂಗಳಿನಿಂದ ಉತ್ಪಾದನೆ ಹೆಚ್ಚು ಮಾಡುವುದಾಗಿ ಘೋಷಿಸಿದ್ದವು.

ಮುಂಬೈ ಧಾರಣೆ (ಶೇಂಗಾ) 05-07-2025	
ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	7900-8000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1415 (1415)
ಒಂದು ವಾರದ ಡೆಲಿವರಿ	1410 (1410)
ಪಾಮ್ ವಾರದ ಡೆಲಿವರಿ	1168 (1168)
ಸೂರ್ಯಕಾಂತಿ ಎಣ್ಣೆ ಕಚ್ಚಾ	1265 (1265)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	96,700 (96,700)
ಬೆಳ್ಳಿ ಕೆ.ಜಿಗೆ	1,07,650 (1,07,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸಂಕ್ಷಿಪ್ತ ಸುದ್ದಿ

ರಷ್ಯಾ: ಒಂಬತ್ತು ದಿನಗಳ ಭಾರತ ಉತ್ಸವಕ್ಕೆ ಚಾಲನೆ



ಮಾಸ್ಕೊ (ಪಿಟಿಐ): ಭಾರತದ ವಿವಿಧ ರಾಜ್ಯಗಳಲ್ಲಿನ ಸಾಂಸ್ಕೃತಿಕ ವೈವಿಧ್ಯತೆಯನ್ನು ಪ್ರತಿಬಿಂಬಿಸುವ ಒಂಬತ್ತು ದಿನಗಳ 'ಭಾರತ ಉತ್ಸವ'ಕ್ಕೆ ರಷ್ಯಾದ ಆಡಳಿತ ಕಚೇರಿ ಕ್ರೆಮ್ಲಿನ್ ಬಳಿ ಶನಿವಾರ ಚಾಲನೆ ದೊರೆಯಿತು.

ಭಾರತದ ರಾಯಭಾರ ಕಚೇರಿ ಮತ್ತು ರಷ್ಯಾದ ಪ್ರವಾಸೋದ್ಯಮ ಸಚಿವಾಲಯ ಜಂಟಿಯಾಗಿ ಈ ಉತ್ಸವ ಆಯೋಜಿಸಿವೆ. ಕ್ರೆಮ್ಲಿನ್‌ಗೆ ಸಮೀಪದ ಮನ್ಯೆಜ್‌ನಾಯ್ ಸ್ಕ್ವೇರ್‌ನಲ್ಲಿ ನಡೆಯುತ್ತಿರುವ ಉತ್ಸವದಲ್ಲಿ ಭಾರತೀಯ ಆಹಾರ ಖಾದ್ಯಗಳು ಮತ್ತು ಕರಕುಶಲ ವಸ್ತುಗಳ ಮಳಿಗೆಗಳನ್ನು ತೆರೆಯಲಾಗಿದೆ.

'ಭಾರತ ಉತ್ಸವ'ಕ್ಕೆ ಚಾಲನೆ ನೀಡಿದ ರಾಯಭಾರಿ ವಿನಯ್ ಕುಮಾರ್ ಮಾತನಾಡಿ, 'ಒಂಬತ್ತು ದಿನಗಳ ಈ ಉತ್ಸವದಲ್ಲಿ ದೆಹಲಿ, ಮಹಾರಾಷ್ಟ್ರ, ಒಡಿಶಾ, ತಮಿಳುನಾಡು ಮತ್ತು ನಾಗಾಲ್ಯಾಂಡ್ ರಾಜ್ಯಗಳ ನೃತ್ಯ ಮತ್ತು ಕಲಾ ಪ್ರಕಾರಗಳ ಮೂಲಕ ವಿಶಿಷ್ಟ ಸಂಸ್ಕೃತಿ ಮತ್ತು ಸಂಪ್ರದಾಯದ ಅನಾವರಣ ಆಗಲಿವೆ' ಎಂದರು.

ಮಾಸ್ಕೊ ನಗರದ ಪ್ರವಾಸೋದ್ಯಮ ಸಮಿತಿಯ ಉಪ ಅಧ್ಯಕ್ಷ ಬುಲಾಟ್ ನೂರ್ಮುಖಾನೋವ್ ಮಾತನಾಡಿ, 'ಕ್ರೆಮ್ಲಿನ್‌ಗೆ ಇಷ್ಟು ಸಮೀಪದಲ್ಲಿ ನಡೆಯುತ್ತಿರುವ ಈ ಉತ್ಸವವು ರಷ್ಯಾ ಮತ್ತು ಭಾರತದ ನಡುವೆ ಎಷ್ಟು ಆಳವಾದ ಸಂಬಂಧ ಇದೆ ಎಂಬುದನ್ನು ಪ್ರತಿಬಿಂಬಿಸುತ್ತದೆ. ಎರಡೂ ದೇಶಗಳ ನಡುವಿನ ಜನರ ಮತ್ತು ನಾಯಕರ ನಡುವಿನ ಬಾಂಧವ್ಯ ಎಷ್ಟು ಗಾಢವಾಗಿದೆ ಎಂಬುದನ್ನೂ ಇದು ತೋರಿಸುತ್ತದೆ' ಎಂದು ಹೇಳಿದರು.

ಅತ್ಯಾಚಾರ: ವ್ಯಕ್ತಿಗೆ ಜೀವಾವಧಿ ಶಿಕ್ಷೆ

ಲಂಡನ್ (ಪಿಟಿಐ): ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ಭಾರತೀಯ ಮೂಲದ ನವರೂಪ್ ಸಿಂಗ್ ಎಂಬಾತನಿಗೆ ಲಂಡನ್ ಕೋರ್ಟ್ ಶುಕ್ರವಾರ ಜೀವಾವಧಿ ಶಿಕ್ಷೆ ವಿಧಿಸಿದೆ.

13 ವರ್ಷದ ಬಾಲಕಿ ಮೇಲೆ ಅತ್ಯಾಚಾರ, ಇನ್ನೊಬ್ಬ ಬಾಲಕಿಗೆ ಲೈಂಗಿಕ ದೌರ್ಜನ್ಯ, ಮಹಿಳೆಯೊಬ್ಬರ ಮೇಲೆ ಅತ್ಯಾಚಾರಕ್ಕೆ ಯತ್ನ ಸೇರಿದಂತೆ ನವರೂಪ್ ಸಿಂಗ್ ವಿರುದ್ಧ ಮೂರು ಪ್ರಕರಣಗಳು ದಾಖಲಾಗಿದ್ದವು. ವಿಧಿವಿಜ್ಞಾನ ಸಾಕ್ಷ್ಯಗಳು ಹಾಗೂ ಸಿಸಿಟಿವಿ ದೃಶ್ಯ ಆಧರಿಸಿ ಲಂಡನ್ ಪೊಲೀಸರು ಆರೋಪಿಯನ್ನು 2024ರ ಅಕ್ಟೋಬರ್‌ನಲ್ಲಿ ಬಂಧಿಸಿದ್ದರು. 'ಈ ಪ್ರಕರಣಗಳಲ್ಲಿ ಧೈರ್ಯದಿಂದ ಮುಂದೆ ಬಂದು ದೂರು ದಾಖಲಿಸಿದ ಸಂತ್ರಸ್ತರು ಮತ್ತು ಅವರ ಕುಟುಂಬದವರನ್ನು ಅಭಿನಂದಿಸುವುದಾಗಿ' ಮುಖ್ಯ ತನಿಖಾಧಿಕಾರಿ ಸೆನ್ ಲಿಂಚ್ ಹೇಳಿದ್ದಾರೆ.

ಹಫೀಜ್ ಹಸ್ತಾಂತರಕ್ಕೆ ಪಾಕಿಸ್ತಾನ ಆಕ್ಷೇಪವಿಲ್ಲ: ಬಿಲಾವಲ್



ಬಿಲಾವಲ್ ಭುಟ್ಟೋ

ಇಸ್ಲಾಮಾಬಾದ್ (ಪಿಟಿಐ): 'ಭಾರತದೊಂದಿಗೆ ವಿಶ್ವಾಸ ಮೂಡಿಸುವ ನಿಟ್ಟಿನಲ್ಲಿ ಆ ದೇಶಕ್ಕೆ ಬೇಕಿರುವ ವ್ಯಕ್ತಿಗಳನ್ನು ಹಸ್ತಾಂತರ ಮಾಡುವಲ್ಲಿ ಪಾಕಿಸ್ತಾನದ ಯಾವುದೇ ಆಕ್ಷೇಪಗಳಿಲ್ಲ' ಎಂದು ವಿದೇಶಾಂಗ ಇಲಾಖೆ ಮಾಜಿ ಸಚಿವ ಬಿಲಾವಲ್ ಭುಟ್ಟೋ ಜರ್ದಾರಿ ಹೇಳಿದ್ದಾರೆ.

ಅಲ್ ಜಝೀರಾ ಸುದ್ದಿ ವಾಹಿನಿಗೆ ಶುಕ್ರವಾರ ನೀಡಿದ ಸಂದರ್ಶನದಲ್ಲಿ ಪಾಕಿಸ್ತಾನ ಪೀಪಲ್ಸ್ ಪಾರ್ಟಿ ಅಧ್ಯಕ್ಷರೂ ಆದ ಬಿಲಾವಲ್, ಲಷ್ಕರ್ – ಎ–ತಯಬಾ (ಎಲ್‌ಇಟಿ) ಮುಖ್ಯಸ್ಥ ಹಫೀಜ್ ಸಯೀದ್ ಮತ್ತು ಜೈಷ್ – ಎ – ಮೊಹಮ್ಮದ್ (ಜೆಇಎಂ) ಮುಖ್ಯಸ್ಥ ಮಸೂದ್ ಅಜರ್ ಹಸ್ತಾಂತರ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ್ದಾರೆ. 'ಇದೊಂದು ಸಂಭವನೀಯ ಸಮ್ಮತಿ ಮತ್ತು ಭಾರತದೊಂದಿಗಿನ ಉತ್ತಮ ನಂಬಿಕೆಯ ಸ್ನೇಹಪೂರ್ವಕ ನಡೆ ಎಂದು ಭಾವಿಸಿದ್ದೇನೆ' ಎಂದು ಉತ್ತರಿಸಿರುವುದಾಗಿ 'ಡಾನ್' ಪತ್ರಿಕೆ ವರದಿ ಮಾಡಿದೆ.

ಬಿಐಎಸ್ ಪ್ರಮಾಣಿತ ಹೆಲ್ಮೆಟ್‌ಗಳ ಬಳಕೆಗೆ ನಿರ್ದೇಶನ

ಕಳಪೆ ಹೆಲ್ಮೆಟ್: ಕಠಿಣ ಕ್ರಮಕ್ಕೆ ಸೂಚನೆ



ನವದೆಹಲಿ (ಪಿಟಿಐ): ಕಳಪೆ ಗುಣಮಟ್ಟದ ಹೆಲ್ಮೆಟ್ ತಯಾರಿಸುವವರು ಹಾಗೂ ಅವುಗಳನ್ನು ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಕೇಂದ್ರ ಸರ್ಕಾರವು ರಾಜ್ಯಗಳಿಗೆ ಸೂಚನೆ ನೀಡಿದೆ. ದ್ವಿಚಕ್ರ ವಾಹನ ಸವಾರರ ಸುರಕ್ಷತೆ ಯನ್ನು ಖಾತರಿಪಡಿಸುವ ಉದ್ದೇಶದಿಂದ ಈ ಕ್ರಮ ಆಗಬೇಕು ಎಂದು ಹೇಳಿದೆ.

'ಬಿಐಎಸ್ ಪ್ರಮಾಣಿತ ಹೆಲ್ಮೆಟ್‌ಗಳನ್ನು ಮಾತ್ರವೇ ಬಳಕೆ ಮಾಡುವಂತೆ ಗ್ರಾಹಕ ವ್ಯವಹಾರಗಳ ಇಲಾಖೆ ಹಾಗೂ ಭಾರತೀಯ ಮಾನಕ ಬ್ಯೂರೊ (ಬಿಐಎಸ್) ಮನವಿ ಮಾಡುತ್ತಿವೆ' ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಬಿಐಎಸ್ ಪ್ರಮಾಣಪತ್ರ ಇಲ್ಲದ ಹೆಲ್ಮೆಟ್ ತಯಾರಿಕೆ ಮತ್ತು ಮಾರಾಟದ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಇಲಾಖೆ ಆಗ್ರಹಿಸಿದೆ ಎಂದು ಕೂಡ ಪ್ರಕಟಣೆಯಲ್ಲಿ ಹೇಳಲಾಗಿದೆ. 'ದೇಶದಲ್ಲಿ 21 ಕೋಟಿಗೂ ಹೆಚ್ಚು ದ್ವಿಚಕ್ರ ವಾಹನಗಳಿವೆ. ಹೀಗಿರುವಾಗ, ಸವಾರರ ಸುರಕ್ಷತೆಯು ಬಹಳ ಮುಖ್ಯವಾಗುತ್ತದೆ' ಎಂದು ಅದು ಹೇಳಿದೆ.

ಬಿಐಎಸ್ ಗುಣಮಟ್ಟಗಳಿಗೆ ಅನುಗುಣವಾಗಿ ಪ್ರಮಾಣಪತ್ರ ಹೊಂದಿರುವ, ಐಎಸ್‌ಐ ಗುರುತು ಇರುವ ಹೆಲ್ಮೆಟ್‌ಗಳನ್ನು ಮಾತ್ರವೇ ಬಳಕೆ ಮಾಡಬೇಕು ಎಂಬ ನಿಯಮವು 2021ರಿಂದ ಜಾರಿಯಲ್ಲಿ ಇದೆ. ಬಿಐಎಸ್ ಪರವಾನಗಿ ಇರುವ 176 ಹೆಲ್ಮೆಟ್ ತಯಾರಕರು ದೇಶದಲ್ಲಿ ಇದ್ದಾರೆ.

'ರಸ್ತೆ ಬದಿಯಲ್ಲಿ ಮಾರಾಟ ಆಗುವ ಬಹಳಷ್ಟು ಹೆಲ್ಮೆಟ್‌ಗಳಿಗೆ ಬಿಐಎಸ್ ಪ್ರಮಾಣಪತ್ರ ಇರುವುದಿಲ್ಲ. ಇದರಿಂದಾಗಿ ಸವಾರರಿಗೆ ಅಪಾಯ ಎದುರಾಗುತ್ತದೆ, ರಸ್ತೆ ಅಘಾತಗಳಲ್ಲಿ ಹಲವರು ಪ್ರಾಣ ಕಳೆದುಕೊಂಡಿದ್ದಾರೆ' ಎಂದು ಹೇಳಿಕೆಯಲ್ಲಿ ವಿವರಿಸಲಾಗಿದೆ.

ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಈ ಹಿಂದೆ ಪತ್ರ ಬರೆದಿದ್ದ ಗ್ರಾಹಕ ವ್ಯವಹಾರಗಳ ಇಲಾಖೆಯು, ಗುಣಮಟ್ಟ ಇಲ್ಲದ ಹೆಲ್ಮೆಟ್ ತಯಾರಕರು ಹಾಗೂ ಮಾರಾಟಗಾರರ ವಿರುದ್ಧ ಕ್ರಮಕ್ಕೆ ರಾಷ್ಟ್ರವ್ಯಾಪಿ ಅಭಿಯಾನ ಆರಂಭಿಸಲು ಹೇಳಿತ್ತು.

ಈ ಅಭಿಯಾನಕ್ಕೆ ಬೆಂಬಲ ಒದಗಿಸಲು ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಜೊತೆ ನಿರಂತರವಾಗಿ ಸಂಪರ್ಕದಲ್ಲಿ ಇರಬೇಕು ಎಂದು ಬಿಐಎಸ್ ಶಾಖೆಗಳಿಗೆ ಸೂಚನೆ ನೀಡಲಾಗಿದೆ.

2ನೇ ವರ್ಷದ ಚಿರಸ್ಮರಣೆ



ಶ್ರೀ ಸಿ.ಆರ್. ಕೇಶವಮೂರ್ತಿ

ಲೇಟ್ ಶ್ರೀ ಕೆ.ರಾಮಯ್ಯ ಮತ್ತು ಲೇಟ್ ಶ್ರೀಮತಿ ಡಿ.ಶಾರದಮ್ಮನವರ ಪುತ್ರ

ಚಿಕ್ಕ ಆಡುಗೋಡಿ, ಬೆಂಗಳೂರು

ಜನನ: 16-01-1957 ನಿಧನ: 06-07-2023

ನೀವು ನಮ್ಮನಗಲಿ ಇಂದಿಗೆ ಎರಡು ವರ್ಷ ಕಳೆದರೂ, ಸದಾ ನಿಮ್ಮ ನೆನಪಿನಲ್ಲಿರುವ...

ದುಃಖತಪ್ತರು: ಧರ್ಮಪತ್ನಿ, ಮಕ್ಕಳು, ಸಹೋದರರು, ಸಹೋದರಿಯರು, ಭಾವಂದಿರು, ಅತ್ತಿಗೆಯರು, ನಾದಿನಿಯರು, ಅಳಿಯಂದಿರು, ಸೊಸೆಯಂದಿರು, ಮತ್ತು ಮೊಮ್ಮಕ್ಕಳು

ಎಸ್.ಆರ್. ಕುಟುಂಬವರ್ಗದವರು

ವೈಕುಂಠ ಸಮಾರಾಧನೆ



ಶ್ರೀ.ಮರಿಯಪ್ಪ .ಬಿ

ನಿಧನ: 27.06.2025

ತತ್ಸಂಬಂಧವಾಗಿ ವೈಕುಂಠ ಸಮಾರಾಧನೆ ಕಾರ್ಯವನ್ನು ದಿನಾಂಕ 7.7.2025ನೇ ಸೋಮವಾರ ಮೃತರ ಸ್ವಗೃಹದಲ್ಲಿ ನಡೆಸಲು ನಿಶ್ಚಯಿಸಲಾಗಿದೆ, ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ವಿಳಾಸ: #41, 13ನೇ ಅಡ್ಡರಸ್ತೆ, 4ನೇ ಮುಖ್ಯರಸ್ತೆ, ವೈಯಾಲಿಕಾವಲ್, ಬೆಂಗಳೂರು–03

90080 31578, 99001 91545

ದುಃಖತಪ್ತರು: ಶ್ರೀಮತಿ ಪುಟ್ಟಲಿಂಗಮ್ಮ, ಮಕ್ಕಳು, ಮೊಮ್ಮಕ್ಕಳು ಹಾಗು ಕುಟುಂಬದವರು

ಅರ್ಜೆಂಟೀನಾಕ್ಕೆ ಬಂದಿಳಿದ ಮೋದಿ

ದ್ವಿಪಕ್ಷೀಯ ಸಂಬಂಧ ವೃದ್ಧಿ • ಕೃಷಿ ಒಪ್ಪಂದಗಳಿಗೆ ಒತ್ತು

ಬ್ಯೂನಸ್ ಐರೀಸ್, ಅರ್ಜೆಂಟೀನಾ (ಪಿಟಿಐ): ಎರಡು ದಿನಗಳ ಪ್ರವಾಸಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಇಲ್ಲಿನ ಬ್ಯೂನಸ್ ಐರೀಸ್ ನಗರಕ್ಕೆ ಬಂದಿಳಿದರು. ಭೇಟಿ ವೇಳೆ, ಎರಡು ರಾಷ್ಟ್ರಗಳ ನಡುವಿನ ಸಹಕಾರದ ಮರುಪರಿಶೀಲನೆ ಹಾಗೂ ಪ್ರಮುಖ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಂಬಂಧ ವೃದ್ಧಿಗೆ ಒತ್ತು ನೀಡಲಿದ್ದಾರೆ.

ಏಜೆಶಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿದ ಮೋದಿ ಅವರನ್ನು ಸಾಂಪ್ರದಾಯಿಕವಾಗಿ ಬರಮಾಡಿಕೊಳ್ಳಲಾಯಿತು. ಅನಿವಾಸಿ ಭಾರತೀಯರು 'ಮೋದಿ–ಮೋದಿ', 'ಭಾರತ್ ಮಾತಾಕೀ ಜೈ' ಘೋಷಣೆ ಕೂಗಿ ಸಂಭ್ರಮಿಸಿದರು.

'ಉಭಯ ರಾಷ್ಟ್ರಗಳ ಸಂಬಂಧವೃದ್ಧಿ ನಿಟ್ಟಿನಲ್ಲಿ ಬ್ಯೂನಸ್ ಐರೀಸ್‌ಗೆ ಬಂದಿಳಿದಿದ್ದೇನೆ. ಅರ್ಜೆಂಟೀನಾದ ಅಧ್ಯಕ್ಷ ಜೇವಿಯರ್ ಮಿಲೆ ಅವರನ್ನು ಭೇಟಿಯಾಗಲು ಎದುರು ನೋಡುತ್ತಿದ್ದು, ವಿಸ್ತೃತ ಮಾತುಕತೆ ನಡೆಸಲಾಗುವುದು' ಎಂದು ಮೋದಿ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ತಮ್ಮ ಪ್ರವಾಸದ ನಾಲ್ಕನೇ ರಾಷ್ಟ್ರವಾಗಿ ಬ್ರೆಜಿಲ್‌ಗೆ ತೆರಳಲಿರುವ ಪ್ರಧಾನಿ ನರೇಂದ್ರ ಮೋದಿ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗಿಯಾಗಲಿದ್ದಾರೆ. ನಂತರ ನಮೀಬಿಯಾಕ್ಕೆ ತೆರಳಿ, ಅಲ್ಲಿಂದ ಸ್ವದೇಶಕ್ಕೆ ಮರಳಲಿದ್ದಾರೆ.

57 ವರ್ಷಗಳ ಬಳಿಕ ಅರ್ಜೆಂಟೀನಾಕ್ಕೆ ತೆರಳಿದ ಪ್ರಧಾನ ಮಂತ್ರಿಯ ಮಟ್ಟದ ದ್ವಿಪಕ್ಷೀಯ ನಿಯೋಗದ ಭೇಟಿ ಇದಾಗಿದೆ. 2018ರಲ್ಲಿ ಜಿ–20 ಶೃಂಗಸಭೆಯಲ್ಲಿ ಭಾಗವಹಿಸುವಾಗ ಪ್ರಧಾನಿ ಮೋದಿ ಭೇಟಿ ನೀಡಿದ್ದು, ಎರಡನೇ ಸಲ ದೇಶಕ್ಕೆ ಭೇಟಿ ನೀಡಿದಂತಾಗಿದೆ.

'ಅಧ್ಯಕ್ಷ ಮಿಲೆ ಜೊತೆಗಿನ ಮಾತುಕತೆ ವೇಳೆ ರಕ್ಷಣೆ, ಕೃಷಿ, ಗಣಿಗಾರಿಕೆ, ತೈಲ ಹಾಗೂ ಅನಿಲ, ನವೀಕರಿಸಬಹುದಾದ ಇಂಧನ, ವ್ಯಾಪಾರ ಹಾಗೂ ಹೂಡಿಕೆಗೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚೆ ನಡೆಯಲಿದೆ' ಎಂದು ಭಾರತೀಯ ವಿದೇಶಾಂಗ ಇಲಾಖೆಯು ತಿಳಿಸಿದೆ.

'ದ್ವಿಪಕ್ಷೀಯ ಭೇಟಿಯು ಉಭಯ ರಾಷ್ಟ್ರಗಳ ನಡುವಿನ ಬಹುಮುಖಿ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಗಟ್ಟಿಗೊಳಿಸಲಿದೆ' ಎಂದು ಪ್ರಕಟಣೆಯಲ್ಲಿ ಹೇಳಿದೆ.



ಅರ್ಜೆಂಟೀನಾದ ಬ್ಯೂನಸ್ ಐರೀಸ್‌ಗೆ ಶನಿವಾರ ಬಂದಿಳಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭಾರತೀಯ ಸಮುದಾಯದವರು ಸ್ವಾಗತಿಸಿದರು –ಪಿಟಿಐ ಚಿತ್ರ

ಸಂಬಂಧ ವಿಸ್ತರಣೆ: 6 ಒಪ್ಪಂದಗಳಿಗೆ ಸಹಿ

ಪೋರ್ಟ್ ಆಫ್ ಸ್ಪೇನ್ (ಪಿಟಿಐ): ಮೂಲಸೌಕರ್ಯ ಹಾಗೂ ಔಷಧ ಉತ್ಪಾದನೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರ–ಸಂಬಂಧ ವಿಸ್ತರಿಸುವ ನಿಟ್ಟಿನಲ್ಲಿ ಭಾರತ ಹಾಗೂ ಟ್ರಿನಿಡಾಡ್–ಟೊಬಾಗೋ ಆರು ಒಪ್ಪಂದಗಳಿಗೆ ಸಹಿಹಾಕಿದವು.

ರಕ್ಷಣೆ, ಕೃಷಿ, ಆರೋಗ್ಯ, ಡಿಜಿಟಲ್ ಹಾಗೂ ಯುಪಿಐ ಕ್ಷೇತ್ರದಲ್ಲಿ ಸಂಭಾವ್ಯ ಸಹಯೋಗದ ಕುರಿತು ಪ್ರಧಾನಿ ನರೇಂದ್ರ ಮೋದಿ ಹಾಗೂ ಟ್ರಿನಿಡಾಡ್ ಟೊಬಾಗೋ ಪ್ರಧಾನಿ ಕಮಲಾ ಪೆಸ್ರಾದ್ ಬಿಸ್ಸೆಸರ್ ಮಾತುಕತೆ ಬಳಿಕ ಈ ಒಪ್ಪಂದ ಮಾಡಿಕೊಳ್ಳಲಾಗಿದೆ.

'ಟ್ರಿನಿಡಾಡ್–ಟೊಬಾಗೋಗೆ ಪ್ರಧಾನಿ ಕೈಗೊಂಡಿರುವ ಐತಿಹಾಸಿಕ ಪ್ರವಾಸದಿಂದ ಎರಡು ರಾಷ್ಟ್ರಗಳ ನಡುವಿನ ಬಾಂಧವ್ಯವು ಮತ್ತಷ್ಟು ವೃದ್ಧಿಯಾಗಲಿದೆ' ಎಂದು ವಿದೇಶಾಂಗ ಇಲಾಖೆಯು ತಿಳಿಸಿದೆ.

ವಿವಿಧ ದೇಶಗಳಿಗೆ ಸೋಮವಾರ ಪತ್ರ ತಲುಪುವ ನಿರೀಕ್ಷೆ

12 ಸುಂಕ ಪತ್ರಗಳಿಗೆ ಸಹಿ: ಟ್ರಂಪ್

ಮಾರಿಸ್‌ಟೌನ್ (ಅಮೆರಿಕ), (ಎಎಫ್‌ಪಿ): 'ಸುಂಕ ಒಪ್ಪಂದಕ್ಕೆ ಸಂಬಂಧಿಸಿದಂತೆ 12 ಪತ್ರಗಳಿಗೆ ಸಹಿ ಹಾಕಿದ್ದು, ಗಡುವಿನ ಅವಧಿಯು ಮುಗಿಯುತ್ತಿದ್ದಂತೆ ಜಾರಿಗೊಳ್ಳಲಿದೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದರು.

'ನಾನು ಸಹಿ ಹಾಕಿರುವ ಪತ್ರಗಳು ಬಹುಶಃ ಸೋಮವಾರ 12 ರಾಷ್ಟ್ರಗಳಿಗೆ ತಲುಪಬಹುದು. ಅದೇ ದಿನ ಆ ದೇಶಗಳ ಹೆಸರನ್ನು ಘೋಷಿಸಲಾಗುವುದು' ಎಂದು ಏರ್‌ಫೋರ್ಸ್ ಒನ್‌ನಲ್ಲಿ ಸುದ್ದಿಗಾರರಿಗೆ ಶುಕ್ರವಾರ ತಿಳಿಸಿದರು.

ಅಮೆರಿಕಕ್ಕೆ ಆಮದಾಗುವ ವಸ್ತುಗಳ ಮೇಲೆ ಪ್ರತಿಸುಂಕ ವಿಧಿಸುವುದಾಗಿ ಟ್ರಂಪ್ ಏಪ್ರಿಲ್‌ನಲ್ಲಿ ಘೋಷಿಸಿದ್ದರು. ಈ ನಿರ್ಧಾರವು ಜಾಗತಿಕ ಆರ್ಥಿಕತೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿತ್ತು.

ನಂತರದ ಬೆಳವಣಿಗೆಯಲ್ಲಿ ಜುಲೈ 9ರವರೆಗೂ ಪ್ರತಿಸುಂಕ ವಿಧಿಸುವುದಕ್ಕೆ ತಡೆಹಿಡಿದಿದ್ದ ಟ್ರಂಪ್, ಪ್ರಮುಖ ದೇಶಗಳೊಟ್ಟಿಗೆ ಸುಂಕ ಒಪ್ಪಂದಕ್ಕೆ ಮುಂದಾಗಿದ್ದರು.

ಈ ಅವಧಿಯಲ್ಲಿ ಬ್ರಿಟನ್, ವಿಯೆಟ್ನಾಂ ರಾಷ್ಟ್ರಗಳು ಅಮೆರಿಕದೊಂದಿಗೆ ಸುಂಕ ಒಪ್ಪಂದ ಮಾಡಿಕೊಂಡಿವೆ. ಅಮೆರಿಕ– ಚೀನಾ ನಡುವೆ ಪರಸ್ಪರ ಸುಂಕದ ಪ್ರಮಾಣ ತಗ್ಗಿಸುವ ಮಾತುಕತೆ, ಒಪ್ಪಂದವೂ ನಡೆದಿದೆ.

ಸುಂಕ ಒಪ್ಪಂದಕ್ಕೆ ಸಂಬಂಧಿಸಿದಂತೆ ನೀಡಿದ್ದ ಗಡುವಿನ ಅವಧಿಯು ಸಮೀಪಿಸಿದ್ದರಿಂದ, ಇನ್ನೂ ಒಪ್ಪಂದ ಮಾಡಿಕೊಳ್ಳದ ದೇಶಗಳಿಗೆ ಸುಂಕದ ದರ ತಿಳಿಸಲು ಟ್ರಂಪ್ ಆಡಳಿತವು ಪತ್ರ ಕಳಿಸಿದೆ ಎನ್ನಲಾಗಿದೆ.



ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಕುಳಿತು ಕೆಲಸ ಮಾಡುವುದಕ್ಕಿಂತ, ನೋಟಿಸ್ ಕಳಿಸುವುದು ತುಂಬಾ ಸುಲಭ

ಡೊನಾಲ್ಡ್ ಟ್ರಂಪ್
ಅಮೆರಿಕದ ಅಧ್ಯಕ್ಷ

ಟ್ರಂಪ್‌ಗೆ ತಲೆಬಾಗಲಿರುವ ಮೋದಿ: ರಾಹುಲ್ ವಾಗ್ದಾಳಿ



ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): ಭಾರತ–ಅಮೆರಿಕ ನಡುವಿನ ಸುಂಕ ಒಪ್ಪಂದಕ್ಕೆ ಸಂಬಂಧಿಸಿದಂತೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಶನಿವಾರ ವಾಗ್ದಾಳಿ ನಡೆಸಿದ್ದಾರೆ.

'ಅಮೆರಿಕ ನೀಡಿರುವ ಗಡುವಿನ ಅವಧಿಯೊಳಗೆ ಭಾರತ ಒಪ್ಪಂದ ಮಾಡಿಕೊಳ್ಳುವುದಿಲ್ಲ' ಎಂದು ವಾಣಿಜ್ಯ ಸಚಿವ ಪೀಯೂಷ್ ಗೋಯೆಲ್ ಅವರು ಹೇಳಿರುವುದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

'ಪೀಯೂಷ್ ಗೋಯೆಲ್ ಏನು ಬೇಕಾದರೂ ಹೇಳಿಕೊಳ್ಳಲಿ. ಆದರೆ, ಈ ವಿಷಯದಲ್ಲಿ ನಾನು ಹೇಳುವ ಮಾತುಗಳನ್ನು ಪರಿಗಣಿಸಿ. ಸುಂಕಕ್ಕೆ ಸಂಬಂಧಿಸಿದಂತೆ ಟ್ರಂಪ್ ನೀಡಿರುವ ಗಡುವಿನ ಅವಧಿ ಸಮೀಪಿಸುತ್ತಿದ್ದಂತೆ ಮೋದಿ ಅವರು ವಿನಮ್ರರಾಗಿ ತಲೆಬಾಗುತ್ತಾರೆ' ಎಂದು ರಾಹುಲ್ ಗಾಂಧಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಕಾಂಗ್ರೆಸ್ ಅಸ್ತಿತ್ವ ಉಳಿಸಿಕೊಳ್ಳಲಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ಆರ್‌ಎಸ್‌ಎಸ್ ಬಂದ್ ಮಾಡುವುದಿರಲಿ, ಈಗ ಕಾಂಗ್ರೆಸ್ ಎಲ್ಲಾ ಕಡೆಯೂ ಬಂದ್ ಆಗುತ್ತಿದೆ. ಮೊದಲು ಕಾಂಗ್ರೆಸ್ ತನ್ನ ಅಸ್ತಿತ್ವ ಉಳಿಸಿಕೊಳ್ಳಲಿ' ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ವ್ಯಂಗ್ಯವಾಡಿದರು.

ಅಧಿಕಾರಕ್ಕೆ ಬಂದರೆ ಆರ್‌ಎಸ್‌ಎಸ್ ನಿಷೇಧಿಸುವುದಾಗಿ ಸಚಿವ ಪ್ರಿಯಾಂಕ್ ಖರ್ಗೆ ನೀಡಿರುವ ಹೇಳಿಕೆಗೆ ಇಲ್ಲಿ ಶನಿವಾರ ಪ್ರತಿಕ್ರಿಯಿಸಿದ ಅವರು, 'ಆರ್‌ಎಸ್‌ಎಸ್ ವಿಚಾರ ಇರಲಿ. 40 ವರ್ಷದಿಂದ ಕಲ್ಯಾಣ ಕರ್ನಾಟಕಕ್ಕೆ ಏನು ಮಾಡಿದ್ದೀರಾ ಎಂಬುದನ್ನು ಮೊದಲು ಹೇಳಿ. ಪ್ರಿಯಾಂಕ್ ಬಾಯಿ ಚಪಲಕ್ಕೆ ಮೂಲ ವಿಚಾರಗಳನ್ನು ಮರೆ ಮಾಚಲು ಈ ರೀತಿ ಹೇಳಿಕೆ ಕೊಡುತ್ತಿದ್ದಾರಷ್ಟೆ' ಎಂದರು.

'ಕಾಂಗ್ರೆಸ್‌ನವರಿಗೆ ನನ್ನನ್ನು ಕಂಡರೆ ಅತಿಯಾದ ಭಯವಿದೆ. ಹೀಗಾಗಿ ಪದೇ ಪದೇ ನನ್ನ ಹೆಸರನ್ನು ಜಪಿಸುತ್ತಾರೆ. ಬಿಜೆಪಿ-ಜೆಡಿಎಸ್ ಜೊತೆಯಾದ ಮೇಲಂತೂ ಅವರಿಗೆ ನಿದ್ದೆ ಬರುತ್ತಿಲ್ಲ' ಎಂದು ಟೀಕಿಸಿದರು.

'ಮುಂದಿನ ಬಾರಿಯೂ ನಮ್ಮದೇ ಸರ್ಕಾರ' ಎಂಬ ಕಾಂಗ್ರೆಸ್ ನಾಯಕರ ಹೇಳಿಕೆಗೆ, 'ಇನ್ನೂ ಇಪ್ಪತ್ತು ವರ್ಷವೂ ನಿಮ್ಮದೇ ಸರ್ಕಾರ ಇರಲಿ. ಮೊದಲು ಹೇಳಿದ ಕೆಲಸ ಮಾಡಿ. 20 ವರ್ಷ ನಮ್ಮದೇ ಸರ್ಕಾರ ಎಂದವರು ಏನೇನಾದರು ಎಂಬುದು ನಮಗೂ ಗೊತ್ತಿದೆ' ಎಂದು ಹೇಳಿದರು.

'ಮೇಕೆದಾಟು ವಿಚಾರದಲ್ಲಿ ನನ್ನ ಹೇಳಿಕೆಗೆ ಈಗಲೂ ಬದ್ಧ. ರಾಜ್ಯ ಸರ್ಕಾರ ತಮಿಳುನಾಡು ಸರ್ಕಾರವನ್ನು ಒಪ್ಪಿಸಿದ್ದೇ ಆದಲ್ಲಿ ಐದು ನಿಮಿಷದಲ್ಲಿ ಪ್ರಧಾನಿಯಿಂದ ಅನುಮತಿ ಕೊಡಿಸುತ್ತೇನೆ. ಅದನ್ನು ಮಾಡದೆ ಮೇಕೆದಾಟು ಯೋಜನೆ ಕಚೇರಿ ತೆರೆದರೆ ಏನು ಪ್ರಯೋಜನ?' ಎಂದು ಕೇಳಿದರು.

'ಆರ್‌ಎಸ್‌ಎಸ್ ನಿಷೇಧಿಸಲು ಹೇಳಿಲ್ಲ'

ಬೆಂಗಳೂರು: 'ಆರ್‌ಎಸ್‌ಎಸ್ ನಿಷೇಧಿಸಬೇಕೆಂದು ಮುಖ್ಯಮಂತ್ರಿಯಾಗಲಿ, ನಾನಾಗಲಿ ಎಲ್ಲೂ ಹೇಳಿಲ್ಲ' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆರ್‌ಎಸ್‌ಎಸ್ ಚಟುವಟಿಕೆ ಆರೋಗ್ಯಕರವಾಗಿ ಇರಲಿ ಎಂಬ ಉದ್ದೇಶದಿಂದ, ಸಚಿವ ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್ ನಿಷೇಧಿಸುತ್ತೇವೆಂದು ಹೇಳಿರಬಹುದು' ಎಂದರು.

'ಮುಖ್ಯ ಕಾರ್ಯದರ್ಶಿ ವಿರುದ್ಧ ವಿಧಾನ ಪರಿಷತ್ ಬಿಜೆಪಿ ಸದಸ್ಯ ಎನ್. ರವಿಕುಮಾರ್ ಅವರ ಹೇಳಿಕೆ ಯಾರೂ ಒಪ್ಪುವಂಥದ್ದಲ್ಲ. ಆದರೆ, ಈ ಹೇಳಿಕೆಯನ್ನು ಬಿಜೆಪಿ ನಾಯಕರಾದ ಪ್ರಲ್ಹಾದ ಜೋಶಿ, ಬಿ.ವೈ. ವಿಜಯೇಂದ್ರ, ಆರ್. ಅಶೋಕ ಖಂಡಿಸಿಲ್ಲ' ಎಂದರು.

ಎಐಸಿಸಿ ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಲಹಾ ಮಂಡಳಿ ಅಸ್ತಿತ್ವಕ್ಕೆ

ಸಿದ್ದರಾಮಯ್ಯ ನೇತೃತ್ವ: 15ರಂದು ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಸಮುದಾಯಗಳು ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಪರಿಹಾರ ಒದಗಿಸಲು ಕಾರ್ಯತಂತ್ರ ರೂಪಿಸುವ ಉದ್ದೇಶದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ರಾಷ್ಟ್ರೀಯ ಮಟ್ಟದ ಸಲಹಾ ಮಂಡಳಿಯನ್ನು ಎಐಸಿಸಿ ರಚಿಸಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಈ ಮಂಡಳಿಯ ರಚನೆಗೆ ಇತ್ತೀಚೆಗೆ ಅನುಮೋದನೆ ನೀಡಿದ್ದಾರೆ. ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಮತ್ತು ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ ಕೂಡ ಮಂಡಳಿಯಲ್ಲಿದ್ದಾರೆ. ಮಂಡಳಿಯಲ್ಲಿ ನಾಲ್ವರು ಮಾಜಿ ಮುಖ್ಯಮಂತ್ರಿಗಳು ಸೇರಿದಂತೆ ಒಟ್ಟು 24 ಸದಸ್ಯರಿದ್ದಾರೆ.

ಕೆಪಿಸಿಸಿ ಕಚೇರಿಯ ಆವರಣದಲ್ಲಿರುವ ಭಾರತ್ ಜೋಡೊ ಭವನದಲ್ಲಿ ಮಂಡಳಿಯ ಮೊದಲ ಸಭೆ ಇದೇ 15ರಂದು ನಡೆಯಲಿದೆ. ಮಂಡಳಿಯ ಸದಸ್ಯರು, ಸಂಚಾಲಕರು, ಕಾರ್ಯದರ್ಶಿಗಳು, ಕಾಂಗ್ರೆಸ್‌ನ ಹಿಂದುಳಿದ ವರ್ಗಗಳ ಪ್ರಮುಖ ನಾಯಕರು ಸೇರಿದಂತೆ ದೇಶದ ವಿವಿಧ ರಾಜ್ಯಗಳ 90 ನಾಯಕರಿಗೆ ಈ ಸಭೆಯ ಆಹ್ವಾನ ನೀಡಲಾಗಿದೆ. ಐವರು ಮಾಜಿ ಮುಖ್ಯಮಂತ್ರಿಗಳು, ಹತ್ತು ಮಂದಿ ಕೇಂದ್ರದ ಮಾಜಿ ಸಚಿವರು ಕೂಡ ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಮುಂದಿನ ಕಾರ್ಯಯೋಜನೆಗಳು, ಅವುಗಳ ಅನುಷ್ಠಾನ, ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ಕೈಗೆತ್ತಿಕೊಳ್ಳಬೇಕಾದ ವಿಷಯಗಳ ಕುರಿತು ಎಐಸಿಸಿಯ ಹಿಂದುಳಿದ ವರ್ಗಗಳ ಘಟಕಕ್ಕೆ ಈ ಸಲಹಾ ಮಂಡಳಿಯು ಸಲಹೆಗಳನ್ನು ನೀಡಲಿದೆ. ರಾಜ್ಯದಲ್ಲಿ ಹಿಂದುಳಿದ ವರ್ಗಗಳ ನಾಯಕರಾಗಿರುವ ಸಿದ್ದರಾಮಯ್ಯ ಅವರ ವರ್ಚಸ್ಸನ್ನು ಬಳಸಿಕೊಂಡು ದೇಶದಾದ್ಯಂತ ಹಿಂದುಳಿದ ವರ್ಗಗಳನ್ನು ತನ್ನತ್ತ ಸೆಳೆಯಲು ಎಐಸಿಸಿ ಈ ಮಂಡಳಿ ರಚಿಸಿದೆ. ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಪೂರಕವಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ಈ ಮಂಡಳಿ ಸಲಹೆಗಳನ್ನು ನೀಡಲಿದೆ.

ಮುಖ್ಯಮಂತ್ರಿಯ ಜೊತೆ ಸಮಾಲೋಚಿಸಿದ ಬಳಿಕ ಮಂಡಳಿಯ ಸದಸ್ಯರು ಸಭೆಯ ಸಿದ್ಧತೆಗಳನ್ನು ಆರಂಭಿಸಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿರುವ ಸಲಹಾ ಮಂಡಳಿಯ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರು ಸಭೆಗೆ ಅಗತ್ಯವಿರುವ ಪೂರಕ ಸಿದ್ಧತೆಗಳ ಕುರಿತು ಚರ್ಚಿಸಿದ್ದಾರೆ.

ಮಂಡಳಿಯಲ್ಲಿ ಯಾರೆಲ್ಲ ಇದ್ದಾರೆ?

ಸಿದ್ದರಾಮಯ್ಯ, ಬಿ.ಕೆ. ಹರಿಪ್ರಸಾದ್, ಅಶೋಕ್ ಗೆಹಲೋತ್, ಭೂಪೇಶ್ ಬಘೇಲ್, ವಿ. ನಾರಾಯಣಸ್ವಾಮಿ, ಸಚಿನ್ ಪೈಲಟ್, ಗುರುದೀಪ್ ಸಿಂಗ್ ಸಪ್ಪಲ್, ಅರುಣ್ ಯಾದವ್, ವಿಜಯ್ ನಾಮ್‌ದೇವ್‌ರಾವ್ ವಡೆಟ್ಟಿವಾರ್, ವಿ. ಹನುಮಂತರಾವ್, ಅಮಿತ್ ಚಾವ್ಡಾ, ಬಿ. ಮಹೇಶ್ ಕುಮಾರ್ ಗೌಡ್, ಪೊನ್ನಮ್ ಪ್ರಭಾಕರ್, ವೀರಪ್ಪ ಮೊಯಿಲಿ, ಎಸ್. ಜೋತಿಮಣಿ (ಸಂಸದೆ), ಶ್ರೀಕಾಂತ್ ಜೇನಾ, ಕಮಲೇಶ್ವರ್ ಪಟೇಲ್, ಅಜಯ್ ಕುಮಾರ್ ಲಲ್ಲು, ಸುಭಾಷಿಣಿ ಯಾದವ್, ಅಡೂರು ಪ್ರಕಾಶ್ (ಸಂಸದ), ಧನೇಂದ್ರ ಸಾಹು, ಹೀನಾ ಕಾವ್ರೆ, ಡಾ. ಅನಿಲ್ ಜೈಹಿಂದ್- ಸಲಹಾ ಮಂಡಳಿಯ ಸಂಚಾಲಕರು.ಜಿತೇಂದರ್ ಬಘೇಲ್- ಸಲಹಾ ಮಂಡಳಿಯ ಕಾರ್ಯದರ್ಶಿ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ವೈವಾಹಿಕ

Brides Wanted

Brahmin

ವಧು ಬೇಕಾಗಿದೆ

ಮೈಸೂರಿನಲ್ಲಿ ವಾಸವಿರುವ ಬ್ರಾಹ್ಮಣ ವಿಚ್ಛೇದಿತ ವರನಿಗೆ ಸಸ್ಯಾಹಾರಿ ವಧು ಬೇಕಾಗಿದೆ

ಸಂಪರ್ಕಿಸಿ : 9972445558

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel Agencies

4 ದಿನಗಳು ಪೂರಿ 10/7 4ದಿನಗಳು ಕಾಶಿ 26/7 5ದಿನಗಳು ದೆಹಲಿ 24/7 3ದಿನಗಳ ಶಿರಡಿ 18/7 14ದಿನಗಳು ಮಾನಸ ಸರೋವರ ಪ್ರವಾಸ 22/7 ಸುವರ್ಣಯಾತ್ರ: 9008381022/ 6360146483

Travel

12.7.2025 ಗುಜರಾತ್ ಮಧ್ಯಪ್ರದೇಶ ನಾಲ್ಕು ಜ್ಯೋತಿರ್ಲಿಂಗ: 12.7.25 ಗುಜರಾತ್ ಎರಡು ಜ್ಯೋತಿರ್ಲಿಂಗ: 29.7.25 ದೆಹಲಿ ಕಾಶಿ ಆಗ್ರಾ ಅಯೋಧ್ಯೆ; 2.8.25 ಕಾಶಿ, ಅಯೋಧ್ಯೆ, 14.8.25 ಶಿರಡಿ ಮೂರು ಜ್ಯೋತಿರ್ಲಿಂಗ 30.8.25 ಪುರಿ ಜಗನ್ನಾಥ ಕಲ್ಕತ್ತಾ ಜಾರ್ಖಂಡ್ ವೈದ್ಯನಾಥ: ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ: 8496044942

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 25.7.2025 ರಿಂದ 4ದಿನಗಳ 18ಕ್ಷೇತ್ರಗಳ ಪ್ರವಾಸ. ನವಗ್ರಹ ಮಂದಿರಗಳು ತಂಜಾವೂರು ಕುಂಭಕೋಣ ಚಿದಂಬರಂ ಸ್ವಾಮಿಮಲ್ಲೈ ಅಭಿರಾಮಿ ಪುಂಪುಹಾರ್‌ಬೀಚ್ ಇತ್ಯಾದಿ. 6800. 9448390735 9449721678

11.9.2025 ರಾಮೇಶ್ವರಂ ಪ್ರವಾಸ 5ದಿನ. 5.9.25 ಪೂರಿಜಗನ್ನಾಥ್ ಪ್ರವಾಸ 3ದಿನ. 9.9.25 ಕಾಶಿ, ಗಯಾ,ಅಯೋಧ್ಯ 7ದಿನ. ನಂದಿನಿ ಟೂರಿಸ್ಟ್. 9916574089.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಹೆಸರು ಬದಲಾವಣೆ

@50/-* PER WORDS

ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ

www.dhclassifieds.com

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 7795158424

+91 9731810277 | +91 9900428036

*Conditions apply





ಎನ್‌ಸಿ ಕ್ಲಾಸಿಕ್ ಜಾವೆಲಿನ್ ಥ್ರೋನಲ್ಲಿ (ಎಡದಿಂದ) ಬೆಳ್ಳಿ ಗೆದ್ದ ಕೆನ್ಯಾದ ಜೂಲಿಯಸ್ ಯಿಗೊ, ಚಿನ್ನ ಗೆದ್ದ ನೀರಜ್ ಚೋಪ್ರಾ ಮತ್ತು ಕಂಚು ಗೆದ್ದ ಶ್ರೀಲಂಕಾದ ರುಮೇಶ್ ಪತಿರಾಗೆ (ಎಡಚಿತ್ರ) ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನೆರೆದಿದ್ದ ಜನಸ್ತೋಮ
ಚಿತ್ರಗಳು: ಬಿ.ಕೆ. ಜನಾರ್ದನ/ಕೃಷ್ಣ ಕುಮಾರ್ ಪಿ.ಎಸ್.

ಬೆಂಗಳೂರಿನಲ್ಲಿ ಜಾವೆಲಿನ್ ಪುಳಕ

ಚಿನ್ನದ ಪದಕಕ್ಕೆ ಕೊರಳೊಡ್ಡಿದ ಭಾರತದ ತಾರೆ • ಕೆನ್ಯಾದ ಜೂಲಿಯಸ್‌ಗೆ ಬೆಳ್ಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿಯ ರಂಗು ಎಂದಿನಂತೆ ಇರಲಿಲ್ಲ. ಹೊನಲು ಬೆಳಕಿನಲ್ಲಿ ಭರವಸೆಯ ಹಲವು ಬಣ್ಣಗಳು ಲಾಸ್ಯವಾಡಿದವು. ಅಥ್ಲೆಟಿಕ್ಸ್‌ನ ಒಂದು ಭಾಗವಾದ ಜಾವೆಲಿನ್ ಥ್ರೋನಲ್ಲಿಯೂ ಮನೋಲ್ಲಾಸವನ್ನು ಕಂಡ ಸಾವಿರಾರು ಜನರು ಪುಳಕಗೊಂಡರು.

ಭಾರತದ ಕ್ರೀಡಾರಂಗದಲ್ಲಿಯೇ ಮೊಟ್ಟಮೊದಲ ವಿಶ್ವ ಅಥ್ಲೆಟಿಕ್ಸ್ ಗೋಲ್ಡ್ ಲೆವೆಲ್ ಜಾವೆಲಿನ್ ಥ್ರೋ ಕೂಟಕ್ಕೆ ಅವರೆಲ್ಲರೂ ಸಾಕ್ಷಿಯಾದರು. ಈ ಕೂಟದ ಕೇಂದ್ರಬಿಂದು ಒಲಿಂಪಿಯನ್ ನೀರಜ್ ಚೋಪ್ರಾ ಅವರ ಮೇಲೆ ಬೆಂಗಳೂರಿನ ಕ್ರೀಡಾಪ್ರೇಮಿಗಳು ಪ್ರೀತಿಯ ಮಳೆಗರೆದರು. ನೀರಜ್ ಕೂಡ ತಮ್ಮ ಅಭಿಮಾನಿಗಳನ್ನು ನಿರಾಶೆಗೊಳಿಸಲಿಲ್ಲ.

ತಮ್ಮ ಶ್ರೇಷ್ಠ ಥ್ರೋ ದಾಖಲೆ 90 ಮೀಟರ್‌ಗಳನ್ನು ದಾಟದಿದ್ದರೂ ವಿಶ್ವ ದರ್ಜೆಯ ಪ್ರತಿಸ್ಪರ್ಧಿಗಳನ್ನು ಹಿಂದಿಕ್ಕಿದರು. ಚಿನ್ನದ ಪದಕಕ್ಕೆ ಕೊರಳೊಡ್ಡಿದರು. ಅವರ ಈ ಸಾಧನೆಯಿಂದಾಗಿ ಕಂಠೀರವ ಕ್ರೀಡಾಂಗಣದಲ್ಲಿ ಜನ..ಗಣ..ಮನ ಮೊಳಗಿತು. ರಾಷ್ಟ್ರಗೀತೆಯನ್ನು ಕೇಳುತ್ತ ಪುಳಕಗೊಂಡ ಅಭಿಮಾನಿಗಳಲ್ಲಿ ಹಲವರ ಕಂಗಳು ಜಿನುಗಿದವು.

ಹರಿಯಾಣದ ನೀರಜ್ ಅವರು 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಮತ್ತು 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದರು. ವಿಶ್ವ ಚಾಂಪಿಯನ್ ಕೂಡ ಆದವರು. ಅವರು ಶನಿವಾರ ಸಂಜೆ ಕ್ರೀಡಾಂಗಣದೊಳಗೆ ಪ್ರವೇಶಿಸುತ್ತಿದ್ದಂತೆ ಅಭಿಮಾನಿಗಳತ್ತ ಕೈಬೀಸಿ, ಫ್ಲೈಯಿಂಗ್ ಕಿಸ್ ಎಸೆದು ಅಭಿನಂದಿಸಿದರು. ಸ್ಪರ್ಧೆ ಮುಕ್ತಾಯವಾದ ನಂತರವೂ ತಾವೇ ಗ್ಯಾಲರಿಗಳತ್ತ ಹೋಗಿ ಅಭಿಮಾನಿಗಳ ಕೈಕುಲುಕಿದರು. ಹಸ್ತಾಕ್ಷರ ನೀಡಿದರು. ಮೊಬೈಲ್‌ನಲ್ಲಿ ಸೆಲ್ಫಿ ಕ್ಲಿಕ್ಕಿಸಿಕೊಂಡರು.

'ಇದೇ ಮೊದಲ ಪ್ರಯತ್ನ. ಇಷ್ಟು ದೊಡ್ಡಮಟ್ಟದಲ್ಲಿ ಯಶಸ್ವಿಯಾಗುತ್ತದೆ ಅಂದುಕೊಂಡಿರಲಿಲ್ಲ. ಬೆಂಗಳೂರಿನ ಜನರಿಗೆ ಎಷ್ಟು ಕೃತಜ್ಞತೆ ಹೇಳಿದರೂ ಸಾಲದು. ನಾನು ಚಿರಋಣಿಯಾಗಿರುವೆ. ಜೆಎಸ್‌ಡಬ್ಲ್ಯು ತಂಡ, ಎಐಎಫ್‌ಎಫ್, ಕರ್ನಾಟಕ ಸರ್ಕಾರ ನೀಡಿರುವ ಬೆಂಬಲಕ್ಕೆ ಕೃತಜ್ಞ' ಎಂದು ನೀರಜ್ ಅವರು ಸುದ್ದಿಗಾರರೊಂದಿಗೆ ಸಂತಸ ಹಂಚಿಕೊಂಡರು.

'ಅಥ್ಲೆಟಿಕ್ಸ್ ಬಹಳ ಸುಂದರವಾದ ಕ್ರೀಡೆ. ಇಲ್ಲಿ ರಾಷ್ಟ್ರೀಯ, ರಾಜ್ಯ ಕೂಟಗಳು ಆದಾಗ ಮಕ್ಕಳು ಬಂದು ನೋಡಬೇಕು. ಪಾಲಕರು, ಶಿಕ್ಷಕರು ತಮ್ಮ ಮಕ್ಕಳನ್ನು ಕರೆದುಕೊಂಡು ಬರಬೇಕು. ಜಿಗಿತ, ಓಟ, ಎಸೆತಗಳ ಕುರಿತು ಮಕ್ಕಳಿಗೆ ತಿಳಿವಳಿಕೆ ನೀಡಬೇಕು. ಆಗ ಈ ಕ್ರೀಡೆಗಳಲ್ಲಿಯೂ ಆಸಕ್ತಿ ಬೆಳೆಯುತ್ತದೆ. ಅದರಿಂದ ಕ್ರೀಡೆಯೂ ಬೆಳೆಯುತ್ತದೆ. ಬೆಂಗಳೂರು ಜನ ಕ್ರೀಡಾಪ್ರಿಯರು' ಎಂದರು.

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೊತ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಜಿ. ಪರಮೇಶ್ವರ್, ಶಾಸಕ ರಿಜ್ವಾನ್ ಅರ್ಷದ್ ಮತ್ತು ಕೆಒಎ ಅಧ್ಯಕ್ಷ ಕೆ. ಗೋವಿಂದರಾಜ್ ಅವರು ವಿಜೇತರಿಗೆ ಪ್ರಶಸ್ತಿ ವಿತರಿಸಿದರು.



ಕ್ರೀಡಾಂಗಣದಲ್ಲಿ ಬಾಲಕಿಯ ಸಂಭ್ರಮ

ಪ್ರಥಮ ಸುತ್ತು– 12 ಅಥ್ಲೀಟ್‌ಗಳು (ಮೀಟರ್‌ಗಳಲ್ಲಿ)

ಕ್ರ.ಸಂ.	ಅಥ್ಲೀಟ್ ಹೆಸರು (ದೇಶ)	ಮೊದಲು	ಎರಡು	ಮೂರು
1	ಸಾಹಿಲ್ ಸಿಲ್ವಾಲ್ (ಭಾರತ)	77.48	75.55	ಫೌಲ್
2	ರೋಹಿತ್ ಯಾದವ್ (ಭಾರತ)	77.11	75.28	ಫೌಲ್
3	ಮಾರ್ಟಿನ್ ಕೊನ್ಸೆನಿ (ಜೆಕ್)	ಫೌಲ್	71.99	ಫೌಲ್
4	ಥಾಮಸ್ ರೋಲೆ (ಜರ್ಮನಿ)	75.85	ಫೌಲ್	ಫೌಲ್
5	ಯಶ್ ವೀರ್ ಸಿಂಗ್ (ಭಾರತ)	ಫೌಲ್	76.20	79.65
6	ಜೂಲಿಯಸ್ ಯೆಗೊ (ಕೆನ್ಯಾ)	79.97	80.07	79.73
7	ಸಚಿನ್ ಯಾದವ್ (ಭಾರತ)	ಫೌಲ್	77.30	82.33
8	ರುಮೇಶ್ ಪತಿರಾಗೆ (ಶ್ರೀಲಂಕಾ)	71.19	81.90	84.34
9	ಸಿಪ್ರಿಯಾನ್ ಮ್ರೈಗ್ಲಾಡ್ (ಪೋಲೆಂಡ್)	ಫೌಲ್	78.46	79.04
10	ಲೂಯಿಸ್ ಮಾರ್ಸಿಯೊ ಡಿಸಿಲ್ವಾ (ಬ್ರೆಜಿಲ್)	75.20	80.31	ಫೌಲ್
11	ಕರ್ಟಿಸ್ ಥಾಮ್ಸನ್ (ಅಮೆರಿಕ)	79.35	77.24	80.84
12	ನೀರಜ್ ಚೋಪ್ರಾ (ಭಾರತ)	ಫೌಲ್	82.99	86.18

ಎರಡನೇ ಸುತ್ತು– ಅಗ್ರ 8 ಸ್ಪರ್ಧಿಗಳು (ಮೀಟರ್‌ಗಳಲ್ಲಿ)

ಕ್ರ.ಸಂ.	ಅಥ್ಲೀಟ್ ಹೆಸರು (ದೇಶ)	ಮೊದಲು	ಎರಡು	ಮೂರು
1	ಸಿಪ್ರಿಯಾನ್ ಮ್ರೈಗ್ಲಾಡ್ (ಪೋಲೆಂಡ್)	ಫೌಲ್	ಫೌಲ್	82.23
2	ಯಶ್ ವೀರ್ ಸಿಂಗ್ (ಭಾರತ)	ಫೌಲ್	ಫೌಲ್	ಫೌಲ್
3	ಜೂಲಿಯಸ್ ಯೆಗೊ (ಕೆನ್ಯಾ)	84.51	ಫೌಲ್	82.45
4	ಲೂಯಿಸ್ ಮಾರ್ಸಿಯೊ ಡಿಸಿಲ್ವಾ(ಬ್ರೆಜಿಲ್)	ಫೌಲ್	ಫೌಲ್	79.89
5	ಕರ್ಟಿಸ್ ಥಾಮ್ಸನ್ (ಅಮೆರಿಕ)	ಫೌಲ್	81.50	ಫೌಲ್
6	ಸಚಿನ್ ಯಾದವ್ (ಭಾರತ)	ಫೌಲ್	79.40	73.45
7	ರುಮೇಶ್ ಪತಿರಾಗೆ (ಶ್ರೀಲಂಕಾ)	ಫೌಲ್	80.10	77.23
8	ನೀರಜ್ ಚೋಪ್ರಾ (ಭಾರತ)	ಫೌಲ್	84.07	82.22

'ವೈಭವ್' ಶತಕ: ಭಾರತಕ್ಕೆ ಜಯ



ವೈಭವ್ ಸೂರ್ಯವಂಶಿ –ಎಕ್ಸ್ ಚಿತ್ರ

ಹೋವ್ (ಇಂಗ್ಲೆಂಡ್), (ಪಿಟಿಐ): ಭಾರತ ಕ್ರಿಕೆಟ್‌ನ ಯುವ ತಾರೆ ವೈಭವ್ ಸೂರ್ಯವಂಶಿ ಇಂಗ್ಲೆಂಡ್ ವಿರುದ್ಧ ಯುವ ಏಕದಿನ (19 ವರ್ಷದೊಳಗಿವರ) ಕ್ರಿಕೆಟ್ ಪಂದ್ಯದಲ್ಲಿ ಶನಿವಾರ ಕೇವಲ 78 ಎಸೆತಗಳಲ್ಲಿ 143 ರನ್ ಬಾರಿಸಿದರು. ಆ ಹಾದಿಯಲ್ಲಿ ಮತ್ತಷ್ಟು ದಾಖಲೆಗಳನ್ನು ಮುರಿದರು. ಸರಣಿಯ ನಾಲ್ಕನೇ ಪಂದ್ಯ 55 ರನ್‌ಗಳಿಂದ ಗೆದ್ದು ಭಾರತ ಸರಣಿಯನ್ನು 3–1 ರಿಂದ ಜಯಿಸಿತು.

ಮೊದಲು ಆಡಿದ ಭಾರತ 9 ವಿಕೆಟ್‌ಗೆ 369 ರನ್‌ಗಳ ಭಾರಿ ಮೊತ್ತ ಗಳಿಸಿತು. ಇಂಗ್ಲೆಂಡ್ ಹೋರಾಟ ತೋರಿದರೂ 45.3 ಓವರುಗಳಲ್ಲಿ 308 ರನ್‌ಗಳಿಗೆ ಆಟ ಮುಗಿಸಿತು. ರಾಕಿ ಫ್ಲಿಂಟಾಫ್ ಶತಕ (107, 91ಎ) ಶತಕ ಸಾಲಲಿಲ್ಲ.

ಈ ಪಂದ್ಯದಲ್ಲಿ ಆರಂಭ ಆಟಗಾರ ವೈಭವ್ ಜೊತೆಗೆ ಮಧ್ಯಮ ಕ್ರಮಾಂಕದ ಆಟಗಾರ ವಿಹಾನ್ ಮಲ್ಹೋತ್ರಾ ಕೂಡ ಶತಕ (129, 121 ಎಸೆತ, 4x6, 6x9) ಬಾರಿಸಿದರು. ಸೂರ್ಯವಂಶಿ ಇನಿಂಗ್ಸ್‌ನಲ್ಲಿ 13 ಬೌಂಡರಿ, 10 ಸಿಕ್ಸರ್‌ಗಳಿದ್ದವು. ಇವರಿಬ್ಬರು ಎರಡನೇ ವಿಕೆಟ್‌ಗೆ 219 ರನ್ ಜೊತೆಯಾಟದಲ್ಲಿ ಭಾಗಿಯಾದರು. ವೈಭವ್ 52 ಎಸೆತಗಳಲ್ಲಿ ಶತಕ ದಾಟಿದರು.

ಹಲವು ದಾಖಲೆ: ನಿರ್ಭೀತವಾಗಿ ಬ್ಯಾಟ್ ಬೀಸಿದ ವೈಭವ್ ಯುವ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಶತಕ ಬಾರಿಸಿದ ವಿಶ್ವದ ಅತಿ ಕಿರಿಯ ಆಟಗಾರ ಎನಿಸಿದರು. ಈ ಹಿಂದಿನ ದಾಖಲೆ ಬಾಂಗ್ಲಾದೇಶದ ನಜ್ಮುಲ್ ಹುಸೇನ್ ಶಾಂತೊ ಹೆಸರಿನಲ್ಲಿತ್ತು. ಅವರು 2013ರಲ್ಲಿ 14 ವರ್ಷ 241 ದಿನಗಳಾಗಿದ್ದಾಗ ಶ್ರೀಲಂಕಾ ವಿರುದ್ಧ ಸಿಲ್ಹೆಟ್‌ನಲ್ಲಿ ಶತಕ ಬಾರಿಸಿದ್ದರು. ಭಾರತದ ಪರ ಈ ಹಿಂದಿನ ದಾಖಲೆ ಸರ್ಫರಾಜ್ ಖಾನ್ ಹೆಸರಿನಲ್ಲಿತ್ತು. ಅವರು 2013ರಲ್ಲಿ 15 ವರ್ಷ 338 ದಿನಗಳಾಗಿದ್ದಾಗ ದಕ್ಷಿಣ ಆಫ್ರಿಕಾ ಅಂಡರ್ 19 ತಂಡದ ವಿರುದ್ಧ ಶತಕ ಬಾರಿಸಿದ್ದರು.

ಇದು ಯುವ ಏಕದಿನ ಕ್ರಿಕೆಟ್‌ನ ಅತಿ ವೇಗದ ಶತಕವಾಗಿದೆ. ಈ ಹಿಂದಿನ ದಾಖಲೆ ಪಾಕಿಸ್ತಾನದ ಕ್ರಮಾನ್ ಗುಲಾಂ (2013ರಲ್ಲಿ ಇಂಗ್ಲೆಂಡ್ 19 ವರ್ಷದೊಳಗಿನ ತಂಡದ ವಿರುದ್ಧ 53 ಎಸೆತಗಳಲ್ಲಿ) ಹೆಸರಿನಲ್ಲಿತ್ತು.

ಬೆಂಗಳೂರು ರೇಸ್

ಡಿಫ್ ಗೆಲ್ಲುವ ನಿರೀಕ್ಷೆ

ಮಹಾರಾಜಾಸ್ ಗೋಲ್ಡ್ ಕಪ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಡಿಫ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮಾಯ್ ಟಾಯ್ 4, ದಿ ಮೇಕ್ ಶ್ಯೂರ್ 6, ಮೈ ಹನಿ 5
2ನೇ ರೇಸ್: ಫ್ಲೆಮಿಂಗೊ ಡ್ರೀಮ್ 2, ಲವಿಂಗ್ ಪರ್ಲ್ 5, ಟ್ರಿಪಲ್ ವಿ 1
3ನೇ ರೇಸ್: ಫ್ಲೈಟ್ ಆಫ್ ಫ್ಯಾನ್ಸಿ 4, ಝೆಫಿರಿನ್ 9, ಸೂಪರ್‌ನಲ್ 8
4ನೇ ರೇಸ್: ಡೇರಿಯನ್ 8, ಡೆನ್‌ಸೆಟ್ಸು 2, ಎಕ್ಸಲೆಂಟ್ ಲಾಸ್ 1
5ನೇ ರೇಸ್: ಡಿಫ್ 1, ಕ್ಯಾಸ್ಟೀಲ್ 4, ಪಾಸಿಟಾನೊ 13
6ನೇ ರೇಸ್: ಪ್ಲೂಟೊ 3, ಆರ್ಟ್ ಕಲೆಕ್ಟರ್ 8, ನಾಟಿ ಪ್ಯಾಟನ್ 6
7ನೇ ರೇಸ್: ದಿ ಗೋಲ್ಡನ್ ಡ್ರೀಮ್ 3, ಪೆರಿಡಾಟ್ 6, ಎಲ್ ಅಲಮೀನ್ 7

ಉತ್ತಮ ಬೆಟ್: ಮಾಯ್ ಟಾಯ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಬಾಂಗ್ಲಾ ಪ್ರವಾಸ 2026ಕ್ಕೆ ಮುಂದೂಡಿಕೆ

ನವದೆಹಲಿ (ಪಿಟಿಐ): ಬಾಂಗ್ಲಾದೇಶದಲ್ಲಿ ಚುಟುಕು ಮತ್ತು ಏಕದಿನ ಕ್ರಿಕೆಟ್ ಸರಣಿಗಾಗಿ ಈ ವರ್ಷದ ಆಗಸ್ಟ್‌ನಲ್ಲಿ ನಿಗದಿಯಾಗಿದ್ದ ಭಾರತ ತಂಡದ ಪ್ರವಾಸ 2026ರ ಸೆಪ್ಟೆಂಬರ್‌ಗೆ ಮುಂದೂಡಿಕೆಯಾಗಿದೆ.

ಈ ಸಂಬಂಧ, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಹಾಗೂ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ(ಬಿಸಿಬಿ) ಶನಿವಾರ ಒಪ್ಪಂದ ಮಾಡಿಕೊಂಡಿವೆ. ಭಾರತ ತಂಡವು ಆಗಸ್ಟ್ 17ರಿಂದ 31ರ ವರೆಗಿನ ಪ್ರವಾಸದಲ್ಲಿ ತಲಾ ಮೂರು ಟಿ20 ಹಾಗೂ ಏಕದಿನ ಪಂದ್ಯಗಳನ್ನು ಆಡಬೇಕಾಗಿತ್ತು.

ಈಗಾಗಲೇ ನಿಗದಿಯಾಗಿರುವ ಅಂತರರಾಷ್ಟ್ರೀಯ ಸರಣಿಗಳ ವೇಳಾಪಟ್ಟಿಯನ್ನು ಅವಲೋಕಿಸಿ, ಎರಡೂ ತಂಡಗಳಿಗೆ ಅನುಕೂಲವಾಗುವಂತೆ ಸರಣಿಯನ್ನು 2026ರ ಸೆಪ್ಟೆಂಬರ್‌ನಲ್ಲಿ ಮರುನಿಗದಿ ಮಾಡಲಾಗಿದೆ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

ಪರಿಷ್ಕೃತ ವೇಳಾಪಟ್ಟಿಯನ್ನು ಶೀಘ್ರವೇ ಪ್ರಕಟ ಮಾಡಲಾಗುವುದು ಎಂದು ಬಿಸಿಬಿ ತಿಳಿಸಿದೆ.

ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಪದಚ್ಯುತಿಯ ನಂತರ ಅಲ್ಲಿ ತಲೆದೋರಿದ್ದ ಆಂತರಿಕ ಸಂಘರ್ಷ ಇನ್ನೂ ಶಮನ ಆಗದಿರುವ ಬಗ್ಗೆ ಬಿಸಿಸಿಐ ಕಳವಳ ವ್ಯಕ್ತಪಡಿಸಿದೆ. ಬಾಂಗ್ಲಾದೇಶದಲ್ಲಿ ಸಾರ್ವತ್ರಿಕ ಚುನಾವಣೆ ನಡೆದು, ಸ್ಥಿರ ಸರ್ಕಾರ ರಚನೆಯಾಗುವವರೆಗೆ ಪ್ರವಾಸ ಕೈಗೊಳ್ಳದಿರಲು ನಿರ್ಧರಿಸಿದೆ ಎಂಬುದಾಗಿ ವರದಿಯಾಗಿತ್ತು.

ಬಾಂಗ್ಲಾದಲ್ಲಿ ಮುಂದಿನ ವರ್ಷದ ಆರಂಭದಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇದೆ.

ಗಿಲ್ ಮತ್ತೆ ಸೊಬಗಿನ ಶತಕ, ದಾಖಲೆ

ಎರಡನೇ ಟೆಸ್ಟ್ ಪಂದ್ಯದಲ್ಲಿ ಆತಿಥೇಯರಿಗೆ ಒತ್ತಡ • ರಿಷಭ್, ಜಡೇಜ ಅರ್ಧಶತಕ

• ಸಿಡ್ನಿ ಕಿರಣ್

ಬರ್ಮಿಂಗ್‌ಹ್ಯಾಮ್: 'ಯುವರಾಜ' ಶುಭಮನ್ ಗಿಲ್ ಮತ್ತೊಂದು ಅಮೋಘ ಶತಕ ಬಾರಿಸಿ ಕ್ರಿಕೆಟ್ ಜಗತ್ತಿನ ಗಮನ ತಮ್ಮತ್ತ ಸೆಳೆದರು. ಈ ತಾರಾ ಆಟಗಾರ ಮುಂದೇನು ಸಾಧಿಸಲಿದ್ದಾರೆ ಎಂದು ಅಚ್ಚರಿಯಿಂದ ಎದುರು ನೋಡುವಂತೆ ಅವರು ಶನಿವಾರ ಅಸಾಧಾರಣ ಇನಿಂಗ್ಸ್ ಕಟ್ಟಿದರು.

ಎಜ್‌ಬಾಸ್ಟನ್‌ನಲ್ಲಿ ಎರಡನೇ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಜೀವನಶ್ರೇಷ್ಠ 269 ರನ್‌ಗಳ ದೊಡ್ಡ ಇನಿಂಗ್ಸ್ ಕಟ್ಟಿದ್ದ ಭಾರತ ತಂಡದ ನಾಯಕ ಎರಡನೇ ಇನಿಂಗ್ಸ್‌ನಲ್ಲಿ 162 ಎಸೆತಗಳಲ್ಲಿ 161 ರನ್ ಬಾರಿಸಿದರು. ಅವರ ಆಟದ ಬಲದಿಂದ ಭಾರತ ತಂಡವು 6 ವಿಕೆಟ್‌ಗಳಿಗೆ 427 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಆ ಮೂಲಕ ಎದುರಾಳಿ ತಂಡದ ಗೆಲುವಿಗೆ 608 ರನ್‌ಗಳ ಕಠಿಣ ಗುರಿ ನೀಡಿದೆ. ಇದಕ್ಕೆ ಉತ್ತರವಾಗಿ ಎರಡನೇ ಇನಿಂಗ್ಸ್ ಆರಂಭಿಸಿದ ಆತಿಥೇಯ ತಂಡವು ನಾಲ್ಕನೇ ದಿನದಾಟದ ಅಂತ್ಯಕ್ಕೆ 72 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದೆ.

ಭಾರತದ ಕ್ರಿಕೆಟ್‌ನಲ್ಲಿ ವಿರಾಟ್ ಕೊಹ್ಲಿ ಅವರ ಉತ್ತರಾಧಿಕಾರಿ ಎಂದು ಬಿಂಬಿತರಾಗಿರುವ ಗಿಲ್ ಈಗ ರನ್‌ಗಳ ಗುಡ್ಡೆಹಾಕಿ ದಾಖಲೆಗಳನ್ನು ಬರೆಯುತ್ತಿದ್ದಾರೆ. ಇದು ಟೆಸ್ಟ್ ಪಂದ್ಯಗಳಲ್ಲಿ ಅವರ ಎಂಟನೇ ಶತಕ. ಈ ಪಂದ್ಯದಲ್ಲಿ ಎರಡನೆಯದ್ದು. ಈ ಹಾದಿಯಲ್ಲಿ ಅವರು ದಶಕಗಳಷ್ಟು ಹಳೆಯ ದಾಖಲೆಗಳನ್ನು ಮುರಿದರು.

ಟೆಸ್ಟ್ ಪಂದ್ಯವೊಂದರಲ್ಲಿ ದ್ವಿಶತಕ ಮತ್ತು ಶತಕ ಗಳಿಸಿದ ಭಾರತದ ಎರಡನೇ ಆಟಗಾರ ಮತ್ತು ವಿಶ್ವದ ಒಂಬತ್ತನೇ ಆಟಗಾರ ಎಂಬ ಹಿರಿಮೆ ಅವರದಾಯಿತು. ಹಾಲಿ ಪಂದ್ಯದ ವೀಕ್ಷಕ ವಿವರಣೆ ನೀಡುತ್ತಿರುವ ಸುನಿಲ್ ಗಾವಸ್ಕರ್ ಈ ಸಾಧನೆಗೆ ಪಾತ್ರರಾದ ಭಾರತದ ಮೊದಲ ಆಟಗಾರ.


ಒಂದೇ ಪಂದ್ಯದಲ್ಲಿ ಅತಿ ಹೆಚ್ಚು ರನ್ ಗಳಿಸಿದ ಗಾವಸ್ಕರ್ ಅವರ ದಾಖಲೆಯನ್ನೂ ಗಿಲ್ ಮುರಿದಿದ್ದಾರೆ. ವೆಸ್ಟ್ ಇಂಡೀಸ್ ವಿರುದ್ಧ 1971ರ ಏಪ್ರಿಲ್‌ನಲ್ಲಿ ಪೋರ್ಟ್ ಆಫ್ ಸ್ಪೇನ್ ಟೆಸ್ಟ್ ಪಂದ್ಯದಲ್ಲಿ ಗಾವಸ್ಕರ್ 344 ರನ್ (124 ಮತ್ತು 220 ರನ್) ಬಾರಿಸಿದ್ದರು. ಈಗ ಗಿಲ್ (430 ರನ್) ಆ ದಾಖಲೆ ಮೀರಿದ್ದಾರೆ.

ವಿರಾಟ್ ಕೊಹ್ಲಿ ಅವರ ಬಳಿಕ, ನಾಯಕನಾಗಿ ಮೊದಲ ಎರಡು ಟೆಸ್ಟ್‌ಗಳಲ್ಲಿ ಮೂರು ಶತಕ ಬಾರಿಸಿದ ಎರಡನೇ ಆಟಗಾರ ಎಂಬ ಹಿರಿಮೆಯೂ ಗಿಲ್ ಪಾಲಾಯಿತು. ಈ ಎಲ್ಲವೂ ಕೇವಲ 25ರ ವಯಸ್ಸಿನಲ್ಲಿ. ತಮ್ಮ ವೃತ್ತಿಜೀವನದ ಉತ್ತುಂಗ ಕಾಣುವ ಮೊದಲೇ ಈ ಸಾಧನೆಗಳು ದಾಖಲಾಗಿವೆ.

ಕ್ರೀಸಿಗಿಳಿದ ಕ್ಷಣದಿಂದಲೇ ಅವರು ಕೌಶಲಯುತ ಆಟವಾಡಿದರು. ಮೊದಲ ಟೆಸ್ಟ್ ಹಿನ್ನಡೆಯ ನಂತರ ಮತ್ತೆ ಎಡವಬಾರದು ಎಂಬ ದೃಢನಿಶ್ಚಯ ಅವರಲ್ಲಿದ್ದಂತೆ ಕಂಡಿತು. ಉಪ ನಾಯಕ ಪಂತ್ ಕೂಡ ಮಿಂಚಿನ ಆಟವಾಡಿ 58 ಎಸೆತಗಳಲ್ಲಿ 65 ರನ್ ಸಿಡಿಸಿದರು. ಪಂತ್ ನಿರ್ಗಮನದ ಬಳಿಕ ರವೀಂದ್ರ ಜಡೇಜ (ಔಟಾಗದೇ 69; 118ಎ) ತಾಳ್ಮೆಯ ಆಟವಾಡಿ, ಗಿಲ್ ಅವರಿಗೆ ಉತ್ತಮವಾಗಿ ಸಾಥ್ ನೀಡಿದರು. ಅವರಿಬ್ಬರು ಐದನೇ ವಿಕೆಟ್ ಜೊತೆಯಾಟದಲ್ಲಿ 175 (208 ಎಸೆತ) ರನ್ ಸೇರಿಸಿದರು.

ವೇಗವಾಗಿ ರನ್ ಗಳಿಸಿ ಇಂಗ್ಲೆಂಡ್‌ಗೆ ಸ್ಪರ್ಧಾತ್ಮಕ ಗುರಿಯನ್ನು ನಿಗದಿಪಡಿಸುವುದು ಗಿಲ್ ಅವರ ಉದ್ದೇಶದಂತೆ ಕಂಡಿತು. ಬ್ರೆಂಡನ್ ಮೆಕ್ಕಲಂ ಅವರ ತರಬೇತಿಯಲ್ಲಿರುವ ಇಂಗ್ಲೆಂಡ್ ತಂಡ ಮೊತ್ತ ಬೆನ್ನಟ್ಟುವಲ್ಲಿ ಹೊಂದಿರುವ ಪರಿಣತಿ ತಿಳಿದೇ ಅವರು ದೊಡ್ಡ ಇನಿಂಗ್ಸ್ ಆಡಿದರು. ಆದರೆ ಮನಬಂದಂತೆ ಬ್ಯಾಟ್ ಬೀಸಲಿಲ್ಲ. ಎಚ್ಚರಿಕೆ ಮಿಶ್ರಿತ ಆಕ್ರಮಣದ ಆಟವಾಡಿದರು. ಬೆನ್ ಸ್ಟೋಕ್ಸ್ ಅವರ ಫೀಲ್ಡಿಂಗ್ ಸಂಯೋಜನೆ ಅಣಕಿಸುವಂತೆ ಆಡಿದರು. ಗಿಲ್ ಕವರ್ ಡ್ರೈವ್, ಪುಲ್ ಹೊಡೆತಗಳು, ಲಾಫ್ಟೆಡ್ ಡ್ರೈವ್‌ಗಳು ಬೌಲರ್‌ಗಳ ಲಯ ತಪ್ಪಿಸಿದವು.

ಇಂಗ್ಲೆಂಡ್‌ಗೆ ಆರಂಭಿಕ ಆಘಾತ: ಬೃಹತ್ ಗುರಿ ಪಡೆದ ಇಂಗ್ಲೆಂಡ್ ತಂಡಕ್ಕೆ ವೇಗಿಗಳಾದ ಆಕಾಶ್ ದೀಪ್ ಮತ್ತು ಮೊಹಮ್ಮದ್ ಸಿರಾಜ್ ಆರಂಭದಲ್ಲೇ ಪೆಟ್ಟು ನೀಡಿದರು. ಜ್ಯಾಕ್ ಕ್ರಾಲಿ ಅವರನ್ನು ಖಾತೆ ತೆರೆಯಲು ಸಿರಾಜ್ ಅವಕಾಶ ನೀಡಲಿಲ್ಲ. ಬೆನ್ ಡಕೆಟ್ (25) ಮತ್ತು ಜೋ ರೂಟ್ (6) ಅವರ ವಿಕೆಟ್ ಆಕಾಶ್ ಪಾಲಾದವು. ಓಲಿ ಪೋಪ್ (ಔಟಾಗದೇ 24) ಮತ್ತು ಹ್ಯಾರಿ ಬ್ರೂಕ್ (ಔಟಾಗದೇ 15) ಅವರು ಕೊನೆಯ ದಿನಕ್ಕೆ ಆಟವನ್ನು ಉಳಿಸಿಕೊಂಡಿದ್ದಾರೆ.



ಶತಕ ಗಳಿಸಿದ ಸಂಭ್ರಮದಲ್ಲಿ ಶುಭಮನ್ ಗಿಲ್ ಎಪಿ ಚಿತ್ರ

ಟೆಸ್ಟ್ ಪಂದ್ಯವೊಂದರಲ್ಲಿ ಭಾರತದ ಬ್ಯಾಟರ್‌ನ ಗರಿಷ್ಠ ರನ್

ರನ್	ಆಟಗಾರ	ಎದುರಾಳಿ	ವರ್ಷ
430	ಶುಭಮನ್ ಗಿಲ್	ಇಂಗ್ಲೆಂಡ್	2025
344	ಸುನಿಲ್ ಗಾವಸ್ಕರ್	ವೆಸ್ಟ್ ಇಂಡೀಸ್	1971
340	ವಿವಿಎಸ್ ಲಕ್ಷ್ಮಣ್	ಆಸ್ಟ್ರೇಲಿಯಾ	2001
330	ಸೌರವ್ ಗಂಗೂಲಿ	ಪಾಕಿಸ್ತಾನ	2007
319	ವಿರೇಂದ್ರ ಸೆಹ್ವಾಗ್	ದಕ್ಷಿಣ ಆಫ್ರಿಕಾ	2008

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ: 587 (151 ಓವರ್)
ಇಂಗ್ಲೆಂಡ್: 407 (89.3 ಓವರ್‌ಗಳಲ್ಲಿ)
ಎರಡನೇ ಇನಿಂಗ್ಸ್: ಭಾರತ 6ಕ್ಕೆ 427 (83 ಓವರ್‌ಗಳಲ್ಲಿ) (ಶುಕ್ರವಾರ 1 ವಿಕೆಟ್‌ಗೆ 64)
ಕೆ.ಎಲ್.ರಾಹುಲ್ ಬಿ ಟಂಗ್ 55 (84ಎ, 4x10)
ಕರುಣ್ ಸಿ ಸ್ಮಿತ್ ಬಿ ಕಾರ್ಸೆ 26 (46ಎ, 4x5)
ಶುಭಮನ್ ಸಿ ಮತ್ತು ಬಿ ಬಷೀರ್ 161 (162ಎ, 4x13, 6x8)
ರಿಷಭ್ ಪಂತ್ ಸಿ ಡಕೆಟ್ ಬಿ ಬಷೀರ್ 65 (58ಎ, 4x8, 6x3)
ರವೀಂದ್ರ ಜಡೇಜ ಔಟಾಗದೇ 69 (118ಎ, 4x5, 6x1)
ನಿತೀಶ್ ಸಿ ಕ್ರಾಲಿ ಬಿ ರೂಟ್ 1 (2ಎ)
ವಾಷಿಂಗ್ಟನ್ ಔಟಾಗದೇ 12 (7ಎ, 4x1, 6x1)
ಇತರೆ: 10 (ಬೈ 3, ಲೆಗ್‌ಬೈ 4, ವೈಡ್ 2, ನೋಬಾಲ್ 1)
ವಿಕೆಟ್ ಪತನ: 2-96 (ಕರುಣ್ ನಾಯರ್, 20.6), 3-126 (ಕೆ.ಎಲ್. ರಾಹುಲ್, 29.1), 4-236 (ರಿಷಭ್ ಪಂತ್, 46.2), 5-411 (ಶುಭಮನ್ ಗಿಲ್, 80.5), 6-412 (ನಿತೀಶ್ ರೆಡ್ಡಿ, 81.1)
ಬೌಲಿಂಗ್: ಕ್ರಿಸ್ ವೋಕ್ಸ್ 14-3-61-0, ಬ್ರೈಡನ್ ಕಾರ್ಸ್ 12-2-56-1, ಜೋಶ್ ಟಂಗ್ 15-2-93-2, ಬೆನ್ ಸ್ಟೋಕ್ಸ್ 7-1-26-0, ಶೋಯೆಬ್ ಬಷೀರ್ 26-1-119-2, ಜೋ ರೂಟ್ 9-1-65-1
ಇಂಗ್ಲೆಂಡ್: 3ಕ್ಕೆ 72 (16 ಓವರ್‌ಗಳಲ್ಲಿ)
ಕ್ರಾಲಿ ಸಿ (ಸಬ್) ಸುದರ್ಶನ್ ಬಿ ಸಿರಾಜ್ 0 (7ಎ)
ಡಕೆಟ್ ಬಿ ಆಕಾಶ್ 25 (15ಎ, 4x5)
ಓಲಿ ಪೋಪ್ ಔಟಾಗದೇ 24 (44ಎ, 4x3)
ರೂಟ್ ಬಿ ಆಕಾಶ್ 6 (16ಎ, 4x1)
ಹ್ಯಾರಿ ಬ್ರೂಕ್ ಔಟಾಗದೇ 15 (15ಎ, 4x2)
ಇತರೆ: 2 (ಲೆಗ್‌ಬೈ 1, ನೋಬಾಲ್ 1)
ವಿಕೆಟ್ ಪತನ: 1-11 (ಜ್ಯಾಕ್ ಕ್ರಾಲಿ, 1.4), 2-30 (ಬೆನ್ ಡಕೆಟ್, 4.3), 3-50 (ಜೋ ರೂಟ್, 10.2)
ಬೌಲಿಂಗ್: ಆಕಾಶ್‌ದೀಪ್ 8-1-36-2, ಮೊಹಮ್ಮದ್ ಸಿರಾಜ್ 5-1-29-1, ಪ್ರಸಿದ್ಧ ಕೃಷ್ಣ 3-0-6-0

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_INTRA_V30_BS_VI
YOM – 2023
Reg No – KA41D4655
2) CB_MAHINDRA_BOLERO_MAXXCITY_PICKUP
YOM – -
Reg No – KA05AP4483
3) CB_SIGNA_2823_CHASIS_TRANSIT_MIXER_7RMC_TATAMOTORS
YOM –
Reg No – KA53AB1664
4) CB_BACKHOE_LOADER_BULL_HD76_BULL
YOM – -
Reg No – KA06MB1970
5) CB_LPT1212_TATAMOTORS
YOM – 2022
Reg No – KA51AH5682
6) CB_MAHINDRA_BOLERO_MAXXCITY_PICKUP
YOM – 2024
Reg No – KA08A3106
7) CB_TATA_LP_412_36_BUS_CHASSIS
YOM – -
Reg No – KA14C8234
8) CB_AL1615_HE4750_BS_6
YOM – 2022
Reg No – KA705270
9) CB_Ashok Leyland Dost GOODS
YOM – -
Reg No – KA17AA8113
10) CB_EICHER_PRO_2110_E_BS_6_CAB_CHASSIS
YOM – 2022
Reg No – KA07B4826
11) CB_MAHINDRA BLAZO37 FBT GOODS
YOM – 2018
Reg No – KA32D3064
12) TATA MOTORS LTD. - CB_LPT_3718
YOM – 2018
Reg No – KA52A6735
13) CB_AL_BADA_DOST
YOM – 2023
Reg No – KA13D4739
14) CB_Ashok Leyland Dost GOODS
YOM – 2023
Reg No – KA63A1810
15) CB_TATA LPT 2518 CAB CHASSIS TANKER MS
YOM – 2016
Reg No - KA19AB3533
16) CB_MARUTI_SUPER_CARRY_CNG
YOM – 2023
Reg No – KA18C9497
17) CB_MARUTI SUPER CARRY
YOM – 2023
Reg No – KA17AA6704
18) CB_Ashok Leyland Dost GOODS
YOM – 2016
Reg No – KA32C7531
19) CB_AL_GC3520_6300MM_ASHOK_LEYLAND
YOM – -
Reg No – KA01AQ5627
20) CB_MAHINDRA_BOLERO_MAXXCITY_PICKUP
YOM – -
Reg No – KA663875
21) CB_MAH_JEETO
YOM – 2022
Reg No – KA11C2255
22) CB_RIG COMPRESSOR UNIT 2518
YOM – 2017
Reg No – KA01AH5824

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"
INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 06.07.2025
(Please note that closing Auction date would not be a Weekly off / Holiday)
BRANCH ADDRESS:
KOTAK MAHINDRA BANK LTD., 22, MG ROAD, BANGALORE KARNATAKA – 560001
OR
Contact: Prashanthkumar S
Kotak Mahindra Bank Ltd.
Contact / 080 - 61564202

ಮಹಿಳಾ ಟಿ20 ಕ್ರಿಕೆಟ್: ಭಾರತದ ಎದುರು ಗೆದ್ದ ಇಂಗ್ಲೆಂಡ್: ಮಂದಾನ ಅರ್ಧಶತಕ

ಸೋಫಿಯಾ ಆಟಕ್ಕೆ ಒಲಿದ ಜಯ

ಲಂಡನ್ (ಪಿಟಿಐ/ಎಎಫ್‌ಪಿ): ಸೋಫಿಯಾ ಡಂಕ್ಲಿ ಮತ್ತು ವೈಟ್ ಹಾಜ್ ಅವರ ಅಮೋಘ ಜೊತೆಯಾಟದ ಬಲದಿಂದ ಇಂಗ್ಲೆಂಡ್ ಮಹಿಳಾ ಕ್ರಿಕೆಟ್ ತಂಡವು ಭಾರತ ತಂಡದ ಎದುರಿನ ಟಿ20 ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಶುಕ್ರವಾರ ತಡರಾತ್ರಿ ನಡೆದ ಸರಣಿಯ ಮೂರನೇ ಪಂದ್ಯದಲ್ಲಿ ಆತಿಥೇಯ ತಂಡವು 5 ರನ್‌ಗಳಿಂದ ಜಯಿಸಿತು. ಐದು ಪಂದ್ಯಗಳ ಸರಣಿಯ ಮೊದಲೆರಡೂ ಪಂದ್ಯಗಳಲ್ಲಿ ಜಯಿಸಿದ್ದ ಭಾರತದ ಓಟಕ್ಕೆ ಅಡ್ಡಗಾಲು ಹಾಕಿತು. ಭಾರತ ವನಿತೆಯರ ತಂಡವು 2–1ರ ಮುನ್ನಡೆ ಕಾಯ್ದುಕೊಂಡಿದೆ.

ಟಾಸ್ ಗೆದ್ದ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಇಂಗ್ಲೆಂಡ್ ತಂಡವು ಆರಂಭಿಕ ಬ್ಯಾಟರ್ ಸೋಫಿ ಡಂಕ್ಲಿ (75; 53ಎಸೆತ, 4X7, 6X1) ಮತ್ತು ವೈಟ್ ಹಾಜ್ (66; 42ಎ, 4X7, 6X3) ಮೊದಲ ವಿಕೆಟ್ ಜೊತೆಯಾಟದಲ್ಲಿ 131 ರನ್ ಸೇರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 171 ರನ್‌ಗಳ ಹೋರಾಟದ ಮೊತ್ತ ಗಳಿಸಲು ಸಾಧ್ಯವಾಯಿತು. 16ನೇ ಓವರ್‌ನಲ್ಲಿ ಸೋಫಿಯಾ ವಿಕೆಟ್ ಗಳಿಸಿದ ದೀಪ್ತಿ ಶರ್ಮಾ ಜೊತೆಯಾಟವನ್ನು ಮುರಿದರು. ನಂತರ ಬಂದ ಬ್ಯಾಟರ್‌ಗಳು ಹೆಚ್ಚು ರನ್ ಹೊಡೆಯಲಿಲ್ಲ. ಅರುಂಧತಿ ರೆಡ್ಡಿ (32ಕ್ಕೆ3), ದೀಪ್ತಿ (27ಕ್ಕೆ3) ಮತ್ತು ಶ್ರೀಚರಣಿ (43ಕ್ಕೆ2) ಅವರು ಬ್ಯಾಟರ್‌ಗಳಿಗೆ ಕಡಿವಾಣ ಹಾಕಿದರು.

ಗುರಿ ಬೆನ್ನಟ್ಟಿದ ಭಾರತ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 166 ರನ್ ಗಳಿಸಿತು. ಸರಣಿಯ ಮೊದಲ ಪಂದ್ಯದಲ್ಲಿ ಶತಕ ಗಳಿಸಿದ್ದ ಸ್ಮೃತಿ ಮಂದಾನ (56; 49ಎ, 4X10) ಇಲ್ಲಿಯೂ ಅರ್ಧಶತಕ ಗಳಿಸಿದರು. ಅವರು ಮತ್ತು ಶಫಾಲಿ ವರ್ಮಾ (47; 25ಎ, 4X7, 6X2) ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ ಒಂಬತ್ತು ಓವರ್‌ಗಳಲ್ಲಿ 85 ರನ್ ಸೇರಿಸಿದರು. ಆದರೆ ನಂತರ ಬಂದ ಬ್ಯಾಟರ್‌ಗಳು ಹೆಚ್ಚು ರನ್ ಗಳಿಸದಂತೆ ಇಂಗ್ಲೆಂಡ್ ಬೌಲರ್‌ಗಳು ಬಿಗಿ ದಾಳಿ ನಡೆಸಿದರು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 20 ಓವರ್‌ಗಳಲ್ಲಿ 9ಕ್ಕೆ171 (ಸೋಫಿಯಾ ಡಂಕ್ಲಿ 75, ವೈಟ್ ಹಾಜ್ 66, ಅರುಂಧತಿ ರೆಡ್ಡಿ 32ಕ್ಕೆ3, ದೀಪ್ತಿ ಶರ್ಮಾ 27ಕ್ಕೆ3, ಶ್ರೀ ಚರಣಿ 43ಕ್ಕೆ2) ಭಾರತ: 20 ಓವರ್‌ಗಳಲ್ಲಿ 5ಕ್ಕೆ166 (ಸ್ಮೃತಿ ಮಂದಾನ 56, ಶಫಾಲಿ ವರ್ಮಾ 47, ಜೆಮಿಮಾ ರಾಡ್ರಿಗ್ಸ್ 20, ಹರ್ಮನ್‌ಪ್ರೀತ್ ಕೌರ್ 23, ಲಾರೆನ್ ಫೈಲರ್ 30ಕ್ಕೆ2)
ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 5 ರನ್‌ಗಳ ಜಯ.
ಪಂದ್ಯದ ಆಟಗಾರ್ತಿ: ಸೋಫಿಯಾ ಡಂಕ್ಲಿ.



ಸೋಫಿಯಾ ಡಂಕ್ಲಿ ಮತ್ತು ವೈಟ್ ಹಾಜ್ ಅವರ ಜತೆಯಾಟದ ವೈಖರಿ

ವಿಶ್ವ ಮಹಿಳಾ ಚೆಸ್ ಕಪ್ ಇಂದಿನಿಂದ



ಕೋನೇರು

ಬಟುಮಿ (ಜಾರ್ಜಿಯಾ): ಭಾರತದ ಕೋನೇರು ಹಂಪಿ ಅವರಿಗೆ ಫಿಡೆ ವಿಶ್ವ ಮಹಿಳಾ ಚೆಸ್ ಕಪ್ ಟೂರ್ನಿಯಲ್ಲಿ ನಾಲ್ಕನೇ ಶ್ರೇಯಾಂಕ ನೀಡಲಾಗಿದೆ. ಭಾನುವಾರ ಆರಂಭವಾಗುವ ಈ ಟೂರ್ನಿಯಲ್ಲಿ ಮೊದಲ ಮೂರು ಸ್ಥಾನ ಪಡೆದವರು ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡುವ ಅರ್ಹತೆ ಪಡೆಯಲಿದ್ದಾರೆ.

ಹಂಪಿ ಅವರು ಇಲ್ಲಿ ಫೇವರಿಟ್‌ಗಳಲ್ಲಿ ಒಬ್ಬರಾಗಿದ್ದಾರೆ. ಚೀನಾದ ಲೀ ಟಿಂಗ್ಜೀ, ಜಿನರ್ ಝೂ ಮತ್ತು ಝೊಂಗ್ವಿ ತಾನ್ ಅವರು ಕ್ರಮವಾಗಿ ಮೊದಲ, ಎರಡನೇ ಮತ್ತು ಮೂರನೇ ಶ್ರೆಯಾಂಕ ಪಡೆದಿದ್ದಾರೆ. ಆ ಮೂಲಕ ಈ ಮಹಿಳಾ ವಿಭಾಗದಲ್ಲಿ ಏಷ್ಯಾದ ಪಾರಮ್ಯ ಮುಂದುವರಿದಿದೆ.

ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಎಂಟು ಮಂದಿಗೆ ಮಾತ್ರ ಆಡಲು ಅವಕಾಶ ಇದ್ದು ವಿಜೇತ ಆಟಗಾರ್ತಿ, ವಿಶ್ವ ಚಾಂಪಿಯನ್‌ಗೆ (ಪ್ರಸ್ತುತ ಚೀನಾ ವೆನ್ಜುನ್ ಜು) ಸವಾಲು ಹಾಕುವ ಅರ್ಹತೆ ಪಡೆಯಲಿದ್ದಾರೆ. ಅಗ್ರ 21 ರೇಟೆಡ್ ಆಟಗಾರ್ತಿಯರಿಗೆ ನೇರವಾಗಿ ಎರಡನೇ ಸುತ್ತಿಗೆ ಬೈ ನೀಡಲಾಗಿದೆ. ಗ್ರ್ಯಾಂಡ್‌ಮಾಸ್ಟರ್‌ಗಳಾದ ದ್ರೋಣವಲ್ಲಿ ಹಾರಿಕ, ಆರ್. ವೈಶಾಲಿ, ಐಎಂ ದಿವ್ಯಾ ದೇಶಮುಖ್, ವಂತಿಕಾ ಅಗರವಾಲ್, ಪದ್ಮಿನಿ ರಾವುತ್, ಪಿ.ವಿ.ನಂದಿತಾ, ಮನಿಷಾ ಮೊಹಾಂತಿ ಮತ್ತು ಕೆ.ಪ್ರಿಯಾಂಕಾ ಅವರೂ ಭಾಗವಹಿಸಲಿದ್ದಾರೆ.

ರ್‍ಯಾಪಿಡ್ ವಿಭಾಗದಲ್ಲಿ ಅಗ್ರಸ್ಥಾನಕ್ಕೇರಿದ ಗುಕೇಶ್

ಝಾಗ್ರೆಬ್ (ಕ್ರೊವೇಷ್ಯಾ), (ಪಿಟಿಐ): ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಸೂಪರ್ ಯುನೈಟೆಡ್ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಟೂರ್ನಿಯಲ್ಲಿ ರ್‍ಯಾಪಿಡ್ ವಿಭಾಗದಲ್ಲಿ ಕೊನೆಯ ಸುತ್ತಿನಲ್ಲಿ ಅಮೆರಿಕದ ವೆಸ್ಲಿ ಸೊ ಅವರನ್ನು ಸೋಲಿಸಿದರು. ಈ ವಿಭಾಗದಲ್ಲಿ ಭಾರತದ ಆಟಗಾರ ಅಗ್ರಸ್ಥಾನ ಪಡೆದರು.

ಈ ಟೂರ್ನಿಯು ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿದೆ. ಮೂರನೇ ಹಾಗೂ ಕೊನೆಯ ದಿನವಾದ ಶುಕ್ರವಾರ ಎರಡು ಪಂದ್ಯಗಳನ್ನು (ಹಾಲೆಂಡ್‌ನ ಅನಿಶ್ ಗಿರಿ ಮತ್ತು ಕ್ರೊವೇಷ್ಯಾದ ಇವಾನ್ ಸರಿಕ್ ಜೊತೆ) ಡ್ರಾ ಮಾಡಿಕೊಂಡ ಗುಕೇಶ್, ಕೊನೆಯ ಪಂದ್ಯದಲ್ಲಿ ಜಯಗಳಿಸಿ ಗರಿಷ್ಠ 18ರಲ್ಲಿ 14 ಪಾಯಿಂಟ್ಸ್ ಗಳಿಸಿ ಗಮನಸೆಳೆದರು.

ರ್‍ಯಾಪಿಡ್‌ನಲ್ಲಿ ಅವರು ಎರಡು ಡ್ರಾ, ಆರು ಗೆಲುವು, ಒಂದು ಸೋಲಿನೊಡನೆ ಅಗ್ರಸ್ಥಾನ ಗಳಿಸಿದರು. ಇನ್ನು ಬ್ಲಿಟ್ಜ್ ಸುತ್ತಿನ ಪಂದ್ಯಗಳು ಬಾಕಿವುಳಿದಿವೆ.

ಏಷ್ಯನ್ ಕಪ್: ಭಾರತದ ವನಿತೆಯರು ಅರ್ಹತೆ

ಚಿಯಾಂಗ್ ಮೈ (ಥಾಯ್ಲೆಂಡ್) (ಪಿಟಿಐ): ಸಂಗೀತಾ ಬಾಸ್ಫೋರ್ ಅವರ ಆಟದ ನೆರವಿನಿಂದ ಭಾರತ ಮಹಿಳಾ ಫುಟ್‌ಬಾಲ್ ತಂಡವು 2–1 ಗೋಲುಗಳಿಂದ ತನಗಿಂತ ಮೇಲಿನ ಕ್ರಮಾಂಕದ ಥಾಯ್ಲೆಂಡ್ ತಂಡವನ್ನು ಮಣಿಸಿ ಮುಂದಿನ ವರ್ಷ ನಡೆಯುವ ಎಎಫ್‌ಸಿ ಏಷ್ಯನ್ ಕಪ್ ಟೂರ್ನಿಗೆ ಅರ್ಹತೆ ಪಡೆಯಿತು.

ಶನಿವಾರ ನಡೆದ ಪಂದ್ಯದಲ್ಲಿ ಸಂಗೀತಾ ಎರಡು ಗೋಲು ಗಳಿಸಿ ಗೆಲುವಿನ ರೂವಾರಿಯಾದರು. ಭಾರತ ತಂಡವು ಅರ್ಹತಾ ಸುತ್ತಿನ ಎಲ್ಲಾ ನಾಲ್ಕು ಪಂದ್ಯಗಳನ್ನು ಗೆದ್ದಂತಾಗಿದೆ. ಈ ಮೂಲಕ ಬಿ ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿತು. ಮಹಿಳಾ ಫುಟ್‌ಬಾಲ್ ಇತಿಹಾಸದಲ್ಲಿ ಥಾಯ್ಲೆಂಡ್ ತಂಡದ ವಿರುದ್ಧ ಭಾರತಕ್ಕೆ ಇದು ಮೊದಲ ಗೆಲುವಾಗಿದೆ.

ಭಾರತವು ಮೊದಲ ಬಾರಿ ಕ್ವಾಲಿಫೈಯರ್ ಮೂಲಕ ಏಷ್ಯನ್ ಕಪ್ ಟೂರ್ನಿಗೆ ಅರ್ಹತೆ ಸಂಪಾದಿಸಿದೆ. ಆಸ್ಟ್ರೇಲಿಯಾದ ಆತಿಥ್ಯದಲ್ಲಿ ಟೂರ್ನಿಯು 2026ರಲ್ಲಿ ನಡೆಯಲಿದೆ.

ಸಬಲೆಂಕಾ, ಸಿನ್ನರ್ ಮುನ್ನಡೆ

ಲಂಡನ್ (ಎಪಿ): ಅಗ್ರ ಶ್ರೇಯಾಂಕದ ಅರಿನಾ ಸಬಲೆಂಕಾ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವರಿಸಿದ್ದಾರೆ. ರಷ್ಯಾದ ಹದಿಹರೆಯದ ತಾರೆ ಮಿರಾ ಆ್ಯಂಡ್ರೀವಾ ಅವರೂ ಪ್ರಯಾಸವಿಲ್ಲದೆ ಪ್ರಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದರು.

ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಶನಿವಾರ ನಡೆದ ಮಹಿಳೆಯರ ಸಿಂಗಲ್ಸ್‌ನ ಮೂರನೇ ಸುತ್ತಿನ ರೋಚಕ ಹಣಾಹಣಿಯಲ್ಲಿ ಬೆಲರೂಸ್‌ನ ಸಬಲೆಂಕಾ 7-6(6), 6-4ರಿಂದ ಬ್ರಿಟನ್‌ನ ಎಮ್ಮಾ ರಾಡುಕಾನು ಅವರನ್ನು ಸೋಲಿಸಿ ಅಂತಿಮ 16ರ ಘಟ್ಟ ತಲುಪಿದರು.

ಮೂರು ಗ್ರ್ಯಾನ್‌ಸ್ಲಾಮ್ ಕಿರೀಟಗಳಿಗೆ ಒಡತಿಯಾಗಿರುವ 27 ವರ್ಷ ವಯಸ್ಸಿನ ಸಬಲೆಂಕಾ ಅವರಿಗೆ ಮೊದಲ ಸೆಟ್‌ನಲ್ಲಿ 2021ರ ಅಮೆರಿಕ ಓಪನ್ ಚಾಂಪಿಯನ್ ರಾಡುಕಾನು ಅವರಿಂದ ಪ್ರಬಲ ಪೈಪೋಟಿ ಎದುರಾಯಿತು. 74 ನಿಮಿಷ ಹೋರಾಟ ಕಂಡ ಆರಂಭಿಕ ಸೆಟ್ ಅನ್ನು ಬೆಲರೂಸ್‌ನ ಆಟಗಾರ್ತಿ ಟೈಬ್ರೇಕರ್‌ನಲ್ಲಿ ಗೆದ್ದರು. ಎರಡನೇ ಸೆಟ್ ಅನ್ನು ಕೇವಲ 30 ನಿಮಿಷದಲ್ಲಿ ವಶಮಾಡಿಕೊಂಡ ಸಬಲೆಂಕಾ, ಇಲ್ಲಿ ಚೊಚ್ಚಲ ಪ್ರಶಸ್ತಿ ಜಯಿಸುವತ್ತ ಹೆಜ್ಜೆಯಿಟ್ಟರು.

ಕೊನೆಯ ಮೂರು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಫೈನಲ್ ತಲುಪಿರುವ ಸಬಲೆಂಕಾ ಇಲ್ಲಿ ಪ್ರಶಸ್ತಿ ಗೆಲ್ಲುವ ಫೇವರೀಟ್ ಎನಿಸಿದ್ದಾರೆ. ಮಹಿಳೆಯರ ಸಿಂಗಲ್ಸ್‌ನಲ್ಲಿ ಎರಡರಿಂದ ಆರನೇ ಶ್ರೇಯಾಂಕದ ಆಟಗಾರ್ತಿಯರು ಈಗಾಗಲೇ ಹೊರಬಿದ್ದಿದ್ದಾರೆ. ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ 2021 ಮತ್ತು 2023ರ ಆವೃತ್ತಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದು ಈವರೆಗಿನ ಅವರ ಉತ್ತಮ ಸಾಧನೆಯಾಗಿದೆ.

ಆ್ಯಂಡ್ರೀವಾ ಮುನ್ನಡೆ: ಏಳನೇ ಶ್ರೇಯಾಂಕದ ಆ್ಯಂಡ್ರೀವಾ 6-1, 6-3ರಿಂದ ಅಮೆರಿಕದ ಹೇಲಿ ಬ್ಯಾಪ್ಟಿಸ್ಟ್ ಅವರನ್ನು ಮಣಿಸಿ ಎರಡನೇ ಬಾರಿ ಇಲ್ಲಿ ನಾಲ್ಕನೇ ಸುತ್ತು ಪ್ರವೇಶಿಸಿದರು. 55ನೇ ಕ್ರಮಾಂಕದ ಬ್ಯಾಪ್ಟಿಸ್ಟ್ ಹೆಚ್ಚಿನ ಪ್ರತಿರೋಧ ತೋರದೆ ಹೊರ ನಡೆದರು.

ಫ್ರೆಂಚ್ ಓಪನ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದ 18 ವರ್ಷ ವಯಸ್ಸಿನ ಆ್ಯಂಡ್ರೀವಾ, ಇಲ್ಲಿ ಸಬಲೆಂಕಾ ಬಳಿಕ ಸ್ಪರ್ಧೆಯಲ್ಲಿ ಉಳಿದಿರುವ ಉನ್ನತ ಶ್ರೇಯಾಂಕದ ಆಟಗಾರ್ತಿಯಾಗಿದ್ದಾರೆ. ಅವರು ಮುಂದಿನ ಸುತ್ತಿನಲ್ಲಿ ಹತ್ತನೇ ಶ್ರೇಯಾಂಕದ ಎಮ್ಮಾ ನವರೊ ಅವರನ್ನು ಎದುರಿಸಲಿದ್ದಾರೆ. ಅಮೆರಿಕದ ನವರೊ 6-3, 6-0, 6-4ರಿಂದ ಹಾಲಿ ಚಾಂಪಿಯನ್, 17ನೇ ಶ್ರೇಯಾಂಕದ ಬಾರ್ಬೊರಾ ಕ್ರೆಜ್ಸಿಕೋವಾ (ಝೆಕ್ ರಿಪಬ್ಲಿಕ್) ಅವರನ್ನು ಸೋಲಿಸಿದರು.

ಸಿನ್ನರ್ ಮುನ್ನಡೆ: ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಒಂದೇ ಒಂದು ಸೆಟ್ ಕಳೆದುಕೊಳ್ಳದೆ ಅಂತಿಮ 16ರ ಘಟ್ಟಕ್ಕೆ ಲಗ್ಗೆ ಹಾಕಿದರು. ಇಟಲಿಯ ಸಿನ್ನರ್ 6-1, 6-3, 6-1ರಿಂದ ಸ್ಪೇನ್‌ನ ಪೆಡ್ರೊ ಮಾರ್ಟಿನೆಜ್ ಅವರನ್ನು ಮಣಿಸಿದರು.

ಮೂರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿರುವ ಸಿನ್ನರ್, ಭುಜದ ನೋವಿನಿಂದ ಬಳಲುತ್ತಿದ್ದ 52ನೇ ಕ್ರಮಾಂಕದ ಎದುರಾಳಿಯನ್ನು ಎರಡು ಗಂಟೆಗಳ ಅವಧಿಯಲ್ಲಿ ಹಿಮ್ಮೆಟ್ಟಿಸಿದರು. ನಾಲ್ಕನೇ ಸುತ್ತಿನಲ್ಲಿ ಅವರು 19ನೇ ಶ್ರೇಯಾಂಕದ ಗ್ರಿಗರ್ ಡಿಮಿಟ್ರೋವ್ (ಬಲ್ಗೇರಿಯಾ) ಅವರನ್ನು ಎದುರಿಸಲಿದ್ದಾರೆ.

ಡೋಪಿಂಗ್ ನಿಷೇಧ ಮುಗಿಸಿ ಮೇ ತಿಂಗಳಲ್ಲಿ ವಾಪಸಾದ 23 ವರ್ಷ ವಯಸ್ಸಿನ ಸಿನ್ನರ್, ಇಟಾಲಿಯನ್ ಓಪನ್ ಮತ್ತು ಫ್ರೆಂಚ್ ಓಪನ್ ಫೈನಲ್‌ನಲ್ಲಿ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ವಿರುದ್ಧ ಸೋತಿದ್ದರು.

ಬಾಲಾಜಿ- ವರೇಲಾ ಜೋಡಿಗೆ ಸೋಲು: ಭಾರತದ ಶ್ರೀರಾಮ್ ಬಾಲಾಜಿ ಮತ್ತು ಮಿಗುಯೆಲ್ ಏಂಜೆಲ್ ರೆಯೆಸ್- ವರೇಲಾ (ಮೆಕ್ಸಿಕೊ) ಜೋಡಿಯು ವಿಂಬಲ್ಡನ್ ಪುರುಷರ ಡಬಲ್ಸ್‌ನ ಎರಡನೇ ಸುತ್ತಿನಲ್ಲಿ ಹೊರಬಿದ್ದಿತು.

ಶನಿವಾರ ನಡೆದ ಪಂದ್ಯದಲ್ಲಿ ಶ್ರೇಯಾಂಕ ರಹಿತ ಬಾಲಾಜಿ- ವರೇಲಾ ಜೋಡಿಯು 4-6, 4-6ರಿಂದ ನಾಲ್ಕನೇ ಶ್ರೇಯಾಂಕದ ಸ್ಪೇನ್‌ನ ಮಾರ್ಸೆಲ್ ಗ್ರಾನೋಲ್ಲರ್ಸ್ ಹಾಗೂ ಅರ್ಜೆಂಟೀನಾದ ಹೊರಾಸಿಯೊ ಜೆಬಲ್ಲೋಸ್ ಅವರಿಗೆ ಮಣಿಯಿತು.



ಗೆಲುವಿನ ಸಂಭ್ರಮದಲ್ಲಿ ಸರ್ಬಿಯಾದ ನೊವಾಕ್ ಜೊಕೊವಿಚ್ ಎಎಫ್‌ಪಿ ಚಿತ್ರ

ಜೊಕೊವಿಚ್ ದಾಖಲೆ

ಸರ್ಬಿಯಾದ ತಾರೆ ನೊವಾಕ್ ಜೊಕೊವಿಚ್ ಅವರು ವಿಂಬಲ್ಡನ್‌ನಲ್ಲಿ ತಮ್ಮ 100ನೇ ಗೆಲುವು ದಾಖಲಿಸಿದರು. ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯನ್ನು ಎದುರು ನೋಡುತ್ತಿರುವ ಆರನೇ ಶ್ರೇಯಾಂಕದ ಜೊಕೊವಿಚ್ 6-3, 6-0, 6-4ರಿಂದ ಡೇವಿಸ್ ಕಪ್ ತಂಡದ ಸಹ ಆಟಗಾರ ಮಿಯೋಮಿರ್ ಕೆಕ್ಮಾನೋವಿಕ್ ಅವರನ್ನು ಸೋಲಿಸಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ವಿಂಬಲ್ಡನ್‌ನಲ್ಲಿ ಮಾರ್ಟಿನಾ ನವ್ರಾಟಿಲೋವಾ 120 ಪಂದ್ಯಗಳನ್ನು ಗೆದ್ದಿದ್ದರೆ, ರೋಜರ್ ಫೆಡರರ್ 105 ಪಂದ್ಯಗಳನ್ನು ಗೆದ್ದ ದಾಖಲೆ ಹೊಂದಿದ್ದಾರೆ. 100 ಪಂದ್ಯ ಗೆದ್ದ ಜೊಕೊವಿಚ್ ಮೂರನೇ ಸ್ಥಾನದಲ್ಲಿದ್ದಾರೆ.

ಇಲ್ಲಿ ಏಳು ಬಾರಿ ಚಾಂಪಿಯನ್ ಆಗಿರುವ 38 ವರ್ಷ ವಯಸ್ಸಿನ ಜೊಕೊವಿಕ್, 2023ರ ಅಮೆರಿಕ ಓಪನ್ ನಂತರ ಪ್ರಶಸ್ತಿ ಬರ ಎದುರಿಸುತ್ತಿದ್ದಾರೆ. ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಹಿಂದಿನ ಎರಡೂ ಆವೃತ್ತಿಗಳಲ್ಲಿ ಫೈನಲ್ ಪ್ರವೇಶಿಸಿ, ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ವಿರುದ್ಧ ಸೋತಿದ್ದರು. ನಾಲ್ಕನೇ ಸುತ್ತಿನಲ್ಲಿ 11ನೇ ಶ್ರೇಯಾಂಕದ ಅಲೆಕ್ಸ್ ಡಿ ಮಿನೋರ್ ಎದುರಾಳಿಯಾಗಿದ್ದಾರೆ.

ಕೆನಡಾ ಓಪನ್: ಶ್ರೀಕಾಂತ್‌ಗೆ ನಿರಾಸೆ

ಕ್ಯಾಲ್ಗರಿ (ಕೆನಡಾ) (ಪಿಟಿಐ): ಭಾರತದ ಅನುಭವಿ ಆಟಗಾರ ಕಿದಂಬಿ ಶ್ರೀಕಾಂತ್ ಅವರು ಇಲ್ಲಿ ನಡೆಯುತ್ತಿರುವ ಕೆನಡಾ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಸಿಂಗಲ್ಸ್‌ನಲ್ಲಿ ಸೆಮಿಫೈನಲ್‌ನಲ್ಲಿ ಹೊರಬಿದ್ದರು.

32 ವರ್ಷ ವಯಸ್ಸಿನ ಶ್ರೀಕಾಂತ್ ಅವರು 21–19, 14–21, 18–21ರಿಂದ ವಿಶ್ವದ ಆರನೇ ಕ್ರಮಾಂಕದ ಕೆಂಟಾ ನಿಶಿಮೊಟೊ (ಜಪಾನ್) ಅವರಿಗೆ ಮಣಿದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ 49ನೇ ಸ್ಥಾನದಲ್ಲಿರುವ ಭಾರತದ ಆಟಗಾರ ಮೊದಲ ಗೇಮ್‌ನಲ್ಲಿ ಮೇಲುಗೈ ಸಾಧಿಸಿ, ನಂತರದಲ್ಲಿ ಲಯ ತಪ್ಪಿದರು. ಶ್ರೀಕಾಂತ್ ನಿರ್ಗಮನದೊಂದಿಗೆ ಟೂರ್ನಿಯಲ್ಲಿ ಭಾರತದ ಸವಾಲು ಕೂಡ ಅಂತ್ಯಗೊಂಡಿದೆ.

ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಶ್ರೀಕಾಂತ್ 21–18, 21–9ರಿಂದ ನೇರ ಗೇಮ್‌ಗಳಲ್ಲಿ ಚೀನಾ ತೈಪೆಯ ಚೌ ಟಿಯೆನ್ ಚೆನ್ ಅವರಿಗೆ ಆಘಾತ ನೀಡಿದ್ದರು.



ಕಿದಂಬಿ ಶ್ರೀಕಾಂತ್ 'ಎಕ್ಸ್' ಚಿತ್ರ

ವೇಟ್‌ಲಿಫ್ಟಿಂಗ್: ಫೈನಲ್‌ಗೆ ಭಾರತದ ಐವರು

ಅಸ್ತಾನ (ಕಜಕಸ್ತಾನ) (ಪಿಟಿಐ): ಭಾರತದ ವೇಟ್‌ಲಿಫ್ಟರ್‌ಗಳಾದ ಮೀನಾಕ್ಷಿ, ಸಾಕ್ಷಿ, ಪೂಜಾ ರಾಣಿ, ಹಿತೇಶ್ ಗುಲಿಯಾ ಹಾಗೂ ಜುಗನೂ ಇಲ್ಲಿ ನಡೆಯುತ್ತಿರುವ ಏಷ್ಯನ್ ಯೂತ್ ಹಾಗೂ ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ತಲುಪಿದ್ದಾರೆ.

ಶನಿವಾರ ಸೆಮಿಫೈನಲ್ ಪಂದ್ಯಗಳಲ್ಲಿ ಮಹಿಳೆಯರ 48 ಕೆ.ಜಿ. ವಿಭಾಗದಲ್ಲಿ ಮೀನಾಕ್ಷಿ ಅವರು ಟರ್ಕಿಯ ನರ್ಸಲೆನ್ ಯಾಲ್ಗೆಟ್ಟೆಕಿನ್ ಅವರನ್ನು ಮಣಿಸಿದರು. ಸಾಕ್ಷಿ ಅವರು 54 ಕೆ.ಜಿ. ವಿಭಾಗದಲ್ಲಿ ಉಜ್ಬೇಕಿಸ್ತಾನದ ಫೆರೂಝಾ ಕರ್ಝುಕೋವಾ ವಿರುದ್ಧ ಜಯಿಸಿದರು. ಒಲಿಂಪಿಯನ್ ಪೂಜಾ, 80 ಕೆ.ಜಿ. ವಿಭಾಗದಲ್ಲಿ ಟರ್ಕಿಯ ಎಲಿಫ್ ಗುನೆರಿ ಅವರಿಗೆ ಸೋಲಿನ ರುಚಿ ತೋರಿಸಿದರು.

80 + ಕೆ.ಜಿ. ವಿಭಾಗದಲ್ಲಿ ಭಾರತದ ನೂಪುರ್ ಈಗಾಗಲೇ ಫೈನಲ್ ತಲುಪಿದ್ದಾರೆ.

ಪುರುಷರ 70 ಕೆ.ಜಿ. ವಿಭಾಗದಲ್ಲಿ ಹಿತೇಶ್ ಅವರು ಫ್ರಾನ್ಸ್‌ನ ಮಾಕನ್ ಟ್ರವೋರ್ ವಿರುದ್ಧ ಜಯಿಸಿದರೆ, 85 ಕೆ.ಜಿ. ವಿಭಾಗದಲ್ಲಿ ಜುಗನೂ ಅವರು ಇಂಗ್ಲೆಂಡ್‌ನ ಟೀಗನ್ ಸ್ಕಾಟ್ ಅವರನ್ನು ಮಣಿಸಿ ಪದಕ ಖಚಿತಪಡಿಸಿಕೊಂಡರು.





